ಭಾನುವಾರ, ನವೆಂಬರ್ 7, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಿಲಕ

ಪಶ್ಚಿಮ ಬಂಗಾಳದ ದಕ್ಷಿಣ ದಿನಜ್‌ಪುರದಲ್ಲಿ ಶನಿವಾರ 'ಭಾಯಿ ದೂಜ್' ಆಚರಣೆ ಅಂಗವಾಗಿ ಮಹಿಳೆಯರು ಬಿಎಸ್‌ಎಫ್ ಯೋಧರ ಹಣೆಗೆ ತಿಲಕವಿಟ್ಟರು

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಪುನೀತ್ ರಾಜಕುಮಾರ್ ಅವರ ಅಗಲಿಕೆಯ ಅಗಾಧ ನೋವನ್ನು ಸಹಿಸುವ ಶಕ್ತಿಯನ್ನು ದೇವರು ಅವರ ಕುಟುಂಬಸ್ಥರು, ಸ್ನೇಹಿತರು ಮತ್ತು ಅಭಿಮಾನಿಗಳೆಲ್ಲರಿಗೂ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಪವರ್ ಸ್ಟಾರ್

ಶ್ರೀ ಪುನೀತ್ ರಾಜಕುಮಾರ್

ಅವರ ಪ್ರೀತಿಪೂರ್ವಕ ದಿವ್ಯ ಸ್ಮರಣೆಯಲ್ಲಿ

ಪೋತೀಸ್®

ಮನೋಹರ ವಸ್ತ್ರಗಳ ಆಲಯ

ಬೆಂಗಳೂರು

ಇದೇ 10ರಂದು ಆರೋಗ್ಯ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಧದನಾಡು ಜನಪರ ವೇದಿಕೆ, ಆರ್‌.ಕೆ.ರಮೇಶ್ ಅಭಿಮಾನಿಗಳ ಬಳಗ ಹಾಗೂ ವಿವಿಧ ಸಂಸ್ಥೆಗಳ ಆಶ್ರಯದಲ್ಲಿ ಇದೇ 10ರಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 1.30ರವರೆಗೆ ಆರೋಗ್ಯ ತಪಾಸಣಾ ಶಿಬಿರವನ್ನು ಕೋಣನಕುಂಟೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಬೊಮ್ಮಸಂದ್ರದ ನಾರಾಯಣ ನೇತ್ರಾಲಯ, ಆಕ್ಸ್‌ಫರ್ಡ್ ಆಸ್ಪತ್ರೆ, ಕೇಂದ್ರೀಯ ಆಯುರ್ವೇದ ಸಂಶೋಧನಾ ಸಂಸ್ಥೆ, ಶ್ರೀವೆಂಕಟೇಶ್ವರ ದಂತ ಮಹಾವಿದ್ಯಾಲಯ, ಆನೇಕಲ್ ಸರ್ಕಾರಿ ಆಸ್ಪತ್ರೆಗಳ ಸಹಯೋಗದಲ್ಲಿ ಈ ಶಿಬಿರ ನಡೆಯಲಿದೆ.

‘ಶಿಬಿರದಲ್ಲಿ ಕಣ್ಣಿನ ತಪಾಸಣೆ, ಶಸ್ತ್ರಚಿಕಿತ್ಸೆ, ಕನ್ನಡಕ ವಿತರಣೆ, ಸ್ತ್ರೀರೋಗ ತಪಾಸಣೆ, ಕೀಲು, ಮೂಳೆ ತಪಾಸಣೆ, ಮಧುಮೇಹ, ಗಂಟಲು ನೋವು, ಬೆನ್ನು ನೋವು, ದಂತ ತಪಾಸಣೆ ಮಾಡಲಾಗುವುದು’ ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ: 9844021321, 9535915665

ಮಕ್ಕಳು ಸೇರಿದಂತೆ 50ಕ್ಕೂ ಅಧಿಕ ಮಂದಿಯ ಕಣ್ಣಿಗೆ ಹಾನಿ

ಹಬ್ಬ ಮುಗಿದರೂ ನಿಲ್ಲದ ಪಟಾಕಿ ಅವಘಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬ ಮುಗಿದರೂ ನಗರದಲ್ಲಿ ಪಟಾಕಿ ಅವಘಡಗಳು ನಿಂತಿಲ್ಲ. ಮಕ್ಕಳು ಸೇರಿದಂತೆ ವಿವಿಧ ವಯೋಮಾನದ 50ಕ್ಕೂ ಅಧಿಕ ಮಂದಿಯ ಕಣ್ಣಿಗೆ ಪಟಾಕಿಯಿಂದ ಹಾನಿ ಉಂಟಾಗಿದ್ದು, ಮಿಂಟೊ ಸೇರಿದಂತೆ ವಿವಿಧ ಕಣ್ಣಿನ ಆಸ್ಪತ್ರೆಗಳಲ್ಲಿ ಅವರು ಚಿಕಿತ್ಸೆ ಪಡೆದುಕೊಂಡಿದ್ದಾರೆ.

ಪಟಾಕಿಯಿಂದ ಸಂಭವಿಸುವ ಅವಘಡದ ಬಗ್ಗೆ ವೈದ್ಯರು ಹಾಗೂ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಹಬ್ಬಕ್ಕೂ ಮುನ್ನ ಜಾಗೃತಿ ಮೂಡಿಸಿದ್ದರು. ಇಷ್ಟಾಗಿಯೂ ಐದು ದಿನಗಳಿಂದ ಪಟಾಕಿ ಅವಘಡಗಳು ನಗರದ ವಿವಿಧೆಡೆ ವರದಿಯಾಗುತ್ತಿವೆ. ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಈವರೆಗೆ 24 ಪ್ರಕರಣಗಳು ವರದಿಯಾಗಿವೆ. ಕಣ್ಣಿಗೆ ಹಾನಿ ಉಂಟಾದವರಲ್ಲಿ ಮೂವರ ಸ್ಥಿತಿ ಗಂಭೀರವಾಗಿದೆ. ಪಟಾಕಿ ಸಿಡಿಸುವ ವೇಳೆ ಉಂಟಾದ ಗಾಯಕ್ಕೆ 20 ಮಂದಿ ನಾರಾಯಣ ನೇತ್ರಾಲಯದಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ವಿಕ್ಟೋರಿಯಾದ ಮಹಾಬೋಧಿ ಸುಟ್ಟಗಾಯಗಳ ಕೇಂದ್ರದಲ್ಲಿ 4 ಪ್ರಕರಣಗಳು ವರದಿಯಾಗಿವೆ. ಪಟಾಕಿಯ ಬೆಂಕಿ ಕಿಡಿಗೆ ಮೈ-ಕೈ ಸುಟ್ಟುಕೊಂಡವರು ಹೊರ ರೋಗಿಗಳಾಗಿ ದಾಖಲಾಗಿ, ಚಿಕಿತ್ಸೆ ಪಡೆದುಕೊಂಡಿದ್ದಾರೆ. ಅಗರ್‌ವಾಲ್ ಆಸ್ಪತ್ರೆಯೂ ಸೇರಿದಂತೆ ಕಣ್ಣಿನ ಚಿಕಿತ್ಸೆಯ ವಿವಿಧ ಆಸ್ಪತ್ರೆಗಳಲ್ಲಿ ಕೆಲವರು ಚಿಕಿತ್ಸೆ ಪಡೆದುಕೊಂಡಿದ್ದಾರೆ.

ಪಟಾಕಿ ಬಿಡುವ ಸಂದರ್ಭದಲ್ಲಿ ಗಾಯಗೊಂಡು, ಆಸ್ಪತ್ರೆಗೆ ದಾಖಲಾದವರಲ್ಲಿ ಶೇ 90 ರಷ್ಟು ಮಂದಿ 18 ವರ್ಷದೊಳಗಿನವರು. ಮಿಂಟೊ ಆಸ್ಪತ್ರೆಯಲ್ಲಿ 5 ವರ್ಷದ ಬಾಲಕನಿಂದ 70 ವರ್ಷದ ವೃದ್ಧರವರೆಗೂ ಪಟಾಕಿ ಗಾಯಕ್ಕೆ ಚಿಕಿತ್ಸೆ ಪಡೆದುಕೊಂಡಿದ್ದಾರೆ.

‘ಗಂಡು ಮಕ್ಕಳು ಹೆಚ್ಚಾಗಿ ಪಟಾಕಿ ಸುಡುವ ವೇಳೆ ಗಾಯಕ್ಕೆ ಒಳಗಾಗುತ್ತಿದ್ದಾರೆ. ಪಟಾಕಿ ಹಚ್ಚುವಾಗ, ವೀಕ್ಷಿಸುವಾಗಲೂ ಕೆಲವರು ಗಾಯಗೊಂಡಿದ್ದಾರೆ. ಪಟಾಕಿಯ ಬೆಂಕಿಯ ಉಷ್ಣದಿಂದ ಮುಖ ಹಾಗೂ ರೆಪ್ಪೆಗಳು ಸುಟ್ಟಿರುವ ಪ್ರಕರಣಗಳೂ ವರದಿಯಾಗಿವೆ. ಕೆಲವರಿಗೆ ಅಧಿಕ ರಕ್ತಸ್ರಾವ ಕಾಣಿಸಿಕೊಂಡಿದೆ’ ಎಂದು ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್ ತಿಳಿಸಿದರು.

ಪಟಾಕಿ ಸಿಡಿಸುವ ವೇಳೆ ಗಾಯಗೊಂಡ ಬಾಲಕನ ಕಣ್ಣನ್ನು ಮಿಂಟೊ ಆಸ್ಪತ್ರೆ ವೈದ್ಯರು ಶನಿವಾರ ಪರಿಶೀಲಿಸಿದರು – ಪ್ರಜಾವಾಣಿ ಚಿತ್ರ

ಕಣ್ಣು ದಾನ: ನೋಂದಣಿ ಶೇ 30 ರಷ್ಟು ಹೆಚ್ಚಳ

ಡಾ. ಸುಜಾತಾ

‘ನೇತ್ರದಾನಕ್ಕೆ ಸಂಬಂಧಿಸಿದಂತೆ ಹೆಸರು ನೋಂದಣಿ ಮಾಡುವವರ ಸಂಖ್ಯೆ ಹೆಚ್ಚಳವಾಗುತ್ತಿದೆ. ಕೆಲ ದಿನಗಳ ಹಿಂದೆ ರಸ್ತೆ ಅಪಘಾತದಲ್ಲಿ ಗಾಯಗೊಂಡು, ಮೃತಪಟ್ಟಿದ್ದ ಸಂಚಾರಿ ವಿಜಯ್ ಅವರ ಕಣ್ಣುಗಳನ್ನು ದಾನವಾಗಿ ಪಡೆದು, ಇಬ್ಬರಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ಪುನೀತ್ ರಾಜ್‌ಕುಮಾರ್ ಅವರು ಕೂಡ ಕಣ್ಣುಗಳನ್ನು ದಾನವಾಗಿ ನೀಡಿದ್ದಾರೆ. ಇದರಿಂದಾಗಿ ಜನರಲ್ಲಿ ನೇತ್ರದಾನದ ಬಗ್ಗೆ ಜಾಗೃತಿ ಮೂಡುತ್ತಿದ್ದು, ದಾನದ ಪ್ರತಿಜ್ಞೆ ಕೈಗೊಳ್ಳುವವರ ಸಂಖ್ಯೆ ಶೇ 30 ರಷ್ಟು ಹೆಚ್ಚಳವಾಗಿದೆ’ ಎಂದು ಡಾ. ಸುಜಾತಾ ರಾಥೋಡ್ ತಿಳಿಸಿದರು.

‘ನಮ್ಮ ಆಸ್ಪತ್ರೆಯಲ್ಲಿ ಪ್ರತಿ ದಿನ ಸರಾಸರಿ 15 ಮಂದಿ ನೇತ್ರ ದಾನಕ್ಕೆ ಹೆಸರು ನೋಂದಾಯಿಸಿಕೊಳ್ಳುತ್ತಿದ್ದಾರೆ. ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಈ ಮೊದಲು ನಾವು ಮನವಿ ಮಾಡಿಕೊಂಡಾಗ ಮಾತ್ರ ಕೆಲವರು ದಾನ ಮಾಡುತ್ತಿದ್ದರು’ ಎಂದು ಹೇಳಿದರು.

ಸುದ್ದಿ 2 ನಿಮಿಷ

ನಗರದಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ನೆಲದಡಿಯಲ್ಲಿ ವಿದ್ಯುತ್ ಕೇಬಲ್ ಅಳವಡಿಸುವ ಕಾಮಗಾರಿ ಕೈಗೊಂಡಿರುವುದರಿಂದ ಇದೇ 8ರಂದು (ಸೋಮವಾರ) ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಸ್ಥಳಗಳು: ಬಾಲಾಜಿ ಲೇಔಟ್, ವಿಜಯಶ್ರೀ ಲೇಔಟ್, ಮೂಕಾಂಬಿಕಾ ಲೇಔಟ್, ದೆಹಲಿ ಪಬ್ಲಿಕ್ ಸ್ಕೂಲ್ ರಸ್ತೆ, ಮುನೇಶ್ವರ ದೇವಸ್ಥಾನ ರಸ್ತೆ, ಉಲ್ಲಾಳ ನಗರ, ಮಾರುತಿ ನಗರ, ಅನ್ನಪೂರ್ಣೇಶ್ವರಿ ಲೇಔಟ್, ಭವಾನಿ ನಗರ, ಕೆ.ಬಿ. ಕಾಲೋನಿ, ಮಾರೇನಹಳ್ಳಿ, ಗೋವಿಂದರಾಜ ನಗರ,
ಚಂದ್ರಾ ಲೇಔಟ್, ಕಾಮಾಕ್ಷಿ ಪಾಳ್ಯ, ವಿನಾಯಕ ಲೇಔಟ್, ನಾಗರಬಾವಿ 9ನೇ ಬ್ಲಾಕ್, ಲಕ್ಷ್ಮಣ ನಗರ, ಸಂಜೀವಿನಿ ನಗರ, ವಿಘ್ನೇಶ್ವರ ನಗರ, ಹೆಗ್ಗನಹಳ್ಳಿ, ಸುಂಕದಕಟ್ಟೆ, ಜಯಲಕ್ಷ್ಮಮ್ಮ ಲೇಔಟ್, ಪ್ರಶಾಂತ ನಗರ, ಸಂಪಿಗೆ ಲೇಔಟ್, ಅಮರಜ್ಯೋತಿ ನಗರ, ಪಂಚಶೀಲನಗರ.



ಹೋಟೆಲ್, ರೆಸಾರ್ಟ್: ಆಸ್ತಿ ತೆರಿಗೆ ಶೇ 50 ರಿಯಾಯಿತಿ

ಬೆಂಗಳೂರು: ಪ್ರಸಕ್ತ ಆರ್ಥಿಕ ವರ್ಷದಲ್ಲಿ (2021-22) ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನೋರಂಜನಾ ಪಾರ್ಕ್‌ಗಳ ಮಾಲೀಕರು ಪಾವತಿಸುವ ಆಸ್ತಿ ತೆರಿಯಲ್ಲಿ (ಬಿಬಿಎಂಪಿ ಹೊರತುಪಡಿಸಿ) ಶೇ 50ರಷ್ಟು ರಿಯಾಯಿತಿ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಕೋವಿಡ್ ಮೊದಲ ಮತ್ತು ಎರಡನೇ ಅಲೆಯಿಂದ ಪ್ರವಾಸೋದ್ಯಮ ವಲಯ ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದು, ಆಸ್ತಿ ತೆರಿಗೆ ಮನ್ನಾ ಮಾಡುವಂತೆ ಕರ್ನಾಟಕ ಟೂರಿಸಂ ಸೊಸೈಟಿ ಬೇಡಿಕೆ ಸಲ್ಲಿಸಿತ್ತು.

288 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಹೋಟೆಲ್‌ಗಳು, ಅತಿಥಿಗೃಹಗಳು, ವಸತಿಗೃಹಗಳು, ರೆಸ್ಟೋರೆಂಟ್‌ಗಳಿಂದ ತೆರಿಗೆ ಮತ್ತು ಶೇ 26ರಷ್ಟು ಸೆಸ್ ಸೇರಿ ₹ 46.04 ಕೋಟಿ ಸಂಗ್ರಹ ಆಗಬೇಕಿದೆ. ಶೇ 50ರಷ್ಟು ತೆರಿಗೆ ವಿನಾಯಿತಿ ನೀಡಿದರೆ ಸುಮಾರು ₹ 23.02 ಕೋಟಿ ಆರ್ಥಿಕ ನಷ್ಟ ಉಂಟಾಗಲಿದೆ. ಈ ಮೊತ್ತವನ್ನು ಸರಿತೂಗಿಸಲು ರಿಯಾಯಿತಿ ಮೊತ್ತವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರ ನೀಡಲಿದೆ.

ರಿಯಾಯಿತಿ ಷರತ್ತುಗಳೇನು: ಶೇ 50ರಷ್ಟು ತೆರಿಗೆ ಪಾವತಿಸಿ, ಉಳಿದ ಶೇ 50ರಷ್ಟು ರಿಯಾಯಿತಿಗೆ ಹೋಟೆಲ್, ರೆಸಾರ್ಟ್, ರೆಸ್ಟೋರೆಂಟ್ ಮತ್ತು ಮನೋರಂಜನಾ ಪಾರ್ಕ್‌ಗಳ ಮಾಲೀಕರು ಅರ್ಜಿ ಸಲ್ಲಿಸಬೇಕು. ಈ ಅರ್ಜಿಗಳನ್ನು ಕಂದಾಯ ನಿರೀಕ್ಷಕರು ಪರಿಶೀಲಿಸಿದ ಬಳಿಕ, ಜಿಲ್ಲಾಮಟ್ಟದ ಸಮಿತಿ ಸಂಬಂಧಿಸಿದ ಇಲಾಖೆಗೆ ಸಲ್ಲಿಸಲಿದೆ.

ಮತದಾರರ ಪಟ್ಟಿ: ನಾಳೆ ಕರಡು ಪ್ರಕಟ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಕೈಗೊಂಡಿದ್ದು, ಇದೇ 8ರಂದು ಪಟ್ಟಿಯ ಕರಡನ್ನು ಪ್ರಕಟಿಸಲಾಗುತ್ತಿದೆ.

ನಗರದ ಮತದಾರರು ತಮ್ಮ ವಿಳಾಸ ಪರಿಷ್ಕರಣೆಗೆ ಮತ್ತು ಮತದಾರರ ಪಟ್ಟಿಯಿಂದ ಹೆಸರು ರದ್ದು ಮಾಡಲು ಹಾಗೂ ಹೊಸದಾಗಿ ಸೇರ್ಪಡೆ ಮಾಡಲು ಡಿ.8ರ ತನಕ ಚುನಾವಣಾ ಆಯೋಗ ಅವಕಾಶ ಕಲ್ಪಿಸಿದೆ.

ಇದೇ 7, 14, 21 ಮತ್ತು 28ರ ಭಾನುವಾರಗಳಂದು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ರದ್ದು ಮಾಡುವುದು ಮತ್ತಿತರ ಮಾಹಿತಿ ಪರಿಷ್ಕರಣೆಗೆ ವಿಶೇಷ ಅವಕಾಶ ಕಲ್ಪಿಸುವ ಅಭಿಯಾನ ಹಮ್ಮಿಕೊಳ್ಳಲಾಗಿದೆ. ನಂತರ, 2022ರ ಜನವರಿ 13ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುವುದು ಎಂದು ಬಿಬಿಎಂಪಿ ವಿಶೇಷ ಆಯುಕ್ತ ಕೆ.ಎ.ದಯಾನಂದ ಅವರು ಪತ್ರಿಕಾಗೋಷ್ಠಿಯಲ್ಲಿ ಶನಿವಾರ ತಿಳಿಸಿದರು.

ನಾಗರಿಕರು ಮತದಾರರ ಪಟ್ಟಿಯಲ್ಲಿನ ಹೆಸರನ್ನು ಬಿಬಿಎಂಪಿ ವೆಬ್‌ಸೈಟ್ (https://bbmp.gov.in) ಮತ್ತು ಸಹಾಯವಾಣಿಗಳಲ್ಲೂ ಪರಿಶೀಲಿಸಿಕೊಳ್ಳಬಹುದು. ಮತದಾರರ ಸಹಾಯವಾಣಿ ಮೊಬೈಲ್ ಆ್ಯಪ್, ಎನ್‌ವಿಎಸ್‌ಪಿ ಪೋರ್ಟಲ್ (www.nvsp.in), 1950 ಮತದಾರರ ಸಹಾಯವಾಣಿ ಹಾಗೂ ಮತದಾರರ ಪೋರ್ಟಲ್‌ನಲ್ಲಿ (www.voterportal.eci.gov.in) ಪರಿಶೀಲಿಸಿಕೊಳ್ಳಬಹುದು ಎಂದು ಹೇಳಿದರು.

ಮತದಾರರ ಪಟ್ಟಿಯಲ್ಲಿ ಮೊದಲ ಬಾರಿಗೆ ಹೆಸರು ನೋಂದಾಯಿಸುವ ಮತದಾರರು ಹಾಗೂ 2002ರ ಜ.2ರಿಂದ 2003ರ ಜ.1ರ ನಡುವಿನ ಅವಧಿಯಲ್ಲಿ ಜನಿಸಿರುವವರು ಅರ್ಜಿ ನಮೂನೆ–6 ಹಾಗೂ ವಯಸ್ಸು ಮತ್ತು ವಿಳಾಸ ದೃಢೀಕರಣದ ದಾಖಲೆಗಳನ್ನು ನೀಡಬೇಕು ಎಂದು ತಿಳಿಸಿದರು.

ವಯಸ್ಸಿನ ದೃಢೀಕರಣಕ್ಕಾಗಿ ಜನನ ಪ್ರಮಾಣಪತ್ರ, 10ನೇ ತರಗತಿ ಅಂಕಪಟ್ಟಿ, ಪಾಸ್‌ಪೋರ್ಟ್, ಪ್ಯಾನ್ ಕಾರ್ಡ್, ಚಾಲನಾ ಪರವಾನಗಿ, ಆಧಾರ್ ಕಾರ್ಡ್ ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ನೀಡಬಹುದು. ಜತೆಗೆ ಎರಡು ಭಾವಚಿತ್ರಗಳನ್ನು ಸಲ್ಲಿಸಿ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಿಕೊಳ್ಳಬಹುದು ಎಂದು ತಿಳಿಸಿದರು.

ಮತದಾರರ ಗುರುತಿನ ಚೀಟಿ ಇದ್ದ ಮಾತ್ರಕ್ಕೆ ಮತ ಚಲಾಯಿಸುವ ಹಕ್ಕು ದೊರೆಯುವುದಿಲ್ಲ. ಮತದಾರರ ಪಟ್ಟಿಯಲ್ಲೂ ಹೆಸರು ಇರುವುದು ಕಡ್ಡಾಯ. ಆದ್ದರಿಂದ, ನಾಗರಿಕರು ಕಡ್ಡಾಯವಾಗಿ ಮತದಾರರ ಪಟ್ಟಿಯಲ್ಲಿ ಹೆಸರು ಇರುವುದನ್ನು ಖಚಿತಪಡಿಸಿಕೊಂಡರೆ ಯಾವುದೇ ರೀತಿಯ ಗೊಂದಲಗಳು ಚುನಾವಣೆ ಸಂದರ್ಭದಲ್ಲಿ ಆಗುವುದಿಲ್ಲ ಎಂದು ಹೇಳಿದರು.

ಪಟಾಕಿ ಹೊಗೆ: ಮಾಲಿನ್ಯ ಕಣ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಸಂದರ್ಭದಲ್ಲಿ ಸಿಡಿಸಿದ ಪಟಾಕಿ ಹೊಗೆಯಿಂದ ನಗರದ ವಿವಿಧೆಡೆ ಹೆಚ್ಚಿನ ಪ್ರಮಾಣದಲ್ಲಿ ಮಾಲಿನ್ಯಕಾರಕ ಕಣಗಳು (ಪಿಎಂ 2.5 ಮತ್ತು ಪಿಎಂ 10) ಕಾಣಿಸಿಕೊಂಡಿವೆ. ಇದರಿಂದಾಗಿ ಇಳಿಕೆ ಕಂಡಿದ್ದ ಗಾಳಿಯ ಗುಣಮಟ್ಟದ ಸೂಚ್ಯಂಕ (ಎಕ್ಯುಐ) ‘ಉತ್ತಮ’ದಿಂದ ‘ಸಮಾಧಾನಕರ’ ಹಂತಕ್ಕೆ ತಲುಪಿದೆ.

ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ನಗರದ ಪ್ರಮುಖ ರಸ್ತೆಗಳಲ್ಲಿ ವಾಹನಗಳ ಸಂಚಾರ ವಿರಳವಾಗಿತ್ತು. ಬಹುತೇಕ ಐಟಿ–ಬಿಟಿ ಕಂಪನಿಗಳು ಕಚೇರಿಗಳನ್ನು ಪುನರಾರಂಭಿಸಲು ನಿರಾಸಕ್ತಿ ತೋರಿದ್ದರಿಂದ ಹೆಬ್ಬಾಳ, ಜಯನಗರ, ಸೆಂಟ್ರಲ್ ಸಿಲ್ಕ್ ಬೋರ್ಡ್, ನಗರ ರೈಲು ನಿಲ್ದಾಣದ ಸುತ್ತಮುತ್ತಲಿನ ಪ್ರದೇಶದಲ್ಲಿ ಎಕ್ಯೂಐ 50ರ ಗಡಿಯ ಆಸುಪಾಸಿನಲ್ಲಿಯೇ ಇತ್ತು. ಕಳೆದೊಂದು ತಿಂಗಳಿನಿಂದ ವಾಹನ ಸಂಚಾರ ಹೆಚ್ಚಳವಾದರೂ ಎಕ್ಯೂಐ 100ರ ಮಿತಿಯೊಳಗಿತ್ತು.

ದೀಪಾವಳಿ ಹಬ್ಬದ ಸಂದರ್ಭದಲ್ಲಿ ಸಿಡಿಸಿದ ಪಟಾಕಿಗಳ ಮಾಲಿನ್ಯಕಾರಕ ಹೊಗೆಯಿಂದ ಗಾಳಿಯ ಗುಣಮಟ್ಟದ ಸೂಚ್ಯಂಕದಲ್ಲಿ ದಿಢೀರ್ ಏರಿಕೆ ಕಂಡಿದೆ. ಪಿಎಂ 10 ಹಾಗೂ ಪಿಎಂ 2.5 ಕಣಗಳಲ್ಲಿ ವ್ಯತ್ಯಾಸ ಉಂಟಾಗಿದೆ. ನಗರದ ಬಹುತೇಕ ಕಡೆ 1 ಸಾವಿರ ಲೀಟರ್ ಗಾಳಿಯಲ್ಲಿ ಪಿಎಂ 10ರ ಪ್ರಮಾಣ 100 ಮೈಕ್ರೊ ಗ್ರಾಂ ಹಾಗೂ ಪಿಎಂ 2.5ರ ಪ್ರಮಾಣ 60 ಮೈಕ್ರೊ ಗ್ರಾಂ ಮೀರಿದೆ.

ಕಳಪೆ ಹಂತ: ಹಬ್ಬದ ಮುನ್ನಾದಿನವಾದ ಗುರುವಾರ ಹಾಗೂ ಹಬ್ಬದ ದಿನವಾದ ಶುಕ್ರವಾರ ರಾತ್ರಿ ವೇಳೆ ಹೆಚ್ಚಿನ ಪ್ರಮಾಣದಲ್ಲಿ ಮಾಲಿನ್ಯ ಕಾರಕ ಕಣಗಳು ಕಾಣಿಸಿಕೊಂಡಿವೆ. ಸೆಂಟ್ರಲ್ ಸಿಲ್ಕ್ ಬೋರ್ಡ್, ಜಯನಗರ ಹಾಗೂ ಬಿಟಿಎಂ ಬಡಾವಣೆ ಸುತ್ತಮುತ್ತ ಎಕ್ಯುಐ 200ರ ಗಡಿ ದಾಟಿ, ಕಳಪೆ ಹಂತಕ್ಕೆ ತಲುಪಿದೆ. ಉಳಿದ ಕಡೆಯೂ ಈ ಪ್ರಮಾಣ ಸಾಮಾನ್ಯ ದಿನಗಳಿಗಿಂತ ಎರಡು ಪಟ್ಟು ಹೆಚ್ಚಳವಾಗಿದೆ.

‘ವಾತಾವರಣದಲ್ಲಿ ತೇವಾಂಶ ಹೆಚ್ಚಾದರೆ ದೂಳಿನ ಕಣಗಳು ಆಕಾಶಕ್ಕೆ ಹೋಗದೆ, ತಳಮಟ್ಟದಲ್ಲಿಯೇ ಗಾಳಿಯಲ್ಲಿ ತೇಲಾಡುತ್ತಿರುತ್ತವೆ. ಪಟಾಕಿಯ ವಿಷಕಾರಿ ಹೊಗೆ ಈ ಗಾಳಿಯನ್ನು ಸೇರಿದಾಗ ಮಲಿನಕಾರಕ ಕಣಗಳು ಗಾಳಿಯಲ್ಲಿ ಉಳಿಯುತ್ತವೆ. ಮಳೆಯ ನಡುವೆಯೂ ಕೆಲವೆಡೆ ಪಟಾಕಿಗಳನ್ನು ಸಿಡಿಸಿದ್ದರಿಂದ ಕೆಲವೆಡೆ ಗಾಳಿಯ ಗುಣಮಟ್ಟದ ಸೂಚ್ಯಂಕ ಕೊಂಚ ಏರಿಕೆ ಕಂಡಿದೆ’ ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಪರಿಸರ ಅಧಿಕಾರಿಯೊಬ್ಬರು ತಿಳಿಸಿದರು.

‘ಗಾಳಿಯ ಗುಣಮಟ್ಟದ ಸೂಚ್ಯಂಕವು 50ರ ಮಿತಿಯ ಒಳಗಡೆಯಿದ್ದಲ್ಲಿ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮಗಳು ಕಾಣಿಸಿಕೊಳ್ಳುವುದಿಲ್ಲ. 100ರ ಗಡಿ ದಾಟಿದಲ್ಲಿ ಶ್ವಾಸಕೋಶ, ಹೃದಯ ಕಾಯಿಲೆಗಳು ಬರುವ ಸಾಧ್ಯತೆ ಇರುತ್ತದೆ’ ಎಂದು ವಿವರಿಸಿದರು.

ಹಬ್ಬದ ದಿನ ಎಕ್ಯುಐ (ನ.5)

ಮಾಪನಾ ಕೇಂದ್ರವಿರುವ ಪ್ರದೇಶ	ಕನಿಷ್ಠ	ಗರಿಷ್ಠ
ಹೆಬ್ಬಾಳ	07	156
ಜಯನಗರ	28	220
ನಿಮ್ಹಾನ್ಸ್	07	47
ಸೆಂಟ್ರಲ್ ಸಿಲ್ಕ್ ಬೋರ್ಡ್	27	356
ನಗರದ ರೈಲು ನಿಲ್ದಾಣ	48	117
ಸಾಣೆಗುರುವನಹಳ್ಳಿ	38	99
ಕಾಡಬೀಸನಹಳ್ಳಿ	09	85
ಬಾಪೂಜಿನಗರ	19	131
ಪೀಣ್ಯ	51	100
ಬಿಟಿಎಂ ಬಡಾವಣೆ	18	194

ನಗರದಲ್ಲಿನ ಎಕ್ಯುಐ (ನ.2)

ಮಾಪನ ಕೇಂದ್ರ ಇರುವ ಪ್ರದೇಶ	ಎಕ್ಯುಐ
ಹೆಬ್ಬಾಳ	28
ಜಯನಗರ	62
ಕವಿಕಾ ಲೇಔಟ್	60
ನಿಮ್ಹಾನ್ಸ್	24
ಸೆಂಟ್ರಲ್ ಸಿಲ್ಕ್ ಬೋರ್ಡ್	43
ನಗರದ ರೈಲು ನಿಲ್ದಾಣ	104
ಸಾಣೆಗುರುವನಹಳ್ಳಿ	39
ಕಾಡುಬೀಸನಹಳ್ಳಿ	52
ಪೀಣ್ಯ	64
ಬಿಟಿಎಂ ಬಡಾವಣೆ	72

ಗಾಳಿಯ ಗುಣಮಟ್ಟದ ಸೂಚ್ಯಂಕದ (ಎಕ್ಯುಐ) ಮಾಪನ

00-50	ಉತ್ತಮ
51-100	ಸಮಾಧಾನಕರ
101-200	ಮಧ್ಯಮ
201-300	ಕಳಪೆ
301-400	ತುಂಬಾ ಕಳಪೆ
401 ಮೇಲ್ಪಟ್ಟು	ತೀವ್ರ

ಬೆಂ.ವಿವಿಯ ಸ್ನಾತಕೋತ್ತರ ಪದವಿ ಪರೀಕ್ಷೆಗಳ ದಿನಾಂಕ ಮರುನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಯ ಕೆಲವು ಸೆಮಿಸ್ಟರ್ ಪರೀಕ್ಷೆಗಳ ದಿನಾಂಕಗಳನ್ನು ಮರುನಿಗದಿ ಪಡಿಸಲಾಗಿದೆ.

ಮಾಹಿತಿಗೆ ವಿಶ್ವವಿದ್ಯಾಲಯದ ವೆಬ್‌ಸೈಟ್ (www.bangaloreuniversity.ac.in) ವೀಕ್ಷಿಸಬಹುದು ಎಂದು ಕುಲಸಚಿವರು (ಮೌಲ್ಯಮಾಪನ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಆರ್ ವ್ಯಾಲ್ಯೂ’ ಹೆಚ್ಚಳ: ಮತ್ತೆ ಕೋವಿಡ್ ಏರಿಕೆ ಭೀತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಪ್ರಸರಣ ವೇಗವನ್ನು ತಿಳಿಸುವ ‘ಆರ್ ವ್ಯಾಲ್ಯೂ’ ಪ್ರಮಾಣ ಕರ್ನಾಟಕ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ಮತ್ತೊಮ್ಮೆ ಆತಂಕ ಮೂಡಿಸುವ ರೀತಿಯಲ್ಲಿ ಕೊಂಚ ಏರಿಕೆ ದಾಖಲಿಸಿದೆ. ಬೆಂಗಳೂರು ಸೇರಿದಂತೆ ಕೆಲವು ಮೆಟ್ರೊ ನಗರಗಳಲ್ಲೂ ಆರ್ ವ್ಯಾಲ್ಯೂ ಮಿತಿ ದಾಟುತ್ತಿದೆ.

ಆರ್ ಮೌಲ್ಯ 1 ಎಂಬುದನ್ನು ಕೋವಿಡ್ ಪ್ರಸರಣ ವೇಗದಲ್ಲಿ ಸಮಾಧಾನಕರ ಸಂಖ್ಯೆ ಎಂದು ಪರಿಗಣಿಸಲಾಗುತ್ತದೆ. ಸಾಂಕ್ರಾಮಿಕ ರೋಗವು ಕಡಿಮೆಯಾಗಲು, ಆರ್‌ನ ಮೌಲ್ಯವು ಒಂದಕ್ಕಿಂತ ಕಡಿಮೆಯಿರಬೇಕು. ಉದಾಹರಣೆಗೆ, 1.5 ಆರ್ ಮೌಲ್ಯ ಇದೆ ಎಂದರೆ, 10 ಕೋವಿಡ್ ರೋಗಿಗಳು ಇತರ 15 ಜನರಿಗೆ ಸೋಂಕು ಹರಡಬಹುದು ಎಂದರ್ಥ.

1ಕ್ಕಿಂತ ಹೆಚ್ಚಿನ ಆರ್ ಮೌಲ್ಯವನ್ನು ಹೊಂದಿರುವ ಇತರ ಸ್ಥಳಗಳೆಂದರೆ, ದುರ್ಗಾಪೂಜಾ ಆಚರಣೆಗಳಿಗೆ ಸಾಕ್ಷಿಯಾದ ಪಶ್ಚಿಮ ಬಂಗಾಳ. ಕೇರಳ ಮತ್ತು ಹಿಮಾಚಲ ಪ್ರದೇಶಗಳೂ ಅತ್ಯಧಿಕ ಆರ್ ವ್ಯಾಲ್ಯೂ ದಾಖಲಿಸಿವೆ. ತೆಲಂಗಾಣ ಮತ್ತು ಆಂಧ್ರಪ್ರದೇಶಗಳೂ ಈ ಸಾಲಿನಲ್ಲಿವೆ. ಅಸ್ಸಾಂ ಮತ್ತು ತಮಿಳುನಾಡಿನಲ್ಲಿ ಆರ್ ಮೌಲ್ಯ 1ರ ಸನಿಹದಲ್ಲಿದೆ.

‘ಆರ್ 1ಕ್ಕೆ ಹತ್ತಿರವಾಗಿರುವುದರಿಂದ ಭಾರತದ ಪರಿಸ್ಥಿತಿ ಸ್ವಲ್ಪ ಕೆಟ್ಟದಾಗಿದೆ. ಇತ್ತೀಚಿನ ದಿನಗಳಲ್ಲಿ ಕೇರಳ, ಹಿಮಾಚಲ ಪ್ರದೇಶ ಹಾಗೂ ಪಶ್ಚಿಮ ಬಂಗಾಳದಲ್ಲಿ ಆರ್ ವ್ಯಾಲ್ಯೂ ಮತ್ತೆ 1ಕ್ಕಿಂತ ಮೇಲಕ್ಕೆ ಹೋಗಿದೆ. ದೊಡ್ಡ ನಗರಗಳಾದ ಕೋಲ್ಕತ್ತ, ದೆಹಲಿ ಮತ್ತು ಬೆಂಗಳೂರು 1ಕ್ಕಿಂತ ಹೆಚ್ಚು ಆರ್ ವ್ಯಾಲ್ಯೂ ದಾಖಲಿಸಿವೆ’ ಎಂದು ಮೊದಲಿನಿಂದಲೂ ತಮ್ಮ ಮಾದರಿಯೊಂದಿಗೆ ಸಾಂಕ್ರಾಮಿಕ ರೋಗವನ್ನು ಯಶಸ್ವಿಯಾಗಿ ಪತ್ತೆ ಹಚ್ಚುತ್ತಿರುವ ಚೆನ್ನೈನ ಗಣಿತ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಸಿತಾಭ್ರ ಸಿನ್ಹಾ ತಿಳಿಸಿದರು.

ಸಿನ್ಹಾ ಅವರ ಗಣಿತದ ಮಾದರಿಯು ಅಕ್ಟೋಬರ್ 31ರವರೆಗಿನ ದತ್ತಾಂಶ ಒಳಗೊಂಡಿದ್ದು, ದಸರಾ ಹಬ್ಬದವರೆಗಿನ ಚಿತ್ರಣವನ್ನು ಕಟ್ಟಿಕೊಡುತ್ತದೆ. 6 ವಾರಗಳ ಹಿಂದೆ ಭಾರತದ ಆರ್ ಮೌಲ್ಯವು ಕುಗ್ಗುತ್ತಿರುವ ಸಾಂಕ್ರಾಮಿಕ ರೋಗವನ್ನು ಸೂಚಿಸುವ ಮಿತಿಗಿಂತ ಕಡಿಮೆಯಾಗಿತ್ತು. ದಸರಾ, ದುರ್ಗಾ ಪೂಜೆ ನಂತರ ಈ ಸಂಖ್ಯೆ ಹೆಚ್ಚಾಗಲು ಪ್ರಾರಂಭಿಸಿತು.

ಕೋವಿಡ್:ಸಕ್ರಿಯ ಪ್ರಕರಣ 8,090ಕ್ಕೆ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 8,090ಕ್ಕೆ ಇಳಿಕೆ ಕಂಡಿದ್ದು, 16 ಜಿಲ್ಲೆಗಳಲ್ಲಿ 50ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಸೋಂಕಿತರಿದ್ದಾರೆ.

ಬಾಗಲಕೋಟೆ ಸೇರಿದಂತೆ 6 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಹತ್ತರೊಳಗೆ ಇದೆ. ಬೆಂಗಳೂರಿನಲ್ಲಿ ಗರಿಷ್ಠ (6,366) ಸಕ್ರಿಯ ಪ್ರಕರಣಗಳಿವೆ. ಕೋವಿಡ್ ಪರೀಕ್ಷೆಗಳ ಸಂಖ್ಯೆಯೂ ಇಳಿಕೆಕಂಡಿದ್ದು, ಒಂದು ದಿನದ ಅವಧಿಯಲ್ಲಿ 59 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 224 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣವು ಶೇ 0.37 ರಷ್ಟು ವರದಿಯಾಗಿದೆ.

ಎರಡು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 15 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬಳ್ಳಾರಿ ಸೇರಿದಂತೆ 12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. ಬೆಂಗಳೂರಿನಲ್ಲಿ 148 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.89 ಲಕ್ಷ ದಾಟಿದೆ.

ಸೋಂಕಿತರಲ್ಲಿ 317 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.43 ಲಕ್ಷ ದಾಟಿದೆ.

5 ಮರಣ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಬೆಳಗಾವಿ, ಬೀದರ್, ಕೋಲಾರ, ಕೊಪ್ಪಳ ಹಾಗೂ ಮಂಡ್ಯದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 2.23 ರಷ್ಟು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,107ಕ್ಕೆ ಏರಿಕೆಯಾಗಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,52,680 ಒಟ್ಟು ಸೋಂಕಿತರು
12,52,106 ಮೊನ್ನೆಯ ವಿವರ

6,366	12,30,020	16,293
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	148
ಗುಣಮುಖ	163
ಸಾವು	00

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್



‘ಕಣ್ಣು ಕಿತ್ತು, ಕೈ ಕತ್ತರಿಸುತ್ತೇವೆ’

ಚಂಡೀಗಢ: ‘ಹರಿಯಾಣದ ಮಾಜಿ ಸಚಿವ ಮನೀಶ್ ಗ್ರೋವರ್ ಅವರನ್ನು ಗುರಿಯಾಗಿಸಲು ಯಾರಾದರೂ ಪ್ರಯತ್ನಿಸಿದರೆ, ಅವರ ಕಣ್ಣು ಕಿತ್ತು, ಕೈ ಕತ್ತರಿಸಲಾಗುವುದು’ ಎಂದು ಬಿಜೆಪಿ ಸಂಸದ ಅರವಿಂದ್ ಶರ್ಮಾ ಬೆದರಿಕೆ ಹಾಕಿದ್ದಾರೆ.

ರೋಹ್ಟಕ್‌ನ ಕಿಲೊಯಿಯಲ್ಲಿ ಶುಕ್ರವಾರ ಮನೀಶ್ ಗ್ರೋವರ್ ಮತ್ತು ಕೆಲ ಬಿಜೆಪಿ ನಾಯಕರನ್ನು ದೇವಸ್ಥಾನವೊಂದರಲ್ಲಿ ಕೆಲ ಗಂಟೆಗಳ ಕಾಲ ತಡೆ ಹಿಡಿಯಲಾಗಿತ್ತು. ಇದನ್ನು ವಿರೋಧಿಸಿ ರೋಹ್ಟಕ್‌ನಲ್ಲಿ ಕಾಂಗ್ರೆಸ್ ವಿರುದ್ಧ ಬಿಜೆಪಿ ಶನಿವಾರ ಪ್ರತಿಭಟನೆ ನಡೆಸಿದೆ.

ಈ ವೇಳೆ ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ಅರವಿಂದ್ ಶರ್ಮಾ, ‘ಮನೀಶ್ ಗ್ರೋವರ್ ಅವರಿಂದಾಗಿ ದೀಪೆಂದರ್ ಹೂಡಾ ಲೋಕಸಭಾ ಚುನಾವಣೆಯಲ್ಲಿ ಸೋತರು. ಹೀಗಾಗಿ ಕಾಂಗ್ರೆಸ್ ನಾಯಕರಾದ ಭೂಪಿಂದರ್ ಸಿಂಗ್ ಹೂಡಾ ಹಾಗೂ ಅವರ ಪುತ್ರ ದೀಪೆಂದರ್ ಹೂಡಾ ಗ್ರೋವರ್ ಅವರನ್ನು ವಿರೋಧಿಸುತ್ತಾರೆ ಎಂದು ವಾಗ್ದಾಳಿ ನಡೆಸಿದರು.

ತಿಂಮಸೇನೆ ಬೆಂಗಳೂರು, ಸಿರಿವರ ಪ್ರಕಾಶನ ಹಾಗೂ ಸಿವಿಜಿ ಪ್ರಕಾಶನದ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ನಾ. ದಾಮೋದರಶೆಟ್ಟಿ (ಎಡದಿಂದ ಐದನೆಯವರು) ಅವರ ‘ಮೇಲೋಗರ’ ಮತ್ತು ‘ರಂಗಚಿತ್ರರಂಗ’ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ರಂಗ ಕಲಾವಿದ ಶಂಕರ್ ಬಿಲ್ಲೇಮನೆ, ಹಾಸ್ಯ ಬರಹಗಾರ ಎನ್‌.ರಾಮನಾಥ್, ಕಾದಂಬರಿಕಾರ ಕಾ.ತ. ಚಿಕ್ಕಣ್ಣ, ಪ್ರಕಾಶಕ ರವೀಂದ್ರನಾಥ ಸಿರಿವರ ಹಾಗೂ ವಿಮರ್ಶಕ ದೀಪಕ್ ಜಿ.ಕೆ. ಇದ್ದರು –ಪ್ರಜಾವಾಣಿ ಚಿತ್ರ

ಎಲ್‌ಪಿಜಿ ಸಿಲಿಂಡರ್ ದರ ಇಳಿಸಿ: ಮೇನಕಾ ಗಾಂಧಿ

ಸುಲ್ತಾನಪುರ (ಉತ್ತರಪ್ರದೇಶ): ಪೆಟ್ರೋಲ್, ಡಿಸೇಲ್ ಬೆಲೆ ಕಡಿತವನ್ನು ಸ್ವಾಗತಿಸಿರುವ ಬಿಜೆಪಿ ಸಂಸದೆ ಮೇನಕಾ ಗಾಂಧಿ, ಎಲ್‌ಪಿಜಿ ಸಿಲಿಂಡರ್ ದರವನ್ನು ಇಳಿಸುವಂತೆ ಒತ್ತಾಯಿಸಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು,‘ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಕಡಿಮೆಯಾಗಿದೆ. ಅದೇ ರೀತಿ ಕೇಂದ್ರ ಸರ್ಕಾರ ಎಲ್‌ಪಿಜಿ ಸಿಲಿಂಡರ್ ಹಾಗೂ ಇತರೆ ಸಾಮಾಗ್ರಿಗಳ ದರವನ್ನು ಕಡಿಮೆಗೊಳಿಸಬೇಕು’ ಎಂದು ಹೇಳಿದರು.

ಮನೇಕಾ ಗಾಂಧಿ

ಕವಿ ಎಚ್‌.ಎಸ್‌. ವೆಂಕಟೇಶಮೂರ್ತಿ ಅಭಿಮತ :‘ಮಾಸ್ತಿ ಪ್ರಶಸ್ತಿ’ ಪ್ರದಾನ

ಸಹೋದರ ಪ್ರೀತಿಯ ದೀಕ್ಷೆ ನೀಡಿದ ಮಾಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಸಾಹಿತ್ಯ ಲೋಕಕ್ಕೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ‘ನುಡಿ ಸಹೋದರರು’ ಎಂಬ ಪರಿಕಲ್ಪನೆಯನ್ನು ಪರಿಚಯಿಸಿದರು. ಹೀಗಾಗಿ, ಅವರನ್ನು ಬಹುತೇಕ ಲೇಖಕರು ಅಣ್ಣ ಎಂದೇ ಕರೆಯುತ್ತಿದ್ದರು’ ಎಂದು ಕವಿ ಎಚ್‌.ಎಸ್‌. ವೆಂಕಟೇಶಮೂರ್ತಿ ತಿಳಿಸಿದರು.

ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅವರು ವಿಮರ್ಶಕ ಮಾಧವ ಕುಲಕರ್ಣಿ, ಕಥೆಗಾರ ಆರ್. ವಿಜಯರಾಘವನ್, ವಿಮರ್ಶಕಿ ಎಂ.ಎಸ್. ಆಶಾದೇವಿ, ಲೇಖಕಿ ವಸುಮತಿ ಉಡುಪ ಮತ್ತು ಎಚ್‌. ಎಲ್‌. ಪುಷ್ಪಾ ಅವರಿಗೆ ‘ಮಾಸ್ತಿ ಪ್ರಶಸ್ತಿ’ ಪ್ರದಾನ ಮಾಡಿದರು. ಈ ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಒಳಗೊಂಡಿದೆ.

‘ಮಾಸ್ತಿ ಅವರು ಸಹಲೇಖಕರನ್ನು ನುಡಿ ಸಹೋದರರು ಎಂದೇ ಕರೆಯುತ್ತಿದ್ದರು. ಅವರು ಕನ್ನಡ ಸಾಹಿತ್ಯಕ್ಕೆ ಸಹೋದರ ಪ್ರೀತಿಯ ದೀಕ್ಷೆ ನೀಡಿದರು. ಬೇಂದ್ರೆ ಅವರೂ ಅಣ್ಣ ಎಂದೇ ಕರೆಯುತ್ತಿದ್ದರು. ಅಣ್ಣ ಎಂದು ಯಾರಾದರೂ ಕರೆದರೆ ಕವಿಯ ಅಂಹಕಾರಗಳೆಲ್ಲ ಭಸ್ಮವಾಗುತ್ತವೆ. ಮಾಸ್ತಿ ಎನ್ನುವ ವ್ಯಕ್ತಿ ಕನ್ನಡದ ಅಸಾಮಾನ್ಯ ಲೇಖಕ. ನವೋದಯ, ಪ್ರಗತಿಶೀಲ, ನವ್ಯ ಹಾಗೂ ದಲಿತ–ಬಂಡಾಯದವರೂ ಮಾಸ್ತಿ ಅವರನ್ನು ಪ್ರೀತಿಸಿದ್ದರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಶಸ್ತಿ ಪುರಸ್ಕೃತ ಮಾಧವ ಕುಲಕರ್ಣಿ, ‘ಸರಳತೆಗೆ ಗೌರವ ತಂದುಕೊಟ್ಟ ವ್ಯಕ್ತಿತ್ವ ಮಾಸ್ತಿ ಅವರದ್ದಾಗಿತ್ತು. ಆದರೆ, ಆ ಸರಳತೆಯಲ್ಲಿ ಘನತೆ ಇತ್ತು. ಅವರ ಕಥೆಗಳು ಸರಳವಾಗಿರುವುದರಿಂದ ಇವತ್ತಿಗೂ ಪ್ರಸ್ತುತ. ಸಂಕೀರ್ಣ ವಿಷಯಗಳನ್ನೂ ಅವರು ಸರಳವಾಗಿ ಮಂಡಿಸಿದರು. ನಾವು ಒಂದು ಮಟ್ಟ ಮುಟ್ಟಿದ ಬಳಿಕ ಸರಳವಾಗದಿದ್ದರೆ ಲೇಖಕ ಸಾಯುತ್ತಾನೆ. ಇದನ್ನು ಯುರೋಪಿನಲ್ಲಿ ಕಾಣಬಹುದು’ ಎಂದು ತಿಳಿಸಿದರು.

ಸ್ತ್ರೀವಾದಿ ಲೇಖಕ: ಎಂ.ಎಸ್. ಆಶಾದೇವಿ, ‘ನಮ್ಮ ಇಡೀ ಸಾಹಿತ್ಯ ಪರಂಪರೆಯನ್ನು ಮರು ಓದಿಗೆ, ಮರು ಮೌಲ್ಯಮಾಪನಕ್ಕೆ ಒಡ್ಡಬೇಕಾದ ಸವಾಲನ್ನು ಎದುರಿಸಬೇಕಿದೆ. ನಮ್ಮ ಪರಂಪರೆಯನ್ನು ಹೆಣ್ಣಿನ ನೋಟ, ಸ್ಪರ್ಶದಿಂದ ಪೂರ್ಣಗೊಳಿಸಬೇಕು. ಕನ್ನಡದ ಕೆಲವೇ ಸ್ತ್ರೀವಾದಿ ಲೇಖಕರಲ್ಲಿ ಮಾಸ್ತಿ ಕೂಡ ಒಬ್ಬರಾಗಿದ್ದರು’ ಎಂದು ಹೇಳಿದರು.

ವಸುಮತಿ ಉಡುಪ, ‘ನನ್ನ ಅನುಭವದ ಮಿತಿಯಲ್ಲಿ ನಾನು ಬರೆಯುತ್ತೇನೆ. ಕಥಾ ಪಾತ್ರವು ಮಧ್ಯಮ, ಕೆಳ ಮಧ್ಯಮದ ಜೀವನದಿಂದ ಎದ್ದು ಬಂದವುಗಳಾಗಿವೆ. ಹಾಗಾಗಿ, ನೆಲದಿಂದ ಆಕಾಶಕ್ಕೆ ಜಿಗಿಯುವುದಿಲ್ಲ’ ಎಂದರು.

ಟ್ರಸ್ಟ್‌ನ ಅಧ್ಯಕ್ಷ ಮಾವಿನಕೆರೆ ರಂಗನಾಥನ್, ‘ಮಾಸ್ತಿ ವೆಂಟಕೇಶ್ ಅಯ್ಯಂಗಾರ್ ಅವರು ಕಥೆ, ಕಾದಂಬರಿ, ಕಾವ್ಯ, ಆತ್ಮಕಥೆ ಸೇರಿದಂತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃತಿ ರಚಿಸಿ, ಯಶಸ್ಸು ಮತ್ತು ಸಾರ್ಥಕತೆ ಸಾಧಿಸಿದ್ದಾರೆ’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಆರ್. ವಿಜಯರಾಘವನ್, ಎಚ್‌.ಎಲ್‌. ಪುಷ್ಪಾ, ವಸುಮತಿ ಉಡುಪ, ಮಾಧವ ಕುಲಕರ್ಣಿ ಹಾಗೂ ಎಂ.ಎಸ್‌. ಆಶಾದೇವಿ ಅವರಿಗೆ ‘ಮಾಸ್ತಿ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ವೆಂಕಟಾಚಲಪತಿ, ಮಾವಿನಕೆರೆ ರಂಗನಾಥನ್, ಕವಿ ಲಕ್ಷ್ಮಣ್ ರಾವ್, ವಿಮರ್ಶಕ ಎಚ್‌. ದಂಡಪ್ಪ, ಎಚ್‌.ಎಸ್‌. ವೆಂಕಟೇಶಮೂರ್ತಿ ಹಾಗೂ ಟ್ರಸ್ಟ್‌ನ ಗೌರವ ಸದಸ್ಯ ಡಿ.ಎಂ. ರವಿಕುಮಾರ್ ಇದ್ದಾರೆ – ಪ್ರಜಾವಾಣಿ ಚಿತ್ರ

ಶಿಶುವಿಹಾರ ನಾಳೆಯಿಂದ ಆರಂಭ: ಮಾರ್ಗಸೂಚಿ ಪ್ರಕಟ

ಬೆಂಗಳೂರು: ನಗರದಲ್ಲಿ ಶಿಶುವಿಹಾರ ಮತ್ತು ಆಟದ ಮನೆಯ ಕೇಂದ್ರಗಳನ್ನು ಇದೇ 8ರಿಂದ (ಸೋಮವಾರ) ಪುನರಾರಂಭಿಸುವ ಕುರಿತ ಮಾರ್ಗಸೂಚಿಗಳ ಸುತ್ತೋಲೆಯನ್ನು ಬಿಬಿಎಂಪಿ ಹೊರಡಿಸಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ಕೊರೋನಾ ಸೋಂಕು ಪತ್ತೆ ದರ ಶೇ 2ಕ್ಕಿಂತ ಕಡಿಮೆ ಇರುವ ವಾರ್ಡ್‌ಗಳಲ್ಲಿ ಮಾತ್ರ ಕೇಂದ್ರಗಳನ್ನು ಆರಂಭಿಸಲು ಅನುಮತಿ ನೀಡಲಾಗಿದೆ. ಸೋಂಕು ನಿವಾರಕ ದ್ರಾವಣಗಳನ್ನು ಮಕ್ಕಳ ಕೈಗೆ ಸಿಗದಂತೆ ಸುರಕ್ಷಿತ ಸ್ಥಳದಲ್ಲಿರಿಸಬೇಕು. ಆಕಸ್ಮಿಕವಾಗಿ ಸೇವಿಸಿದರೆ ಆರೋಗ್ಯದ ಮೇಲೆ ತೀವ್ರತರವಾದ ಪರಿಣಾಮ ಬೀರುತ್ತದೆ ಎಂದು ಎಚ್ಚರಿಕೆ ನೀಡಲಾಗಿದೆ.

ಶಿಕ್ಷಕರು ಮತ್ತು ಸಿಬ್ಬಂದಿ ಎರಡು ಡೋಸ್ ಲಸಿಕೆ ಪಡೆದಿರಬೇಕು. ಕೇಂದ್ರಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಕೇಂದ್ರಗಳನ್ನು ತೆರೆಯುವ ಬಗ್ಗೆ ವಲಯ ಆರೋಗ್ಯಾಧಿಕಾರಿಗಳಿಗೆ ಮಾಹಿತಿ ನೀಡಬೇಕು ಎಂದು ಸೂಚಿಸಲಾಗಿದೆ.

ಕೇಂದ್ರಗಳಿಗೆ ಹಾಜರಾಗಲು ಇಚ್ಛಿಸುವ ಮಕ್ಕಳ ಪೋಷಕರಿಂದ ಒಪ್ಪಿಗೆ ಪತ್ರವನ್ನು ಕಡ್ಡಾಯವಾಗಿ ಪಡೆಯಬೇಕು ಮತ್ತು ಪೋಷಕರು ಸಹ ಎರಡು ಡೋಸ್ ಲಸಿಕೆ ಪಡೆದಿರಬೇಕು ಎಂದು ತಿಳಿಸಲಾಗಿದೆ.

ಮೊದಲ ಹಂತದಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 12ರವರೆಗೆ ಕೇಂದ್ರಗಳನ್ನು ತೆರೆಯಬೇಕು. ಮಕ್ಕಳಿಗೆ ಕಾಯಿಲೆಯ ಲಕ್ಷಣಗಳಿದ್ದರೆ ಕೇಂದ್ರಕ್ಕೆ ಕರೆತರದಂತೆ ಪೋಷಕರಿಗೆ ಸೂಚಿಸಬೇಕು. ಮಗುವಿನ ಕುಟುಂಬದಲ್ಲಿ ಯಾರಿಗಾದರೂ ಕೋವಿಡ್ ದೃಢಪಟ್ಟರೆ ಮತ್ತು ರೋಗಿಯೊಂದಿಗೆ ಪ್ರಾಥಮಿಕ ಸಂಪರ್ಕ ಹೊಂದಿದ್ದರೆ ಅಥವಾ ಜ್ವರ, ಕೆಮ್ಮು, ನೆಗಡಿ, ಗಂಟಲು ನೋವು ಮತ್ತು ಉಸಿರಾಟದ ತೊಂದರೆಗಳಿಂದ ಬಳಲುತ್ತಿದ್ದರೆ ಮಕ್ಕಳನ್ನು ಶಿಶುವಿಹಾರ ಕೇಂದ್ರ ಮತ್ತು ಆಟದ ಮನೆಗಳಿಗೆ ಕರೆತರಬಾರದು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಮಕ್ಕಳನ್ನು 1 ಮೀ. ಅಂತರದಲ್ಲಿ ಕೂರಿಸುವ ವ್ಯವಸ್ಥೆ ಕಲ್ಪಿಸಬೇಕು. ಮಕ್ಕಳ ಸಂಖ್ಯೆ ಹೆಚ್ಚಾಗಿದ್ದಲ್ಲಿ ಎರಡು ಅಥವಾ ಮೂರು ದಿನಗಳಿಗೊಮ್ಮೆ ಬರಲು ಸೂಚಿಸಬೇಕು. ಮೊದಲ ದಿನ ಕೇಂದ್ರಗಳನ್ನು ಅಲಂಕರಿಸಿ ಹಬ್ಬದ ವಾತಾವರಣ ಇರುವಂತೆ ಕ್ರಮಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ.

ಎಲ್ಲ ಶಿಕ್ಷಕರು ಮತ್ತು ಸಿಬ್ಬಂದಿ ಆರಂಭದ ದಿನದ 72 ಗಂಟೆ ಮೊದಲು ಕಡ್ಡಾಯವಾಗಿ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಪುನೀತ್ ಅವರ ಅನಿರೀಕ್ಷಿತ ಸಾವು ಸೃಷ್ಟಿಸಿದ ಭಾವಸ್ಪಂದನ ಕನ್ನಡ ನಾಡು ಕಂಡ ಅಪೂರ್ವ ವಿದ್ಯಮಾನ. ಜನಮಾನಸದಲ್ಲಿ ಅಪ್ಪು ಈ ಪ್ರಮಾಣದಲ್ಲಿ ನೆಲೆಯಾದದ್ದು ಮಾತ್ರ ತರ್ಕಕ್ಕೆ ಸಿಗದ ಸಂಗತಿ...

ಭಾರತೀಯ ಪನೋರಮಾಗೆ ಕನ್ನಡದ 4 ಚಿತ್ರಗಳು 10
ಪ್ರಧಾನಿ ಮೋದಿಗೆ ಕಾಂಗ್ರೆಸ್ ಆಗ್ರಹ
ಮಳೆ: ಚಾಮುಂಡಿಬೆಟ್ಟದ ರಸ್ತೆ ಮತ್ತೆ ಕುಸಿತ 6
‘ಚೀನಾಕ್ಕೆ ನೀಡಿದ್ದ ‘ಕ್ಲೀನ್ ಚಿಟ್’ ವಾಪಸ್ ಪಡೆಯಲಿ’ 10

ಇಂಧನ ಟ್ಯಾಂಕರ್ ಸ್ಫೋಟ: 99 ಮಂದಿ ಸಾವು

ಸಿಯೆರಾ ಲಿಯೋನ್ (ರಾಯಿಟರ್ಸ್): ಸಿಯೆರಾ ಲಿಯೋನ್‌ನ ರಾಜಧಾನಿ ಫ್ರೀಟೌನ್‌ನಲ್ಲಿ ಗುರುವಾರ ಇಂಧನ ಟ್ಯಾಂಕರ್ ಸ್ಫೋಟಗೊಂಡು ಸಂಭವಿಸಿದ ಅವಘಡದಲ್ಲಿ ಕನಿಷ್ಠ 99 ಜನರು ಮೃತಪಟ್ಟಿದ್ದಾರೆ. ಮೃತರ ಸಂಖ್ಯೆಯನ್ನು ಸರ್ಕಾರ ಇನ್ನೂ ಅಧಿಕೃತವಾಗಿ ಪ್ರಕಟಿಸಿಲ್ಲ. ಆದರೆ, ಸ್ಥಳೀಯ ಅಧಿಕಾರಿಗಳು ಕನಿಷ್ಠ 99 ಶವಗಳನ್ನು ಗುರುತಿಸಿರುವುದನ್ನು ದೃಢಪಡಿಸಿದ್ದಾರೆ. 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ಎಪಿಎಂಸಿ ಕಾಯ್ದೆಗೆ ತಿದ್ದುಪಡಿ, ಸೆಸ್ ಕಡಿತ: ಕುಸಿದ ಆದಾಯ

ಗಾಯದ ಮೇಲೆ ಬರೆ

• ಬಸವರಾಜ ಹವಾಲ್ದಾರ

ಹುಬ್ಬಳ್ಳಿ: ಎಪಿಎಂಸಿ ಕಾಯ್ದೆಗೆ 2020ರ ಆಗಸ್ಟ್‌ನಲ್ಲಿ ತಿದ್ದುಪಡಿ ಮಾಡಿ, ಮಾರುಕಟ್ಟೆ ಪ್ರಾಂಗಣದ ಹೊರಗೆ ಮುಕ್ತ ವಹಿವಾಟಿಗೆ ಅವಕಾಶ ಕಲ್ಪಿಸಿದ ನಂತರ ಅವುಗಳ ನಿರ್ವಹಣಾ ವೆಚ್ಚಕ್ಕೂ ಪರದಾಡುವ ಸ್ಥಿತಿ ಎದುರಾಗಿದೆ. ಇದರ ಜತೆಗೆ ₹100ಕ್ಕೆ ₹1.60 ಇದ್ದ ಸೆಸ್ ಅನ್ನು ಈಗ 60 ಪೈಸೆಗೆ ಇಳಿಸಿರುವುದು ಎಪಿಎಂಸಿಗಳ ಆದಾಯಕ್ಕೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಅದನ್ನೇ ನಂಬಿಕೊಂಡಿದ್ದ ರೈತರ, ಎಪಿಎಂಸಿ ಹಮಾಲಿಗಳ ಸ್ಥಿತಿ ಬಾಣಲೆಯಿಂದ ಬೆಂಕಿಗೆ ಬಿದ್ದಂತಾಗಿದೆ.

ಹೊಸ ಕಾಯ್ದೆ ತಂದು ವರ್ಷ ಕಳೆದಿದ್ದು, ರಾಜ್ಯದಲ್ಲಿರುವ ಶೇ 60ಕ್ಕೂ ಹೆಚ್ಚು ಎಪಿಎಂಸಿಗಳು ನಿತ್ಯದ ನಿರ್ವಹಣೆ, ಭದ್ರತಾ ಖರ್ಚು ನಿಭಾಯಿಸುವುದಕ್ಕೂ ಕಷ್ಟ ಪಡುತ್ತಿವೆ. ದೊಡ್ಡ ಪ್ರಮಾಣದಲ್ಲಿ ವಹಿವಾಟು ನಡೆಸುತ್ತಿದ್ದ ಎಪಿಎಂಸಿಗಳ ಆದಾಯ ಅರ್ಧಕ್ಕೆ ಇಳಿದಿದೆ. ಇನ್ನೆರಡು ವರ್ಷಗಳಲ್ಲಿ ಅವುಗಳ ಆದಾಯವೂ ನಿಂತು ಹೋಗಲಿದೆ ಎನ್ನುತ್ತಾರೆ ಎಪಿಎಂಸಿ ಅಧಿಕಾರಿಗಳು.

‘ಹುಬ್ಬಳ್ಳಿಯ ಎಪಿಎಂಸಿಗೆ ನಿತ್ಯ 150 ರಿಂದ 200 ಲಾರಿಗಳು ಬರುತ್ತಿದ್ದವು. ಈಗ 50 ರಿಂದ 60 ಲಾರಿಗಳು ಬರುತ್ತಿವೆ. ಲೈಸೆನ್ಸ್ ಹೊಂದಿದ 1,200 ಮಂದಿ ಕಾರ್ಮಿಕರಿದ್ದೇವೆ. ಇತ್ತೀಚೆಗೆ ಕೆಲಸವೇ ಇಲ್ಲದಂತಾಗಿದೆ. ವರ್ಷದಲ್ಲಿ 3 ರಿಂದ 4 ತಿಂಗಳು ಮಾತ್ರ ಪರವಾಗಿಲ್ಲ ಎನ್ನುವಷ್ಟು ಕೆಲಸ ಇರುತ್ತದೆ. ಉಳಿದ ದಿನ ಖಾಲಿ ಕುಳಿತುಕೊಳ್ಳಬೇಕಾದ ಸ್ಥಿತಿ ಇದೆ’ ಎಂದು ಸಂಕಷ್ಟ ಬಿಚ್ಚಿಡುತ್ತಾರೆ ಎಪಿಎಂಸಿ ಹಮಾಲಿ ಕಾರ್ಮಿಕ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಗುರುಸಿದ್ದಪ್ಪ ಅಂಬಿಗೇರ.

ಕೃಷಿ ಉತ್ಪನ್ನ ಮಾರುಕಟ್ಟೆಗಿಂತ ಉತ್ತಮ ಬೆಲೆ ದೊರಕಿಸಿಕೊಡುವ ನಿಟ್ಟಿನಲ್ಲಿ ತಿದ್ದುಪಡಿ ತರಲಾಗಿದೆ ಎನ್ನುವುದು ಸರ್ಕಾರದ ವಾದ. ಆದರೆ, ವಾಸ್ತವದಲ್ಲಿ ರೈತರಿಗೆ ಕನಿಷ್ಠ ಬೆಂಬಲ ಬೆಲೆಗಿಂತಲೂ ಕಡಿಮೆ ಬೆಲೆ ದೊರೆಯುತ್ತಿದೆ. ಹೊರಗಡೆ ಖರೀದಿ ಮಾಡುವ ವ್ಯಾಪಾರಸ್ಥರು ರೈತರಿಗೆ ಹಣ ಪಾವತಿಸದೆ ಓಡಿ ಹೋದ ಪ್ರಕರಣಗಳು ಆಗಾಗ ದಾಖಲಾಗುತ್ತಲೇ ಇವೆ.

8ನೇ ಪುಟ ನೋಡಿ

ಒಳನೋಟ
ಎಪಿಎಂಸಿ ಸಂಕಷ್ಟ
ಪ್ರತಿಕ್ರಿಯಿಸಿ: 9606038256
feedback@prajavani.co.in

ಆದಾಯ ಕಡಿಮೆಯಾದ ಮಾಹಿತಿ ಬಂದಿಲ್ಲ. ವೇತನ, ನಿರ್ವಹಣೆಗೆ ₹90 ಕೋಟಿ- ₹120 ಕೋಟಿ ಸಂಗ್ರಹವಾಗುತ್ತದೆ. ವೇತನಕ್ಕೆ ತೊಂದರೆಯಾದರೆ ಸರ್ಕಾರದಿಂದ ಬಿಡುಗಡೆ ಮಾಡಲಾಗುವುದು
ಎಸ್.ಟಿ. ಸೋಮಶೇಖರ್
ಸಹಕಾರ ಸಚಿವ

ಹುಬ್ಬಳ್ಳಿಯ ಎಪಿಎಂಸಿಯಲ್ಲಿನ ಉಳ್ಳಾಗಡ್ಡಿಯ ವಹಿವಾಟು

ರಾಜ್ಯದ ಎಪಿಎಂಸಿಗಳ ಆದಾಯ ವಿವರ (ಕೋಟಿಗಳಲ್ಲಿ)



ಇನ್ನಷ್ಟು ಸುದ್ದಿಗಳು 8

ಆಸ್ಪತ್ರೆಯಲ್ಲಿ ಬೆಂಕಿ ಅನಾಹುತ 11 ಕೋವಿಡ್ ರೋಗಿಗಳ ಸಾವು

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಅಹ್ಮದ್ ನಗರದ ಜಿಲ್ಲಾ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಶನಿವಾರ ಭಾರಿ ಪ್ರಮಾಣದ ಅಗ್ನಿ ಅನಾಹುತ ಸಂಭವಿಸಿದೆ. ಕೋವಿಡ್–19 ಚಿಕಿತ್ಸೆಗೆ ದಾಖಲಾಗಿದ್ದ 11 ರೋಗಿಗಳು ಅವಘಡದಲ್ಲಿ, ಮೃತಪಟ್ಟಿದ್ದು, ಆರು ಜನರು ಗಾಯಗೊಂಡಿದ್ದಾರೆ.

ಇದು ರಾಜ್ಯದ ಆಸ್ಪತ್ರೆಗಳಲ್ಲಿ ಈ ವರ್ಷ ನಡೆದ ಆರನೇ ಅಗ್ನಿ ದುರಂತ.

ಕೋವಿಡ್–19 ಹಾಗೂ ನಂತರದ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳನ್ನು ಇರಿಸಲಾಗಿದ್ದ ಐಸಿಯುನಲ್ಲಿ ಬೆಳಿಗ್ಗೆ 11 ಗಂಟೆ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತ್ತು. ತಕ್ಷಣ, ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಆಸ್ಪತ್ರೆಗೆ ದೌಡಾಯಿಸಿದರು. ಮಧ್ಯಾಹ್ನ 1.30ರ ಸುಮಾರಿಗೆ ಬೆಂಕಿಯನ್ನು ಆರಿಸಲಾಯಿತು.

10ನೇ ಪುಟ ನೋಡಿ

‘ಮಸೀದಿ ರೂಪ ಪಡೆದ ಎಲ್ಲ ದೇಗುಲಗಳ ಜೀರ್ಣೋದ್ಧಾರ’

ಶಿವಮೊಗ್ಗ: ಮಂದಿರ ಕೆಡವಿ ಮಸೀದಿ ನಿರ್ಮಿಸಿರುವ ಹಿಂದೂಗಳ ಎಲ್ಲ ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲಿ ದೇವಾಲಯಗಳ ಜೀರ್ಣೋದ್ಧಾರಕ್ಕೆ ಕೇಂದ್ರ ಸರ್ಕಾರ ಶ್ರಮಿಸಲಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ನಗರದಲ್ಲಿ ಶುಕ್ರವಾರ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಕಾಶಿ ವಿಶ್ವನಾಥ ಮಂದಿರದಲ್ಲಿ ಮಸೀದಿ ಇದೆ. ಮುಂದಿನ ದಿನಗಳಲ್ಲಿ ಅಲ್ಲಿ ಪೂರ್ಣ ಪ್ರಮಾಣದಲ್ಲಿ ದೇವಸ್ಥಾನ ನಿರ್ಮಿಸಲಾಗುವುದು. ಮಥುರಾದಲ್ಲಿಯೂ ಅದೇ ಸ್ಥಿತಿ ಇದೆ. ಅಲ್ಲೂ ಪೂರ್ಣ ಪ್ರಮಾಣದಲ್ಲಿ ದೇವಾಲಯ ನಿರ್ಮಾಣವಾಗಲಿದೆ. ಸೋಮನಾಥ ದೇವಾಲಯ ಸೇರಿ ಎಲ್ಲ ಶ್ರದ್ಧಾ ಕೇಂದ್ರಗಳನ್ನೂ ಪೂರ್ಣ ಅಭಿವೃದ್ಧಿಪಡಿಸಲಾಗುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

7ನೇ ಪುಟ ನೋಡಿ

www.pes.edu
CELEBRATING
FOUNDER'S DAY
7 NOVEMBER, 2021

Dr. M.R. Doreswamy, Ex-MLC
Chancellor, PES University
Former Adviser, Education Reforms (Cabinet Rank), GOK

The board of governors, members of various councils, faculty, staff and students of PES University extend warm wishes.

PES UNIVERSITY

wildcraft.com

WILDCRAFT

ಪ್ರತಿ ಪ್ರಯಾಣದ
ಪ್ರತಿ ತಿರುವಿಗಾಗಿ

INTRODUCING INDIA'S MOST VERSATILE TRAVELCASES

Durable Pro-Bond Tech
Enhanced Organization
Multi-Purpose
5 YEAR International Warranty

*T&C Apply

Range starting from ₹1899/-
Available at Wildcraft Exclusive Stores and all leading retail outlets near you. FOR TRADE ENQUIRIES: 9035994155
Exclusive Online Partners Flipkart Myntra
Experience Partner TAJ EXPERIENCES

ನಗರದಲ್ಲಿ ಇಂದು

ಕರ್ನಾಟಕ ರಾಜ್ಯೋತ್ಸವ: ಸಂಸ್ಥಾಪನಾ ದಿನ, ಪ್ರಶಸ್ತಿ ಪುರಸ್ಕಾರ ಹಾಗೂ 'ಅಕ್ಷರ ನೀರಾಜನ' ಪುಸ್ತಕ ಬಿಡುಗಡೆ: ಅತಿಥಿಗಳು–ಸಾಹಿತಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ, ಎಫ್‌ಕೆಸಿಸಿಐ ಅಧ್ಯಕ್ಷ ಐ.ಎಸ್.ಪ್ರಸಾದ್, ಆಯೋಜನೆ–ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು, ಸ್ಥಳ–ಶ್ರೀಮಾರುತಿ ಸಭಾಂಗಣ, ವಾಸವಿ ವಿದ್ಯಾನಿಕೇತನ ಶಾಲೆ, ವಿ.ವಿ.ಪುರ, ಬೆಳಿಗ್ಗೆ 10

ಮಂಥನ ಸಮಾವೇಶ: ಉದ್ಘಾಟನೆ (ಬೆಳಿಗ್ಗೆ 10.30)–ಸಂಯುಕ್ತ ಕಿಸಾನ್ ಮೋರ್ಚಾದ ಹರ್‌ನೇಕ್ ಸಿಂಗ್, ಮಾತನಾಡುವವರು–ಕವಿತಾ ಕುರುಗಂಟಿ, ಕುಮಾರ್ ಸಮತಳ, ವಿ.ಗಾಯತ್ರಿ, ಬಿ.ಸಿ.ಬಸವರಾಜು, ಕೋಡಿಹಳ್ಳಿ ಚಂದ್ರಶೇಖರ, ಟಿ.ಯಶವಂತ್, ಮಧ್ಯಾಹ್ನ 2.30ಕ್ಕೆ 'ದೆಹಲಿ ಹೋರಾಟದಿಂದ ಕಲಿಯಬೇಕಿರುವುದು, ಕರ್ನಾಟಕದಲ್ಲಿ ನಾವು ಮಾಡಬೇಕಿರುವುದು' ಕುರಿತು ಗೋಷ್ಠಿ:ಮಾತನಾಡುವವರು–ಮಾವಳ್ಳಿ ಶಂಕರ್, ಬಡಗಲಪುರ ನಾಗೇಂದ್ರ, ಕೆ.ಪಿ.ಸುರೇಶ್, ಸಿರಿಮನೆ ನಾಗರಾಜ್, ಆಯೋಜನೆ–ಕರ್ನಾಟಕ ಜನಶಕ್ತಿ, ಸ್ಥಳ–ಬಾಪು ಸಭಾಂಗಣ, ಗಾಂಧಿಭವನ.

ವಿ.ಕೃ.ಗೋಕಾಕ್ ಪ್ರಶಸ್ತಿ ಪ್ರದಾನ: ಸಾಹಿತಿ ಹಂಪ ನಾಗರಾಜಯ್ಯ, ಪುರಸ್ಕೃತರು–ಎಸ್.ಜಿ.ಜೈನಾಪೂರ, ಮೀನಾ ದೇಶಪಾಂಡೆ, ಅತಿಥಿ–

ಮಾನ್ಸಿ ಮೆನನ್

ಕಥಕ್ ರಂಗಪ್ರವೇಶ: ಮಾನ್ಸಿ ಮೆನನ್, ಆಯೋಜನೆ–ಕೃಶಾಲಾ ನೃತ್ಯ ಥಿಯೇಟರ್, ಸ್ಥಳ–ಕೋರಮಂಗಲ ಕ್ಲಬ್, ಕೋರಮಮಂಗಲದ 6ನೇ ಬ್ಲಾಕ್, ಸಂಜೆ 5.30

ಕಮಲಾ ಹಂಪನಾ, ಅಧ್ಯಕ್ಷತೆ–ಬಿ.ಎಸ್.ವಿಶ್ವನಾಥನ್, ಆಯೋಜನೆ–ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್, ಸ್ಥಳ–ಕೆ.ಆರ್.ಜಿ.ಸಭಾಂಗಣ, ಭಾರತೀಯ ವಿದ್ಯಾಭವನ, ಬೆಳಿಗ್ಗೆ 11

ಸುಶ್ರಾವ್ಯ ಸಂಜೆ: ಉದ್ಘಾಟನೆ–ಪತ್ರಕರ್ತ ಎಂ.ಕೆ.ಭಾಸ್ಕರರಾವ್, ಸನ್ಮಾನಿತರು–ಪತ್ರಕರ್ತ ಲಕ್ಷ್ಮೀನಾರಾಯಣ ಶಂಭು ಶಾಸ್ತ್ರಿ, ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಗಾಯನ–ಧನಂಜಯ ಹೆಗಡೆ, ತಬಲಾ–ಗುರುಮೂರ್ತಿ ವೈದ್ಯ, ಹಾರ್ಮೋನಿಯಂ–ಮಧುಸೂಧನ ಭಟ್ಟ, ತಾಳ ಮದ್ದಲೆ–ಸುಧನ್ವ ಮೋಕ್ಷ, ಆಯೋಜನೆ–ಸಪ್ತಕ ಬೆಂಗಳೂರು, ಸ್ಥಳ–ಹವ್ಯಕ ಸಭಾ ಭವನ, ಮಲ್ಲೇಶ್ವರ, ಸಂಜೆ 4

ರಂಗ ಚಾವಡಿ: ಅತಿಥಿಗಳು–ಪ್ರಕಾಶ್ ಬೆಳವಾಡಿ, ಅಭಿರುಚಿ ಚಂದ್ರು, ಆಯೋಜನೆ–ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಸಂಜೆ 5.45

ಪ್ರಕಾಶ್ ಬೆಳವಾಡಿ

ಭರತನಾಟ್ಯ ರಂಗಪ್ರವೇಶ: ಸೌಮ್ಯಾ ರೂಪನಗುಡಿ, ಅತಿಥಿಗಳು–ಶಾಸಕ ಎಲ್.ಎ.ರವಿ ಸುಬ್ರಹ್ಮಣ್ಯ, ಬಿಬಿಎಂಪಿ ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ, ಪಿ.ವೇಣುಗೋಪಾಲ್, ಅಧ್ಯಕ್ಷತೆ–ಗಾಯತ್ರಿ ಕೇಶವನ್, ಆಯೋಜನೆ–ನಾಟ್ಯಶ್ರೀ ನೃತ್ಯ ಶಾಲೆ, ಸ್ಥಳ–ಜೆಎಸ್‌ಎಸ್ ಸಭಾಂಗಣ, ಜಯನಗರ 8ನೇ ಬ್ಲಾಕ್, ಸಂಜೆ 6

ಭರತನಾಟ್ಯ ರಂಗಪ್ರವೇಶ:ಸೌಮ್ಯಾ ರೂಪನಗುಡಿ

ಬೀದಿ ಕತ್ತಲು ಕಳೆದ ದೇಶದ ಮೊದಲ ವಿದ್ಯುದ್ದೀಪ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿ ಕೇಂದ್ರ ಕಚೇರಿ ಪ್ರಾಂಗಣದ ಪೂರ್ವ ದಿಕ್ಕಿನ ದ್ವಾರದ ಬಳಿ ಒಳ ಪ್ರವೇಶಿಸುತ್ತಿದ್ದಂತೆಯೇ ರಸ್ತೆ ಪಕ್ಕದಲ್ಲಿ ಬೀದಿ ದೀಪವನ್ನು ನೋಡಬಹುದು. ಆಕರ್ಷಕವಾಗಿ ಕಾಣಿಸುವ, ದೀಪಗಳ ಗುಚ್ಛವನ್ನು ಒಳಗೊಂಡ ಈ ಬೀದಿ ದೀಪ ಕುತೂಹಲ ಮೂಡಿಸದೇ ಇರದು.

ಕತ್ತಲೆ ಕಳೆಯುವ ಬೆಳಕಿನ ಹಬ್ಬ ದೀಪಾವಳಿಯ ಆಚರಣೆ ಬೆನ್ನಲ್ಲೇ ಈ ಬೀದಿ ದೀಪವನ್ನು ನೆನಪಿಸಿಕೊಳ್ಳುವುದಕ್ಕೆ ಕಾರಣವೂ ಇದೆ. ಎಲ್ಲ ಬೀದಿಗಳಂತೆಯೇ ಇದೂ ಕೂಡಾ ಮಾಮೂಲಿ ಬೀದಿದೀಪ ಎಂದು ಭಾವಿಸಬೇಡಿ. ಇದು ಅಂತಿಂಥ ಬೀದಿ ದೀಪವಲ್ಲ; ವಿದ್ಯುತ್‌ನಿಂದ ಬೆಳಗಿದ ದೇಶದ ಮೊದಲ ಬೀದಿ ದೀಪವಿದು. ಹಾಗಾಗಿ ಈ ದೀಪ ಬೆಂಗಳೂರಿನ ಹೆಮ್ಮೆಯ ಪ್ರತೀಕವೂ ಹೌದು.

'ಕೋಲಾರ ಚಿನ್ನದ ಗಣಿಗೆ ವಿದ್ಯುತ್ ಪೂರೈಸುವ ಸಲುವಾಗಿ ಏಷ್ಯಾದ ಮೊದಲ ಜಲವಿದ್ಯುತ್ ಯೋಜನೆಯನ್ನು ಶಿವನ ಸಮುದ್ರದಲ್ಲಿ ಆರಂಭಿಸಲಾಗಿತ್ತು. ಅಲ್ಲಿಂದ ನೇರವಾಗಿ ಕೋಲಾರದ ಚಿನ್ನದ ಗಣಿ ಬೆಳಗಿಸಲು ವಿದ್ಯುತ್ ಪೂರೈಸಲಾಗುತ್ತಿತ್ತು. ಅಲ್ಲಿನ ಬೇಡಿಕೆಗಿಂತಲೂ ಹೆಚ್ಚು ವಿದ್ಯುತ್ ಈ ಯೋಜನೆಯಲ್ಲಿ ಉತ್ಪಾದನೆ ಆಗುತ್ತಿತ್ತು. ಅಂದಿನ ಡೆಪ್ಯುಟಿ ಚೀಫ್ ಎಂಜಿನಿಯರ್ ಆಗಿದ್ದ ಎಸಿಜೆ ಲ್ಯಾಬಿನ್ ಅವರು ಈ ಹೆಚ್ಚುವರಿ ವಿದ್ಯುತ್ ಅನ್ನು ಬೆಂಗಳೂರಿಗೆ ಪೂರೈಸುವ ಪ್ರಸ್ತಾಪವನ್ನು ಆಗಿನ ಮೈಸೂರು ಸಂಸ್ಥಾನದ ಅರಸ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮುಂದಿಟ್ಟಿದ್ದರು. ಒಡೆಯರ್ ಅವರು 1905ರ ಮೇ 30ರಂದು ಇದಕ್ಕೆ ಒಪ್ಪಿಗೆ ಸೂಚಿಸಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದರ್ಶಿತ್ವದ ಫಲವಾಗಿ ನಗರಕ್ಕೆ ವಿದ್ಯುತ್ ಪೂರೈಕೆ ಆಗಿದೆ' ಎಂದು ಇತಿಹಾಸ ಪ್ರೇಮಿ ಧರ್ಮೇಂದ್ರ ಕುಮಾರ್ ಅರೇನಹಳ್ಳಿ ತಿಳಿಸಿದರು.

ಬಿಬಿಎಂಪಿ ಕೇಂದ್ರ ಕಚೇರಿ ಬಳಿ ಇರುವ ನಗರದ ಮೊದಲ ವಿದ್ಯುತ್ ಬೀದಿ ದೀಪ

'ಈ ದೀಪ 116 ವರ್ಷ ಹಳೆಯದು. ಮೈಸೂರಿನ ಅರಸರ ಜನಪರ ಕಾಳಜಿಯ ಕುರುಹಾಗಿರುವ ಈ ದೀಪವನ್ನು 1905ರ ಆ .05 ರಂದು ಸ್ಥಾಪಿಸಲಾಗಿತ್ತು. ವೈಸರಾಯ್ ಕೌನ್ಸಿಲ್‌ನ ಸರ್ ಜಾನ್ ಹೆವಿಟ್ ಅಧ್ಯಕ್ಷತೆಯಲ್ಲಿ ಇದರ ಉದ್ಘಾಟನೆ ನಡೆದಿತ್ತು. ನಾಲ್ವಡಿ ಕೃಷ್ಣರಾಜ್ ಒಡೆಯರ್ ಅವರೂ ಈ ಐತಿಹಾಸಿಕ ಘಳಿಗೆಗೆ ಸಾಕ್ಷಿಯಾಗಿದ್ದರು. ಏಷ್ಯಾ ಖಂಡದಲ್ಲೇ ವಿದ್ಯುತ್‌ನಿಂದ ಬೆಳಗಿದ ಮೊದಲ ಬೀದಿ ದೀಪವಿದು' ಎಂದು ಅವರು ವಿವರಿಸಿದರು.

'ಈಗಿನ ಕೆ.ಆರ್.ಮಾರುಕಟ್ಟೆ ಸಿಗ್ನಲ್ ಇರುವ ಜಾಗದಲ್ಲಿ ಹಿಂದೆ ಕೆರೆ ಇತ್ತು. ಅದನ್ನು ಸಿದ್ದಿಕಟ್ಟೆ ಕೆರೆ ಎಂದು ಕರೆಯುತ್ತಿದ್ದರು. ಅದರ ಪಕ್ಕದ ಬಯಲನ್ನು ಸಿದ್ಧಿಕಟ್ಟೆ ಎನ್ನುತ್ತಿದ್ದರು. ಈಗಿನ ಅವೆನ್ಯೂ ರಸ್ತೆ ಇರುವಲ್ಲಿ ಪೇಟೆ ಕೋಟೆ ಇತ್ತು. ಈಗ ಉಳಿದುಕೊಂಡಿರುವ ಕೋಟೆ ಹಾಗೂ ಪೇಟೆ ಕೋಟೆಗಳ ನಡುವೆ ಸಿದ್ದಿಕಟ್ಟೆ ಬಯಲು ಇತ್ತು. ಆ ಬಯಲಿನಲ್ಲಿ (ಈಗ ಗಣಪತಿ ದೇವಸ್ಥಾನವಿರುವ ಜಾಗ) ವಿದ್ಯುತ್‌ನಿಂದ ಬೆಳಗುವ ಬೀದಿ ದೀಪವನ್ನು ಸ್ಥಾಪಿಸಲಾಗಿತ್ತು' ಎಂದು ಅವರು ತಿಳಿಸಿದರು.

'1905ರಲ್ಲಿ ನಗರದಲ್ಲಿ ಚಾಮರಾಜಪೇಟೆ, ಮಲ್ಲೇಶ್ವರ ಮುಂತಾದ ಬಡಾವಣೆಗಳು ವ್ಯವಸ್ಥಿತವಾಗಿ ಬೆಳವಣಿಗೆ ಹೊಂದಿದ್ದವು. ನಗರಕ್ಕೆ ಶಿವನಸಮುದ್ರದಿಂದಲೇ ವಿದ್ಯುತ್ ಪೂರೈಸಲಾಗಿತ್ತು. ಇದೇ ಸಂದರ್ಭದಲ್ಲಿ 100 ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿತ್ತು. ಆ ಮನೆಗಳಿಂದ ತಿಂಗಳಿಗೆ ₹ 1ರಂತೆ ವಿದ್ಯುತ್ ಶುಲ್ಕ ವಸೂಲಿ ಮಾಡಲಾಗುತ್ತಿತ್ತು. ನಗರಕ್ಕೆ ವಿದ್ಯುತ್ ಪೂರೈಸುವಲ್ಲಿ ಮೈಸೂರು ಸಂಸ್ಥಾನದ ಆಗಿನ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್ ದೂರದೃಷ್ಟಿಯೂ ಇದೆ' ಎಂದು ಧರ್ಮೇಂದ್ರ ವಿವರಿಸಿದರು.

ಈಗ ನಗರದಲ್ಲಿ ಸ್ಮಾರ್ಟ್ ಬೀದಿ ದೀಪಗಳನ್ನು ಬಿಬಿಎಂಪಿ ಅಳವಡಿಸುತ್ತಿದೆ. ವಿದ್ಯುತ್ ಉಳಿತಾಯ ಮಾಡುವ ಈ ಸ್ಮಾರ್ಟ್ ಬೀದಿ ದೀಪಗಳನ್ನು ನಿಯಂತ್ರಿಸಲು ಕೇಂದ್ರೀಕೃತ ವ್ಯವಸ್ಥೆ ಜಾರಿಗೆ ತರುವ ಮೂಲಕ ಪಾಲಿಕೆ ವಿನೂತನ ಹೆಜ್ಜೆ ಇಟ್ಟಿದೆ. ಈ ರೀತಿಯ ಹೊಸ ಪ್ರಯೋಗಗಳಿಗೆ ಒಡ್ಡಿಕೊಳ್ಳುವ ಪರಿಪಾಠ ನೂರಾರು ವರ್ಷಗಳಿಗೂ ಮುನ್ನವೇ ಆರಂಭವಾಗಿದ್ದರಿಂದಲೇ ಬೆಂಗಳೂರು ಈ ಹಂತಕ್ಕೆ ಬೆಳೆದಿದೆ ಎಂದರೆ ತಪ್ಪಾಗಲಾರದು.

ಭಾರತೀಯ ಸ್ಟೇಟ್ ಬ್ಯಾಂಕ್ (SBI)
ಸ್ಟ್ರೆಸ್ಡ್ ಅಸೆಟ್ಸ್ ರಿಕವರಿ ಬ್ರಾಂಚ್–2, ಹೈದರಾಬಾದ್

ಮ.ನಂ. 1–8–563/1, 1ನೇ ಮಹಡಿ, ಸಂಧ್ಯಾ ಥಿಯೇಟರ್ ಎದುರು, ಆರ್‌ಟಿಸಿ 'ಎಕ್ಸ್' ರೋಡ್ಸ್, ಚಿಕ್ಕಾಡಪಲ್ಲಿ, ಹೈದರಾಬಾದ್–500 020. ಫೋನ್: 040–2346 1614 ಇ–ಮೇಲ್: sbi.20945@sbi.co.in

ಸ್ಥಿರಾಸ್ತಿಗಳ ಮಾರಾಟಕ ಕುರಿತಾದ ಮಾರಾಟ ಪ್ರಕಟಣೆ

ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಪುನಃರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ಅನ್ನು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ನಿಯಮ 8(6) ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಹಕ್ಕುಗಳ ಅಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟ ಕುರಿತಾದ ಇ-ಹರಾಜು ಮಾರಾಟ ಪ್ರಕಟಣೆ.

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ತಿಳಿಸುವುದು ಏನೆಂದರೆ, ಇಲ್ಲಿ ಕೆಳಗೆ ವಿವರಿಸಲಾಗಿರುವ ಸ್ವತ್ತನ್ನು ಸೆಕ್ಯೂರ್ಡ್ ಕ್ರೆಡಿಟರ್‌ಗೆ ಈಡು/ಅಡಮಾನ ನೀಡಲಾಗಿರುತ್ತದ್ದು, ಸದರಿ ಅಡಮಾನ ಸ್ವತ್ತನ್ನು ಭಾರತೀಯ ಸ್ಟೇಟ್ ಬ್ಯಾಂಕ್‌ನ ಮುಖ್ಯ ಪ್ರಬಂಧಕರು/ಅಧಿಕೃತ ಅಧಿಕಾರಿ, ಸೆಕ್ಯೂರ್ಡ್ ಕ್ರೆಡಿಟರ್ ರವರು ತಮ್ಮ ಸ್ವಾಧೀನತೆಗೆ ಪಡೆದುಕೊಂಡಿದ್ದು, ಸದರಿ ಸ್ವಾಧೀನ ಸ್ವತ್ತನ್ನು 30.11.2021 **"ಹೇಗಿದೆಯೊ ಎಲ್ಲಿದೆಯೊ"** ಮತ್ತು **"ಹೇಗಿದೆಯೊ ಎಲ್ಲಿದೆಯೊ"** ಆಧಾರದಲ್ಲಿ ಮಾರಾಟ ಮಾಡಲಾಗುತ್ತಿದೆ.

ಇಎಂಡಿ ಸಲ್ಲಿಸುವ ಅಂತಿಮ ದಿನಾಂಕ ಮತ್ತು ಸಮಯ 29.11.2021 ರಂದು ಸಂಜೆ 2:00 ಗಂಟೆ ಮತ್ತು ಇ–ಹರಾಜು ದಿನಾಂಕ: 30.11.2021 ರಂದು

ಕ್ರ.ಸಂ.	ಸಾಲಗಾರರ ಹೆಸರು	ಸ್ವತ್ತು/ಆಸ್ತಿಗಳ ವಿವರ	ಮೀಸಲು ಬೆಲೆ	ಇಎಂಡಿ
1	**ಶ್ರೀಮತಿ. ಕಲ್ಯಾಣಿ ಅಕ್ಕರಾಜು ಕೋಂ. ಕೆ.ಶಿವರಾಮ್ ರಾವ್,** ರೆಸಿಡೆನ್ಷಿಯಲ್ ವಿಲ್ಲಾ ನಂ.: ಸಿ-29, ಸೈಕಾನ್ ಮೈತ್ರಿ, ಚಿಕ್ಕಬನ ಹಳ್ಳಿ ಗ್ರಾಮ, ಕಾಡುಗೋಡಿ ಅಂಚೆ, ಬೆಂಗಳೂರು-560 067. **ಮತ್ತೊಂದು ವಿಳಾಸ: ಶ್ರೀಮತಿ. ಕಲ್ಯಾಣಿ ಅಕ್ಕರಾಜು ಕೋಂ. ಕೆ.ಶಿವರಾಮ್ ರಾವ್,** 4240, ಅಲ್ಬನಿ ಡಿಆರ್, ಎಪಿಟಿ ಜೆ311, ಸ್ಯಾನ್‌ಜೋಸ್, ಕ್ಯಾಲಿಫೋರ್ನಿಯಾ, ಯುಎಸ್‌ಎ-95129.	ಎಸ್.ಆರ್.ಒ ಬಾಣಸವಾಡಿ ಕಚೇರಿಯಲ್ಲಿ ದಿನಾಂಕ 04.04.2018 ರಂದು ನೋಂದಾಯಿತ ಸೇಲ್ ಡೀಡ್ ನಂ. 188/2018-19 ಮುಖೇನ, ಶ್ರೀಮತಿ. ಕಲ್ಯಾಣಿ ಅಕ್ಕರಾಜು ಕೋಂ. ಕೆ.ಶಿವರಾಮ್ ರಾವ್ ರವರ ಹೆಸರಿನಲ್ಲಿರುವ ಮತ್ತು ಚಿಕ್ಕಬನಹಳ್ಳಿ ಗ್ರಾಮ, ವೈಟ್‌ಫೀಲ್ಡ್, ಕಾಡುಗೋಡಿ ಅಂಚೆ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು-560067 ವಿಳಾಸದ ಸರ್ವೆ ನಂ. 20, 21, 22 ಮತ್ತು 23 ಗಳಲ್ಲಿ ಸ್ಥಿತಗೊಂಡಿರುವ, ಪರಿವರ್ತಿತ ಅಂದಾಜು 5946 ಚ.ಅ. ವಿಸ್ತೀರ್ಣವುಳ್ಳ ಅವಿಭಜಿತ ಪಾಲುದಾರಿಕೆಯುಳ್ಳ ಸ್ವತ್ತಿನಲ್ಲಿರುವ, ಸುಮಾರು 3964 ಚ.ಅ. ವಿಸ್ತೀರ್ಣದ 2 ವಾಹನಗಳ ಪಾರ್ಕಿಂಗ್ ಜಾಗದ ಜೊತೆಗಿರುವ, ಸೈಕಾನ್ ಮೈತ್ರಿಯ ನೆಲಮಹಡಿಯಲ್ಲಿನ 4247 ಚ.ಅ. ಸೂಪರ್ ಬಿಲ್ಟಪ್ ಪ್ರದೇಶ ಹೊಂದಿರುವ ಒಟ್ಟಾರೆ 3768 ಚ.ಅ. ಕಾರ್ಪೆಟ್ ಪ್ರದೇಶವುಳ್ಳ, ನಂ. ಸಿ-29 ಹೊಂದಿರುವ ಸೆಮಿ ಫಿನಿಷ್ಡ್ ರೆಸಿಡೆನ್ಷಿಯಲ್ ವಿಲ್ಲಾ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ **ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ:** ವಿಲ್ಲಾ ನಂ. 41 "ಸೈಕಾನ್ ಮೈತ್ರಿ", **ಪಶ್ಚಿಮಕ್ಕೆ:** "ಸೈಕಾನ್ ಮೈತ್ರಿ"ಯಲ್ಲಿನ ರಸ್ತೆ, **ಉತ್ತರಕ್ಕೆ:** ವಿಲ್ಲಾ ನಂ. 30 "ಸೈಕಾನ್ ಮೈತ್ರಿ", **ದಕ್ಷಿಣಕ್ಕೆ:** ವಿಲ್ಲಾ ನಂ. 28 "ಸೈಕಾನ್ ಮೈತ್ರಿ" ಸ್ವತ್ತಿಗೆ ಭೇಟಿ ನೀಡಲು ದಯವಿಟ್ಟು ಸಂಪರ್ಕಿಸಿ: **ಶ್ರೀ ಡಿ.ನಾಗಪ್ರಸಾದ್, ಪ್ರಬಂಧಕರು, 9866235895, ಇ-ಹರಾಜು ದಿನಾಂಕ ಮತ್ತು ಸಮಯ:** 30.11.2021 ರಂದು 12.30 ರಿಂದ 1.30ರವರೆಗೆ.	ರೂ. 204.15 ಲಕ್ಷ ಬಿಡ್ ಹೆಚ್ಚಳ ಮೊತ್ತ: ರೂ. 1,00,000/– 23.09.2021 ರಂತೆಗಿನ ಒಟ್ಟು ಬಾಕಿಮೊತ್ತ: ರೂ. 420.28 ಲಕ್ಷ ಜೊತೆಗೆ ಮುಂದಿನ ಬಡ್ಡಿ ಮತ್ತು ಸಾಂದರ್ಭಿಕ ಖರ್ಚು ವೆಚ್ಚಗಳು.	ರೂ. 20.50 ಲಕ್ಷ

ಮಾರಾಟಕ್ಕೆ ಸಂಬಂಧಿತ ಯಾವುದೇ ಸ್ಪಷ್ಟೀಕರಣಗಳಿಗಾಗಿ ಅಥವಾ ಇತರೆ ಷರತ್ತುಗಳ ಕುರಿತಾದ ಹೆಚ್ಚಿನ ವಿವರಗಳಿಗಾಗಿ ಆಸಕ್ತಿಯುಳ್ಳ ಬಿಡ್‌ದಾರರು, **ಅಧಿಕೃತ ಅಧಿಕಾರಿ ಭಾರತೀಯ ಸ್ಟೇಟ್ ಬ್ಯಾಂಕ್, ಸ್ಟ್ರೆಸ್ಡ್ ಅಸೆಟ್ಸ್ ರಿಕವರಿ ಬ್ರಾಂಚ್-2, ಹೈದರಾಬಾದ್, ಮ.ನಂ. 1-8-563/1, 1ನೇ ಮಹಡಿ, ಸಂಧ್ಯಾ ಥಿಯೇಟರ್ ಎದುರು, ಆರ್‌ಟಿಸಿ 'ಎಕ್ಸ್' ರೋಡ್ಸ್, ಚಿಕ್ಕಾಡಪಲ್ಲಿ, ಹೈದರಾಬಾದ್-500 020, ತೆಲಂಗಾಣ ರಾಜ್ಯ ಇವರನ್ನು ಸಂಪರ್ಕಿಸಬಹುದು. ಮಾರಾಟಕ್ಕೆ ಸಂಬಂಧಿತ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ, ದಯವಿಟ್ಟು https://ibapi.in ವೆಬ್‌ಸೈಟ್‌ನಲ್ಲಿರುವ ಲಿಂಕ್‌ನ್ನು ಪರಿಶೀಲಿಸಿರಿ.**

ಆಸಕ್ತಿಯುಳ್ಳ ಬಿಡ್‌ದಾರರು/ಖರೀದಿದಾರರು, ಹರಾಜು ದಿನಾಂಕಕ್ಕೆ ಮೂರು ದಿನಗಳು ಮುಂಚಿತವಾಗಿ, ಹರಾಜಿನಲ್ಲಿ ಪಾಲ್ಗೊಳ್ಳಲು ಇ-ಬಿಕ್‌ರೇ ಪೋರ್ಟಲ್‌ನಲ್ಲಿ ತಮ್ಮ ಕೆವೈಸಿ ಸಲ್ಲಿಸುವುದು ಮತ್ತು ನೋಂದಣಿ ಮಾಡಿಕೊಳ್ಳುವುದು. ವೆಬ್‌ಸೈಟ್: https://ibapi.in-BIDDERS REGISTRATION

ದಿನಾಂಕ: 06.11.2021, ಸ್ಥಳ: ಹೈದರಾಬಾದ್ — ಸಹಿ/– ಅಧಿಕೃತ ಅಧಿಕಾರಿ, ಎಸ್‌ಬಿಐ, ಎಸ್‌ಎಆರ್‌ಬಿ–2, ಹೈದರಾಬಾದ್.

ಸಿದ್ಧಗಂಗಯ್ಯ, ವೀರಣ್ಣ ರಾಜೂರಗೆ 'ವಿದ್ಯಾಶಂಕರ ಪ್ರಶಸ್ತಿ'

ಬೆಂಗಳೂರು: ಡಾ.ಎಸ್.ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ ನೀಡುವ 'ವಿದ್ಯಾಶಂಕರ ಪ್ರಶಸ್ತಿ'ಗೆ ಸಂಶೋಧಕರಾದ ತುಮಕೂರಿನ ಸಿದ್ಧಗಂಗಯ್ಯ ಹಾಗೂ ಧಾರವಾಡದ ವೀರಣ್ಣ ರಾಜೂರ ಅವರು ಆಯ್ಕೆಯಾಗಿದ್ದಾರೆ.

'ವಿದ್ಯಾಶಂಕರ ಪುರಸ್ಕಾರ'ಕ್ಕೆ ಧಾರವಾಡದ ನಿಜಲಿಂಗಪ್ಪ ಮಟ್ಟಿಹಾಳ ಹಾಗೂ ಸಂಶೋಧಕಿ ಗಂಗಾಂಬಿಕೆ ಅವರು ಆಯ್ಕೆಯಾಗಿದ್ದಾರೆ. ಪ್ರತಿಷ್ಠಾನದ ವತಿಯಿಂದ ಪ್ರತಿವರ್ಷ ಸಂಶೋಧಕರಿಗೆ ಈ ಪ್ರಶಸ್ತಿ ಹಾಗೂ ಪುರಸ್ಕಾರವನ್ನು ನೀಡಲಾಗುತ್ತಿದೆ. 'ವಿದ್ಯಾಶಂಕರ ಪ್ರಶಸ್ತಿ'ಯು ₹ 25 ಸಾವಿರ ನಗದು ಹಾಗೂ 'ವಿದ್ಯಾಶಂಕರ ಪುರಸ್ಕಾರ'ವು ₹ 10 ಸಾವಿರ ನಗದನ್ನು ಒಳಗೊಂಡಿದೆ.

ಇದೇ 18ರಂದು ಬೆಂಗಳೂರಿನ ನಯನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಸಂಶೋಧಕ ಎಂ.ಜಿ. ನಾಗರಾಜ ಅವರು 'ವಿದ್ಯಾಶಂಕರ ಪ್ರಶಸ್ತಿ'ಯನ್ನು ಹಾಗೂ ಸಾಹಿತಿ ಪ್ರೊ ಜಿ.ಎಸ್. ಸಿದ್ಧಲಿಂಗಯ್ಯ ಅವರು 'ವಿದ್ಯಾಶಂಕರ ಪುರಸ್ಕಾರ'ವನ್ನು ಪ್ರದಾನ ಮಾಡಲಿದ್ದಾರೆ.

ವೀರಣ್ಣ ರಾಜೂರ

ನಿಜಲಿಂಗಪ್ಪ ಮಟ್ಟಿಹಾಳ

ಗಂಗಾಂಬಿಕೆ

ಸಿದ್ಧಗಂಗಯ್ಯ

ಪ್ರಶಸ್ತಿಯ ಮಹಾಪೋಷಕರಾದ ನಿಡುಮಾಮಿಡಿ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಅವರು ಸಾನಿಧ್ಯ ವಹಿಸಲಿದ್ದಾರೆ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ.ಆರ್.ಕೆ. ನಲ್ಲೂರು ಪ್ರಸಾದ್ ಅವರು ಉಪಸ್ಥಿತರಿರಲಿದ್ದಾರೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಡಾ. ರುದ್ರೇಶ್ ಅದರಂಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಧ್ಯಕ್ಷರಾಗಿ ಹನುಮೇಗೌಡ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸರ್ಕಾರ ಸಚಿವಾಲಯ ಸಹಕಾರ ಸಂಘದ ಪದಾಧಿಕಾರಿಗಳ ಆಯ್ಕೆ ಚುನಾವಣೆಯಲ್ಲಿ ಎಚ್. ಹನುಮೇಗೌಡ ಅವರು ಅಧ್ಯಕ್ಷರಾಗಿ ಬಹುಮತದಿಂದ ಆಯ್ಕೆಯಾಗಿದ್ದಾರೆ.

ಪದಾಧಿಕಾರಿಗಳ ಆಯ್ಕೆಗೆ ಶನಿವಾರ ಚುನಾವಣೆ ನಡೆಸಲಾಯಿತು. ಸಂಘದ ಉಪಾಧ್ಯಕ್ಷರಾಗಿ ಎಚ್.ಸಿ. ಗೀತಾ ಆಯ್ಕೆಯಾಗಿದ್ದಾರೆ.

ಹನುಮೇಗೌಡ

ಎಚ್‌.ಸಿ. ಗೀತಾ

ಕೆರೆ ಕುಂಟೆಗಳಿಗೆ ಮಳೆ ನೀರು

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಸೋಂಪುರ ಹೋಬಳಿಯಲ್ಲಿ ಕೆಲ ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆಗೆ ಕೆರೆ, ಕುಂಟೆ, ಕೃಷಿ ಹೊಂಡಗಳಲ್ಲಿ ನೀರು ತುಂಬಿಕೊಂಡು ಕಂಗೊಳಿಸುತ್ತಿವೆ.

ಶಿವಗಂಗೆ ಬೆಟ್ಟದ ಸುತ್ತಮುತ್ತಲ ಕೆರೆಗಳಲ್ಲಿ ಕುಮದ್ವತಿ ನದಿ ಪುನಶ್ಚೇತನ ಯೋಜನೆಯಡಿ ನಿರ್ಮಾಣ ಮಾಡಿರುವ ಹೊಂಡಗಳು ಮಳೆ ನೀರಿನಿಂದ ಭರ್ತಿಯಾಗಿ ನಳನಳಿಸುತ್ತಿವೆ.

ನರಸೀಪುರ, ಬುಗಡಿಹಳ್ಳಿ, ಮಾದೇನಹಳ್ಳಿ, ಇಮಚೇನಹಳ್ಳಿ, ನಿಜಗಲ್ ಕೆಂಪೋಹಳ್ಳಿ, ಚನ್ನೋಹಳ್ಳಿ, ರಾಯರಪಾಳ್ಯ, ಕಂಬಾಳು, ನಿಡವಂದ, ದೇವರಹೊಸಹಳ್ಳಿ ಕೆರೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಸಂಗ್ರಹವಾಗಿದೆ. ಹಳೇನಿಜಗಲ್, ಬಿಲ್ಲಿನಕೋಟೆ ಕೆರೆಗಳು ಭರ್ತಿಯಾಗಿವೆ. ಕೆರೆ ಮತ್ತು ಕೃಷಿ ಹೊಂಡಗಳಲ್ಲಿ ನೀರು ತುಂಬಿಕೊಂಡಿರುವುದು ಅಂತರ್ಜಲ ಮಟ್ಟ ಹೆಚ್ಚಲು ಅನುಕೂಲ ಆಗಲಿದೆ ಎಂದು ರೈತ ರಾಮಯ್ಯ ಸಂತಸ ವ್ಯಕ್ತಪಡಿಸಿದರು.

ನಿಧನ ವಾರ್ತೆ

ಆರ್.ಸುಬ್ರಮಣಿ

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್'ನ ನಿವೃತ್ತ ನೌಕರ ಆರ್. ಸುಬ್ರಮಣಿ (61) ಗುರುವಾರ ನಿಧನರಾದರು.

ಇವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಬನಶಂಕರಿಯ ಚಿತಾಗಾರದಲ್ಲಿ ಅಂತ್ಯಕ್ರಿಯೆ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇವರು ಪ್ರಸರಣ ವಿಭಾಗದಲ್ಲಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿದ್ದರು. ಬೆಂಗಳೂರು ವೃತ್ತಪತ್ರಿಕಾ ನೌಕರರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ



ಪುನೀತ್ ಪುತ್ಥಳಿ ನಿರ್ಮಾಣ: ಪರಿಶೀಲನೆ

ಬೆಂಗಳೂರು: ದಿವಂಗತ ಪುನೀತ್ ರಾಜಕುಮಾರ್ ಪುತ್ಥಳಿ ನಿರ್ಮಾಣದ ಬಗ್ಗೆ ರಾಜ್ಯ ಸರ್ಕಾರ ಕೈಗೊಳ್ಳುವ ತೀರ್ಮಾನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ ಅವರು ತಿಳಿಸಿದ್ದಾರೆ.

ಪುತ್ಥಳಿ ಸ್ಥಾಪಿಸುವ ಕುರಿತು ಕಾನೂನಿನ ಅವಕಾಶಗಳ ಬಗ್ಗೆಯೂ ಪರಿಶೀಲಿಸಲಾಗುವುದು ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಬೆಂಗಳೂರಿನಲ್ಲಿ ಕೋವಿಡ್ ನಿಯಂತ್ರಣದಲ್ಲಿದೆ. ಕೋವಿಡ್ ರೂಪಾಂತರ ಬಗ್ಗೆ ಕೊಳಚೆ ನೀರಿನ ಮಾದರಿಯನ್ನು ಪಡೆದು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಜತೆಗೆ ವೈರಾಣುವಿನ ಅನುಕ್ರಮಣಿಕೆ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಪುನೀತ್ ಸಮಾಧಿ ಮುಂದೆ ಮದುವೆಗೆ ನಿರ್ಧರಿಸಿದ ಜೋಡಿ

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಸಮಾಧಿ ಮುಂದೆಯೇ ಮದುವೆ ಆಗಬೇಕು ಎಂದು ಜೋಡಿಯೊಂದು ನಿರ್ಧರಿಸಿ ಕಂಠೀರವ ಸ್ಟುಡಿಯೋಕ್ಕೆ ಶನಿವಾರ ಆಗಮಿಸಿದೆ.

ಬಳ್ಳಾರಿಯವರಾದ ಗಂಗಾ ಮತ್ತು ಗುರು ಪ್ರಸಾದ್ ಅವರೇ ಸಮಾಧಿ ಮುಂದೆ ಮದುವೆಯಾಗಲು ನಿರ್ಧರಿಸಿರುವ ಪ್ರೇಮಿಗಳು.

ಈ ಕುರಿತು ಪ್ರತಿಕ್ರಿಯಿಸಿದ ಗುರುಪ್ರಸಾದ್, 'ಪುನೀತ್ ಎಂದರೆ ನಮಗೆ ತುಂಬಾ ಅಭಿಮಾನ. ನಾವು ಮದುವೆಯಾಗುತ್ತಿರುವುದು ನಮ್ಮ ಕುಟುಂಬದವರಿಗೂ ಗೊತ್ತಿದೆ. ಪುನೀತ್ ಬದುಕಿದಿದ್ದರೆ ಮದುವೆ ಬಳಿಕ ಅವರ ಮನೆಗೆ ತೆರಳಿ ಆಶೀರ್ವಾದ ಪಡೆದುಕೊಳ್ಳಬೇಕು ಎಂದುಕೊಂಡಿದ್ದೆವು. ಆದರೆ ಅದು ಸಾಧ್ಯವಾಗಲಿಲ್ಲ. ಹಾಗಾಗಿ ಅವರ ಸಮಾಧಿ ಎದುರು ಮದುವೆ ಆಗುತ್ತೇವೆ. ಪುನೀತ್ ಸಹೋದರರಾದ ಶಿವರಾಜ್ ಕುಮಾರ್ ಮತ್ತು ರಾಘವೇಂದ್ರ ರಾಜ್‌ಕುಮಾರ್ ಅವರನ್ನು ಸಂಪರ್ಕಿಸಿದ್ದೇವೆ. ಅವರೂ ಒಪ್ಪಿಗೆ ಕೊಟ್ಟಿದ್ದಾರೆ' ಹಾಗಾಗಿ ಸಮಾಧಿ ಮುಂದೆಯೇ ಮದುವೆಯಾಗುತ್ತಿದ್ದೇವೆ' ಎಂದರು.

'ಪುನೀತ್ ಅವರ ಸಮಾಜ ಸೇವೆ ನೋಡಿದರೆ ಅವರಿಗಿಂತ ದೊಡ್ಡ ದೇವರು ಯಾರೂ ಇಲ್ಲ ಎನಿಸುತ್ತದೆ' ಎಂದರು ಗಂಗಾ.

ಆದರೆ ಪೊಲೀಸರು ಈ ಮದುವೆಗೆ ಒಪ್ಪಿಗೆ ನೀಡಲಿಲ್ಲ. ಹಾಗಾಗಿ ಈ ಜೋಡಿ ವಾಪಸಾಗಬೇಕಾಯಿತು.

ಪುನೀತ್ ಅಭಿಮಾನಿ ಸಾವು

ಪುನೀತ್ ಜೊತೆ ಶಿವಮೂರ್ತಿ

ಕೊಳ್ಳೇಗಾಲ: ನಟ ಪುನೀತ್ ರಾಜ್‌ಕುಮಾರ್ ಅವರ ನಿಧನ ಅರಗಿಸಿಕೊಳ್ಳಲಾಗದೆ ಅಭಿಮಾನಿಯೊಬ್ಬರು ಆಘಾತಕ್ಕೊಳಗಾಗಿ, ಶುಕ್ರವಾರ ಹೃದಯಘಾತದಿಂದ ಮೃತಪಟ್ಟಿದ್ದಾರೆ.

ಇಲ್ಲಿನ ಭೀಮನಗರದ ದಿಡ್ಡದಕೇರಿ ಬಡಾವಣೆಯ ಶಿವಮೂರ್ತಿ (31) ಮೃತ ಯುವಕ.

ವೃತ್ತಿಯಲ್ಲಿ ಫೋಟೊಗ್ರಾಫರ್ ಆಗಿದ್ದ ಇವರು, ಪುನೀತ್ ಅವರ ಅಪ್ಪಟ ಅಭಿಮಾನಿ. ಪುನೀತ್ ಸಾವಿನ ಸುದ್ದಿ ಕೇಳಿ ಬೆಂಗಳೂರಿಗೆ ತೆರಳಿ ಅಂತಿಮ ಸಂಸ್ಕಾರ ಮುಗಿಯುವವರೆಗೂ ಅಲ್ಲೇ ಇದ್ದು, ಕೊಳ್ಳೇಗಾಲಕ್ಕೆ ಹಿಂತಿರುಗಿದ್ದರು. ಆದರೆ, ಮನೆಗೆ ಬಂದ ಮೇಲೆ ಊಟ, ತಿಂಡಿ ಮಾಡದೆ ಅಸ್ವಸ್ಥರಾಗಿದ್ದರು.

MBBS

Ministry Of Health Of Russia
SMOLENSK STATE MEDICAL UNIVERSITY, RUSSIA
Invites Indian students for direct Government Admissions
Recognized by India, WHO, USA & UK, Min. Qual. 50% in XII in PCB

UNIVERSITY - Founded in 1920, 101 years old, Smolensk is 380 km west of Moscow, Very high standards of education, strict disciplinary system. **1500** Indian students (**650** Girls) studying, **167** got degree in **2021,** English Medium in all years, Closed type campus system, **8** attached hospitals (**6000** Beds). **MCI SCREENING TEST** – Our graduates of **2008** to **2020** have given **BEST** results among graduates of all foreign medical colleges (Official web sites of Indian Embassy, Moscow and National Board of Examination, New Delhi who conducts MCI Screening Test confirm this).

SPECIAL HOSTELS ONLY FOR INDIAN STUDENTS WITH INDIAN MESS
Fee (Tuition+Hostel+Med.Ins.) – **USD 6000** (Approx. Rs. 4,50,000/-) per year and one time payment of Rs.1,50,000/- (By Bank Draft only) which includes – Admission procedure, invitation letter, student visa, air ticket Delhi - Moscow.
Scholarship to all Indian students.
Bank loans from Indian banks are available.
Contact Foreign advisor to Chancellor: Dr.Alok Aeron+79605805555(Russia)
Official web site: www.sgmu.info DM us on insta: @sgmu.info
Admission details: admission.sgmu.live
INFORMATION CENTERS (Parents of Students or Our Graduates):
Bangalore & Manglore: Mrs. Sudha Kamath - 9740622038
Chitradurga: Mr. R. Venkatashiva – 9448839235
Mysore: Dr. Mothukar – 8105616675, Mr. Ganesh S. - 8073709996
Hubli-Dharwad & Belgavi: Dr. Suchita Halli - 9916187559
Karwar: Mrs. Bhat – 8884057559; **Hassan:** Ms. Nayana B.R. – 9606265744

ಪುನೀತ್ ರಾಜ್‌ಕುಮಾರ್ ಸಾವಿನ ಸಂಶಯ; ವೈದ್ಯರ ಮನೆಗೆ ಭದ್ರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಪುನೀತ್ ರಾಜ್‌ಕುಮಾರ್ ಅವರ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿರುವ ಅಭಿಮಾನಗಳು, ಸೂಕ್ತ ತನಿಖೆ ನಡೆಸುವಂತೆ ಸದಾಶಿವನಗರ ಠಾಣೆಗೆ ದೂರು ನೀಡಿದ್ದಾರೆ. ಮುಂಜಾಗ್ರತಾ ಕ್ರಮವಾಗಿ, ಪುನೀತ್ ಅವರ ಕುಟುಂಬದ ವೈದ್ಯ ಡಾ. ರಮಣ್‌ರಾವ್ ಮನೆ ಹಾಗೂ ಕ್ಲಿನಿಕ್‌ಗೆ ಪೊಲೀಸರು ಭದ್ರತೆ ಒದಗಿಸಿದ್ದಾರೆ.

'ಪುನೀತ್ ಅಭಿಮಾನಿ ಎಂದು ಹೇಳಿಕೊಂಡ ಅರುಣ್ ಪರಮೇಶ್ವರ್ ಎಂಬುವರು ಗುರುವಾರ ದೂರು ನೀಡಿದ್ದಾರೆ. ಪುನೀತ್‌ರಿಗೆ ಅವರ ಕುಟುಂಬದ ವೈದ್ಯ ಡಾ. ರಮಣ್‌ರಾವ್ ಆರಂಭದಲ್ಲಿ ಯಾವ ರೀತಿ ಚಿಕಿತ್ಸೆ ನೀಡಿದ್ದರು ? ವಿಕ್ರಮ್ ಆಸ್ಪತ್ರೆಗೆ ಕರೆದೊಯ್ಯುವಂತೆ ತಡವಾಗಿ ಹೇಳಿದ್ದೇಕೆ ? ಪುನೀತ್ ಅವರಿಗೆ ನಿಜವಾಗಿಯೂ ಏನಾಗಿತ್ತು ? ಎಂಬುದಾಗಿ ದೂರಿನಲ್ಲಿ ಪ್ರಶ್ನಿಸಿದ್ದಾರೆ. ದೂರು ಸ್ವೀಕರಿಸಲಾಗಿದ್ದು, ಹಿರಿಯ ಅಧಿಕಾರಿಗಳ ಸಲಹೆಯಂತೆ ಮುಂದುವರಿಯಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಇನ್ನೊಬ್ಬ ಅಭಿಮಾನಿ ಶನಿವಾರ ಎರಡನೇ ದೂರು ನೀಡಿದ್ದಾರೆ. ವೈದ್ಯ ರಮಣ್ ರಾವ್ ಅವರನ್ನು ಬಂಧಿಸಿ ತನಿಖೆ ನಡೆಸುವಂತೆ ಒತ್ತಾಯಿಸಿದ್ದಾರೆ. ಅವರ ದೂರನ್ನೂ ಪರಿಶೀಲಿಸಲಾಗುತ್ತಿದೆ' ಎಂದೂ ತಿಳಿಸಿದರು.

'ವೈದ್ಯರ ಮನೆ ಹಾಗೂ ಕ್ಲಿನಿಕ್ ಎದುರು ಪ್ರತಿಭಟನೆ ನಡೆಸಲು ಕೆಲವರು ಸಿದ್ಧತೆ ಮಾಡಿಕೊಂಡಿರುವ ಬಗ್ಗೆ ಮಾಹಿತಿ ಇದೆ. ಯಾವುದೇ ಅಹಿತಕರ ಘಟನೆಗಳು ನಡೆಯಬಾರದೆಂದು, ಎರಡೂ ಕಡೆ ಭದ್ರತೆಗೆ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ' ಎಂದೂ ಹೇಳಿದರು.

ತಮ್ಮ ವಿರುದ್ಧದ ದೂರಿನ ಬಗ್ಗೆ ಪ್ರತಿಕ್ರಿಯಿಸಿದ ಡಾ. ರಮಣ್‌ರಾವ್, 'ಪುನೀತ್ ರಾಜ್‌ಕುಮಾರ್ ಆಸ್ಪತ್ರೆಗೆ ಬಂದಾಗ ಯಾವುದೇ ಆರೋಗ್ಯ ಸಮಸ್ಯೆ ಇರಲಿಲ್ಲ. ಅನುಮಾನ ಬೇಡವೆಂದು ಇಸಿಜಿ ಮಾಡಲಾಗಿತ್ತು. ಲಘು ಹೃದಯಘಾತವಾಗಿರಬಹುದೆಂಬ ಅನುಮಾನ ಬಂದಿದ್ದರಿಂದ, ಹೆಚ್ಚಿನ ಚಿಕಿತ್ಸೆಗಾಗಿ ವಿಕ್ರಮ್ ಆಸ್ಪತ್ರೆಗೆ ಕಳುಹಿಸಲಾಯಿತು' ಎಂದಿದ್ದಾರೆ.

'35 ವರ್ಷಗಳಿಂದ ಡಾ. ರಾಜ್‌ಕುಮಾರ್ ಕುಟುಂಬದವರಿಗೆ ಚಿಕಿತ್ಸೆ ನೀಡುತ್ತಿದ್ದೇನೆ. ಪುನೀತ್ ನನ್ನ ಮಗನಿದ್ದಂತೆ. ನನ್ನಿಂದ ಯಾವುದೇ ಲೋಪ ಆಗಿಲ್ಲ' ಎಂದೂ ಹೇಳಿದ್ದಾರೆ.



ಭಾನುವಾರ ● ನವೆಂಬರ್ 7, 2021 ಪ್ರಜಾವಾಣಿ

ನಮ್ಮದು ಆತ್ಮಾಭಿಮಾನದ ಹೋರಾಟ: ಬಿಕೆಯು ಮುಖಂಡ ಹರನೇಕ್ ಸಿಂಗ್

‘ನಾವು ನಕ್ಸಲರೂ ಅಲ್ಲ, ಖಾಲಿಸ್ತಾನಿಗಳೂ ಅಲ್ಲ’

● ಸಚ್ಚಿದಾನಂದ ಕುರಗುಂದ

ಬೆಂಗಳೂರು: ‘ಆತ್ಮಾಭಿಮಾನದ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಮ್ಮ ಬದುಕಿಗೆ ಕುತ್ತು ಬಂದಿದೆ. ಆದರೆ, ನಮಗೆ ನಕ್ಸಲರು, ಖಾಲಿಸ್ತಾನಿಗಳು ಎನ್ನುವ ಹಣೆಪಟ್ಟೆ ಅಂಟಿಸಲಾಗುತ್ತಿದೆ. ನಾವು ನಕ್ಸಲರೂ ಅಲ್ಲ, ಖಾಲಿಸ್ತಾನಿಗಳೂ ಅಲ್ಲ, ನಾವು ಈ ದೇಶದ ಸರಳ ಮತ್ತು ಸಾಮಾನ್ಯ ರೈತರು...’

ಕೇಂದ್ರ ಸರ್ಕಾರ ರೂಪಿಸಿರುವ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ದೆಹಲಿಯ ಗಡಿಯಲ್ಲಿ ನಡೆಯುತ್ತಿರುವ ಹೋರಾಟದ ವಿವಿಧ ಆಯಾಮಗಳನ್ನು ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ಮುಖಂಡ ಹರನೇಕ್ ಸಿಂಗ್ ವಿಶ್ಲೇಷಿಸಿದ್ದು ಹೀಗೆ.

ಅನ್ನದಾತರ ಸಂಕಟಗಳು, ಕೃಷಿ ಕಾಯ್ದೆಯಿಂದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ (ಎಪಿಎಂಸಿ) ಒದಗುವ ಆಪತ್ತುಗಳು, ಕೇಂದ್ರ ಸರ್ಕಾರದ ಹಟಮಾರಿತನ, ರಾಜಕೀಯ ಪಕ್ಷಗಳ ಇಬ್ಬಂದಿತನವನ್ನು ಅವರು ‘ಪ್ರಜಾವಾಣಿ’ಗೆ ಜತೆ ಹಂಚಿಕೊಂಡರು.

‘ಕೃಷಿ ಕಾಯ್ದೆಗಳಿಗೆ ಜನ್ಮ ನೀಡಿದ್ದು ಕಾಂಗ್ರೆಸ್. ಅದರ ಕೂಸನ್ನು ಬಿಜೆಪಿ, ಪೋಷಿಸಿ ಬೆಳೆಸಿದೆ. ಕಾಂಗ್ರೆಸ್ ಈಗ ಚಹರೆ ಬದಲಿಸಿಕೊಂಡು ನಮ್ಮ ಹೋರಾಟಕ್ಕೆ ಬೆಂಬಲ ನೀಡಿರಬಹುದು. ನಾವು ಮಾತ್ರ ಎಲ್ಲ ರಾಜಕೀಯ ಪಕ್ಷಗಳಿಂದ ಅಂತರ ಕಾಯ್ದುಕೊಂಡಿದ್ದೇವೆ. ಶತ್ರುವಿನ ಶತ್ರು ನಮ್ಮ ಸ್ನೇಹಿತ ಅಲ್ಲ. ಯಾವ ಪಕ್ಷದ ಮೇಲೆಯೂ ನಮಗೆ ವಿಶ್ವಾಸ ಇಲ್ಲ. ಆದರೆ, ಅಧಿಕಾರದಲ್ಲಿರುವ ಬಿಜೆಪಿಗೆ ತಕ್ಕ ಪಾಠ ಕಲಿಸಬೇಕಾಗಿದೆ. ಬಿಜೆಪಿಗೆ ಮತ ಚಲಾಯಿಸದಂತೆ ಬಹಿರಂಗವಾಗಿಯೇ ಹೇಳಿದ್ದೇವೆ. ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ಸಂದರ್ಭದಲ್ಲೂ ಹೇಳಿದ್ದೇವೆ. ಮುಂಬರುವ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆ ಸಂದರ್ಭದಲ್ಲೂ ಹೇಳುತ್ತೇವೆ’ ಎಂದರು.

‘ಹೋರಾಟವನ್ನು ಇನ್ನೂ ಒಂದು ವರ್ಷ ಮುಂದುವರಿಸಲು ಈಗಾಗಲೇ ಕಾರ್ಯತಂತ್ರ ರೂಪಿಸಿದ್ದೇವೆ. ಯುದ್ಧದ ರೀತಿ ಹೋರಾಟ ಮಾಡುತ್ತಿದ್ದೇವೆ. ಯುದ್ಧವನ್ನು ಏಕಾಏಕಿ ನಿಲ್ಲಿಸಲಾಗುವುದಿಲ್ಲ. ಸುಪ್ರೀಂ ಕೋರ್ಟ್ ಈ ಕಾಯ್ದೆಗಳಿಗೆ ತಡೆ ನೀಡಿ, ಹೋರಾಟ ನಿಲ್ಲಿಸಿ ಎಂದು ಸಲಹೆ ನೀಡಿರಬಹುದು. ಆದರೆ, ಕೃಷಿ ವಿಷಯ ಸಹವರ್ತಿ ಪಟ್ಟಿಯಲ್ಲಿರುವಾಗ ಈ ರೀತಿಯ ಕಾನೂನುಗಳನ್ನು ರೂಪಿಸಿದ್ದೇ ತಪ್ಪು ಎನ್ನುವುದು ನಮ್ಮ ನಿಲುವು. ರಾಜ್ಯಗಳ ಅಧಿಕಾರವನ್ನು ಕಿತ್ತುಕೊಳ್ಳುವ ಪ್ರಯತ್ನವನ್ನು ಕೇಂದ್ರ ಸರ್ಕಾರ ಮಾಡುತ್ತಿದೆ’ ಎಂದು ಟೀಕಿಸಿದರು.

‘ನಮ್ಮ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನವನ್ನು ಮಾಡಲಾಗಿದೆ. ಖಾಲಿಸ್ತಾನಿಗಳು ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಆರೋಪಿಸಲಾಯಿತು. ಆದರೆ, ನಾವು ಖಾಲಿಸ್ತಾನಕ್ಕೆ ಮಾನ್ಯತೆಯನ್ನೂ ನೀಡಿಲ್ಲ, ಬೆಂಬಲವನ್ನೂ ಕೊಟ್ಟಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಕೃಷಿ ಕಾಯ್ದೆಗಳ ಜಾರಿಯಿಂದ ಎಪಿಎಂಸಿಗಳನ್ನು ಕಾರ್ಪೊರೇಟ್ ಕಂಪನಿಗಳು ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತವೆ. ಆಗ ಕೃಷಿ ಉತ್ಪನ್ನಗಳ ದರಗಳನ್ನು ಕಂಪನಿಗಳೇ ನಿರ್ಧರಿಸುತ್ತವೆ. ಇದರಿಂದ, ಕೃಷಿಕರಿಗೂ ಮತ್ತು ಗ್ರಾಹಕರಿಗೂ ಹೊರೆಯಾಗುತ್ತದೆ. ನಗರ ಪ್ರದೇಶದ ಜನತೆಯಲ್ಲಿ ಈ ಬಗ್ಗೆ ಅರಿವು ಮೂಡಿಸುವ ಪ್ರಯತ್ನಗಳಾಗಬೇಕಾಗಿದೆ’ ಎಂದು ಅಭಿಪ್ರಾಯಪಟ್ಟರು.

‘ಮೂರು ರಾಜ್ಯಗಳಿಗೆ ಸೀಮಿತವಲ್ಲ ಹೋರಾಟ’

‘ನಮ್ಮ ಹೋರಾಟಕ್ಕೆ ದೇಶದಾದ್ಯಂತ ಬೆಂಬಲ ವ್ಯಕ್ತವಾಗಿದೆ. ಕೇವಲ ಮೂರು ರಾಜ್ಯಗಳಿಗೆ ಸೀಮಿತವಾಗಿದೆ ಎನ್ನುವುದು ಅಪಪ್ರಚಾರ. ಕರ್ನಾಟಕದಲ್ಲೂ ಎಲ್ಲ ರೈತ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿವೆ. ರೈತರ ಹೋರಾಟದ ಬಗ್ಗೆ ತಪ್ಪು ತಿಳಿವಳಿಕೆ ಮೂಡಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಮುಖ್ಯವಾಗಿ ಈ ಕಾಯ್ದೆಗಳು ಕೃಷಿಕರ ಮೇಲೆ ಮಾತ್ರ ಪರಿಣಾಮ ಬೀರುತ್ತವೆ ಎಂದು ಬಿಂಬಿಸಲಾಗಿದೆ. ವಾಸ್ತವದಲ್ಲಿ ಈ ಕಾಯ್ದೆಗಳು ಸಮಾಜದ ಎಲ್ಲ ವರ್ಗಗಳ ಮೇಲೆಯೂ ಪರಿಣಾಮ ಬೀರುತ್ತವೆ ಎನ್ನುವುದನ್ನು ಯಾರೂ ಅರ್ಥ ಮಾಡಿಕೊಳ್ಳುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಪಂಜಾಬ್‌ನಲ್ಲಿ ಈ ಹೋರಾಟದ ತೀವ್ರತೆ ಹೆಚ್ಚಾಗಿರುವುದು ನಿಜ. ಪಂಜಾಬ್ ರೈತರು ಭೂಮಿ ಜತೆ ಅಪಾರ ಆತ್ಮೀಯ ಸಂಬಂಧ ಹೊಂದಿದ್ದಾರೆ. ಆದ್ದರಿಂದ, ಸಹಜವಾಗಿಯೇ ಅವರು ರೊಚ್ಚಿಗೆದ್ದಿದ್ದಾರೆ’ ಎಂದು ಹೇಳಿದರು.

‘ಅಹಂ ಇಲ್ಲ, ಮಾತುಕತೆಗೆ ಸದಾ ಸಿದ್ಧ’

‘ನಮಗೆ ಅಹಂ ಇಲ್ಲ. ಕೇಂದ್ರ ಸರ್ಕಾರದ ಜತೆ ಮಾತುಕತೆಗೆ ಸದಾ ಸಿದ್ಧರಿದ್ದೇವೆ. ಕೃಷಿ ಕಾಯ್ದೆಗಳಿಂದಾಗುವ ದೀರ್ಘಾವಧಿಯಲ್ಲಿ ಉಂಟಾಗುವ ಮಾರಕ ಪರಿಣಾಮಗಳನ್ನು ನಾವೇ ಕೃಷಿ ಸಚಿವರಿಗೆ ಇದುವರೆಗೆ ನಡೆದ ಹಲವು ಸಭೆಗಳಲ್ಲಿ ವಿವರಿಸಿದ್ದೇವೆ. ಆದರೆ, ಕೇಂದ್ರ ಸರ್ಕಾರ ಕಾರ್ಪೊರೇಟ್ ಕಂಪನಿಗಳ ಮಾತು ಆಲಿಸುತ್ತಿದೆಯೇ ವಿನಾ ರೈತರದ್ದಲ್ಲ’ ಎಂದು ಹರನೇಕ್ ಸಿಂಗ್ ಕಿಡಿಕಾರಿದರು.

‘ಈ ಕೃಷಿ ಕಾಯ್ದೆಗಳಿಗೆ ಮತ್ತೆ ತಿದ್ದುಪಡಿ ಮಾಡುವ ತಂತ್ರಗಳು ನಮಗೆ ಬೇಕಾಗಿಲ್ಲ. ರದ್ದುಪಡಿಸುವ ಏಕೈಕ ಬೇಡಿಕೆ ನಮ್ಮದು’ ಎಂದು ಹೇಳಿದರು.

ಹರನೇಕ್ ಸಿಂಗ್

ಸುದ್ದಿ 2 ನಿಮಿಷ

‘ರಸಗೊಬ್ಬರ ಉತ್ಪಾದನೆ; ಖಾಸಗಿ ಕಂಪನಿಗಳಿಗೆ ಆಹ್ವಾನ’

ಕಲಬುರಗಿ: ‘ಇಂಧನ ಹಾಗೂ ಕಚ್ಚಾವಸ್ತು ಕೊರತೆ ಕಾರಣ ಕೇಂದ್ರ ಸರ್ಕಾರ ಹೊಸದಾಗಿ ರಸಗೊಬ್ಬರ ಉತ್ಪಾದನಾ ಘಟಕ ಆರಂಭಿಸುತ್ತಿಲ್ಲ. ಖಾಸಗಿಯವರು ಮುಂದೆ ಬಂದರೆ ಸೌಲಭ್ಯ ಕಲ್ಪಿಸುತ್ತೇವೆ’ ಎಂದು ಕೇಂದ್ರದ ನವೀಕರಿಸಬಹುದಾದ ಇಂಧನ ಮೂಲ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಹೇಳಿದರು.

‘ಗೊಬ್ಬರ ಉತ್ಪಾದನೆಗೆ ಕೆಲ ಖಾಸಗಿ ಕಂಪನಿಗಳು ಮುಂದೆ ಬಂದಿವೆ. ಅವರಿಗೆ ಬೇಕಾದ ಜಮೀನು, ವಿದ್ಯುತ್, ನೀರು, ರಿಯಾಯಿತಿ ಸೇರಿದಂತೆ ಅಗತ್ಯ ಸೌಕರ್ಯ ಒದಗಿಸಲಾಗುವುದು. ಈ ಬಗ್ಗೆ ಶೀಘ್ರದಲ್ಲೇ ಸಭೆ ಕರೆದು ನಿರ್ಧರಿಸಲಾಗುವುದು’ ಎಂದು ಶನಿವಾರ ಮಾಧ್ಯಮದವರಿಗೆ ತಿಳಿಸಿದರು.

‘ರಾಜ್ಯದಲ್ಲಿ ಹಿಂಗಾರು ಬಿತ್ತನೆಗೆ ರಸಗೊಬ್ಬರ ಕೊರತೆ ಉಂಟಾಗಿಲ್ಲ. ವದಂತಿ ಹಬ್ಬಿಸಿ ಕಾಳಸಂತೆಯಲ್ಲಿ ಗೊಬ್ಬರ ಮಾರಾಟ ಮಾಡುವ ಹುನ್ನಾರ ನಡೆದಿದೆ. ಆಯಾ ರಾಜ್ಯಗಳು ಸಲ್ಲಿಸಿದ ಬೇಡಿಕೆಯಷ್ಟು ಗೊಬ್ಬರವನ್ನು ಪೂರ್ಣಪ್ರಮಾಣದಲ್ಲಿ ಪೂರೈಸಿದ್ದೇವೆ. ರೈತರು ಆತಂಕ ಪಡಬೇಕಿಲ್ಲ’ ಎಂದರು.

‘ಗೋವಿನ ತಳಿ ಸಂರಕ್ಷಣೆ ಅಗತ್ಯ’

ಬೆಂಗಳೂರು: ‘ಸಕಲವನ್ನೂ ನೀಡುವ ಗೋವನ್ನು ಸಂರಕ್ಷಿಸುವ ಜವಾಬ್ದಾರಿ ನಮ್ಮೆಲ್ಲರದು. ಅದರಲ್ಲೂ ಕೃಷಿ ಪ್ರಧಾನ ದೇಶ ಆಗಿರುವುದರಿಂದ ಗೋವಿನ ಅತೀವವಾದ ತಳಿಗಳನ್ನು ಉಳಿಸಿ ಬೆಳೆಸುವ ಕೆಲಸ ಆಗಬೇಕಿದೆ’ ಎಂದು ಬಿಜೆಪಿ ಯುವ ಮುಖಂಡ ಡಾ. ಅರಣ್ ಸೋಮಣ್ಣ ಹೇಳಿದರು.

ವಸತಿ ಸಚಿವ ವಿ.ಸೋಮಣ್ಣ ಅವರ ಶಾಸಕರ ಕಚೇರಿಯಲ್ಲಿ ಶನಿವಾರ ಗೋವಿನ ಪೂಜೆ ಸಲ್ಲಿಸಿ ಅವರು ಮಾತನಾಡಿದರು. ಬಿಬಿಎಂಪಿ ಮಾಜಿ ಸದಸ್ಯ ಮೋಹನ್ ಕುಮಾರ್, ರೂಪ ಲಿಂಗೇಶ್, ರಾಮಪ್ಪ, ರಾಜೇಶ್ವರಿ ಬೆಳಗೋಡು ಇದ್ದರು.

‘ರಾಮಾಯಣ ಯಾತ್ರಾ’ ಸರಣಿ ಇಂದಿನಿಂದ

ನವದೆಹಲಿ: ಧಾರ್ಮಿಕ ಪ್ರವಾಸೋದ್ಯಮವನ್ನು ಉತ್ತೇಜಿಸಲು ಭಾರತೀಯ ರೈಲ್ವೆ ಕೇಟರಿಂಗ್ ಹಾಗೂ ಪ್ರವಾಸೋದ್ಯಮ ನಿಗಮ (ಐಆರ್‌ಸಿಟಿಸಿ) ಆರಂಭಿಸಲಿರುವ ‘ರಾಮಾಯಣ ಯಾತ್ರಾ’ ಪ್ರವಾಸ ಸರಣಿಯು ಭಾನುವಾರ ಇಲ್ಲಿನ ಸಫ್ದರ್‌ಜಂಗ್ ರೈಲು ನಿಲ್ದಾಣದಿಂದ ಆರಂಭವಾಗಲಿದೆ.

ಕೊರೊನಾ ಸಾಂಕ್ರಾಮಿಕ ನಿಯಂತ್ರಣಕ್ಕೆ ಬರುತ್ತಿರುವ ಹಿನ್ನೆಲೆಯಲ್ಲಿ ರೈಲುಗಳ ಮೂಲಕ ದೇಶೀ ಪ್ರವಾಸೋದ್ಯಮ ಉತ್ತೇಜಿಸುವ ಕಾರ್ಯಕ್ರಮವನ್ನು ಪುನರಾರಂಭಿಸಲು ಈ ಸರಣಿ ನೆರವಿಗೆ ಬರಲಿದೆ.

13ರಿಂದ 17 ದಿನಗಳ ಸುದೀರ್ಘ ಪ್ರಯಾಣದ ಈ ಯಾತ್ರಾ ಸರಣಿಯಲ್ಲಿ ಪ್ರವಾಸಿಗರನ್ನು ಶ್ರೀರಾಮನ ಜನ್ಮಸ್ಥಳವಾದ ಅಯೋಧ್ಯೆ ಒಳಗೊಂಡಂತೆ ರಾಮಾಯಣಕ್ಕೆ ಸಂಬಂಧಿಸಿದ ಸ್ಥಳಗಳಿಗೆ ಕರೆದೊಯ್ಯಲಾಗುತ್ತದೆ.

ದಕ್ಷಿಣ ಹಾಗೂ ಉತ್ತರ ಭಾರತದ ಯಾತ್ರಿಕರ ಅವಶ್ಯಕತೆ ಪೂರೈಸಲು ಸ್ಲೀಪರ್ ಕ್ಲಾಸ್ ಕೋಚ್‌ಗಳನ್ನು ಒಳಗೊಂಡ ವಿಶೇಷ ರೈಲು ಸೌಲಭ್ಯವನ್ನು ಒದಗಿಸಲಾಗಿದೆ. ಮಧುರೆವರೆಗಿನ 13 ದಿನಗಳ ಪ್ರಯಾಣದ ಈ ವಿಶೇಷ ಪ್ಯಾಕೇಜ್ ಪ್ರವಾಸವು ನವೆಂಬರ್ 16ರಿಂದ ಆರಂಭವಾಗಲಿದೆ.

ತಮಿಳುನಾಡಿನ ಮಧುರೆಯಿಂದ ಹೊರಡುವ ರೈಲು ದಿಂಡಿಗಲ್, ತಿರುಚಿರಾಪಳ್ಳಿ, ಕರೂರ್, ಈರೋಡ್, ಸೇಲಂ, ಜೋಲಾರ್ ಪೇಟೆ, ಕಟ್ಪಾಡಿ, ಚೆನ್ನೈ, ರೇಣಿಗುಂಟಾ, ಕಡಪ, ಹಂಪಿ, ನಾಸಿಕ್, ಚಿತ್ರಕೂಟ, ಅಲಹಾಬಾದ್ ಹಾಗೂ ವಾರಾಣಸಿ ಮೂಲಕ ಮಧುರೆಗೆ ವಾಪಸಾಗಲಿದೆ.

17 ದಿನಗಳ ಪ್ರಯಾಣ ಅವಧಿಯ ಪ್ಯಾಕೇಜ್ ಒಳಗೊಂಡ ಮತ್ತೊಂದು ‘ರಾಮಾಯಣ ಯಾತ್ರಾ ಎಕ್ಸ್‌ಪ್ರೆಸ್’ ರೈಲು ನವೆಂಬರ್ 25ರಂದು ಗಂಗಾನಗರದಿಂದ ಹೊರಡಲಿದೆ. ಭಟಿಂಡಾ, ಬರ್ನಾಲಾ, ಪಟಿಯಾಲಾ, ರಾಜ್‌ಪುರ, ಅಂಬಾಲಾ ಕ್ಯಾಂಟ್, ಕುರುಕ್ಷೇತ್ರ, ಕರ್ನಾಲ್, ಪಾಣಿಪತ್, ದೆಹಲಿ ಕ್ಯಾಂಟ್, ಗುರುಗ್ರಾಮ, ರೇವಾರಿ, ಅಲ್ವಾರ್, ಜೈಪುರ, ಆಗ್ರಾ ಫೋರ್ಟ್, ಇಟಾವಾ ಮತ್ತು ಕಾನ್ಪುರ ಮೂಲಕ ಸಂಚರಿಸುವ ರೈಲು, ಅಯೋಧ್ಯೆ, ಸೀತಾಮಾರಿ, ಜನಕ್‌ಪುರ, ವಾರಾಣಸಿ, ಪ್ರಯಾಗ್‌ರಾಜ್, ಚಿತ್ರಕೂಟ, ನಾಸಿಕ್, ಹಂಪಿ, ರಾಮೇಶ್ವರ, ಕಾಂಚಿಪುರಕ್ಕೆ ತೆರಳಿ ಗಂಗಾನಗರಕ್ಕೆ ಹಿಂತಿರುಗಲಿದೆ ಎಂದು ಐಆರ್‌ಸಿಟಿಸಿ ಪ್ರಕಟಣೆ ತಿಳಿಸಿದೆ.

‘ಹಾದಿ ತಪ್ಪಿಸಲು ಸಿದ್ದರಾಮಯ್ಯ ವಿರುದ್ಧ ಆರೋಪ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಟ್ ಕಾಯಿನ್ ವಿಚಾರದ ಹಾದಿ ತಪ್ಪಿಸಲು ಸಿದ್ದರಾಮಯ್ಯ ಪರಿಶಿಷ್ಟರ ವಿರೋಧಿ ಎಂದು ಬಿಂಬಿಸುತ್ತಿದ್ದಾರೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ದೂರಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಅಧಿಕಾರಕ್ಕಾಗಿ ಕೆಲವರು ಬಿಜೆಪಿಗೆ ಹೋಗಿದ್ದಾರೆಂದು ಸಿದ್ದರಾಮಯ್ಯ ಹೇಳಿದ್ದಾರೆಯೇ ಹೊರತು, ಹೊಟ್ಟೆಪಾಡಿಗೆ ಹೋಗಿದ್ದಾರೆ ಎಂದು ಹೇಳಿಲ್ಲ. ಬಿಜೆಪಿಯವರು ವಿಷಯ ತಿರುಚುವುದರಲ್ಲಿ ನಿಸ್ಸೀಮರು’ ಎಂದು ವಾಗ್ದಾಳಿ ನಡೆಸಿದರು.

‘2008ರಿಂದ 2013ರವರೆಗಿನ ಬಿಜೆಪಿ ಸರ್ಕಾರ, 2013ರಿಂದ 2018ರವರೆಗಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಿಟ್ಟ ಅನುದಾನವನ್ನು ನೋಡಿದರೆ ಪರಿಶಿಷ್ಟರು, ತುಳಿತಕ್ಕೆ ಒಳಗಾದವರ ಮೇಲೆ ಯಾರಿಗೆ ಕಾಳಜಿ ಇದೆ ಎಂದು ಗೊತ್ತಾಗುತ್ತದೆ’ ಎಂದರು.

ಬಿಜೆಪಿಯ ನಾರಾಯಣ ಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ನಮ್ಮಲ್ಲಿ ಪರಿಶಿಷ್ಟ ಸಮುದಾಯಕ್ಕೆ ಸೇರಿದವರು ಕೆಪಿಸಿಸಿ ಅಧ್ಯಕ್ಷರಾಗಿದ್ದರು. ಬಿಜೆಪಿಯವರು ಎಷ್ಟು ಪರಿಶಿಷ್ಟರಿಗೆ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಕೊಟ್ಟಿದ್ದಾರೆ’ ಎಂದು ಪ್ರಶ್ನಿಸಿದರು.

ರಾಮಲಿಂಗಾ ರೆಡ್ಡಿ

‘ಮಲ್ಲಿಕಾರ್ಜುನ ಖರ್ಗೆ, ಮುನಿಯಪ್ಪ, ಪರಮೇಶ್ವರ ಅವರನ್ನು ರಾಜಕೀಯವಾಗಿ ಮುಗಿಸಿದ್ದೇ ಸಿದ್ದರಾಮಯ್ಯ’ ಎಂಬ ಬಿಜೆಪಿ ನಾಯಕರ ಹೇಳಿಕೆಗೆ, ‘2008ರಲ್ಲಿ ಖರ್ಗೆ ಕೆಪಿಸಿಸಿ ಅಧ್ಯಕ್ಷರಾಗಿದ್ದಾಗ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ 80 ಸೀಟುಗಳನ್ನಷ್ಟೇ ಗೆದ್ದಿತ್ತು. ಆಗ ನಮ್ಮ ಸರ್ಕಾರ ಬಂದಿದ್ದರೆ ಅವರೇ ಮುಖ್ಯಮಂತ್ರಿ ಆಗುತ್ತಿದ್ದರು’ ಎಂದರು.

‘ಬಿಟ್ ಕಾಯಿನ್ ಪ್ರಕರಣದ ನಿಷ್ಪಕ್ಷಪಾತ ತನಿಖೆ ನಡೆದರೆ ಬಸವರಾಜ ಬೊಮ್ಮಾಯಿ ಸರ್ಕಾರಕ್ಕೆ ಕಂಟಕ ಎದುರಾಗಲಿದೆ. ಈ ಪ್ರಕರಣದಲ್ಲಿ ಪ್ರಭಾವಿ ನಾಯಕರ ಮಗ, ಅಧಿಕಾರಿಗಳು ಭಾಗಿಯಾಗಿರುವ ಊಹಾಪೋಹವಿದೆ. ಸಿಬಿಐಗೆ ಪ್ರಕರಣ ಹೋದ ಮೇಲೆ ಗೆಜೆಟ್ ಆಗಿರಬೇಕಲ್ಲವೇ? ಸರ್ಕಾರ ಯಾವಾಗ ಸಿಬಿಐ, ಇ.ಡಿಗೆ ನೀಡಿದೆ ಎಂದು ತಿಳಿಸಲಿ. ತನಿಖೆಯನ್ನು ಪಾರದರ್ಶಕವಾಗಿ ಮಾಡಲಿ’ ಎಂದು ಆಗ್ರಹಿಸಿದರು.

ಸಿದ್ದರಾಮಯ್ಯ ಕ್ಷಮೆ ಕೇಳದಿದ್ದರೆ ಹೋರಾಟ– ರವಿಕುಮಾರ್

‘ದಲಿತರ ಕುರಿತ ಹೇಳಿಕೆಯನ್ನು ಸಿದ್ದರಾಮಯ್ಯ ಹಿಂಪಡೆದು, ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಅವರ ವಿರುದ್ಧ ಮುಂದಿನ ದಿನಗಳಲ್ಲಿ ದೊಡ್ಡಮಟ್ಟದ ಹೋರಾಟ ಹಮ್ಮಿಕೊಳ್ಳುತ್ತೇವೆ’ ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಶನಿವಾರ ಎಚ್ಚರಿಸಿದರು.



ರವಿಕುಮಾರ್

ಎಸ್.ಸಿ ಮೋರ್ಚಾ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಜೊತೆ ಸುದ್ದಿಗೋಷ್ಠಿಯಲ್ಲಿ ಅವರು, ‘ಜಿ.ಪರಮೇಶ್ವರ ಅವರು ಮುಖ್ಯಮಂತ್ರಿ ಆಗಬೇಕಿತ್ತು. ಆದರೆ, ಆಗ ಅವರನ್ನು ಸೋಲಿಸಲಾಯಿತು. ಮಾಜಿ ಸಂಸದ ಕೆ.ಎಚ್.ಮುನಿಯಪ್ಪ, ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಮುಗಿಸಿದ್ದು ಯಾರು’ ಎಂದು ಪ್ರಶ್ನಿಸಿದರು.

’2013ರಿಂದ 2018ರ ಅವಧಿಯಲ್ಲಿ ಅತಿ ಹೆಚ್ಚು ಮತಾಂತರವಾಗಿದೆ. ದಾಖಲೆಗಳು ನಮ್ಮ ಬಳಿ ಇವೆ. ಎಲ್ಲ ಬಿಡುಗಡೆ ಮಾಡುತ್ತೇವೆ’ ಎಂದರು.

‘ಸಿದ್ದರಾಮಯ್ಯ ಕಾಂಗ್ರೆಸ್‌ಗೆ ಹೋದ ಮೇಲೆ ಪರಿಶಿಷ್ಟ ನಾಯಕರು ಕಾಣೆಯಾದರು. ಪರಿಶಿಷ್ಟ ಮುಖಂಡರ ತಲೆ ಮೇಲೆ ಕಾಲಿಟ್ಟು ಮುಗಿಸಿದವರು ಸಿದ್ದರಾಮಯ್ಯ’ ಎಂದು ಛಲವಾದಿ ನಾರಾಯಣಸ್ವಾಮಿ ವಾಗ್ದಾಳಿ ನಡೆಸಿದರು.

‘ಸಿದ್ದರಾಮಯ್ಯ ಅವರು ಮನಸ್ಸಿನಲ್ಲಿ ಪರಿಶಿಷ್ಟರ ವಿರೋಧಿ. ಬಾಯಲ್ಲಿ ಮಾತ್ರ ಅವರಿಗೆ ಪರಿಶಿಷ್ಟರಪರ ಪ್ರೇಮ ಇದೆ’ ಎಂದು ಆರೋಪಿಸಿದರು.

ಯೋಗ್ಯತೆ ಇಲ್ಲ: ‘ಸಿದ್ದರಾಮಯ್ಯ ಅವರು ಪರಿಶಿಷ್ಟರ ಕಲ್ಯಾಣಕ್ಕೆ ಸಾಕಷ್ಟು ಯೋಜನೆಗಳನ್ನು ಕೊಟ್ಟಿದ್ದಾರೆ. ಆದರೆ, ಬಿಜೆಪಿ ಏನು ಮಾಡಿದೆ.ಗುತ್ತಿಗೆದಾರರಿಗೆ ನೀಡಿದ್ದ ಮೀಸಲಾತಿಯನ್ನು ಬಿಜೆಪಿಯವರು ಕಿತ್ತು ಹಾಕಿದರು. ಕಾರಜೋಳ ಸಾಹೇಬರೇ, ಪರಿಶಿಷ್ಟರ ಕಲ್ಯಾಣಕ್ಕೆ ನೀವು ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ’ ಎಂದು ಆರ್.ಬಿ. ತಿಮ್ಮಾಪುರ ಪ್ರಶ್ನಿಸಿದರು.

ಪೆಟ್ರೋಲ್ ದರ ಇಳಿಸಲು ಆಗ್ರಹ

ಬೆಂಗಳೂರು: ‘ಕೇಂದ್ರ ಸರ್ಕಾರ ಪೆಟ್ರೋಲ್ ದರವನ್ನು ಪ್ರತಿ ಲೀಟರ್‌ಗೆ ₹60 ಹಾಗೂ ಡೀಸೆಲ್ ದರ ₹ 50ಕ್ಕೆ ಇಳಿಸಬೇಕು’ ಎಂದು ವೆಲ್‌ಫೇರ್ ಪಾರ್ಟಿ ಆಫ್ ಇಂಡಿಯಾದ ರಾಜ್ಯ ಘಟಕದ ಅಧ್ಯಕ್ಷ ತಾಹಿರ್ ಹುಸೇನ್ ಆಗ್ರಹಿಸಿದರು.

‘ತೈಲ ದರವನ್ನು ತುಸು ಇಳಿಸುವ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ದೀಪಾವಳಿ ಬಂಪರ್ ಗಿಫ್ಟ್ ಎಂದು ಬೆನ್ನು ತಟ್ಟಿಕೊಳ್ಳುತ್ತಿವೆ. ಈ ದರ ಇಳಿಕೆಯಿಂದ ಗ್ರಾಹಕರಿಗೆ ಯಾವುದೇ ಅನುಕೂಲವಿಲ್ಲ. ನಿರಂತರವಾಗಿ ದರ ಏರಿಸಿ ಈಗ ಸ್ವಲ್ಪ ಪ್ರಮಾಣದಲ್ಲಿ ತಗ್ಗಿಸಿ ಜನರ ಕಣ್ಣೊರೆಸುವ ನಾಟಕ ಆಡುತ್ತಿವೆ’ ಎಂದು ದೂರಿದರು.

‘ಕೋವಿಡ್‌ನಿಂದ ಜನರು ಸಂಕಷ್ಟಕ್ಕೆ ಸಿಲುಕಿದ್ದು ಇದುವರೆಗೆ ಚೇತರಿಸಿಕೊಂಡಿಲ್ಲ. ಇಂತಹ ಸಂದರ್ಭದಲ್ಲಿ ಜನರಿಗೆ ಆಸರೆಯಾಗಬೇಕಿದ್ದ ಸರ್ಕಾರಗಳು ಅಗತ್ಯ ವಸ್ತುಗಳ ದರ ಏರಿಸಿ, ಜನವಿರೋಧಿ ನೀತಿ ಅನುಸರಿಸುತ್ತಿವೆ’ ಎಂದರು.

‘ಎಲ್ಲ ಕುಟುಂಬಗಳಿಗೆ ತಲಾ 35 ಕೆ.ಜಿಗಳಷ್ಟು ಪಡಿತರ ವಿತರಿಸಬೇಕು. ಅಗತ್ಯ ವಸ್ತುಗಳ ದರ ಏರಿಕೆ ನಿಲ್ಲಿಸಿ, ಅಡುಗೆ ಅನಿಲಕ್ಕೆ ಸಬ್ಸಿಡಿ ಮುಂದುವರಿಸಬೇಕು’ ಎಂದು ಒತ್ತಾಯಿಸಿದರು.

ದಿಢೀರ್ ಶ್ರೀಮಂತರಾಗಲು ಕೃತ್ಯ ಎಸಗಿದ್ದ ಆರೋಪಿಗಳು

ಮಾಲೀಕನ ಮಗನ ಅಪಹರಿಸಿ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲ್ ಮ್ಯಾನೇಜ್‌ಮೆಂಟ್ ಪದವೀಧರ ತರುಣ್ (21) ಎಂಬುವರನ್ನು ಅಪಹರಿಸಿ ಹತ್ಯೆ ಮಾಡಿ ಗೋಣಿ ಚೀಲದಲ್ಲಿ ಮೃತದೇಹ ಸುತ್ತಿಟ್ಟು ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ರಾಜರಾಜೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸೈಯದ್ ತಝಿಮುಲ್ಲಾ ಪಾಷಾ (39) ಹಾಗೂ ಸೈಯದ್ ನಾಸೀರ್ (26) ಬಂಧಿತರು. ಭಾರತಿನಗರದ ನಿವಾಸಿ ತರುಣ್ ಅವರನ್ನು ಅಪಹರಿಸಿ ಕೊಲೆ ಮಾಡಿ ಪರಾರಿಯಾಗಿದ್ದರು. ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

‘ತರುಣ್ ಅವರ ತಂದೆ ಮಣಿ ಬಳಿಯೇ ಆರೋಪಿಗಳು ಕೆಲಸ ಮಾಡುತ್ತಿದ್ದರು. ಅವರ ಬಳಿ ಹಣವಿರುವುದನ್ನು ತಿಳಿದುಕೊಂಡಿದ್ದರು. ಹಣವನ್ನು ಹೇಗಾದರೂ ಮಾಡಿ ತಮ್ಮದಾಗಿಸಿಕೊಂಡು ದಿಢೀರ್ ಶ್ರೀಮಂತರಾಗಬೇಕೆಂದು ಆರೋಪಿಗಳು ಅಂದುಕೊಂಡಿದ್ದರು. ತರುಣ್ ಅವರನ್ನು ಅಪಹರಿಸಿ, ಬಿಡುಗಡೆಗಾಗಿ ಮಣಿ ಅವರಿಗೆ ಹಣಕ್ಕೆ ಬೇಡಿಕೆ ಇರಿಸಲು ಸಂಚು ರೂಪಿಸಿದ್ದರು’ ಎಂದೂ ತಿಳಿಸಿದರು.

ಅಪರಾಧ ಸುದ್ದಿ

ಕುತ್ತಿಗೆ ಬಿಗಿದು ಕೊಲೆ: ‘ನ. 1ರಂದು ಪಟಾಕಿ ತರಲು ಮಾರುಕಟ್ಟೆಗೆ ಹೊರಟಿದ್ದ ತರುಣ್ ಅವರನ್ನು ಆರೋಪಿಗಳು ಅಪಹರಿಸಿದ್ದರು. ಸಂಬಂಧಿಯೊಬ್ಬರ ಮನೆಗೆ ಕರೆದೊಯ್ದಿದ್ದರು. ಕೈ ಕಾಲು ಕಟ್ಟಿ, ಮೂಗಿನ ಸಮೇತವೇ ಮುಖಕ್ಕೆ ಪ್ಲಾಸ್ಟರ್ ಹಾಕಿದ್ದರು’ ಎಂದೂ ಡಿಸಿಪಿ ಹೇಳಿದರು.

‘ಉಸಿರಾಡಲು ಸಾಧ್ಯವಾಗದೇ ತರುಣ್ ಮೃತಪಟ್ಟಿದ್ದ. ಆತಂಕಗೊಂಡ ಆರೋಪಿಗಳು, ಮೃತದೇಹವನ್ನು ಗೋಣಿ ಚೀಲದಲ್ಲಿ ತುಂಬಿದ್ದರು. ಅದೇ ಚೀಲವನ್ನು ರಾಜರಾಜೇಶ್ವರಿ ನಗರದ ರಾಜಕಾಲುವೆಗೆ ಎಸೆದಿದ್ದರು. ಚಿಂದಿ ಆಯುವ ವ್ಯಕ್ತಿ ಮೃತದೇಹ ನೋಡಿ ಠಾಣೆಗೆ ಮಾಹಿತಿ ನೀಡಿದ್ದರು’ ಎಂದೂ ವಿವರಿಸಿದರು.

ತಂದೆಗೆ ಕರೆ ಮಾಡಿ ಹಣಕ್ಕೆ ಬೇಡಿಕೆ: ‘ತರುಣ್ ಮೃತದೇಹವನ್ನು ರಾಜಕಾಲುವೆಗೆ ಎಸೆದಿದ್ದ ಆರೋಪಿಗಳು, ತಂದೆ ಮಣಿಗೆ ಕರೆ ಮಾಡಿದ್ದರು. ‘ನಿಮ್ಮ ಮಗನನ್ನು ಅಪಹರಿಸಿದ್ದೇವೆ. ₹ 50 ಲಕ್ಷ ಕೊಟ್ಟರೆ ಬಿಡುತ್ತೇವೆ’ ಎಂದು ಬೆದರಿಸಿದ್ದರು. ಅದೇ ಕರೆ ಮಾಹಿತಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದೂ ಡಿಸಿಪಿ ಹೇಳಿದರು.

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ

ವೈಟ್‌ಫೀಲ್ಡ್ ವಿಭಾಗ ವ್ಯಾಪ್ತಿಯಲ್ಲಿ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದ್ದು, ಈ ಸಂಬಂಧ ಬಾಲಕನೊಬ್ಬನನ್ನು ಪೊಲೀಸರು ವಶಕ್ಕೆ ಪಡೆದು ಬಾಲಮಂದಿರಕ್ಕೆ ಕಳುಹಿಸಿದ್ದಾರೆ.

‘ಬಾಲಕಿಯ ಪೋಷಕರು ದೂರು ನೀಡಿದ್ದರು. ಅದರನ್ವಯ ಕ್ರಮ ಕೈಗೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ದೀಪಾವಳಿ ಔತಣಕೂಟ ಏರ್ಪಡಿಸಲಾಗಿತ್ತು. ಇದೇ ಸಂದರ್ಭದಲ್ಲೇ ಪರಿಚಯಸ್ಥ ಬಾಲಕಿ ಮೇಲೆ ಬಾಲಕ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎನ್ನಲಾಗಿದೆ. ಬಾಲಕಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದ್ದು, ವೈದ್ಯರ ವರದಿಗಾಗಿ ಕಾಯುತ್ತಿದ್ದೇವೆ’ ಎಂದೂ ಮೂಲಗಳು ತಿಳಿಸಿವೆ.

₹ 59.50 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಹೊರ ರಾಜ್ಯಗಳಿಂದ ಡ್ರಗ್ಸ್ ತಂದು ಕರ್ನಾಟಕದಲ್ಲಿ ಮಾರುತ್ತಿದ್ದ ಜಾಲವನ್ನು ಸುದ್ದಗುಂಟೆಪಾಳ್ಯ ಪೊಲೀಸರು ಭೇದಿಸಿದ್ದು, ₹59.50 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ. ‘ಬಂಧಿತ ಆರೋಪಿ, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಆತನ ಬಗ್ಗೆ ಮಾಹಿತಿ ಕಲೆಹಾಕಿ ಬಂಧಿಸಲಾಗಿದೆ. 1002 ಎಲ್‌ಎಸ್‌ಡಿ ಮಾತ್ರೆಗಳು, 254 ಗ್ರಾಂ ಎಂಡಿಎಂಎ, 800 ಗ್ರಾಂ ಹಶೀಷ್ ಹಾಗೂ 1 ಕೆ.ಜಿ 900 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ’ ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಆಟೊ ಎಲ್‌ಪಿಜಿ ದರ ಏರಿಕೆ ಖಂಡಿಸಿ 9ಕ್ಕೆ ಪ್ರತಿಭಟನೆ

ಬೆಂಗಳೂರು: ‘ಆಟೊಗಳಿಗೆ ಬಳಸುವ ಎಲ್‌ಪಿಜಿ ದರವು ವರ್ಷದಲ್ಲಿ ಎರಡು ಪಟ್ಟು ಏರಿಕೆಯಾಗಿದೆ’ ಎಂದು ಆರೋಪಿಸಿರುವ ಆಮ್ ಆದ್ಮಿ ಪಕ್ಷದ (ಎಎಪಿ) ಆಟೊ ಚಾಲಕರ ಘಟಕವು, ಇದನ್ನು ಖಂಡಿಸಿ ಇದೇ 9ರಂದು ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ಆಟೊ ಚಾಲಕರ ಘಟಕದ ಅಧ್ಯಕ್ಷ ಅಯೂಬ್ ಖಾನ್, ‘ಪ್ರತಿ ಕೆ.ಜಿ. ಎಲ್‌ಪಿಜಿ ದರ ವರ್ಷದಲ್ಲಿ ₹28ರಷ್ಟು ಏರಿಕೆಯಾಗಿದೆ. ಕೇಂದ್ರ ಸರ್ಕಾರ ಎಲ್‌ಪಿಜಿ ದರವನ್ನು ನಿರಂತರವಾಗಿ ಏರಿಕೆ ಮಾಡುವ ಮೂಲಕ ಆಟೊ ಚಾಲಕರ ಜೀವನದ ಜೊತೆ ಆಟವಾಡುತ್ತಿದೆ’ ಎಂದರು.

‘ಈ ಸರ್ಕಾರಕ್ಕೆ ಆಟೊ ಚಾಲಕರು ಹಾಗೂ ಪ್ರಯಾಣಿಕರ ಹಿತ ಬೇಕಾಗಿಲ್ಲ. ಉದ್ಯಮಿಗಳು ನೀಡುವ ಹಣದ ಆಸೆಗಾಗಿ ಜನಸಾಮಾನ್ಯರನ್ನು ಸಂಕಷ್ಟಕ್ಕೆ ಸಿಲುಕಿಸುತ್ತಿದೆ’ ಎಂದು ದೂರಿದರು.

ಆಟೊ ಚಾಲಕರ ಬೆಂಗಳೂರು ಘಟಕದ ಅಧ್ಯಕ್ಷ ವೆಂಕಟಗೌಡ, ‘ಆಟೊ ಚಾಲಕರು ಕಪ್ಪು ಪಟ್ಟಿ ಧರಿಸಿ, ಆಟೊ ಚಾಲನೆ ಮಾಡುವ ಮೂಲಕ ಈ ಜನ ವಿರೋಧಿ ಸರ್ಕಾರದ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸಲಿದ್ದಾರೆ’ ಎಂದರು.

ಸುಕ್ರಜ್ಜಿ ಆಶೀರ್ವಾದ ಪಡೆದ ತುಳಸಿ ಗೌಡ

ಅಂಕೋಲಾ: ವೃಕ್ಷಮಾತೆ ತುಳಸಿ ಗೌಡ ದೆಹಲಿಯಲ್ಲಿ ನಡೆಯುವ ಪದ್ಮಶ್ರೀ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಳ್ಳುವ ಹಿನ್ನೆಲೆಯಲ್ಲಿ ಶನಿವಾರ ಪದ್ಮಶ್ರೀ ಸುಕ್ರಿ ಗೌಡ ಆಶೀರ್ವಾದ ಪಡೆದರು.

ನ. 8 ರಂದು ಕೇಂದ್ರ ಸರ್ಕಾರ ತುಳಸಿ ಗೌಡ ಅವರಿಗೆ ಪದ್ಮಶ್ರೀ ಪ್ರದಾನ ಮಾಡಲಿದೆ. ಶನಿವಾರ ಮುಂಜಾನೆ ಮನೆಯಿಂದ ಹೊರಟ ಅವರಿಗೆ ಊರ ನಾಗರಿಕರು ಆರತಿ ಬೆಳಗಿ ಸನ್ಮಾನಿಸಿ ಬೀಳ್ಕೊಟ್ಟರು. ನಂತರ ಬಡಗೇರಿಯ ಬೇಟೆಬೀರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಪದ್ಮಶ್ರೀ ಸುಕ್ರಿ ಗೌಡ ಅವರ ಮನೆಗೆ ತೆರಳಿ, ಸುಕ್ರಜ್ಜಿ ಆರೋಗ್ಯ ವಿಚಾರಿಸಿ ಆಶೀರ್ವಾದ ಪಡೆದರು.

ತುಳಸಿ ಗೌಡ ಪದ್ಮಶ್ರೀ ಪಡೆಯಲು ತೆರಳುತ್ತಿರುವುದು ಮನಗಂಡು ಸುಕ್ರಜ್ಜಿ ಭಾವುಕರಾದರು. ಕೆಲಕಾಲ ಆಕ್ಸಿಜನ್ ಮಾಸ್ಕ್ ತೆಗೆದು ತುಳಸಿ ಗೌಡರಿಗಾಗಿ ಜಾನಪದ ಗೀತೆ ಹಾಡಿದರು. ಪದ್ಮಶ್ರೀ ಪಡೆಯಲು ದೆಹಲಿಗೆ ತೆರಳುವ ಖರ್ಚು ವೆಚ್ಚಕ್ಕಾಗಿ ಸಾರ್ವಜನಿಕರು ನೀಡಿದ ಧನಸಹಾಯದಲ್ಲಿ ಒಂದು ಭಾಗವನ್ನು ಸುಕ್ರಜ್ಜಿಯ ವೈದ್ಯಕೀಯ ವೆಚ್ಚ ಭರಿಸಲು ತುಳಸಿ ಗೌಡ ನೀಡಿ ಮಾನವೀಯತೆ ಮೆರೆದರು. ಹಾಲಕ್ಕಿ ಸಮಾಜದ ಸರ್ಕಾರಿ ನೌಕರ ಸಂಘ, ಯುವಕ ಮಂಡಳದ ಸದಸ್ಯರು ಅವರನ್ನು ಸನ್ಮಾನಿಸಿದರು. ಸಾಂಪ್ರದಾಯಿಕ ಹಾಲಕ್ಕಿ ಸಮಾಜದ ಗುಮಟೆ ಪಾಂಗು ವಾದ್ಯ ಮೇಳ ನುಡಿಸಲಾಯಿತು.

ಸುಕ್ರಜ್ಜಿ ಮನೆಯಲ್ಲಿ ಮಾತನಾಡಿದ ಬೆಂಗಳೂರು ಮೂಲದ ರಾಜೇಶ್, ಪದ್ಮಶ್ರೀ ಪ್ರಶಸ್ತಿ ಪಡೆಯಲು ತೆರಳುತ್ತಿರುವ ತುಳಸಿ ಗೌಡರಿಗೆ ಜಿಲ್ಲಾಡಳಿತ ಮತ್ತು ತಾಲ್ಲೂಕು ಆಡಳಿತದ ಸೂಕ್ತ ಸ್ಪಂದನೆ ದೊರೆತಿಲ್ಲ. ನಿರ್ಲಕ್ಷ್ಯ ಧೋರಣೆ ಅನುಸರಿಸಲಾಗಿದೆ ಎಂದರು. ಸುಕ್ರಜ್ಜಿ ಮನೆಯಿಂದ ಕುಮಟಾ ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ ತಲುಪುವವರೆಗೆ ಬೈಕ್ ರ‍್ಯಾಲಿ ಮೂಲಕ ತುಳಸಿ ಗೌಡರನ್ನು ಬೀಳ್ಕೊಡಲಾಯಿತು.

ಪದ್ಮಶ್ರೀ ಪ್ರಶಸ್ತಿ ಪಡೆಯಲು ದೆಹಲಿಗೆ ಪ್ರಯಾಣಿಸುತ್ತಿರುವ ತುಳಸಿ ಗೌಡ ಶನಿವಾರ ಅಂಕೋಲಾದ ಬಡಗೇರಿಯ ಪದ್ಮಶ್ರೀ ಸುಕ್ರಿ ಗೌಡ ಅವರ ಮನೆಗೆ ತೆರಳಿ ಆಶೀರ್ವಾದ ಪಡೆದರು

‘ಕಾಂಗ್ರೆಸ್ ಸೇರುವ ವದಂತಿ ಸುಳ್ಳು’

ಪ್ರಜಾವಾಣಿ ವಾರ್ತೆ

ರಾಮನಗರ: ‘ನಾನು ಬಿಜೆಪಿ ತೊರೆದು ಕಾಂಗ್ರೆಸ್ ಸೇರುತ್ತೇನೆ ಎನ್ನುವುದು ಶುದ್ಧ ಸುಳ್ಳು. ಉದ್ದೇಶಪೂರ್ವಕವಾಗಿಯೇ ಈ ರೀತಿ ವದಂತಿ ಹಬ್ಬಿಸಲಾಗುತ್ತಿದೆ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಸ್ಪಷ್ಟನೆ ನೀಡಿದ್ದಾರೆ.

ಯೋಗೇಶ್ವರ್‌ಗೆ ಕಾಂಗ್ರೆಸ್ ಗಾಳ ಹಾಕುತ್ತಿರುವ ಸುದ್ದಿ ಕುರಿತು ಪ್ರತಿಕ್ರಿಯೆ ನೀಡಿರುವ ಅವರು, ‘ಬಿಜೆಪಿ ನನಗೆ ವಿಧಾನ ಪರಿಷತ್ ಸ್ಥಾನದ ಜೊತೆಗೆ ಹಿಂದಿನ ಸರ್ಕಾರದಲ್ಲಿ ಸಚಿವ ಸ್ಥಾನವನ್ನೂ ನೀಡಿದೆ. ಮುಂದೆಯೂ ಅವಕಾಶ ಸಿಗಲಿದೆ. ಆದಾಗ್ಯೂ ಯಾವುದೇ ಹುದ್ದೆಗೆ ಅಪೇಕ್ಷೆ ಪಡದೇ ಸಾಮಾನ್ಯ ಕಾರ್ಯಕರ್ತನಾಗಿ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದೇನೆ. ಮುಂದಿನ ಚುನಾವಣೆಗಳಲ್ಲೂ ಬಿಜೆಪಿ ಅಭ್ಯರ್ಥಿಯಾಗಿಯೇ ಕಣಕ್ಕೆ ಇಳಿಯುತ್ತೇನೆ’ ಎಂದಿದ್ದಾರೆ.



ಯೋಗೇಶ್ವರ್

‘ಪ್ರತಿ ಆರು ತಿಂಗಳಿಗೆ ಒಮ್ಮೆ ನಾನು ಕಾಂಗ್ರೆಸ್ ಸೇರುತ್ತೇನೆ ಎಂದು ವದಂತಿ ಹಬ್ಬಿಸಲಾಗುತ್ತಿದೆ. ಇದರ ಹಿಂದೆ ಯಾವ ಉದ್ದೇಶ ಇದೆಯೋ ಗೊತ್ತಿಲ್ಲ’ ಎಂದು ಕಿಡಿಕಾರಿದ್ದಾರೆ.

ಬಿಜೆಪಿಯಲ್ಲೇ ಇರ್ತಾರೆ: ಈ ಕುರಿತು ಚನ್ನಪಟ್ಟಣದಲ್ಲಿ ಶನಿವಾರ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿ, ‘ಯೋಗೇಶ್ವರ್ ಬಿಜೆಪಿ ಬಿಟ್ಟು ಎಲ್ಲಿಯೂ ಹೋಗಲ್ಲ. ಮುಂದಿನ ಚುನಾವಣೆಯಲ್ಲೂ ಅವರು ನಮ್ಮ ಪಕ್ಷದ ಅಭ್ಯರ್ಥಿಯಾಗಿಯೇ ಕಣಕ್ಕೆ ಇಳಿಯಲಿದ್ದಾರೆ’ ಎಂದರು.

ಯೋಗೇಶ್ವರ್‌ಗೆ ಸಚಿವ ಸ್ಥಾನ ಸಿಗುವ ಕುರಿತು ಪ್ರತಿಕ್ರಿಯೆ ನೀಡಿದ ಅವರು, ‘ಅವರು ನಮ್ಮ ಪಕ್ಷದ ನಾಯಕರಾಗಿದ್ದು, ಈಗಾಗಲೇ ಹಲವು ಬಾರಿ ಸಚಿವರಾಗಿದ್ದಾರೆ. ಮುಂದೆಯೂ ಅವರಿಗೆ ಒಳ್ಳೆಯ ಅವಕಾಶ ಸಿಗಲಿದೆ’ ಎಂದರು.

ನವಜೋತ್ ಸಿಂಗ್ ಸಿಧು ಹಸ್ತಕ್ಷೇಪ: ಎಜಿ ಆರೋಪ

ಚಂಡೀಗಡ (ಪಿಟಿಐ): ರಾಜ್ಯ ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ಹಾಗೂ ತಮ್ಮ ಕಚೇರಿ ಕೆಲಸಗಳಲ್ಲಿ, ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ಮೂಗು ತೂರಿಸುತ್ತಿದ್ದು, ತಮ್ಮ ರಾಜಕೀಯ ಲಾಭಕ್ಕಾಗಿ ತಪ್ಪು ಮಾಹಿತಿ ಹರಡುವ ಕೆಲಸವನ್ನೂ ಮಾಡುತ್ತಿದ್ದಾರೆ ಎಂದು ಪಂಜಾಬ್ ಅಡ್ವೊಕೇಟ್ ಜನರಲ್ ಎಪಿಎಸ್ ಡಿಯೋಲ್ ಶನಿವಾರ ಆರೋಪಿಸಿದ್ದಾರೆ.

ಸಿಧು ಅವರು ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥ ಸ್ಥಾನಕ್ಕೆ ನೀಡಿದ್ದ ರಾಜೀನಾಮೆಯನ್ನು ಹಿಂತೆಗೆದುಕೊಂಡ ಮಾರನೇ ದಿನವೇ ಡಿಯೋಲ್ ಅವರು ಈ ಆರೋಪ ಮಾಡಿದ್ದಾರೆ.

ಆದರೆ, ಎಜಿ ಸ್ಥಾನದಿಂದ ಡಿಯೋಲ್ ಅವರನ್ನು ತೆಗೆದುಹಾಕುವವರೆಗೆ ಮತ್ತು ಹೊಸ ಪೊಲೀಸ್ ಮಹಾನಿರ್ದೇಶಕರ ನೇಮಕಕ್ಕೆ ಸಮಿತಿ ರಚಿಸುವವರೆಗೆ ತಾವು ಮತ್ತೆ ಅಧಿಕಾರ ವಹಿಸಿಕೊಳ್ಳುವುದಿಲ್ಲ ಎಂದು ಸಿಧು ಹೇಳಿದ್ದಾರೆ.

ಫ್ಯಾನ್ಸಿ ಆಭರಣ ಖರೀದಿಸಿದ್ದಕ್ಕೆ ಪತ್ನಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿದ್ದಾಪುರ ಠಾಣೆ ವ್ಯಾಪ್ತಿಯಲ್ಲಿ ನಾಜಿಯಾ (35) ಎಂಬುವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಪತಿ ಶೇಖ್ ಫಾರೂಕ್‌ನನ್ನು (42) ಪೊಲೀಸರು ಬಂಧಿಸಿದ್ದಾರೆ.

‘ಮೃತ ನಾಜಿಯಾ, ಆಟೊ ಚಾಲಕ ಫಾರೂಕ್‌ನನ್ನು 18 ವರ್ಷಗಳ ಹಿಂದೆ ಮದುವೆಯಾಗಿದ್ದರು. ದಯಾನಂದ ನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ ದಂಪತಿಗೆ ಮೂವರು ಮಕ್ಕಳಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಮನೆ ಬಾಡಿಗೆ ಕೊಡಲೆಂದು ಫಾರೂಕ್, ಪತ್ನಿ ನಾಜಿಯಾ ಕೈಗೆ ನ. 1ರಂದು ₹ 6,500 ಕೊಟ್ಟಿದ್ದ. ಮನೆ ಮಾಲೀಕರಿಗೆ ಹಣ ನೀಡದ ನಾಜಿಯಾ, ಅದೇ ಹಣದಲ್ಲಿ ಫ್ಯಾನ್ಸಿ ಆಭರಣಗಳನ್ನು ಖರೀದಿಸಿದ್ದರು. ರಾತ್ರಿ ಮನೆಗೆ ಬಂದಿದ್ದ ಪತಿ, ಬಾಡಿಗೆ ಬಗ್ಗೆ ವಿಚಾರಿಸಿದ್ದ. ಬಾಡಿಗೆ ಕೊಟ್ಟಿಲ್ಲವೆಂದು ಹೇಳಿದ್ದ ಪತ್ನಿ, ‘ಫ್ಯಾನ್ಸಿ ಆಭರಣ ತಂದಿದ್ದೇನೆ. ಅದನ್ನು ಮಾರಿದರೆ, ಮತ್ತಷ್ಟು ಲಾಭ ಬರುತ್ತದೆ. ಅದನ್ನೇ ಬಾಡಿಗೆ ಕಟ್ಟುತ್ತೇನೆ’ ಎಂಬುದಾಗಿ ಹೇಳಿದ್ದರು.’

‘ಕೋಪಗೊಂಡಿದ್ದ ಆರೋಪಿ, ಪತ್ನಿ ಮೇಲೆ ಹಲ್ಲೆ ಮಾಡಿದ್ದ. ತಲೆಯನ್ನು ಗೋಡೆಗೆ ಗುದ್ದಿಸಿದ್ದ. ತೀವ್ರ ಗಾಯಗೊಂಡ ನಾಜಿಯಾ ಸ್ಥಳದಲ್ಲೇ ಕುಸಿದು ಬಿದ್ದಿದ್ದಳು. ಮನೆಯಲ್ಲಿದ್ದ ಮಗಳು, ತಾಯಿ ರಕ್ಷಣೆಗಾಗಿ ಕೂಗಾಡಿದ್ದಳು. ಸ್ಥಳೀಯರು ಹಾಗೂ ಸಂಬಂಧಿಕರು, ನಾಜಿಯಾ ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ನಾಜಿಯಾ ಅಸುನೀಗಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಕೊಲೆ ಬಗ್ಗೆ ನಾಜಿಯಾ ಕುಟುಂಬದವರು ದೂರು ನೀಡಿದ್ದರು. ಪರಾರಿಯಾಗಿದ್ದ ಆರೋಪಿ ಶೇಖ್ ಫಾರೂಕ್‌ನನ್ನು ಬಂಧಿಸಲಾಗಿದೆ’ ಎಂದೂ ಅವರು ಹೇಳಿದರು.

ವಿಚ್ಛೇದಿತ ಮಹಿಳೆ ಕೊಲೆ; ಪ್ರಿಯಕರ ಸೆರೆ

ಬೆಂಗಳೂರು: ವಿಜಯನಗರ ಠಾಣೆ ವ್ಯಾಪ್ತಿಯಲ್ಲಿ ಗಾಯತ್ರಿ (31) ಎಂಬುವರನ್ನು ಕೊಲೆ ಮಾಡಲಾಗಿದ್ದು, ಈ ಪ್ರಕರಣ ಸಂಬಂಧ ಮಂಜುಪ್ರಸಾದ್ (29) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಪತಿಯಿಂದ ವಿಚ್ಛೇದನ ಪಡೆದಿದ್ದ ಗಾಯತ್ರಿ, ತಮ್ಮಿಬ್ಬರ ಮಕ್ಕಳ ಜೊತೆ ವಿಜಯನಗರದ ಪಟ್ಟೇಗಾರಪಾಳ್ಯದ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದರು. ಅದೇ ಮನೆಯಲ್ಲೇ ಅವರ ಕೊಲೆ ನಡೆದಿದೆ’ ಎಂದು ಪೊಲೀಸರು ಹೇಳಿದರು.

‘ಗಾಯತ್ರಿ ಅವರು ಮನೆ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಆರೋಪಿ ಮಂಜುಪ್ರಸಾದ್, ಗುತ್ತಿಗೆ ಆಧಾರದಲ್ಲಿ ಬಿಬಿಎಂಪಿ ಆಟೊ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಮೂರು ವರ್ಷಗಳ ಹಿಂದಷ್ಟೇ ಇಬ್ಬರಿಗೂ ಪರಿಚಯವಾಗಿತ್ತು. ಪರಿಚಯ ಸ್ನೇಹವಾಗಿ ಸಲುಗೆ ಬೆಳೆದಿತ್ತು.’

‘ಗಾಯತ್ರಿ ಮನೆಯಲ್ಲೇ ಆರೋಪಿ ಮಂಜುಪ್ರಸಾದ್ ವಾಸವಿದ್ದ. ಮೂರು ತಿಂಗಳ ಹಿಂದಷ್ಟೇ ಆತನ ಕೆಲಸ ಹೋಗಿತ್ತು. ಇದೇ ಕಾರಣಕ್ಕೆ ಅವರಿಬ್ಬರ ನಡುವೆ ಗಲಾಟೆ ಶುರುವಾಗಿತ್ತು’ ಎಂದು ಪೊಲೀಸರು ತಿಳಿಸಿದರು.

‘ಶನಿವಾರ ಮಧ್ಯಾಹ್ನವೂ ಇಬ್ಬರೂ ಜಗಳ ಮಾಡುತ್ತಿದ್ದರು. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದ್ದಂತೆ ಆರೋಪಿ ಮಂಜುಪ್ರಸಾದ್, ವೇಲ್‌ನಿಂದ ಕತ್ತು ಹಿಸುಕಿ ಗಾಯತ್ರಿ ಅವರನ್ನು ಕೊಂದು ಪರಾರಿಯಾಗಿದ್ದ. ಗಲಾಟೆ ಶಬ್ದ ಕೇಳಿ ಮನೆಯೊಳಗೆ ಹೋಗಿದ್ದ ಜನ, ಮೃತದೇಹ ನೋಡಿದ್ದರು. ಠಾಣೆಗೆ ಮಾಹಿತಿ ನೀಡಿದ್ದರು’ ಎಂದೂ ಹೇಳಿದರು.

‘ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ ಟ್ಯಾಬ್’

ಕೊಪ್ಪಳ: ಎಂಟನೇ ತರಗತಿಯಿಂದ ಪಿಯುಸಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ ಉಚಿತ ಟ್ಯಾಬ್ ವಿತರಿಸಲು ನಿರ್ಧರಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಚ್.ಹನುಮಂತಪ್ಪ ಹೇಳಿದರು.

‘2013ರ ಸಮೀಕ್ಷೆ ಪ್ರಕಾರ ರಾಜ್ಯದಲ್ಲಿ 1.43 ಲಕ್ಷ ಸಫಾಯಿ ಕರ್ಮಚಾರಿಗಳಿದ್ದಾರೆ. ಅವರ ಅವಲಂಬಿತರು ಸೇರಿದರೆ ಒಟ್ಟು 25 ರಿಂದ 30 ಲಕ್ಷ ಜನರಿದ್ದಾರೆ. ಇವರಿಗೆ ಸರ್ಕಾರದ ಸೌಲಭ್ಯ ಕಲ್ಪಿಸಲು ಸಾಕಷ್ಟು ಅನುದಾನ ಬೇಕಾಗಿದ್ದು, ನಿಗಮಕ್ಕೆ ₹500 ಕೋಟಿ ನೀಡುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದೇನೆ. ಮುಖ್ಯಮಂತ್ರಿ ಸಹ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ’ಎಂದು ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ಸೇರಿ ರಾಜ್ಯದ ಹತ್ತು ಮಹಾ ನಗರ ಪಾಲಿಕೆಯಲ್ಲಿ ಕೆಲಸ ಮಾಡುವ ಮಹಿಳಾ ಸಫಾಯಿ ಕರ್ಮಚಾರಿಗಳಿಗೆ ₹1 ಲಕ್ಷ ಮೌಲ್ಯದ ಬ್ಯಾಟರಿ ಚಾಲಿತ ದ್ವಿಚಕ್ರ ವಾಹನವನ್ನು ಶೇ90 ರಷ್ಟು ಸಬ್ಸಿಡಿ ದರದಲ್ಲಿ ವಿತರಣೆ ಮಾಡಲು ನಿರ್ಧರಿಸಿದ್ದು, ಒಟ್ಟು 400 ವಾಹನಗಳನ್ನು ಖರೀದಿಸಲಾಗುತ್ತಿದೆ. ಇದರಲ್ಲಿ 200 ವಾಹನಗಳನ್ನು ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಗೆ ಹಾಗೂ 200 ವಾಹನಗಳನ್ನು ಬಾಕಿ ಉಳಿದ ಎಲ್ಲ ಮಹಾನಗರ ಪಾಲಿಕೆಗಳಿಗೆ ನೀಡುತ್ತೇವೆ. ಅಲ್ಲದೇ 10ನೇ ತರಗತಿ ಹಾಗೂ ಪಿಯುಸಿ ಓದಿ ಖಾಲಿ ಇರುವ ಹಾಗೂ ಅರ್ಧಕ್ಕೆ ವಿದ್ಯಾಭ್ಯಾಸ ಬಿಟ್ಟವರಿಗೆ ಸ್ಯಾನಟರಿ ಇನ್‌ಸ್ಪೆಕ್ಟರ್ ಡಿಪ್ಲೊಮಾ ಕೋರ್ಸ್ ಮಾಡಿಸುವ ವ್ಯವಸ್ಥೆ ಮಾಡಿದ್ದು, ಅದರಿಂದ ಅವರಿಗೆ ಉದ್ಯೋಗವಕಾಶ ದೊರೆಯಲಿದೆ’ ಎಂದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ಬಿ. ಮಲ್ಲಿಕಾರ್ಜುನ ಇದ್ದರು.

ನಿರ್ದೇಶನದ ಕನಸು ಬಿಚ್ಚಿಟ್ಟ ನಟ ದೇವರಾಜ್

ಪ್ರಜಾವಾಣಿ ಸೆಲೆಬ್ರಿಟಿ LIVE

ಬೆಂಗಳೂರು: 'ಹುಲಿಯಾ-2' ಸಿನಿಮಾ ಮಾಡುವ ಆಲೋಚನೆ ಇದೆ. ನಿರ್ದೇಶನ ಮಾಡುವ ಕನಸೂ ಇದೆ. ಒಳ್ಳೆಯ ನಿರ್ಮಾಪಕರು ಸಿಕ್ಕರೆ ಖಂಡಿತ ನಿರ್ದೇಶನ ಮಾಡುತ್ತೇನೆ...'

ಇದು, ಈ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಾಗೂ ಚಿತ್ರನಟ ದೇವರಾಜ್ ಅವರು ಶನಿವಾರ ನಡೆದ 'ಪ್ರಜಾವಾಣಿ ಸೆಲೆಬ್ರಿಟಿ ಲೈವ್'ನಲ್ಲಿ ಬಿಚ್ಚಿಟ್ಟ ಇಂಗಿತ. ಅವರು ಮಾತನಾಡಿದ್ದು ಇಲ್ಲಿದೆ.



'ಇಳಿ ವಯಸ್ಸಿನ ಪ್ರೇಮಕಥೆ, ಹುಲಿಯಾ-2 ಹಾಗೂ ಆ್ಯಕ್ಷನ್ ಸಿನಿಮಾಗಳಿಗೆ ಮೂರು ಸ್ಕ್ರಿಪ್ಟ್ ಸಿದ್ಧಪಡಿಸಿದ್ದೇನೆ. ಈ ಸಿನಿಮಾಗಳಿಗೆ ಕಾಲ ಕೂಡಿಬರಬೇಕು. ಈಗಾಗಲೇ ನಿರ್ಮಾಣವನ್ನು ಪ್ರಯತ್ನಿಸಿ ಸೋತಿದ್ದೇನೆ. ಅದರಲ್ಲಿ ಕಲಿಯಬೇಕಿರುವುದು ಸಾಕಷ್ಟಿದೆ. ಹಾಗಾಗಿ, ಕೊಂಚ ಬಿಡುವು ಕೊಟ್ಟಿದ್ದೇನೆ. ಸಿನಿಮಾದ ಅಭಿನಯ ಒಂದು ಪ್ರಪಂಚವಾದರೆ, ಸಿನಿಮಾದ ವ್ಯಾಪಾರವೇ ಒಂದು ದೊಡ್ಡ ಪ್ರಪಂಚ. ಅಲ್ಲಿ ಕಲಿಕೆಯೂ ಬಹಳಷ್ಟಿದೆ.

'ಒಬ್ಬ ಕಲಾವಿದನ ಶಕ್ತಿ ಮತ್ತು ದೌರ್ಬಲ್ಯಗಳನ್ನು ಗುರುತಿಸಲು ರಂಗಭೂಮಿ ವೇದಿಕೆ. ಸಿನಿಮಾರಂಗದಲ್ಲಿ ಕಲಾವಿದರ ಲೋಪಗಳನ್ನು ತಾಂತ್ರಿಕ ವಾಗಿ ಮರೆಮಾಚುವುದರಿಂದ ತಿದ್ದಿಕೊಳ್ಳುವ ಬದಲು ಸೋಮಾರಿಗಳಾಗುತ್ತೇವೆ. ರಂಗಭೂಮಿಯಲ್ಲಿ ಕಲಾವಿದನ ತಪ್ಪನ್ನು ತೋರಿಸುವುದು ಮಾತ್ರವಲ್ಲದೆ, ಅದನ್ನು ಸರಿಪಡಿಸಿಕೊಳ್ಳುವ ಅವಕಾಶಗಳೂ ಇರುತ್ತವೆ. ಆಗ ಮಾತ್ರ ಒಬ್ಬ ವ್ಯಕ್ತಿ ಸಂಪೂರ್ಣವಾಗಿ ಕಲಾವಿದ ಎನಿಸಿಕೊಳ್ಳಲು ಸಾಧ್ಯ.'

'ರಂಗಭೂಮಿಯಿಂದ ಸಿನಿಮಾ ಕ್ಷೇತ್ರಕ್ಕೆ ಕಾಲಿಡುವ ಕಲಾವಿದನಿಗೆ ಹೆಚ್ಚಿನ ಧೈರ್ಯ, ಆತ್ಮವಿಶ್ವಾಸ ಹಾಗೂ ಹಲವು ಆಯಾಮಗಳನ್ನು ಯೋಚಿಸುವ ಶಕ್ತಿ ಬೆಳೆಯುತ್ತದೆ. ಇತ್ತೀಚೆಗೆ ಕಲಾಕ್ಷೇತ್ರದ ಮೆಟ್ಟಿಲುಗಳನ್ನು ಹತ್ತುವಾಗ ಅಲ್ಲಿ ಕಳೆದ ಕ್ಷಣಗಳು ಒಂದೊಂದೇ ಕಣ್ಣಮುಂದೆ ಬಂದವು. ರಂಗಭೂಮಿಯಲ್ಲಿ ತೊಡಗಿದ್ದ ಆ ದಿನಗಳಲ್ಲಿ ಕಲಾಕ್ಷೇತ್ರದ ಮೆಟ್ಟಿಲುಗಳ ಮೇಲೆ ಕುಳಿತಿದ್ದು, ಅಲ್ಲಿದ್ದ ಕಾರಂತರ ಕ್ಯಾಂಟೀನಿನ ಬೈಟು ಚಾಯ್ ಮರೆಯಲು ಸಾಧ್ಯವಿಲ್ಲ.'

'ನಾನು ಮೊದಲಿಗೆ ಅಭಿನಯಿಸಿದ 'ತ್ರಿಶೂಲ', 'ಕೂಗು' ಹಾಗೂ 'ಸಿಕ್ಕು' ಸಿನಿಮಾಗಳು ತೆರೆಗೆ ಬರಲೇ ಇಲ್ಲ. ನನ್ನ ಅಭಿನಯದ 'ಹುಲಿಯಾ' ಸಿನಿಮಾಗೆ ಚಿತ್ರಮಂದಿರಗಳಲ್ಲಿ ನಿರೀಕ್ಷಿತ ಯಶಸ್ಸು ಸಿಕ್ಕಿರಲಿಲ್ಲ. ಆದರೆ, ಟಿ.ವಿ.ಗಳಲ್ಲಿ ಸಿನಿಮಾ ಪ್ರಸಾರಗೊಂಡ ನಂತರ ಹೆಚ್ಚು ಪ್ರಚಾರ ಪಡೆದುಕೊಂಡಿತು.'

'ಸಿನಿಮಾಗಳಲ್ಲಿ 'ಪೊಲೀಸ್' ಪಾತ್ರ ನನ್ನನ್ನು ಬಹಳ ದಿನ ಹಿಡಿದಿಟ್ಟುಕೊಂಡಿತ್ತು. ಪ್ರೇಕ್ಷಕರೂ ನನ್ನನ್ನು ಪೊಲೀಸ್ ಪಾತ್ರದಲ್ಲೇ ಹೆಚ್ಚಾಗಿ ಆರಿಸಿಕೊಂಡಿದ್ದರು. 'ಸರ್ಕಲ್ ಇನ್‌ಸ್ಪೆಕ್ಟರ್' ಸಿನಿಮಾ ನಂತರ ಪೊಲೀಸ್ ಪಾತ್ರಗಳಲ್ಲಿ ಅಭಿನಯಿಸುವುದಿಲ್ಲ ಎಂದು ಘೋಷಿಸಿದ್ದೆ. ಪರಿಣಾಮ ಅವಕಾಶಗಳೂ ತಗ್ಗಿದ್ದವು.'

ಪ್ರೇಕ್ಷಕರು ಸಿನಿಮಾ ಪ್ರೀತಿಸಬೇಕು

'ಕನ್ನಡ ಹೊರತುಪಡಿಸಿ, ತೆಲುಗು ಮತ್ತು ತಮಿಳು ಸಿನಿಮಾಗಳಲ್ಲೂ ಅಭಿನಯಿಸಿದ ನನಗೆ ಒಂದು ವ್ಯತ್ಯಾಸ ಕಂಡುಬಂತು. ತೆಲುಗು ಮತ್ತು ತಮಿಳು ಪ್ರೇಕ್ಷಕರು ಸಿನಿಮಾಗಳನ್ನು ಹೆಚ್ಚು ಪ್ರೀತಿಸುತ್ತಾರೆ. ಅಲ್ಲಿನ ಸಿನಿಮಾ ಸಂಸ್ಕೃತಿಯೂ ವಿಭಿನ್ನವಾಗಿದೆ. ಈ ವಿಚಾರದಲ್ಲಿ ನಾವು ಸ್ವಲ್ಪ ಹಿಂದಿದ್ದೇವೆ' ಎಂದು ದೇವರಾಜ್ ಹೇಳಿದರು.

'ಸಿನಿಮಾಗೆ ಪ್ರೇಕ್ಷಕರ ಬಲ ಹೆಚ್ಚಾಗಬೇಕು. ಆಗ ಮಾತ್ರ ಸಿನಿಮಾ ಹೆಚ್ಚು ಯಶಸ್ಸು ಕಾಣುತ್ತದೆ. ಇತ್ತೀಚಿನ ಕನ್ನಡ ಸಿನಿಮಾಗಳು ಬೇರೆ ಭಾಷೆಯ ಚಿತ್ರಗಳಿಗೆ ಸಮಾನವಾಗಿ ಬೆಳೆಯುತ್ತಿರುವುದು ಒಳ್ಳೆಯ ಬೆಳವಣಿಗೆ' ಎಂದರು.

'ಶಂಕರ್‌ನಾಗ್‌ಗೆ ನಟನೆಗಿಂತ ನಿರ್ದೇಶನದಲ್ಲಿ ಖುಷಿ'

'ಶಂಕರ್‌ನಾಗ್ ಅವರೇ ನನ್ನನ್ನು ರಂಗಭೂಮಿಯಲ್ಲಿ ತಿದ್ದಿ, ಮುಂದಕ್ಕೆ ತಂದವರು. ನಾನು ಕಂಡಂತೆ ಅವರು ನಟನೆಯಲ್ಲಿ ಹೆಚ್ಚು ಖುಷಿಯಾಗಿ ಇರುತ್ತಿರಲಿಲ್ಲ. ನಟನೆಗಿಂತಲೂ ಅವರು ನಿರ್ದೇಶನದಲ್ಲಿ ಹೆಚ್ಚು ಉತ್ಸುಕರಾಗಿದ್ದರು' ಎಂದು ದೇವರಾಜ್ ಹೇಳಿದರು.

'ಬೆಂಗಳೂರಿಗೆ ಮೆಟ್ರೊ ಹಾಗೂ ನಂದಿ ಬೆಟ್ಟಕ್ಕೆ ರೋಪ್‌ವೇ ಮಾರ್ಗ ತರುವುದು ಶಂಕರ್‌ನಾಗ್ ಅಂದೇ ಕಂಡಿದ್ದ ಕನಸುಗಳು. ನಂದಿಬೆಟ್ಟಕ್ಕೆ ರೋಪ್‌ವೇ ಈವರೆಗೆ ಸಾಧ್ಯವಾಗಿಲ್ಲ. ಶಂಕರ್‌ನಾಗ್, ಚಿರಂಜೀವಿ ಸರ್ಜಾ, ಸಂಚಾರಿ ವಿಜಯ್ ಹಾಗೂ ಪುನೀತ್ ರಾಜ್‌ಕುಮಾರ್ ಅವರಂತಹ ಯುವ ನಟರನ್ನು ಕಳೆದುಕೊಳ್ಳುತ್ತಿರುವುದು ದೊಡ್ಡ ದುರಂತ' ಎಂದು ಅವರು ಬೇಸರಗೊಂಡರು.

ಪೂರ್ಣ ಸಂವಾದ ವೀಕ್ಷಣೆಗೆ–
facebook.com/prajavani.net

ಮಳೆ: ಚಾಮುಂಡಿಬೆಟ್ಟದ ರಸ್ತೆ ಮತ್ತೆ ಕುಸಿತ

ಪ್ರಜಾವಾಣಿ ವಾರ್ತೆ

ಮೈಸೂರು: ಕೊಡಗು ಜಿಲ್ಲೆಯಲ್ಲಿ ಶನಿವಾರ ಉತ್ತಮ ಮಳೆಯಾಗಿದೆ. ಶುಕ್ರವಾರ ನಸುಕಿನಲ್ಲಿ ಮೈಸೂರಿನಲ್ಲಿ ಸುರಿದ ಭಾರಿ ಮಳೆಗೆ, ಚಾಮುಂಡಿಬೆಟ್ಟದ ಹೊಸ ನಂದಿ ರಸ್ತೆ ಮತ್ತೆ ಕುಸಿದಿದೆ.

ಅ.20 ರಂದು ಕುಸಿತ ಉಂಟಾಗಿತ್ತು. ಆ ಸ್ಥಳದಿಂದ 10 ಮೀ. ದೂರದಲ್ಲಿ ಮತ್ತೆ ಭಾರಿ ಪ್ರಮಾಣದಲ್ಲಿ ಮಣ್ಣು ಕುಸಿದಿದೆ. ಅಲ್ಲಲ್ಲಿ ಬಿರುಕುಗಳು ಕಾಣಿಸಿಕೊಂಡಿದ್ದು, ಮಳೆ ಬಂದರೆ ಇನ್ನಷ್ಟು ಕುಸಿದು ಬೀಳುವ ಆತಂಕ ಎದುರಾಗಿದೆ. ಈ ರಸ್ತೆಯಲ್ಲಿನ ಸಂಚಾರ ಸಂಪೂರ್ಣ ನಿಷೇಧಿಸಲಾಗಿದೆ.

ಈಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ರಾಜು, 'ಮೂರು ಕಡೆ ಕುಸಿತವಾಗಿದೆ. ರಸ್ತೆಯಲ್ಲಿ ನಡೆದಾಡುವುದು ಅಪಾಯಕಾರಿ ಎನಿಸಿದೆ. ಮಳೆ ಮುಂದುವರಿದರೆ ಮತ್ತಷ್ಟು ಕುಸಿಯುವ ಸಾಧ್ಯತೆಗಳಿವೆ' ಎಂದರು.

ಚಾಮುಂಡಿಬೆಟ್ಟದ ಹೊಸ ನಂದಿ ರಸ್ತೆ ಮತ್ತೆ ಕುಸಿದಿರುವುದು

ಐಐಎಸ್‌ಸಿ ತಜ್ಞರಿಂದ ಪರಿಶೀಲನೆ: ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಭೂತಾಂತ್ರಿಕ ಎಂಜಿನಿಯರಿಂಗ್ ವಿಭಾಗದ ಇಬ್ಬರು ವಿಜ್ಞಾನಿಗಳು ಶನಿವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕಳೆದ ವಾರವೂ ಸಂಸ್ಥೆಯ ತಜ್ಞರ ತಂಡ ಪರಿಶೀಲನೆ ನಡೆಸಿತ್ತು. ಕುಸಿತಕ್ಕೆ ಕಾರಣ ಹಾಗೂ ದುರಸ್ತಿ ಕಾರ್ಯ ಹೇಗೆ ಕೈಗೆತ್ತಿಕೊಳ್ಳಬೇಕು ಎಂಬ ಬಗ್ಗೆ ತಜ್ಞರು ವರದಿ ಸಲ್ಲಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೊಡಗು– ಧಾರಾಕಾರ ಮಳೆ : ಕೊಡಗು ಜಿಲ್ಲೆಯ ವಿವಿಧೆಡೆ ಶುಕ್ರವಾರ ರಾತ್ರಿ ಹಾಗೂ ಶನಿವಾರ ಮಧ್ಯಾಹ್ನ ಧಾರಾಕಾರ ಮಳೆಯಾಗಿದೆ. ಸತತ ಮಳೆಯಿಂದ ಕಾಫಿ ಬೆಳೆಗಾರರು ಕಂಗಾಲಾಗಿದ್ದಾರೆ. ಅರೇಬಿಕಾ ಕಾಫಿ ಕೊಯ್ಲು ಆರಂಭವಾಗಿದ್ದು, ಕಾಫಿ ಒಣಗಿಸಲು ಸಾಧ್ಯವಾಗುತ್ತಿಲ್ಲ. ಹಣ್ಣಾಗಿರುವ ಕಾಫಿ ನೆಲಕ್ಕೆ ಉದುರುತ್ತಿದೆ ಎಂದು ಬೆಳೆಗಾರರು ನೋವು ತೋಡಿಕೊಂಡಿದ್ದಾರೆ.

12 ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದ ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಲ್ಲಿ ನ.7ರಿಂದ 9ರವರೆಗೆ ಭಾರಿ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ತುಮಕೂರು, ಶಿವಮೊಗ್ಗ, ರಾಮನಗರ, ಮೈಸೂರು, ಮಂಡ್ಯ, ಕೋಲಾರ, ಕೊಡಗು, ಹಾಸನ, ಚಿಕ್ಕಮಗಳೂರು, ಚಾಮರಾಜನಗರ, ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಮುಂದಿನ ಎರಡು ದಿನಗಳವರೆಗೆ ಗುಡುಗು, ಸಿಡಿಲು ಸಹಿತ ಮಳೆಯಾಗುವ ಸಾಧ್ಯತೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಕರಾವಳಿಯ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ನ.7ರಂದು ಹೆಚ್ಚು ಮಳೆಯಾಗಬಹುದು. ಉತ್ತರ ಒಳನಾಡಿನಲ್ಲಿ ಗುಡುಗು, ಸಿಡಿಲು ಹೆಚ್ಚಾಗಿ ಇರಲಿದ್ದು, ಕೆಲವೆಡೆ ಸಾಧಾರಣ ಮಳೆಯಾಗಲಿದೆ. ಇದೇ 9ರಿಂದ ರಾಜ್ಯದಾದ್ಯಂತ ಮಳೆ ತಗ್ಗುವ ನಿರೀಕ್ಷೆ ಇದೆ ಎಂದು ಇಲಾಖೆ ಮಾಹಿತಿ ನೀಡಿದೆ.

ಮಳೆ–ಎಲ್ಲಿ, ಎಷ್ಟು?: ಉಡುಪಿಯಲ್ಲಿ ಶನಿವಾರ 9 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಚನ್ನಪಟ್ಟಣ 7, ಮಧುಗಿರಿ 6, ಮಂಗಳೂರು, ಕಾರ್ಕಳ, ಅಜ್ಜಂಪುರ, ಮದ್ದೂರು 5, ಕುಂದಾಪುರ, ಬಂಟ್ವಾಳ, ಪುತ್ತೂರು, ಕೋಲಾರ, ಶ್ರೀನಿವಾಸಪುರ 4, ಧಾರವಾಡ, ಪಾಂಡವಪುರ, ಚಿಂತಾಮಣಿ, ಗೌರಿಬಿದನೂರು 3, ಮೂಡುಬಿದರೆ, ಭಟ್ಕಳ, ಹಾಸನ, ಬಂಗಾರಪೇಟೆ, ಶಿಕಾರಿಪುರ, ಚಿಕ್ಕಬಳ್ಳಾಪುರ, ಹಗರಿಬೊಮ್ಮನಹಳ್ಳಿ 2, ಅರಕಲಗೂಡು, ಅರಸೀಕೆರೆ, ಬಾಗೇಪಲ್ಲಿ, ತೊಂಡೆಬಾವಿ, ಭದ್ರಾವತಿ, ಪಾವಗಡ, ಕೊಪ್ಪ, ದೊಡ್ಡಬಳ್ಳಾಪುರ, ಶ್ರೀರಂಗಪಟ್ಟಣದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	9,825	10,449
ಹಾರಂಗಿ	2,859	2,856.98	521	820
ಕಬಿನಿ	2,284	2,283.75	5,000	3,000
ಹೇಮಾವತಿ	2,922	2,909.34	4,083	3,181
ಲಿಂಗನಮಕ್ಕಿ	1,819	1,814.30	8,289	5,827
ಸೂಪಾ (ಮೀ)	564	555.92	638	1,953
ಮಾಣಿ	594.36	586.90	466	-
ತುಂಗಭದ್ರಾ	1,633	1,632.46	8,328	9,817
ಮಲಪ್ರಭಾ	2,079.50	2,077.69	-	1,944
ಘಟಪ್ರಭಾ	2,175	2,170.91	-	3,122
ಭದ್ರಾ	186	185.60	2,576	3,791
ಆಲಮಟ್ಟಿ (ಮೀ)	519.60	518.80	-	2,573
ನಾರಾಯಣಪುರ (ಮೀ)	492.25	491.30	1,450	6,150

* ನೆಲಮಟ್ಟದಿಂದ

ಕಡತ ವಿಲೇವಾರಿ ವಿಳಂಬ: ಬೊಮ್ಮಾಯಿ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಮುಖ ಇಲಾಖೆಗಳ ಕಡತಗಳನ್ನು ತಕ್ಷಣವೇ ವಿಲೇವಾರಿ ಮಾಡಬೇಕು' ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಶನಿವಾರ ಇಡೀ ದಿನ ಅಧಿಕಾರಿಗಳ ಜೊತೆ ಕಡತಗಳನ್ನು ಪರಿಶೀಲಿಸಿದ ಮುಖ್ಯಮಂತ್ರಿ, ಕಡತಗಳನ್ನು ವಿಲೇವಾರಿ ಮಾಡದೆ ಬಾಕಿ ಉಳಿಸಿಕೊಂಡಿರುವುದಕ್ಕೆ ತರಾಟೆಗೆ ತೆಗೆದುಕೊಂಡರು.

'ಮುಂದೆ 15 ದಿನಗಳಿಗೊಮ್ಮೆ ಮುಖ್ಯ ಕಾರ್ಯದರ್ಶಿಯವರೇ ಕಡತಗಳನ್ನು ಪರಿಶೀಲಿಸಬೇಕು. ಮೂರು ತಿಂಗಳಿಗೊಮ್ಮೆ ನಾನು ಪ್ರಗತಿ ಪರಿಶೀಲನಾ ಸಭೆ ನಡೆಸುತ್ತೇನೆ. ಕಡತ ವಿಲೇವಾರಿ ವಿಳಂಬವಾದರೆ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು' ಎಂದು ಮತ್ತೆ ಎಚ್ಚರಿಕೆ ನೀಡಿದ್ದಾರೆ.



ಬಸವರಾಜ ಬೊಮ್ಮಾಯಿ

'ಕಾಲಮಿತಿಯಲ್ಲಿ ಕಡತಗಳ ವಿಲೇವಾರಿಗೆ ಅಧಿಕಾರ ವಹಿಸಿಕೊಂಡಾಗಲೇ ಸೂಚನೆ ನೀಡಿದ್ದೆ. ಆದರೂ ನಿರೀಕ್ಷಿತ ಸಾಧನೆ ಆಗಿಲ್ಲ. ವಿಳಂಬದಿಂದ ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆಯಾಗುತ್ತಿದೆ. ಕಾನೂನಿನ ವ್ಯಾಪ್ತಿಯಲ್ಲಿ ಆದಷ್ಟು ಬೇಗ ಕಡತಗಳನ್ನು ಇತ್ಯರ್ಥಪಡಿಸಬೇಕು ಎಂದು ಸಲಹೆ ನೀಡಿದ್ದಾರೆ.

'ಎರಡು ವಾರದಿಂದ ಉಪ ಚುನಾವಣೆ ಪ್ರಚಾರದಲ್ಲಿದ್ದರಿಂದ ಕಡತಗಳ ವಿಲೇವಾರಿ ಸಾಧ್ಯವಾಗಿರಲಿಲ್ಲ. ಮುಖ್ಯಮಂತ್ರಿ ಕಚೇರಿಯಲ್ಲೇ ಸಾಕಷ್ಟು ಕಡತಗಳು ಉಳಿದಿದ್ದವು. ಹೀಗಾಗಿ, ಶನಿವಾರ ಇಡೀ ದಿನ ಕಡತ ವಿಲೇವಾರಿಯಲ್ಲಿ ತೊಡಗಿದ್ದರು' ಎಂದು ಮುಖ್ಯಮಂತ್ರಿ ಸಚಿವಾಲಯದ ಮೂಲಗಳು ಹೇಳಿವೆ.

'ಪೆಗಾಸಸ್: ಸಿದ್ದರಾಮಯ್ಯ ದೂರಿಗೆ ಉತ್ತರಿಸಿ'

ಬೆಂಗಳೂರು: 'ಪೆಗಾಸಸ್ ತಂತ್ರಾಂಶ ಬಳಸಿ ನನ್ನ ಮೇಲೆ ಗೂಢಚರ್ಯೆ ನಡೆಸಲಾಗುತ್ತಿದೆ' ಎಂದು ರಾಷ್ಟ್ರಪತಿ ಸಚಿವಾಲಯಕ್ಕೆ ವಿಧಾನಸಭೆ ವಿರೋಧ ನಾಯಕ ಸಿದ್ದರಾಮಯ್ಯ ನೀಡಿರುವ ದೂರಿಗೆ ಉತ್ತರಿಸುವಂತೆ ರಾಜ್ಯ ಸರ್ಕಾರಕ್ಕೆ ಕೇಂದ್ರ ಗೃಹ ಇಲಾಖೆ ಸೂಚಿಸಿದೆ.

ಸಿದ್ದರಾಮಯ್ಯ ಅವರು ಜುಲೈ 22ರಂದು ನೀಡಿದ್ದ ದೂರನ್ನು ರಾಷ್ಟ್ರಪತಿ ಸಚಿವಾಲಯ ಕೇಂದ್ರ ಗೃಹ ಇಲಾಖೆಗೆ ಕಳುಹಿಸಿತ್ತು. ಈ ಬಗ್ಗೆ ಕರ್ನಾಟಕದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವ ಗೃಹ ಇಲಾಖೆ, 'ಸಿದ್ದರಾಮಯ್ಯನವರಿಗೆ ನೇರವಾಗಿ ಉತ್ತರ ನೀಡಬೇಕು' ಎಂದು ಸೂಚಿಸಿದೆ.

'ಸಂವಿಧಾನದ ಏಳನೇ ಅನುಚ್ಛೇದದ ಪ್ರಕಾರ 'ಪೊಲೀಸ್' ಮತ್ತು 'ಸಾರ್ವಜನಿಕ ಆದೇಶ' ರಾಜ್ಯದ ವ್ಯಾಪ್ತಿಗೆ ಸಂಬಂಧಿಸಿದ ವಿಷಯ. ಹೀಗಾಗಿ, ಅಪರಾಧ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಪತ್ತೆ ಮಾಡಿ ವಿಚಾರಣೆಗೆ ಒಳಪಡಿಸುವುದು ಆಯಾ ರಾಜ್ಯ ಸರ್ಕಾರಗಳ ಕಾನೂನು ಜಾರಿ ಸಂಸ್ಥೆಗಳ ಹೊಣೆಗಾರಿಕೆ. ಆದ್ದರಿಂದ, ಈ ದೂರಿನ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು' ಎಂದು ಕೇಂದ್ರ ಗೃಹ ಇಲಾಖೆ ಸೂಚಿಸಿದೆ.

ಪೌಷ್ಟಿಕ ಆಹಾರ ಸೇವಿಸಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ರೈಲು ಗಾಲಿ ಕಾರ್ಖಾನೆ ಯಲಹಂಕ, ಬೆಂಗಳೂರು-560064.
ವೆಬ್‌ಸೈಟ್: www.rwf.indianrailways.gov.in

ಟೆಂಡರ್ ಪ್ರಕಟಣೆ ಸಂ : ಆರ್‌ಡಬ್ಲ್ಯೂಎಫ್/ಎಸ್/146/2021-22/10 ದಿ: 04/11/2021

ಇ– ಟೆಂಡರ್‌ಗಳು : ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು / ರೈಲು ಗಾಲಿ ಕಾರ್ಖಾನೆ. ಈ ಕೆಳಕಂಡ ಕೆಲಸಕ್ಕೆ ಅಯಾ ಕ್ಷೇತ್ರದಲ್ಲಿ ಅನುಭವವುಳ್ಳ / ಪ್ರತಿಷ್ಠಿತ ಗುತ್ತಿಗೆದಾರರಿಂದ ಟೆಂಡರ್‌ನ್ನು ಆನ್‌ಲೈನ್ ವೆಬ್‌ಸೈಟ್ http://www.ireps.gov.in ಮೂಲಕ ಆಹ್ವಾನಿಸಿದ್ದಾರೆ.

ಟೆಂಡರ್ ಸಂಖ್ಯೆ:	ಆರ್‌ಡಬ್ಲ್ಯೂಎಫ್_ಎಸ್_ಟಿಪಿಟಿ_ಸಿಡಬ್ಲ್ಯೂಎಸ್_1000_21–22		
ಅಂತಿಮ ದಿನಾಂಕ ಮತ್ತು ಸಮಯ:	29/11/2021 ಕೊನೆಗೊಳ್ಳುವ ಸಮಯ:14.15 ಘಂಟೆಗೆ		
ಕೆಲಸದ ವ್ಯಾಪ್ತಿ:	ರೈಲ್ವೇ ಉತ್ಪನ್ನಗಳ ಸ್ಟೀಲ್ ಸ್ಕ್ರ್ಯಾಪ್‌ನ ಸಾಗಣೆ, ಅಂದರೆ ವಿವಿಧ ರೈಲ್ವೇ ಘಟಕಗಳಿಂದ ರೈಲು ಗಾಲಿ ಕಾರ್ಖಾನೆ, ಯಲಹಂಕ, ಬೆಂಗಳೂರು–560064 ಗೆ 900ಎಂಟಿ ಖಂಡಿಸಿದ ರೈಲು ಚಕ್ರಗಳನ್ನು 501ಕಿಮೀ ದೂರದಿಂದ 1000ಕಿ ಮೀವರೆಗಿನ ದೂರಕ್ಕೆ ರಸ್ತೆ ಮಾರ್ಗವಾಗಿ ಸಾಗಿಸುವುದು.		
ದೂರದ ಮಿತಿ:	501ಕಿ ಮೀ ದೂರದಿಂದ 1000ಕಿ ಮೀ ವರೆಗೆ	ಪ್ರಮಾಣದ ಮಿತಿ:	900ಎಂಟಿ
ಟೆಂಡರ್ ಅಂದಾಜು ವೆಚ್ಚ :	ರೂ.35,64,000/–	ಠೇವಣಿ ಮೊತ್ತ:	ರೂ.71,300/–
ಒಪ್ಪಂದದ ಅವಧಿ:	ಕೆಲಸ ಆರಂಭವಾದ ದಿನಾಂಕದಿಂದ 12(ಹನ್ನೆರಡು) ತಿಂಗಳು		

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಜಿಲ್ಲಾ ಪಂಚಾಯತ್, ಮೈಸೂರು
(Off)+91(0821)2526301-353 E-mail: Ceo_zp_mys@nic.in

ಇ–ಪ್ರೊಕ್ಯೂರ್ ಮೆಂಟ್ ಟೆಂಡರ್ ಅಧಿಸೂಚನೆ
ಸಂಖ್ಯೆ.: SBM(G)/ZPMYS/E-18636
ದಿನಾಂಕ: 04.11.2021 (RDPR/2021-22/IND 2462)

ಮೈಸೂರು ಜಿಲ್ಲೆಯ, ಪಿರಿಯಾಪಟ್ಟಣ ತಾಲ್ಲೂಕು ಪಂಚಾಯತಿ ವ್ಯಾಪ್ತಿಯ **32 ಗ್ರಾಮ ಪಂಚಾಯತಿಗಳಿಗೆ** ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯಡಿ ಘನ ತ್ಯಾಜ್ಯ ವಿಲೇವಾರಿ ಘಟಕಗಳ ಅನುಷ್ಠಾನಕ್ಕಾಗಿ ಗ್ರಾಮ ಪಂಚಾಯತಿಗಳಿಗೆ ಅಗತ್ಯವಿರುವ **GARBAGE VEHICLE** ಗಳನ್ನು ಇ–ಪ್ರೊಕ್ಯೂರ್ ಮೆಂಟ್ ಮೂಲಕ ಖರೀದಿಸಲು ಉದ್ದೇಶಿಸಲಾಗಿದೆ. ಟೆಂಡರ್ ಡಾಕ್ಯುಮೆಂಟ್ ಅನ್ನು **https://eproc.karnataka.gov.in** ವೆಬ್ ಸೈಟ್ ನಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ಒಟ್ಟು ಮೊತ್ತ **ರೂ. 171.20 ಲಕ್ಷಗಳಾಗಿದ್ದು,** ಈ ಮೊತ್ತಕ್ಕೆ ಇ.ಎಂ.ಡಿ ಮೊತ್ತ **ರೂ. 2,57,000/– (ಎರಡು ಲಕ್ಷದ ಐವತ್ತೇಳು ಸಾವಿರ ರೂಪಾಯಿಗಳು ಮಾತ್ರ)** ಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 15.11.2021 ರ ಬೆಳಗ್ಗೆ 11.00 ಗಂಟೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 16.11.2021 ಪೂರ್ವಾಹ್ನ 17.00 ಗಂಟೆ** ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೈಸೂರು ಜಿಲ್ಲಾ ಪಂಚಾಯತ್ ಕಛೇರಿಯ ಸ್ವಚ್ಛ ಭಾರತ್ ಮಿಷನ್ (ಗ್ರಾ) ಶಾಖೆ, ಜಿಲ್ಲಾ ಪಂಚಾಯತ್, ಮೈಸೂರು ರವರನ್ನು ಸಂಪರ್ಕಿಸಬಹುದು. **(ದೂರವಾಣಿ ಸಂಖ್ಯೆ: 2526347)**

ಸಹಿ/– ಟೆಂಡರ್ ಕರೆಯುವ ಪ್ರಾಧಿಕಾರ ಹಾಗೂ ಮುಖ್ಯ ಲೆಕ್ಕಾಧಿಕಾರಿ,
ಜಿಲ್ಲಾ ಪಂಚಾಯತ್, ಮೈಸೂರು

DIPR/DD-MYS/MCA/656/2021-22

ಸಕ್ಷಮ ಪ್ರಾಧಿಕಾರ ಹಾಗೂ ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ
2ನೇ ಮಹಡಿ, ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ, ಕಂದಾಯ ಭವನ ಹಿಂಭಾಗ, ಕೆಂಪೇಗೌಡ ರಸ್ತೆ, ಬೆಂಗಳೂರು–560009. ದೂ: 080–29904233, ಇ–ಮೇಲ್ : cmdkplc@gmail.com

ಸಂ. ಕೆಪಿಎಲ್‌ಸಿ/ಸಿಎ–02(22)/21–22 ದಿನಾಂಕ : 30–10–2021

ಸಾರ್ವಜನಿಕ ಪ್ರಕಟಣೆ

ಶ್ರೀ ಗುರುಸಾರ್ವಭೌಮ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ದೂಷಿತ ಕಂಪನಿಯ ಠೇವಣಿದಾರರು ತಮ್ಮ ಹೂಡಿಕೆಯ ಕುರಿತು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರುಗಳ ಹಿತಾಸಕ್ತಿ ಸಂರಕ್ಷಣೆ ಕಾಯ್ದೆ 2004ರ (ಕೆಪಿಐಡಿಎಫ್‌ಇ) ಕಲಂ 7(2)ರನ್ವಯ ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಸಾರ್ವಜನಿಕ ತಿಳುವಳಿಕೆ.

- ಶ್ರೀ ಗುರುಸಾರ್ವಭೌಮ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ದೂಷಿತ ಕಂಪನಿಯ ಠೇವಣಿದಾರರು ಆನ್‌ಲೈನ್ ಮೂಲಕ ತಮ್ಮ ಕ್ಲೇಮು ಅರ್ಜಿಗಳನ್ನು ಸಲ್ಲಿಸುವುದು.
- ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ : 15–11–2021 ಆಗಿರುವುದು. ಈ ಪ್ರಾರಂಭಿಕ ದಿನಾಂಕದಿಂದ 1 ತಿಂಗಳ ಒಳಗೆ ಅಂದರೆ ಅರ್ಜಿಗಳನ್ನು ಸಲ್ಲಿಸುವ ಕಡೆಯ ದಿನಾಂಕವಾದ 14–12–2021ರ ಸಂಜೆ 5.30ರ ಒಳಗಾಗಿ ಅಥವಾ ಅದಕ್ಕಿಂತ ಮುಂಚೆ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
- ಶ್ರೀ ಗುರುಸಾರ್ವಭೌಮ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಠೇವಣಿದಾರರು ತಮ್ಮ ಅರ್ಜಿಗಳನ್ನು ಯಾವುದೇ ಬೆಂಗಳೂರು–ಒನ್ / ಠೇವಣಿದಾರರ ಫೆಡರೇಷನ್‌ನಲ್ಲಿ ಕಂಪ್ಯೂಟರ್ ಆಪರೇಟರ್‌ಗಳ ನೆರವು ಪಡೆದು ನಿಗಧಿತ ಶುಲ್ಕ ಪಾವತಿಸಿ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು.
- ಠೇವಣಿದಾರರಿಗೆ ಗಂಭೀರ ಆರೋಗ್ಯ ಸಮಸ್ಯೆ ಇದ್ದಲ್ಲಿ "ಬೆಂಗಳೂರು–ಒನ್"ಗೆ ನಿಗಧಿತ ಸೇವಾ ಶುಲ್ಕ ಪಾವತಿಸಿದರೆ ಡೆಸ್ಕ್ ಆಪರೇಟರ್‌ರವರು ಅಂತಹವರ ಮನೆಯ ಬಾಗಿಲಿಗೆ ಬಂದು ಆನ್‌ಲೈನ್ ಮೂಲಕ ಅರ್ಜಿಗಳನ್ನು ಅಪ್‌ಲೋಡ್ ಮಾಡಿ ಸ್ವೀಕೃತಿಯನ್ನು ನೀಡುವ ಸೇವೆಯು ಲಭ್ಯವಿರುತ್ತದೆ.
- ಠೇವಣಿದಾರರು ಮರಣ ಹೊಂದಿದ್ದರೆ / ಆಸ್ಪತ್ರೆ ಸೇರಿದ್ದರೆ ಅವರ ನಾಮನಿರ್ದೇಶಿತರು / ಉತ್ತರಾಧಿಕಾರಿಯವರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಈ ರೀತಿ ಅರ್ಜಿ ಸಲ್ಲಿಸುವಾಗ ಅದಕ್ಕೆ ಪುರಾವೆಯಾಗಿರುವ ದಾಖಲೆಗಳು ಈ ಕೆಳಗಿನಂತೆ ಸಲ್ಲಿಸಬೇಕಾಗಿರುತ್ತದೆ.

ಕ್ರ	ಠೇವಣಿದಾರರು / ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1	ಠೇವಣಿದಾರರು (Depositor)	ಠೇವಣಿದಾರರು ಎಲ್ಲಾ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2	ನಾಮಿನಿದಾರರು (Nominee)	1. ಠೇವಣಿದಾರರ ಮರಣ ಪ್ರಮಾಣ ಪತ್ರ 2. ವಂಶ ವೃಕ್ಷ (ತಹಸೀಲ್ದಾರ್ ರವರಿಂದ ಪಡೆದಿರತಕ್ಕದ್ದು) 3. ನಾಮಿನಿದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
3	ವಾರಸುದಾರರು (Legal Heir)	1. ಠೇವಣಿದಾರರ ಮರಣ ಪ್ರಮಾಣ ಪತ್ರ 2. ವಂಶ ವೃಕ್ಷ (ತಹಸೀಲ್ದಾರ್‌ರವರಿಂದ ಪಡೆದಿರತಕ್ಕದ್ದು) 3. ನಿರ್ದಿಷ್ಟನಾಮಿನಿ (Nominee) ರವರ ಮರಣ ಪ್ರಮಾಣ ಪತ್ರ 4. ವಾರಸುದಾರರ ಪ್ರಮಾಣ ಪತ್ರ – ನ್ಯಾಯಾಲಯದ ಆದೇಶ 5. ವಾರಸುದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
4	ಜಿ.ಪಿ.ಎ. (General Power of Attorney)	1. ಠೇವಣಿದಾರರು ಆಸ್ಪತ್ರೆಗೆ ದಾಖಲಾಗಿರುವುದಕ್ಕೆ ಸಂಬಂಧಿಸಿದ ದಾಖಲೆಗಳು (ಗಂಭೀರ ಆರೋಗ್ಯ ಸಮಸ್ಯೆ ಇರುವವರು). 2. ಹೊರದೇಶದಲ್ಲಿ ವಾಸಿಸುತ್ತಿರುವವರು. 3. ಮೇಲಿನ ಕ್ರ.ಸಂ.1 ಮತ್ತು 2ಕ್ಕೆ ಸಂಬಂಧಪಟ್ಟವರು ಕಡ್ಡಾಯವಾಗಿ ವಕೀಲರಿಂದ Notarized Power of Attorney certificate ಸಲ್ಲಿಸತಕ್ಕದ್ದು. 4. ಜಿ.ಪಿ.ಎ. ಹೊಂದಿರುವವರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.

ಆನ್‌ಲೈನ್‌ನಲ್ಲಿ ಕ್ಲೇಮು ಅರ್ಜಿ ಸಲ್ಲಿಸುವ ಅರ್ಜಿದಾರರು ಪ್ರತಿ ಹೂಡಿಕೆಗೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ ಅಪ್‌ಲೋಡ್ ಮಾಡುವುದು.

ಕ್ರ	ಠೇವಣಿದಾರರು / ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1	ಉಳಿತಾಯ ಖಾತೆ (Savings Account)	1. ಭಾವಚಿತ್ರ ಇರುವ ಪಾಸ್‌ಬುಕ್ ಪುಸ್ತಕದ ಮುಖಪುಟ (Front Page) ನಕಲು. 2. ಪಾಸ್‌ಬುಕ್‌ನಲ್ಲಿ ಠೇವಣಿದಾರರ ಕ್ಲೇಮ್‌ನಿಂದ ಪಡೆದಿರುವ ವಹಿವಾಟಿನ ಪ್ರತಿ (Transaction statement page in passbook of Claimed Amount) 3. ಠೇವಣಿದಾರರು / ನಾಮಿನಿದಾರರು / ವಾರಸುದಾರರು / ಜಿ.ಪಿ.ಎ. ರವರುಗಳು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2	ನಿರ್ದಿಷ್ಟ ಠೇವಣಿ	1. ಬಾಂಡ್ ಪ್ರಮಾಣ ಪತ್ರ / ನಿರ್ದಿಷ್ಟ ಠೇವಣಿ ಪ್ರಮಾಣ ಪತ್ರ 2. ಠೇವಣಿದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
3	ಮರುಕಳಿಸುವ ಠೇವಣಿ (ರಿಕರಿಂಗ್ ಡಿಪಾಸಿಟ್)	1. ಭಾವಚಿತ್ರ ಇರುವ ಪಾಸ್‌ಬುಕ್ ಪುಸ್ತಕದ ಮುಖಪುಟ (Front page) ನಕಲು 2. ಪಾಸ್‌ಬುಕ್‌ನಲ್ಲಿ ಠೇವಣಿದಾರರ ಕ್ಲೇಮ್‌ನಿಂದ ಪಡೆದಿರುವ ವಹಿವಾಟಿನ ಪ್ರತಿ (Transaction statement page in passbook of Claimed Amount) 3. ಠೇವಣಿದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
4	ಪೂರಕ ದಾಖಲೆಗಳು (Supporting documents)	1. ಭಾವಚಿತ್ರ ಇರುವ ಪಾಸ್‌ಬುಕ್ ಪುಸ್ತಕದ ಮುಖಪುಟ (Front page) ನಕಲು / ಠೇವಣಿದಾರರ ಹೆಸರು ನಮೂದಿಸಿ ರದ್ದು ಮಾಡಿರುವ ಚೆಕ್ ಪ್ರತಿ 2. ಠೇವಣಿದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.

- ಕೆಪಿಐಡಿ ಕಾಯ್ದೆಯ ಕಲಂ 7(3)ರ ಅನ್ವಯ ಕ್ಲೇಮು ಅರ್ಜಿ ಸಲ್ಲಿಸುವುದಕ್ಕೆ ನಿಗಧಿಪಡಿಸಿರುವ ಕಡೆಯ ದಿನಾಂಕದ ನಂತರ ಬರುವ ಯಾವುದೇ ಅರ್ಜಿಗಳನ್ನು ಕಾಯ್ದೆಯ ಉಪಬಂಧಗಳ ಅನ್ವಯ ಪಾವತಿ ಮಾಡಲು ಅರ್ಹವೆಂದು ಪರಿಗಣಿಸಲಾಗುವುದಿಲ್ಲ.
- ತಪ್ಪಾಗಿ ಅಥವಾ ಆಧಾರವಿಲ್ಲದೆ ಸ್ವಯಂಸೃಷ್ಟಿತ ಅರ್ಜಿಗಳನ್ನು ಸಲ್ಲಿಸಿದ್ದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದರೊಂದಿಗೆ ಅಂತಹ ಅರ್ಜಿದಾರರುಗಳ ವಿರುದ್ಧ ನಿಯಮಾನುಸಾರ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗುವುದು.
- ಕೆಪಿಐಡಿ ಕಾಯ್ದೆಯ ಕಲಂ 7(3) ರ ಅನ್ವಯ ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ಅವಧಿ ಅಂದರೆ ದಿನಾಂಕ : **15–11–2021** ರಿಂದ ದಿನಾಂಕ : **14–12–2021ರ ಸಂಜೆ 5.30** ರವರೆಗೆ. ತದನಂತರ ಅರ್ಜಿಗಳನ್ನು ಸಲ್ಲಿಸಲು ತಂತ್ರಾಂಶದಲ್ಲಿ ಅವಕಾಶ ಇರುವುದಿಲ್ಲ.
- ಠೇವಣಿದಾರರ ಮೊಬೈಲ್ ಸಂಖ್ಯೆಗೆ ಕ್ಲೇಮು ಅರ್ಜಿಗಳ ಸ್ಥಿತಿಗತಿ ಕುರಿತು ಮಾಹಿತಿ ನೀಡಲಾಗುವುದು. ಮೊಬೈಲ್ ಸಂಖ್ಯೆ ಹೊಂದದೆ ಇರುವ ಠೇವಣಿದಾರರು ಚಾಲ್ತಿಯಲ್ಲಿರುವ ಮೊಬೈಲ್ ಸಂಖ್ಯೆಯನ್ನು ಸಕ್ಷಮ ಪ್ರಾಧಿಕಾರ ಕಛೇರಿಗೆ ನೀಡಿದ್ದಲ್ಲಿ ಕಾಲಕಾಲಕ್ಕೆ ಠೇವಣಿದಾರರ ಮೊಬೈಲ್ ಸಂಖ್ಯೆಗೆ ಮಾಹಿತಿ ನೀಡಲಾಗುವುದು.
- ಅರ್ಜಿಗಳನ್ನು ಸಲ್ಲಿಸುವ ವಿಧಾನಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಅರ್ಜಿದಾರರು ವೆಬ್‌ಸೈಟ್ : **kplc.kar.nic.in,** ಇ–ಮೇಲ್ : **sgstechsupp@karnataka.gov.in** ಅಥವಾ ಬೆಳಿಗ್ಗೆ 10 ರಿಂದ ಸಂಜೆ 5.30 ರವರೆಗೆ ಕಾಲ್‌ಸೆಂಟರ್ "18004250212" ಗೆ ಕರೆ ಮಾಡಿ ಅಥವಾ ಖುದ್ದಾಗಿ "ಸಕ್ಷಮ ಪ್ರಾಧಿಕಾರ ಕಛೇರಿ", 2ನೇ ಮಹಡಿ, ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ, ಕಂದಾಯ ಭವನ ಹಿಂಭಾಗ, ಕೆಂಪೇಗೌಡ ರಸ್ತೆ, ಬೆಂಗಳೂರು – 560 009 ಇಲ್ಲಿ ಪಡೆದುಕೊಳ್ಳಬಹುದು.

ಸಹಿ/– ಸಕ್ಷಮ ಪ್ರಾಧಿಕಾರಿ,
ಶ್ರೀ ಗುರುಸಾರ್ವಭೌಮ ಸೌಹಾರ್ದ ಪತ್ತಿನ ಸಹಕಾರಿ ನಿ, ಹಾಗೂ
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿ.

ವಾ.ಸಂ.ಇ/ಬೆಂ.ನಗರ/RO. No. 2085/2021–22

ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಸಿಸಿಬಿ ತನಿಖೆ ಮೇಲೆಯೇ ಸಂಶಯ ● ಸದ್ಯದ ಮಾರುಕಟ್ಟೆ ಮೌಲ್ಯ ₹14.35 ಕೋಟಿ

ಜಪ್ತಿ ಮಾಡಿದ್ದ 31 ಬಿಟ್ ಕಾಯಿನ್ ಮಾಯ!

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಹಣ ವಿನಿಮಯ ಏಜೆನ್ಸಿಗಳ ಸರ್ವರ್ ಹಾಗೂ ಆನ್‌ಲೈನ್ ಗೇಮಿಂಗ್ ಜಾಲತಾಣಗಳನ್ನು ಹ್ಯಾಕ್ ಮಾಡಿ ಬಿಟ್ ಕಾಯಿನ್ ದೋಚುತ್ತಿದ್ದ ಎನ್ನಲಾದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯನ್ನು (26) ಬಂಧಿಸಿದ್ದ ಸಿಸಿಬಿ ಪೊಲೀಸರ ತನಿಖೆ ಮೇಲೆಯೇ ಸಂಶಯ ಶುರುವಾಗಿದೆ.

ರಾಜ್ಯದಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ಬಿಟ್ ಕಾಯಿನ್ (ಬಿಟಿಸಿ) ಹಗರಣದ ಬಗ್ಗೆ ವಿದೇಶದ ಹಾಗೂ ಕೇಂದ್ರ ತನಿಖಾ ತಂಡಗಳು ಮಾಹಿತಿ ಕಲೆ ಹಾಕುತ್ತಿವೆ. ಶ್ರೀಕೃಷ್ಣನನ್ನು ಕಸ್ಟಡಿಗೆ ಪಡೆದಿದ್ದ ಸಿಸಿಬಿ ಪೊಲೀಸರು, ಯಾವ ರೀತಿ ವಿಚಾರಣೆ ನಡೆಸಿದ್ದರು ಎಂಬ ಬಗ್ಗೆ ಈ ತನಿಖಾ ತಂಡಗಳು ಪರಿಶೀಲಿಸುತ್ತಿವೆ ಎಂದು ಗೊತ್ತಾಗಿದೆ.

'ಬಿಟ್ ಕಾಯಿನ್' ಹಗರಣದ ಮೂಲ ಸೂತ್ರದಾರ ಎನ್ನಲಾದ ಶ್ರೀಕೃಷ್ಣನನ್ನು ಡ್ರಗ್ ಪ್ರಕರಣದಲ್ಲಿ ಬಂಧಿಸಲಾಗಿತ್ತು. ವಿಚಾರಣೆ ವೇಳೆ, ಈತ ಅಂತರ ರಾಷ್ಟ್ರೀಯ ಹ್ಯಾಕರ್ ಎಂಬುದು ಗೊತ್ತಾಗಿತ್ತು. ಆತ ಎಸಗಿದ್ದ ಸಾಲು ಸಾಲು ಸೈಬರ್ ಅಪರಾಧಗಳನ್ನು ಪತ್ತೆ ಮಾಡಿದ್ದ ಸಿಸಿಬಿ ಇನ್‌ಸ್ಪೆಕ್ಟರ್ ಶ್ರೀಧರ್ ಪೂಜಾರ, ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಕಾಟನ್‌ಪೇಟೆ ಠಾಣೆಗೆ ದೂರು ನೀಡಿದ್ದರು.

ದೂರಿನನ್ವಯ ಶ್ರೀಕೃಷ್ಣ, ಸ್ನೇಹಿತರಾದ ಸುನೀಶ್ ಹೆಗ್ಡೆ, ಪ್ರಸಿದ್ಧ ಶೆಟ್ಟಿ, ಸುಜಯ್ ರಾಜ್, ಹೇಮಂತ್ ಮುದ್ದಪ್ಪ ಹಾಗೂ ಇತರರ ವಿರುದ್ಧ ಎಫ್‌ಐಆರ್ ಸಹ ದಾಖಲಾಗಿತ್ತು. ಕಮಿಷನರ್ ಕಮಲ್ ಪಂತ್ ಹಾಗೂ ಜಂಟಿ ಕಮಿಷನರ್ ಸಂದೀಪ್ ಪಾಟೀಲ ಅವರ ಆದೇಶದಂತೆ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿದ್ದ ಸಿಸಿಬಿಯ ಇನ್‌ಸ್ಪೆಕ್ಟರ್ ಜಿ. ಲಕ್ಷ್ಮಿಕಾಂತಯ್ಯ ನೇತೃತ್ವದ ತಂಡ, ಶ್ರೀಕೃಷ್ಣ ಸೇರಿದಂತೆ ಹಲವರನ್ನು ಬಂಧಿಸಿತ್ತು. ಮತ್ತೊಬ್ಬ ಆರೋಪಿ ರಾಬಿನ್ ಖಂಡೇಲ್‌ವಾಲಾ ಸಹ ಸಿಕ್ಕಿಬಿದ್ದ.

ಶ್ರೀಕೃಷ್ಣನನ್ನು ಬಂಧಿಸಿದ್ದ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿದ್ದ ಸಿಸಿಬಿ ಪೊಲೀಸರು, 'ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣನನ್ನು ಬಂಧಿಸಲಾಗಿದೆ. ಆತನಿಂದ ₹ 9 ಕೋಟಿ ಮೌಲ್ಯದ 31 ಬಿಟ್ ಕಾಯಿನ್ (ನ. 6ರಂದು ಮಾರುಕಟ್ಟೆ ಮೌಲ್ಯ ₹ 14.07 ಕೋಟಿ) ಜಪ್ತಿ ಮಾಡಿದ್ದೇವೆ' ಎಂದಿದ್ದರು. ಈಗ ಕೋರ್ಟ್‌ಗೆ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ 31 ಬಿಟ್ ಕಾಯಿನ್‌ಗಳ ಬಗ್ಗೆ ಉಲ್ಲೇಖವೇ ಇಲ್ಲ. ಇದು, ಸಿಸಿಬಿ ಪೊಲೀಸರ ತನಿಖೆ ಮೇಲಿನ ಅನುಮಾನಕ್ಕೆ ಮತ್ತಷ್ಟು ಪುಷ್ಟಿ ನೀಡುವಂತಿದೆ. 31 ಬಿಟ್ ಕಾಯಿನ್‌ಗಳು ಎಲ್ಲಿ ಹೋದವು ಎಂಬ ಪ್ರಶ್ನೆಯೂ ಮೂಡಿದೆ.

'ಶ್ರೀಕೃಷ್ಣನಿಂದ ಆ್ಯಪಲ್ ಕಂಪನಿ ಲ್ಯಾಪ್‌ಟಾಪ್ (ಡಿಸ್‌ಪ್ಲೇ ಒಡೆದಿರುವುದು), ಹಾರ್ಡ್‌ಡಿಸ್ಕ್, ವಿವಿಧ ಕಂಪನಿಯ ಮೂರು ವ್ಯಾಲೆಟ್, ಬ್ಯಾಗ್ ಮಾತ್ರ ಜಪ್ತಿ ಮಾಡಲಾಗಿದೆ' ಎಂದು ಆರೋಪ ಪಟ್ಟಿಯಲ್ಲಿ ಹೇಳಲಾಗಿದೆ.

ಆರೋಪಿಗೆ ಕ್ಲೀನ್‌ಚಿಟ್: 'ಇನ್‌ಸ್ಪೆಕ್ಟರ್ ಶ್ರೀಧರ್ ಪೂಜಾರ ಠಾಣೆಗೆ ನೀಡಿದ್ದ ದೂರಿನಲ್ಲಿ ಉಲ್ಲೇಖಿಸಿದ್ದ ಆರೋಪಿ ಹೇಮಂತ್ ಮುದ್ದಪ್ಪನಿಗೆ ಪ್ರಕರಣದಲ್ಲಿ ಕ್ಲೀನ್‌ಚಿಟ್ ನೀಡಲಾಗಿದೆ. ಇದು, ಸಿಸಿಬಿ ತನಿಖೆ ಮೇಲೆ ಮತ್ತಷ್ಟು ಶಂಕೆ ಮೂಡಿಸಿದೆ. ಇನ್‌ಸ್ಪೆಕ್ಟರ್ ನೀಡಿದ್ದ ದೂರೇ ಸುಳ್ಳಾಗಿದೆ ಎಂಬ ಪ್ರಶ್ನೆಯೂ ಕಾಡುತ್ತಿದೆ.

ತಮ್ಮದೇ ಸಿಸಿಬಿಯ ಇನ್‌ಸ್ಪೆಕ್ಟರ್ ದೂರು ನೀಡಿದ್ದ ಪ್ರಕರಣದ ಆರೋಪಿ ಹೇಮಂತ್‌ನನ್ನು ದೋಷಮುಕ್ತ ಗೊಳಿಸಲಾಗಿದೆ. ಶ್ರೀಕೃಷ್ಣ ಕೃತ್ಯಕ್ಕೆ ಸಹಕರಿಸಿದ್ದ ಆರೋಪ ಹಾಗೂ ರಾಜ್ಯ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಜಾಲತಾಣದಿಂದ ಹಣ ಪಡೆದಿದ್ದ ಆರೋಪ ಹೊಂದಿರುವ ಹೇಮಂತ್‌ನನ್ನು ಆರೋಪ ಪಟ್ಟಿಯಿಂದ ಕೈಬಿಟ್ಟಿದ್ದು ಏಕೆ ? ಸಿಸಿಬಿ ಪೊಲೀಸರು ಪ್ರಭಾವಕ್ಕೆ ಒಳಗಾದರೇ? ಅಥವಾ ಪ್ರಭಾವಿಗಳ ಜೊತೆ ಸೇರಿ ಬಿಟ್ ಕಾಯಿನ್ ಹಗರಣಕ್ಕೆ ದಾರಿ ಮಾಡಿಕೊಟ್ಟರೇ? ಎಂಬ ಬಗ್ಗೆ ವಿದೇಶದ ಹಾಗೂ ಕೇಂದ್ರ ತನಿಖಾ ತಂಡಗಳು ಮಾಹಿತಿ ಕಲೆಹಾಕುತ್ತಿರುವುದಾಗಿ ಗೊತ್ತಾಗಿದೆ.

ವಿನಾಕಾರಣ ಆರೋಪ: 'ಪ್ರಕರಣದಲ್ಲಿ ಸುಜಯ್ ರಾಜ್ (29) ವಿರುದ್ಧ ಸಿಸಿಬಿ ಪೊಲೀಸರು ವಿನಾಕಾರಣ ಆರೋಪ ಹೊರಿಸಿದ್ದಾರೆ. ಇದರ ವಿರುದ್ಧ ಕಾನೂನು ಹೋರಾಟ ನಡೆಸಲಾಗುತ್ತಿದೆ. ಸುಜಯ್ ಘನತೆ ಧಕ್ಕೆ ತರುವ ಸುದ್ದಿ ಪ್ರಕಟಿಸದಂತೆಯೂ ತಡೆಯಾಜ್ಞೆ ಇದೆ' ಎಂದು ಆತನ ಪರ ವಕೀಲ ಎಸ್. ಸುಧನ್ವ ಹೇಳಿದ್ದಾರೆ.

'ಬಿಟ್‌ಕಾಯಿನ್ ಯಾರಿಗೆಷ್ಟು ಪಾಲು'

ಪ್ರಜಾವಾಣಿ ವಿಶೇಷ

'ಶ್ರೀಕೃಷ್ಣನಿಂದಲೇ 31 ಬಿಟಿಸಿ ವರ್ಗಾವಣೆ'

'ಬಿಟ್ ಕಾಯಿನ್ ವ್ಯವಹಾರದಲ್ಲಿ ಪರಿಣಿತನಾದ ಶ್ರೀಕೃಷ್ಣ, ಆರಂಭದಲ್ಲಿ 31 ಬಿಟಿಸಿ ತನ್ನ ಬಳಿ ಇರುವುದಾಗಿ ಹೇಳಿ ಕಂಪ್ಯೂಟರ್‌ನಲ್ಲಿ ಮಾಹಿತಿ ತೋರಿಸಿದ್ದ. ಅವುಗಳನ್ನೇ ಜಪ್ತಿ ಮಾಡಿರುವುದಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿತ್ತು. ಅದಾದ ನಂತರ, ಶ್ರೀಕೃಷ್ಣನೇ 31 ಬಿಟಿಸಿಗಳನ್ನು ಬೇರೆ ಕಡೆ ವರ್ಗಾವಣೆ ಮಾಡಿದ್ದಾನೆ. ಅವುಗಳನ್ನು ಜಪ್ತಿ ಮಾಡಲು ಸಾಧ್ಯವಾಗಿಲ್ಲ. ಹೀಗಾಗಿ, ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಿಲ್ಲ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಬಿಟ್ ಕಾಯಿನ್ ವ್ಯವಸ್ಥೆಯೇ ಹೊಸದು. ಪೊಲೀಸರ ತನಿಖೆ ದಿಕ್ಕನ್ನೂ ಶ್ರೀಕೃಷ್ಣ ತಪ್ಪಿಸುತ್ತಿದ್ದ' ಎಂದೂ ತಿಳಿಸಿವೆ.

'ಹೆಚ್ಚುವರಿ ದೋಷಾರೋಪ ಪಟ್ಟಿಗೆ ನಿವೇದನೆ'

ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ದಾಖಲಾಗಿದ್ದ ಪ್ರಕರಣದಲ್ಲಿ ಶ್ರೀಕೃಷ್ಣ ಹಾಗೂ ಇತರರ ವಿರುದ್ಧ ಒಂದನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದ ತನಿಖಾಧಿಕಾರಿ ಜಿ. ಲಕ್ಷ್ಮಿಕಾಂತಯ್ಯ, ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಲು ಅವಕಾಶ ನೀಡುವಂತೆ ನ್ಯಾಯಾಲಯವನ್ನು ಕೋರಿದ್ದಾರೆ.

'ಪ್ರಕರಣದಲ್ಲಿ ಮುಂದೆ ಲಭ್ಯವಾಗುವ ಸಾಕ್ಷ್ಯ, ದಾಖಲಾತಿಗಳ ಹಾಗೂ ಇತರೆ ಸಾಕ್ಷಾಧಾರಗಳು ದೊರೆತಲ್ಲಿ ಸಿಆರ್‌ಪಿಸಿ ಕಲಂ 173 (8) ಅಡಿ ತನಿಖೆಯನ್ನು ಮುಂದುವರಿಸಲಾಗುವುದು. ನ್ಯಾಯಾಲಯಕ್ಕೂ ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು' ಎಂದು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

'ರಾಷ್ಟ್ರೀಯ ಡ್ರ್ಯಾಗ್ ರೇಸ್ ಚಾಂಪಿಯನ್'

'ಪ್ರಕರಣದಿಂದ ಕೈಬಿಡಲಾಗಿರುವ ಹೇಮಂತ್, ರಾಷ್ಟ್ರೀಯ ಡ್ರ್ಯಾಗ್ ರೇಸ್ ಚಾಂಪಿಯನ್. ಶ್ರೀಕೃಷ್ಣ ಹಾಗೂ ಇತರ ಆರೋಪಿಗಳ ಜೊತೆ ಒಡನಾಟ ಹೊಂದಿದ್ದ ಎನ್ನಲಾದ ಆರೋಪ. ಅವರ ಜೊತೆ ಹಲವೆಡೆ ಸುತ್ತಾಡಿದ್ದ. ಕೃತ್ಯದಲ್ಲೂ ಭಾಗಿಯಾದ ಆರೋಪವಿದೆ' ಎಂದು ಮೂಲಗಳು ಹೇಳಿವೆ.

'ಹೇಮಂತ್ ವಿರುದ್ಧ ಸಿಐಡಿ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದ್ದು, ಅದರ ತನಿಖೆ ನಡೆಯುತ್ತಿದೆ. ಕಾಟನ್‌ಪೇಟೆ ಠಾಣೆಯಲ್ಲಿ ದಾಖಲಾದ ಪ್ರಕರಣದಲ್ಲಿ ಆತನ ವಿರುದ್ಧ ಯಾವುದೇ ಸಾಕ್ಷ್ಯಗಳು ಲಭ್ಯವಾಗಿಲ್ಲ. ಹೀಗಾಗಿ, ಆರೋಪಪಟ್ಟಿಯಿಂದ ಆತನನ್ನು ಕೈಬಿಡಲಾಗಿದೆ' ಎಂದು ಆರೋಪ ಪಟ್ಟಿಯಲ್ಲಿ ಸಿಸಿಬಿ ಪೊಲೀಸರು ಉಲ್ಲೇಖಿಸಿದ್ದಾರೆ.

ಹಲ್ಲೆ ಆರೋಪ: ಹ್ಯಾಕರ್ ಶ್ರೀಕೃಷ್ಣ ಬಂಧನ

ಶ್ರೀಕೃಷ್ಣ

ಬೆಂಗಳೂರು: ನಗರದ ಹೋಟೆಲೊಂದರ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದ ಆರೋಪದಡಿ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯನ್ನು (26) ಜೀವನ್ ಭಿಮಾ ನಗರ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.

'ಶ್ರೀಕೃಷ್ಣ ಹಾಗೂ ಆತನ ಸ್ನೇಹಿತ ವಿಷ್ಣು ಭಟ್, ಹೋಟೆಲ್ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದರು. ಈ ಪ್ರಕರಣದಲ್ಲಿ ಇಬ್ಬರನ್ನೂ ವಶಕ್ಕೆ ಪಡೆದು, ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರೊಬ್ಬರು ತಿಳಿಸಿದರು.

'ಆರಂಭದಲ್ಲಿ ಶ್ರೀಕೃಷ್ಣನ ಹೆಸರು ಹಾಗೂ ಆತ ಯಾರು? ಎಂಬುದು ತಿಳಿದಿರಲಿಲ್ಲ. ವಿಚಾರಿಸಿದಾಗ ಅಂತರ ರಾಷ್ಟ್ರೀಯ ಹ್ಯಾಕರ್ ಎಂಬುದು ತಿಳಿಯಿತು. ಆತನ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿರುವ ಮಾಹಿತಿಯೂ ಲಭ್ಯವಾಯಿತು' ಎಂದೂ ತಿಳಿಸಿದರು.

'ತನ್ನ ವಿರುದ್ಧದ ಪ್ರಕರಣಗಳಲ್ಲಿ ಜಾಮೀನು ಪಡೆದಿದ್ದ ಶ್ರೀಕೃಷ್ಣ, ಸ್ನೇಹಿತರ ಜೊತೆ ಸುತ್ತಾಡುತ್ತಿದ್ದ. ಐಷಾರಾಮಿ ಹೋಟೆಲ್‌ಗಳ ಕೊಠಡಿಗಳಲ್ಲಿ ಉಳಿದುಕೊಳ್ಳುತ್ತಿದ್ದ' ಎಂದೂ ಹೇಳಿದರು.

ಆರೋಪಿಗಳು ವಾಸವಿದ್ದ ಕೊಠಡಿಯಲ್ಲಿ ಮಾದಕ ವಸ್ತುಗಳು ಇರುವ ಮಾಹಿತಿ ಇದ್ದು, ಈ ಬಗ್ಗೆ ಪೊಲೀಸರು ಪರಿಶೀಲಿಸುತ್ತಿದ್ದಾರೆ. 'ಶ್ರೀಕೃಷ್ಣ ವಾಸವಿದ್ದ ಕೊಠಡಿಯಲ್ಲಿ ಕೆಲ ವಸ್ತುಗಳು ಸಿಕ್ಕಿದ್ದು, ತನಿಖೆ ಮುಂದುವರಿದಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

> **ಬಿಟ್ ಕಾಯಿನ್ ಪ್ರಕರಣ 2018ರಲ್ಲಿ ನಡೆದಿದೆ. ಆಗಿನ ಮುಖ್ಯಮಂತ್ರಿ ಆಗಿದ್ದ ಸಿದ್ದರಾಮಯ್ಯ ಅವರು ಕಾಂಗ್ರೆಸ್‌ನವರ ಮೇಲೆ ಕ್ರಮ ಕೈಗೊಂಡಿದ್ದಾರಾ?**
>
> **ಎಚ್.ಡಿ. ಕುಮಾರಸ್ವಾಮಿ**
> ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಮಣಿಪಾಲದ ಬಿವಿಟಿಗೆ ಆಶ್ಡೆನ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಉಡುಪಿ: ಮಣಿಪಾಲದ ಭಾರತೀಯ ವಿಕಾಸ ಟ್ರಸ್ಟ್‌ಗೆ ಆಶ್ಡೆನ್ ಪ್ರಶಸ್ತಿ ದೊರೆತಿದೆ. ಲಂಡನ್‌ನ ಗ್ಲಾಸ್ಗೋದಲ್ಲಿ ನ.4ರಂದು ಬಿವಿಟಿ ಸಂಸ್ಥೆಯ ಮಾಸ್ಟರ್ ತರಬೇತುದಾರ ಸುಧೀರ್ ಕುಲಕರ್ಣಿ ಹಾಗೂ ಸುದೀಪ್ತ್ ಘೋಷ್ ಪ್ರಶಸ್ತಿ ಸ್ವೀಕರಿಸಿದರು.

'ಎನರ್ಜಿ ಆ್ಯಕ್ಸೆಸ್ ಸ್ಕಿಲ್ಸ್' ವಿಭಾಗದಲ್ಲಿ ಈ ಪ್ರಶಸ್ತಿ ಲಭಿಸಿದ್ದು, ₹ 20 ಲಕ್ಷ ನಗದು ಒಳಗೊಂಡಿದೆ. ಜತೆಗೆ, ಸುಸ್ಥಿರ ಕೌಶಲ ವೃದ್ಧಿ ಕ್ಷೇತ್ರದಲ್ಲಿ ಜಾಗತಿಕ ಮುಂಚೂಣಿ ಸಂಸ್ಥೆಗಳ ಜೊತೆಗೆ ಮಾಹಿತಿ ವಿನಿಮಯ ಹಾಗೂ ಸಹಭಾಗಿತ್ವ ಪಡೆಯುವ ಅವಕಾಶವೂ ಬಿವಿಟಿಗೆ ಲಭಿಸಿದೆ.

ಹವಾಮಾನ ಬದಲಾವಣೆ ಹಾಗೂ ಸುಸ್ಥಿರ ಶಕ್ತಿಯ ಕೌಶಲ ವೃದ್ಧಿ ಕ್ಷೇತ್ರದಲ್ಲಿ ಹಲವು ದಶಕಗಳ ಕಾಲ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಬಿವಿಟಿ ಸಂಸ್ಥೆಗೆ ಆಶ್ಡೆನ್ ಪ್ರಶಸ್ತಿ ನೀಡಲಾಗಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿ ಟಿ.ಅಶೋಕ್ ಪೈ ತಿಳಿಸಿದ್ದಾರೆ.

ಲಂಡನ್‌ನ ಗ್ಲಾಸ್ಗೋದಲ್ಲಿ ನಡೆದ ಸಮಾರಂಭದಲ್ಲಿ ಬಿವಿಟಿ ಮಾಸ್ಟರ್ ತರಬೇತುದಾರ ಸುಧೀರ್ ಕುಲಕರ್ಣಿ ಹಾಗೂ ಸುದೀಪ್ತ್ ಘೋಷ್ ಪ್ರಶಸ್ತಿ ಸ್ವೀಕರಿಸಿದರು.

ವಿವಿಧ ದೇಶಗಳ 800ಕ್ಕೂ ಹೆಚ್ಚು ಸಂಸ್ಥೆಗಳು ಪ್ರಶಸ್ತಿಗೆ ಅರ್ಜಿ ಸಲ್ಲಿಸಿದ್ದವು. ಅವುಗಳಲ್ಲಿ ಬಿವಿಟಿ ಸೇರಿದಂತೆ ಭಾರತದ 2 ಸಂಸ್ಥೆಗಳು ಆಯ್ಕೆಯಾಗಿವೆ. ಡಾ.ಟಿ.ಎ.ಪೈ ಬಿವಿಟಿಯ ಸಂಸ್ಥಾಪಕರಾಗಿದ್ದು, ಮಹಿಳಾ ಸಬಲೀಕರಣ, ನವೀಕರಿಸಬಹುದಾದ ಇಂಧನ, ಹಣಕಾಸು ಸಂಸ್ಥೆಗಳು, ಗ್ರಾಮೀಣ ಆಡಳಿತ ನಿರ್ವಹಣೆ ಹಾಗೂ ಸುಸ್ಥಿರ ಕೃಷಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಬಿವಿಟಿಯು ಅರ್ಹರಿಗೆ ತರಬೇತಿ ನೀಡುತ್ತಿದೆ ಎಂದು ಅಶೋಕ್ ಪೈ ಮಾಹಿತಿ ನೀಡಿದರು.

ಆಶ್ಡೆನ್ ಲಂಡನ್ ಮೂಲದ ಸಂಸ್ಥೆಯಾಗಿದ್ದು ಹವಾಮಾನ ಬದಲಾವಣೆ ಹಾಗೂ ಸುಸ್ಥಿರ ಶಕ್ತಿ ಅಭಿವೃದ್ಧಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದೆ. ಹವಾಮಾನ ಬದಲಾವಣೆಗೆ ಸೂಕ್ತ ಪರಿಹಾರಗಳನ್ನು ಗುರುತಿಸಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿದೆ.

19ರಿಂದ ಬಿಜೆಪಿ ನಾಯಕರ ರಾಜ್ಯ ಪ್ರವಾಸ

ಬೆಂಗಳೂರು: ವಿಧಾನಸಭೆ ಚುನಾವಣೆಗೆ ಸಿದ್ಧತೆಗೆ ಮುಂದಾಗಿರುವ ಬಿಜೆಪಿ ರಾಜ್ಯ ಘಟಕ ಇದೇ 19ರಿಂದ ನಾಲ್ವರು ನಾಯಕರ ನೇತೃತ್ವದಲ್ಲಿ ನಾಲ್ಕು ಕಂದಾಯ ವಿಭಾಗಗಳಲ್ಲಿ ರಾಜ್ಯ ಪ್ರವಾಸಕ್ಕೆ ಚಾಲನೆ ನೀಡಲಿದೆ.

ಮಾಜಿ ಮುಖ್ಯಮಂತ್ರಿಗಳಾಗಿರುವ ಬಿ.ಎಸ್.ಯಡಿಯೂರಪ್ಪ, ಜಗದೀಶ ಶೆಟ್ಟರ್, ಡಿ.ವಿ. ಸದಾನಂದಗೌಡ ಹಾಗೂ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ನೇತೃತ್ವದಲ್ಲಿ ಈ ತಂಡಗಳು ಪ್ರವಾಸ ಮಾಡಲಿವೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಘೋಷಿಸಿದ್ದ ಬಿ.ಎಸ್.ಯಡಿಯೂರಪ್ಪ ಅವರು, '2023ರ ವಿಧಾನಸಭೆ ಚುನಾವಣೆಯಲ್ಲಿ 140 ಸ್ಥಾನ ಗೆಲ್ಲಿಸುವ ಗುರಿ ಇದ್ದು, ಪಕ್ಷ ಸಂಘಟಿಸಲು ಸದ್ಯದಲ್ಲೇ ರಾಜ್ಯಪ್ರವಾಸ ಆರಂಭಿಸುವೆ' ಎಂದು ಪ್ರಕಟಿಸಿದ್ದರು. ಯಡಿಯೂರಪ್ಪ ಒಬ್ಬರೇ ರಾಜ್ಯ ಪ್ರವಾಸ ಶುರುಮಾಡಿದರೆ ಅವರ ವರ್ಚಸ್ಸಷ್ಟೇ ವೃದ್ಧಿಯಾಗುತ್ತದೆ. ಪಕ್ಷದ ಬಲವರ್ಧನೆಗಿಂತ ಅವರ ಪ್ರಭಾವಳಿ ಹೆಚ್ಚಿಸಿಕೊಳ್ಳಲಷ್ಟೇ ಪ್ರವಾಸ ಪೂರಕವಾಗಲಿದೆ ಎಂಬ ಕಾರಣ ಮುಂದೊಡ್ಡಿ ಪ್ರವಾಸಕ್ಕೆ ತಡೆಹಾಕಿದ್ದರು. ಪ್ರವಾಸಕ್ಕೆ ತಡೆಹಾಕಿಲ್ಲ ಎಂದು ಪಕ್ಷದ ರಾಜ್ಯ ಘಟಕದ ಉಸ್ತುವಾರಿ ಅರುಣ ಸಿಂಗ್ ಹೇಳಿಕೆಯನ್ನೂ ನೀಡಿದ್ದರು.

ಆದರೆ, ಯಡಿಯೂರಪ್ಪ ಪ್ರವಾಸವನ್ನು ಆರಂಭಿಸಿರಲಿಲ್ಲ. 'ದೀಪಾವಳಿ ಮುಗಿದ ಬಳಿಕ ಪ್ರವಾಸ ಕೈಗೊಳ್ಳುವೆ' ಎಂದು ಅವರೇ ಹೇಳಿದ್ದರು.

ಪ್ರವಾಸದ ರೂಪುರೇಷೆ, ತಂಡಗಳಲ್ಲಿ ಯಾರು ಇರಬೇಕು? ಎಷ್ಟು ಜನರ ತಂಡ ಇರಲಿದೆ ಎಂಬುದು ಇನ್ನೂ ನಿಗದಿಯಾಗಿಲ್ಲ. ಇದೇ 8ರಂದು ನಡೆಯಲಿರುವ ಪಕ್ಷ ಪದಾಧಿಕಾರಿಗಳ ಸಭೆ ಹಾಗೂ ಪ್ರಮುಖರ ಸಮಿತಿ ಸಭೆಯಲ್ಲಿ ತಂಡದ ಸದಸ್ಯರನ್ನು ಆಯ್ಕೆ ಮಾಡಲಾಗುವುದು ಎಂದು ಮೂಲಗಳು ವಿವರಿಸಿವೆ.

8ರಂದು ರಾಜ್ಯಕ್ಕೆ ಸಿಂಗ್: ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ನವದೆಹಲಿಯಲ್ಲಿ ಭಾನುವಾರ (ನ.7) ನಡೆಯಲಿದೆ. ಅಲ್ಲಿ ರಾಜ್ಯದಲ್ಲಿ ಸಂಘಟನೆ ಕುರಿತು ಚರ್ಚೆ ಆಗಬಹುದು. ಅದಾದ ಬಳಿಕ ಅರುಣ ಸಿಂಗ್ ಬೆಂಗಳೂರಿಗೆ ಬರಲಿದ್ದಾರೆ.

ಕೃಷಿ ಹೊಂಡಕ್ಕೆ ಬಿದ್ದು ಮೂವರ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ಕ್ರಿಕೆಟ್ ಚೆಂಡು ಹಿಡಿಯಲು ಹೋಗಿ ಮೂರು ಮಂದಿ ಕೃಷಿ ಹೊಂಡದಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಚಂದಾಪುರ ಸಮೀಪದ ಇಗ್ಗಲೂರು ಚಂದ್ರಕಾಂತ್ ಬಡಾವಣೆಯಲ್ಲಿ ಈ ಅವಘಡ ನಡೆದಿದೆ.

ಅಮಿತ್‌ಕುಮಾರ್ (31), ಹೃಷಿಕೇಶ್ (9), ಧೀಮಂತ (12) ಮೃತರು. ಬಳ್ಳಾರಿ ಜಿಲ್ಲೆಯ ಸಂಡೂರಿನ ಅಮಿತ್ ಕುಮಾರ್ ದೊಮ್ಮಲೂರಿನ ಖಾಸಗಿ ಕಂಪನಿಯೊಂದರಲ್ಲಿ ಎಂಜಿನಿಯರಿಂಗ್ ಆಗಿ ಕೆಲಸ ಮಾಡುತ್ತಿದ್ದರು. ಹೃಷಿಕೇಷ್, ಧೀಮಂತ್ ಸ್ಥಳೀಯರು.

ಮಕ್ಕಳು ಕ್ರಿಕೆಟ್ ಆಡುವಾಗ ಚೆಂಡು ಕೃಷಿ ಹೊಂಡಕ್ಕೆ ಬಿದ್ದಿದೆ. ಧೀಮಂತ್ ಚೆಂಡು ತೆಗೆದುಕೊಳ್ಳಲು ಹೋಗಿ ಆಯತಪ್ಪಿ ಬಿದ್ದಿದ್ದಾನೆ. ರಕ್ಷಿಸಲು ಅಮಿತ್ ಕುಮಾರ್ ಮತ್ತು ಹೃಷಿಕೇಶ್ ಹೋದಾಗ ಅವರೂ ಮುಳುಗಿ ಮೃತಪಟ್ಟಿದ್ದಾರೆ.

ಐಡಿಯಲ್ ಐಸ್‌ಕ್ರೀಂ ಸ್ಥಾಪಕ ಪ್ರಭಾಕರ ಕಾಮತ್ ನಿಧನ

ಮಂಗಳೂರು: ಹೆಸರಾಂತ ಐಸ್‌ಕ್ರೀಂ ಬ್ರ್ಯಾಂಡ್ 'ಐಡಿಯಲ್ ಐಸ್‌ಕ್ರೀಂ' ಸ್ಥಾಪಕ ಎಸ್. ಪ್ರಭಾಕರ ಕಾಮತ್ (79) ಶನಿವಾರ ಬೆಳಗಿನ ಜಾವ ನಗರದಲ್ಲಿ ನಿಧನರಾದರು.

ಅಕ್ಟೋಬರ್‌ನಲ್ಲಿ ಸಂಭವಿಸಿದ್ದ ರಸ್ತೆ ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದ ಅವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆಗೆ ಸ್ಪಂದಿಸದೆ ಅವರು ನಿಧನರಾದರು. ಸಂಜೆ ಅಂತ್ಯಕ್ರಿಯೆ ನಡೆಯಿತು. ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ಪಬ್ಬಾ ಮಾಮ್: ಪ್ರಭಾಕರ ಕಾಮತ್, 14 ವಿವಿಧ ಬಗೆಯ ಐಸ್‌ಕ್ರೀಂಗಳೊಂದಿಗೆ 1975ರಲ್ಲಿ ನಗರದಲ್ಲಿ ಐಡಿಯಲ್ ಐಸ್‌ಕ್ರೀಂ ಪಾರ್ಲರ್ ಆರಂಭಿಸಿದ್ದರು. ಅವರನ್ನು ಜನರು ಪ್ರೀತಿಯಿಂದ 'ಪಬ್ಬಾ ಮಾಮ್' ಎಂದು ಕರೆಯುತ್ತಿದ್ದರು. ಸಂಸ್ಥೆಯು ನಗರದಲ್ಲಿ ಅದೇ ಹೆಸರಿನಲ್ಲಿ 'ಪಬ್ಬಾಸ್' ಪಾರ್ಲರ್ ಆರಂಭಿಸಿತ್ತು.

ಸಂಸ್ಥೆಯನ್ನು ಮತ್ತಷ್ಟು ವಿಸ್ತರಿಸಿದ ಪುತ್ರ ಮುಕುಂದ್ ಕಾಮತ್, ದೇಶದ ವಿವಿಧೆಡೆಗಳಿಗೆ ಐಡಿಯಲ್ ಐಸ್‌ಕ್ರೀಂ ತೆಗೆದುಕೊಂಡು ಹೋಗಿದ್ದಾರೆ. ರಾಜ್ಯದ ಕರಾವಳಿ, ಉತ್ತರ ಕೇರಳ, ದಕ್ಷಿಣ ಗೋವಾದಲ್ಲಿ ಐಡಿಯಲ್ ಐಸ್‌ಕ್ರೀಂ ಪಾರ್ಲರ್‌ಗಳಿವೆ.

'ಮಸೀದಿ ರೂಪ ಪಡೆದ ಎಲ್ಲ ದೇಗುಲಗಳ ಜೀರ್ಣೋದ್ಧಾರ'

ಒಂದನೇ ಪುಟದಿಂದ

ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಪ್ರಧಾನಿ ಮೋದಿ ಅವರಿಗೆ ಅವಕಾಶ ಸಿಕ್ಕಿದೆ. ಅಯೋಧ್ಯೆಯಲ್ಲಿ ಮಂದಿರ ಕಾಮಗಾರಿ ನೋಡಿ ಕಣ್ಣುತುಂಬಿ ಬಂದಿದೆ ಎಂದರು.

2013ರಲ್ಲಿ ಕೇದಾರನಾಥದಲ್ಲಿ ಪ್ರವಾಹ ಬಂದಿತ್ತು. ಆ ವೇಳೆ, ದೇಗುಲದ ಹಿಂಭಾಗದಲ್ಲಿರುವ ಶಂಕರಾಚಾರ್ಯರ ಸಮಾಧಿಗೆ ಹಾನಿಯಾಗಿತ್ತು. ಜೀರ್ಣೋದ್ಧಾರಗೊಂಡ ಆ ಸ್ಥಳದಲ್ಲಿ, ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರು ಕೆತ್ತಿದ 12 ಅಡಿ ಎತ್ತರದ ಶಂಕರಾಚಾರ್ಯರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ ಎಂದು ಹೇಳಿದರು.

ಮಠಾಧೀಶರ ಒಕ್ಕೂಟ ನೋಂದಣಿ

ಬಾಗಲಕೋಟೆ: ಸಮುದಾಯದ ಮಠಾಧೀಶರ ಪೀಠ ರಚನೆ ನಿಟ್ಟಿನಲ್ಲಿ ಸಕ್ರಿಯವಾಗಿರುವ ಪಂಚಮಸಾಲಿ ಮಠಾಧೀಶರ ಒಕ್ಕೂಟವನ್ನು ಶನಿವಾರ ಜಮಖಂಡಿಯಲ್ಲಿ ಅಧಿಕೃತವಾಗಿ ನೋಂದಣಿ ಮಾಡಿಸಲಾಯಿತು.

ಮನಗೂಳಿಯ ಹಿರೇಮಠದ ಅಭಿನವ ಸಂಗನಬಸವ ಶ್ರೀಗಳು, 'ಮೂರನೇ ಪೀಠವನ್ನು ಬಾಗಲಕೋಟೆ, ವಿಜಯಪುರ, ಬೆಳಗಾವಿ, ಕಲಬುರಗಿ ಪೈಕಿ ಒಂದೆಡೆ ಭಕ್ತರ ಅಭಿಪ್ರಾಯದಂತೆ ಸ್ಥಾಪಿಸಲಾಗುವುದು. ವಿಜಯಪುರದ ಬಬಲೇಶ್ವರದ ಡಾ.ಮಹಾದೇವ ಶಿವಾಚಾರ್ಯರು ಒಕ್ಕೂಟದ ಅಧ್ಯಕ್ಷರಾಗಿದ್ದಾರೆ' ಎಂದರು.

ಇಂದು ಚಿತ್ರಮಂದಿರಗಳಲ್ಲಿ ಪುನೀತ್‌ಗೆ ಗೌರವ

ಬೆಂಗಳೂರು: ಅಗಲಿದ ನಟ ಪುನೀತ್ ರಾಜ್‌ಕುಮಾರ್ ಅವರಿಗೆ ನ. 7ರಂದು ಎಲ್ಲ ಚಿತ್ರಮಂದಿರಗಳಲ್ಲಿ ಗೌರವ ನಮನ ಹಮ್ಮಿಕೊಳ್ಳಲಾಗಿದೆ.

ಅಂದು ಸಂಜೆ 6ಕ್ಕೆ ಎಲ್ಲ ಚಿತ್ರಮಂದಿರಗಳಲ್ಲಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ಗೀತಾಂಜಲಿ, ಪುಷ್ಪಾಂಜಲಿ ಮತ್ತು ದೀಪಾಂಜಲಿ ಮೂಲಕ ಅವರ ಭಾವಚಿತ್ರಕ್ಕೆ ಗೌರವ ನಮನ ಸಲ್ಲಿಸಲಾಗುವುದು. ಬಳಿಕ ಮೌನ ಆಚರಣೆ ನಡೆಯಲಿದೆ ಎಂದು ಕರ್ನಾಟಕ ಚಿತ್ರ ಪ್ರದರ್ಶಕರ ಸಂಘದ ಅಧ್ಯಕ್ಷ ಕೆ.ವಿ. ಚಂದ್ರಶೇಖರ್ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಬೆಳಗಾವಿ
ನಂ.: ಕಾ.ನಿ.ಅ./ಗ್ರಾ.ಕು.ನೀ. & ನೈ./ಬೆಳಗಾವಿ/ಪಿಬಿ-2/ಕು.ನೀ.ಸ.ಯೋ./ಕೆ.ಡಬ್ಲ್ಯು-3/ಟೆಂಡರ್-23/2021-22/1598 ದಿನಾಂಕ : 02/11/2021
ಪ್ರೊಕ್ಯೂರಮೆಂಟ್ ರೀತ್ಯಾ ದ್ವಿ-ಲಕೋಟೆ ಮಾದರಿಯ ಮರು ಟೆಂಡರ್ ಪ್ರಕಟಣೆ ಸಂಖ್ಯೆ : 23/2021-22
ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹಗುತ್ತಿಗೆದಾರರಿಂದ ಸನ್ 2021-22ನೇ ಸಾಲಿನ ಜಲ ಜೀವನ್ ಮಿಷನ್ ಯೋಜನೆಯಡಿ ಬೆಳಗಾವಿ ಜಿಲ್ಲೆಯಲ್ಲಿನ ಈ ಕೆಳಕಂಡ ಕಾಮಗಾರಿಗಳಿಗಾಗಿ Standard Tender Document KW-3 ರ ನಿಬಂಧನೆಗೊಳಪಟ್ಟಂತೆ ದ್ವಿ ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ-ಪ್ರೊಕ್ಯೂರಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ.
1) ಇ-ಪ್ರೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 18-11-2021 ಸಾಯಂಕಾಲ 17:30 ಘಂಟೆವರೆಗೆ
2) ಇ-ಪ್ರೊಕ್ಯೂರಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : 20-11-2021 ಸಾಯಂಕಾಲ 11:00 ಘಂಟೆ ನಂತರ 4) ಭರ್ತಿಮಾಡಿದ ಇ-ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದಿಸಿದ ನಂತರ
ಇಂಡೆಂಟ್ ನಂ. 35726, 34806, 35720, 35722, 35724, 35725, 35732, 35731, 34801, 35750, 35749
ಸೂಚನೆ : ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ e-Procurement portal www.eproc.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.
ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ. ಕು. ನೀ. & ನೈ. ವಿಭಾಗ, ಬೆಳಗಾವಿ.
DIPO/RO No: 990/2021-22

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು-560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080-25586321
ಈ-ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in.
ಸಂಖ್ಯೆ: ಕರಾಮಾಮಂ/55/ಕ/2021-22/3753 ದಿನಾಂಕ: 29/10/2021
ಟೆಂಡರ್‌ಗಾಗಿ ಆಹ್ವಾನ (ಅಲ್ಪಾವಧಿ ಟೆಂಡರ್)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ www.eproc.karnataka.gov.in ಮೂಲಕ)
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ www.eproc.karnataka.gov.in ಮೂಲಕ ಕೆಳಗಿನ ಕೆಲಸಕ್ಕೆ ಸದಸ್ಯ ಕಾರ್ಯದರ್ಶಿಯವರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಕೆಲಸದ ಹೆಸರು: ಕೊಪ್ಪಳದಲ್ಲಿ ಪ್ರಾದೇಶಿಕ ಕಟ್ಟಡದ ನಿರ್ಮಾಣಕ್ಕಾಗಿ ವಾಸ್ತು ಶಿಲ್ಪ ಮತ್ತು ಸಲಹೆ ಸೇವೆಗಾಗಿ ಟೆಂಡರ್. **ಕೆಲಸದ ಅಂದಾಜು ಮೌಲ್ಯ:** ರೂ.1.50 ಕೋಟಿ.
ಹೆಚ್ಚಿನ ವಿವರಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://www.eproc.karnataka.gov.in ನ್ನು ಉಲ್ಲೇಖಿಸುವುದು.
ಸಹಿ/-
ಸದಸ್ಯ ಕಾರ್ಯದರ್ಶಿ
ವಾ.ಸಾ.ಸಂ.ಇ/ಬೆಂ.ನಗರ/2047/ಆಕಾರ್/2021-22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560001.
ದೂರವಾಣಿ: 080-22215601, 22211246, ಫ್ಯಾಕ್ಸ್: 080-22215602
ಸಂಖ್ಯೆ: ಡಿವೈಇಎಸ್/ತಾಂಶಾಖೆ/ಕ್ರಿಯೋ/128/2020-21 ದಿನಾಂಕ: 30-10-2021
ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಉಪ-ನಿರ್ದೇಶಕರು (ಆಡಳಿತ), ಇವರು ಈ ಕೆಳಗೆ ತಿಳಿಸಿರುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಕಾಮಗಾರಿ ವಿವರ	ಟೆಂಡರ್ ಮೊತ್ತ	ಇ.ಎಂ.ಡಿ ಮೊತ್ತ
1	ಮಂಡ್ಯ ನಗರದ ಸರ್. ಎಂ. ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣವನ್ನು ಉನ್ನತೀಕರಿಸುವ ಕಾಮಗಾರಿ ಕುರಿತು.	ರೂ. 997.00 ಲಕ್ಷಗಳು	ರೂ. 14,95,500/-

ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್: http://eproc.karnataka.gov.in ರಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
1) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 29-11-2021ರಂದು ಸಮಯ: 16.00 ಗಂಟೆಯವರೆಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30-11-2021ರಂದು ಸಮಯ: 16.30 ಗಂಟೆಗೆ. 3) ಹಣಕಾಸು ಬಿಡ್ ತೆರೆಯುವ ದಿನಾಂಕ: ನಂತರ ತಿಳಿಸಲಾಗುವುದು.
ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.
ಸಹಿ/- ಉಪ ನಿರ್ದೇಶಕರು (ಆಡಳಿತ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ವಾಸಾಸಂಇ/ಬೆಂ.ನ/2097/2021-22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.
ಸಂ:ಕಾ.ಸಾ.ಚಿ/ಪಿ.ಬಿ-1&2/ಟೆಂಡರ್ ಪ್ರಕಟಣೆ-ಐ.ಎಫ್.ಟಿ-11/2021-22/ ದಿನಾಂಕ: 28-10-2021
ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್-2000 ನಿಯಮದಂತೆ, ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-2,3,4 & ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಸಿ-2 ನಿಬಂಧನೆಗಳಿಗೊಳಪಟ್ಟಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ 1ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಹಾಗೂ ಅರ್ಹ ಏಜೆನ್ಸಿ/ಕನ್ಸಲ್‌ಟೆನ್ಸಿ ಆಹ್ವಾನಿಸಲಾಗಿದೆ.
ಕಾಮಗಾರಿ ಹೆಸರು:- ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು ಸಲಗನಹಳ್ಳಿ ಗ್ರಾಮದ ಜವಳಗಟ್ಟಿ ಶಿವಣ್ಣ ಬಿನ್ ಹನುಮಂತಪ್ಪ ಮತ್ತು ಇತರರು ರಿ.ಸ.ನಂ.32(31,33,23)ರ ಹತ್ತಿರ ತಡೆಗೋಡೆ ನಿರ್ಮಾಣ ಕಾಮಗಾರಿ. ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ:- 8870272.18 ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿರುವ ಕಾಲಾವಧಿ (ಮಳೆಗಾಲ ಸೇರಿ):- 06 ತಿಂಗಳು.
ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿನಾಂಕ: 30-10-2021 ರಿಂದ ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 06-11-2021 ಸಾಯಂಕಾಲ 5.30 ರವರೆಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 08-11-2021 ರ ಸಾಯಂಕಾಲ 4.00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 09-11-2021 ಸಾಯಂಕಾಲ 04-30 ಗಂಟೆಯ ನಂತರ (ಸಾಧ್ಯವಾದಲ್ಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 12-11-2020 ಬೆಳಗ್ಗೆ 10-30 ಗಂಟೆಯ ನಂತರ(ಸಾಧ್ಯವಾದಲ್ಲಿ) ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194-231811) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080-25501216/080-25501227 ರಿಂದ ಪಡೆಯಬಹುದು.
ಸಹಿ/-ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.
DIPR/CTA/MCA/575/2021-22

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಾರ್ಯಾಲಯ,
ಜಲಮಂಡಲಿ ಆವರಣ, ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ-580001.
ದೂರವಾಣಿ :0836-2447090 ಫ್ಯಾಕ್ಸ್ : 0836-2446890
ಸಂ.ಕಜಮ/ಮುಅ(ಧಾ)/ಆಶ್ರೀಕಾಪಾಅ(ಬೆ)/ಉಮುಅ-1/ತಾಸ-1/ಸಅ-1/ಟೆಂಡರ್:2021-22/1150 ದಿನಾಂಕ: 06-11-2021
ತಿದ್ದುಪಡಿ
ಕಾಮಗಾರಿಯ ಹೆಸರು: 1) ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಕಾರ್ಯಕ್ರಮದಡಿಯಲ್ಲಿ ಸವದತ್ತಿ ಪಟ್ಟಣಕ್ಕೆ ಅಲ್ಪಾವಧಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಹಾಗೂ ಒಂದು ವರ್ಷದ ದೋಷ ಮತ್ತು ಹೊಣೆಗಾರಿಕೆ ಸೇರಿ 5 ವರ್ಷಗಳಿಗೆ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ,.
2) ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಕಾರ್ಯಕ್ರಮದಡಿಯಲ್ಲಿ ಎಂ.ಕೆ ಹುಬ್ಬಳ್ಳಿ ಪಟ್ಟಣಕ್ಕೆ ಅಲ್ಪಾವಧಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಹಾಗೂ ಒಂದು ವರ್ಷದ ದೋಷ ಮತ್ತು ಹೊಣೆಗಾರಿಕೆ ಸೇರಿ 5 ವರ್ಷಗಳಿಗೆ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ.
3) ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಕಾರ್ಯಕ್ರಮದಡಿಯಲ್ಲಿ ಮುನವಳ್ಳಿ ಪಟ್ಟಣಕ್ಕೆ ಅಲ್ಪಾವಧಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಹಾಗೂ ಒಂದು ವರ್ಷದ ದೋಷ ಮತ್ತು ಹೊಣೆಗಾರಿಕೆ ಸೇರಿ 5 ವರ್ಷಗಳಿಗೆ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ.
4) ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಕಾರ್ಯಕ್ರಮದಡಿಯಲ್ಲಿ ಖಾನಾಪುರ ಪಟ್ಟಣಕ್ಕೆ ಅಲ್ಪಾವಧಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಹಾಗೂ ಒಂದು ವರ್ಷದ ದೋಷ ಮತ್ತು ಹೊಣೆಗಾರಿಕೆ ಸೇರಿ 5 ವರ್ಷಗಳಿಗೆ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ.
ಉಲ್ಲೇಖ: 1) ಸಂ.ಕಜಮ/ಮುಅ(ಧಾ)/ಆಶ್ರೀಕಾಪಾಅ(ಬೆ)/ಉಮುಅ-1/ತಾಸ-1/ಸಅ-1/ಟೆಂಡರ್:2021-22/1072 ದಿನಾಂಕ: 22-10-2021
2) ಸಂ.ಕಜಮ/ಮುಅ(ಧಾ)/ಆಶ್ರೀಕಾಪಾಅ(ಬೆ)/ಉಮುಅ-1/ತಾಸ-1/ಸಅ-1/ಟೆಂಡರ್:2021-22/1073 ದಿನಾಂಕ:22-10-2021
3) ಸಂ.ಕಜಮ/ಮುಅ(ಧಾ)/ಆಶ್ರೀಕಾಪಾಅ(ಬೆ)/ಉಮುಅ-1/ತಾಸ-1/ಸಅ-1/ಟೆಂಡರ್:2021-22/1074 ದಿನಾಂಕ: 22-10-2021
4) ಸಂ.ಕಜಮ/ಮುಅ(ಧಾ)/ಆಶ್ರೀಕಾಪಾಅ(ಬೆ)/ಉಮುಅ-1/ತಾಸ-1/ಸಅ-1/ಟೆಂಡರ್:2021-22/1075 ದಿನಾಂಕ: 22-10-2021
ದಿನಾಂಕ: 26.10.2021 ರಂದು "ಪ್ರಜಾವಾಣಿ" (ಕರ್ನಾಟಕ ಆವೃತ್ತಿ) ಮತ್ತು "ಟೈಮ್ಸ್ ಆಫ್ ಇಂಡಿಯಾ" (ಕರ್ನಾಟಕ ಆವೃತ್ತಿ)ಗಳಲ್ಲಿ ಪ್ರಕಟಿಸಲಾದ ಉಲ್ಲೇಖಿತ ಟೆಂಡರ್ ಅಧಿಸೂಚನೆಗಳತ್ತ ಗಮನ ಸೆಳೆಯಲಾಗಿದೆ.
ಟೆಂಡರ್ ದಿನಾಂಕಗಳು:1) ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ:15.11.2021 17.30 ಗಂಟೆಯವರೆಗೆ
2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ:17.11.2021 11.00 ಗಂಟೆಯ ನಂತರ
ಮೇಲಿನ ವಿವರಗಳನ್ನು ಹೊರತು ಪಡಿಸಿ ಉಳಿದ ಮಾಹಿತಿಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ
ಸಹಿ/-(ಕೆ. ವಿ. ಶ್ರೀಕೇಶವ)
ಮುಖ್ಯ ಅಭಿಯಂತರರು
ಕ.ನ.ನೀ.ಸ. ಮತ್ತು ಒ.ಚ. ಮಂಡಳಿ, ಧಾರವಾಡ
ವಾ.ಸಾ.ಇ./ಧಾರವಾಡ/675/2021-22ದೇಶಪಾಂಡೆಪಬ್ಲಿಸಿಟಿ

ಮಹಾನಗರ ಪಾಲಿಕೆ, ಕಲಬುರಗಿ
ದೂರವಾಣಿ : 08472/ 278675 ಫ್ಯಾಕ್ಸ : 08472 / 260776
ಇ ಮೇಲ್ : itstaff_ulb_gulbarga@yahoo.com
No: KMP/TS-01/CF/ABC & RS/01/2020-21 ದಿನಾಂಕ: 04.11.2021
:: ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ::
1) ಕಾಮಗಾರಿಯ ವಿವರ : 02 Service Tenders as below. 1. Implementing Animal birth control and ARV in stray dogs and euthanizing the sick, rabid and rogue dogs in a humane manner as per Animal Birth Control (dogs) rules 2001 (Call-05), 2. Rapid Survey in SUH under DAY-NULM Programme Kalaburagi Mahanagara Palike. (All 03 Zones) (Call-02), 2) ಲೆಕ್ಕ ಶೀರ್ಷಿಕೆ : 2020-21ನೇ ಸಾಲಿನ ಪಾಲಿಕೆಯ ಅನುದಾನ ಹಾಗು ಡೇ-ನಲ್ಮ್ ಯೋಜನೆ. 3) ಗುತ್ತಿಗೆದಾರರ/ಏಜೇನ್ಸಿ ಅರ್ಹತೆ : As per Tender Document, 4) ಟೆಂಡರಗಾಗಿ ಸಲ್ಲಿಸಲು ಅಂತಿಮ ದಿನಾಂಕ : **15.11.2021 ಸಾಯಂಕಾಲ 4:30 ಗಂಟೆಯವರೆಗೆ,** 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ **16.11.2021 ಸಾಯಂಕಾಲ 4:35 ಗಂಟೆಗೆ,** 6) ಆರ್ಥಿಕ ಬಿಡ್ ತೆರೆಯುವ ದಿನಾಂಕ : **17.11.2021 ಬೆಳಿಗ್ಗೆ 11:30 ಗಂಟೆಗೆ,** 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ. 8) ಅಂತರಜಾಲ ತಾಣದ ವಿಳಾಸ ; www.eproc.karnataka.gov.in
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/758/ಎಂ.ಸಿ&ಎ/2021-22

Kurl-on
KURLON LIMITED
CIN: U17214KA1962PLC001443
Regd. Office: N-301, III Floor, North Block, Front Wing, Manipal Centre, 47 Dickenson Road Bangalore - 560042
Email id: secretary@manipal.com Phone No.: +91 80 4031 3131
NOTICE OF THE 59TH ANNUAL GENERAL MEETING TO BE HELD THROUGH VIDEO CONFERENCING / OTHER AUDIO-VISUAL MEANS
NOTICE is hereby given that the 59th Annual General Meeting ("AGM") of Kurlon Enterprise Limited ("the Company") will be held on Monday, the 29th day of November, 2021 at 11:30 A.M. through Video Conferencing ("VC")/Other Audio-Visual Means ("OAVM") to transact the Ordinary and Special Businesses as set out in the Notice of calling 59th AGM, in compliance with applicable provisions of Companies Act, 2013 and Rules framed thereunder and the MCA Circulars dated January 13, 2021 read together with circulars dated April 8, 2020, April 13, 2020 and May 5, 2020 (collectively referred to as "MCA Circulars"), without the physical presence of the members at the venue. The Registered office of the Company shall be deemed venue of the meeting.
In compliance with the applicable Circulars, the Notice of the 59th AGM and the Annual Report of the Company including financial statements for the financial year 2020-21 along with Board's Report, Auditor's Report and other documents required to be attached thereto, have been sent on November 06, 2021 through electronic mode to the members of the Company whose email addresses are registered with the Company /Depository Participant(s). The requirements of sending physical copies of the Notice of 59th AGM and Annual Report to the Members have been dispensed vide said MCA Circulars.
Instructions for remote e-voting and e-voting during the AGM:
Pursuant to the provisions of Section 108 of the Companies Act, 2013 read with Rule 20 of the Companies (Management and Administration) Rules, 2014 (as amended), Secretarial Standard No. 2 on General Meetings and the Applicable Circulars, the Company is providing facility of remote e-voting/e-voting to its Members to cast their votes electronically in respect of the business to be transacted at the AGM as set forth in the 59th notice of AGM provided by National Securities Depository Limited (NSDL) for facilitating voting through electronic means, as the authorized agency. Members holding shares as on the cut-off date of 22nd November, 2021, may cast their vote electronically. A person whose name is recorded in the Register of Members or in the Register of beneficial owners maintained by the depositories as on the cut-off date i.e. 22nd November, 2021 only shall be entitled to avail the facility of remote e-voting as well as voting at the AGM. The remote e-voting period commences on Thursday, the November 25, 2021 (9:00 A.M. IST) and ends on Sunday, the November 28, 2021 (5:00 P.M. IST). The remote e-voting module shall not be allowed beyond 5:00 P.M. on Sunday, the November 28, 2021. The remote e-voting module shall be disabled by NSDL for voting thereafter.
The manner of e-voting for shareholders holding shares in dematerialized mode, physical mode if any and for shareholders who have not registered their email addresses has been provided in the Notice. Login details for remote e-voting/ e-voting at AGM has been made available to the members on their registered email address. A facility of joining the AGM through VC/OAVM is available through NSDL e-voting portal at www.evoting.nsdl.com. Members are requested to refer to the 59th AGM Notice for details and procedure for login during the AGM. Once the vote on a resolution is cast by the shareholder, the shareholder shall not be allowed to change it subsequently. In case a person has become the Member of the Company after the dispatch of Notice but on or before the cut-off date i.e. 22.11.2021, he/she may obtain login id and password by sending a request over at evoting@nsdl.co. or secretary@manipal.com in mentioning demat account number/ folio number, PAN, name and registered address. Such Members may cast their votes using the e-voting instructions, in the manner specified by the Company in the Notice of 59th AGM. However, members who are already registered with NSDL for e-voting can use their existing User id and Password for casting their vote through remote e-voting/ e-voting at the AGM.
The facility of e-voting shall be made available at the AGM and members attending the AGM, who have not already cast their vote, may cast their vote electronically on business(es) set forth in Notice. The members who have cast their vote by remote e-voting may attend the AGM but shall not be entitled to cast their vote(s) again at the AGM. Members holding shares in physical form, whose email address is not registered with the Company or with their respective Depository Participant/s, may register their email address by sending a scan copy of a signed request letter mentioning name, folio number, complete address, scanned copy of self- attested PAN Card and any document (such as Driving Licence, Passport, Bank Statement, AADHAR) in support of the address of the Members registered with the Company, by sending an email at secretary@manipal.com and /or send letter to the Company's RTA. Members holding shares in demat form, can update their email address with their respective Depository Participant/s. The Register of Members and Share Transfer Books of the Company will remain closed from November 22, 2021 to November 29, 2021 (both days inclusive) for the purpose of AGM.
The Board of Directors of the Company has appointed Mr. Deepak Sadhu, Practicing Company Secretary, as Scrutinizer to scrutinize the e-voting procedure in a fair and transparent manner. The results shall be declared not later than forty-eight hours from conclusion of the meeting.
For and on behalf of the Board
For **KURLON LIMITED**
Sd/-
Neha Lakhera
Company Secretary
Date: 06.11.2021
Place: Bangalore

ರೈತ ಮುಖಂಡರ ಅಭಿಪ್ರಾಯ

ಮೂರೂ ಕಾಯ್ದೆಗಳನ್ನು ಪರಾಮರ್ಶಿಸಿ

ಕೇವಲ ಎಪಿಎಂಸಿ ಕಾಯ್ದೆ ತಿದ್ದುಪಡಿಯ ಹಾನಿಗಳೇನು ಎಂದು ಮಾತ್ರ ನೋಡಿದರೆ ಸತ್ಯ ಸಷ್ಟವಾಗಿ ಕಾಣುವುದಿಲ್ಲ. ಇದರೊಂದಿಗೆ ಖರಾಬು ಗುತ್ತಿಗೆ ವ್ಯವಸಾಯ ಪದ್ಧತಿ ಕಾಯ್ದೆ ಹಾಗೂ ಅಗತ್ಯ ವಸ್ತುಗಳ ನಿಯಂತ್ರಣ ಕಾಯ್ದೆ ತಿದ್ದುಪಡಿಯನ್ನೂ ಸೇರಿಸಿ ಒಟ್ಟಿಗೆ ಪರಾಮರ್ಶಿಸಬೇಕು.

ಗುತ್ತಿಗೆ ವ್ಯವಸಾಯ ಪದ್ಧತಿಯಲ್ಲಿ ಸಣ್ಣಸಣ್ಣ ರೈತರ ಜಮೀನನ್ನು ದೊಡ್ಡ ಕುಳಗಳು ಗುತ್ತಿಗೆ ಪಡೆಯುತ್ತವೆ. ದೇಶದಲ್ಲಿ ಇದು ಈಗಾಗಲೇ ಅನಧಿಕೃತವಾಗಿ ನಡೆದೇ ಇತ್ತು. ಈಗ ಅದಕ್ಕೆ ಕಾನೂನು ರಕ್ಷಣೆ ನೀಡಿದಂತಾಗಿದೆ. ಅಗತ್ಯ ವಸ್ತುಗಳ ನಿಯಂತ್ರಣ ಕಾಯ್ದೆಯು, ಅನಧಿಕೃತ ದಾಸ್ತಾನು ಹಾಗೂ ಕೃತಕ ಅಭಾವ ಸೃಷ್ಟಿಯನ್ನು ನಿಯಂತ್ರಿಸುತ್ತಿತ್ತು. ಆದರೆ, ಈ ಕಾಯ್ದೆಯನ್ನೂ ತಿದ್ದುಪಡಿ ಮಾಡಿ ಯಾರು, ಎಷ್ಟು ಬೇಕಾದರೂ ಆಹಾರ ದಾಸ್ತಾನು ಮಾಡಿಕೊಳ್ಳಲು ಅವಕಾಶ ನೀಡಿದ್ದಾರೆ. ಹಾಗಿದ್ದರೆ, ಎಪಿಎಂಸಿ ಏಕೆ ಬೇಕು ಎಂಬ ಪ್ರಶ್ನೆ ಹುಟ್ಟುತ್ತದೆ. ಇನ್ನೊಂದೆಡೆ, ಕೃಷಿಯಲ್ಲಿ ನೇರ ಹೂಡಿಕೆಗೆ ನಮ್ಮ ಪ್ರಧಾನಿ ಆಹ್ವಾನ ನೀಡಿದ್ದಾರೆ. ಮುಂದೊಂದು ದಿನ ಎನ್‌ಆರ್‌ಐಗಳೇ ಈ ದೇಶದ ಕೃಷಿ ಹಾಗೂ ಮಾರುಕಟ್ಟೆಯನ್ನು ನಿಯಂತ್ರಿಸುತ್ತಾರೆ. ಆಹಾರ ಭದ್ರತೆ, ಉದ್ಯೋಗ ಭದ್ರತೆ ಎರಡೂ ಚಕ್ರಗಳು ಮುರಿದುಬೀಳುತ್ತವೆ.

ಕೆ.ಟಿ.ಗಂಗಾಧರ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ವರಿಷ್ಠ

ಕತ್ತು ಹಿಸುಕಿದರೆ ಉಳಿಯುವುದುಂಟೇ?

ರಾಜ್ಯದಲ್ಲಿ 173 ಮುಖ್ಯ ಎಪಿಎಂಸಿಗಳು ಕ್ರಿಯಾಶೀಲವಾಗಿದ್ದವು. ಈ ವರ್ಷ 88 ಮಾರುಕಟ್ಟೆಗಳು ವಹಿವಾಟು ನಿಲ್ಲಿಸಿವೆ. ಉಳಿದೆಡೆ ಸಿಬ್ಬಂದಿ ಸಂಬಳ ಕೊಡುವುದಕ್ಕೆ, ವಿದ್ಯುತ್ ಶುಲ್ಕ ಭರಿಸುವುದಕ್ಕೂ ಪರದಾಡುವಂತಾಗಿದೆ. ಕಾಯ್ದೆ ತಿದ್ದುಪಡಿಯ ಪರಿಣಾಮ ಒಂದೇ ವರ್ಷದಲ್ಲಿ ಕಣ್ಣಿಗೆ ಕಾಣುತ್ತಿದೆ. ಎಪಿಎಂಸಿಗಳು ರೈತನ ಕತ್ತು ಇದ್ದ ಹಾಗೆ. ಸರ್ಕಾರ ಕತ್ತು ಹಿಸುಕುತ್ತಿದೆ. ರೈತ ಉಳಿಯುವುದುಂಟೇ?

ಎಪಿಎಂಸಿಯಲ್ಲಿ ದರ ಕುಸಿದರೆ ಸರ್ಕಾರದ ಮೂಗು ಹಿಡಿದು ಕೇಳಬಹುದು. ಆದರೆ, ಖಾಸಗಿ ಮಾರುಕಟ್ಟೆಯಲ್ಲಿ ಯಾರನ್ನು ಯಾರೂ ಕೇಳುವಂತಿಲ್ಲ. ಕಾನೂನು ಚೌಕಟ್ಟೇ ಇಲ್ಲದ ವ್ಯಾಪಾರದಿಂದ ಸರ್ಕಾರಿ ಮಾರುಕಟ್ಟೆಗಳು ಮುಚ್ಚುತ್ತವೆ. ಹಿಂದೆ ಎಪಿಎಂಸಿಗಳೇ ಸರ್ಕಾರಕ್ಕೆ ಸಾಲ ನೀಡುವಷ್ಟು ಬಲಿಷ್ಠವಾಗಿದ್ದವು. ಈಗ ಸರ್ಕಾರ ಅವುಗಳ ಅಸ್ತಿತ್ವವನ್ನೇ ನಿರ್ನಾಮ ಮಾಡಹೊರಟಿದೆ.

ಬಡಗಲಪುರ ನಾಗೇಂದ್ರ
ಅಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘ

ಹಾಳು ಮಾಡುವುದರಲ್ಲಿ ಬಿಜೆಪಿ ನಂ.1

ಈಗಾಗಲೇ ಶೇ 80ರಷ್ಟು ಮಾರುಕಟ್ಟೆಗಳು ಬಂದ್ ಆಗಿವೆ. ವಹಿವಾಟು ಸ್ಥಗಿತಗೊಂಡಿದೆ. ಕಾಯ್ದೆ ತಿದ್ದುಪಡಿ ಮಾಡಿ ವರ್ಷದಲ್ಲಿಯೇ ಎಪಿಎಂಸಿಗಳಿಗೆ ಇಂಥ ದುಃಸ್ಥಿತಿ ಬಂದಿದೆ. ಇದು ಯಡಿಯೂರಪ್ಪ ಮತ್ತು ಬೊಮ್ಮಾಯಿಯವರು ರೈತರಿಗೆ ಮಾಡಿದ ದ್ರೋಹದ ಬಹುದೊಡ್ಡ ಕೊಡುಗೆ.

ಎಪಿಎಂಸಿಗಳನ್ನು ಕಟ್ಟಿದವರು ರೈತರು. ಅಲ್ಲಿನ ಆಡಳಿತ ಮಂಡಳಿ ರೈತರದ್ದು. ವ್ಯವಸ್ಥೆಯನ್ನು ಹಾಳು ಮಾಡುವುದರಲ್ಲಿ ಬಿಜೆಪಿಯವರು ನಂ. 1. ಅವರು ಒಂದು ಎಪಿಎಂಸಿ ಕಟ್ಟಿ ತೋರಿಸಲಿ. ಅವರಿಗೆ ಕಟ್ಟುವುದು ಗೊತ್ತೇ ಇಲ್ಲ. ಒಂದು ಎಪಿಎಂಸಿ ಬಂದ್ ಆಗುವುದರಿಂದ ಸಹಸ್ರಾರು ಹಮಾಲರು, ಗುಮಾಸ್ತರು, ವ್ಯಾಪಾರಸ್ಥರು ದಿವಾಳಿ ಆಗುತ್ತಾರೆ. ಹೀಗೆ ಕೋಟಿಗಟ್ಟಲೇ ಜನರನ್ನು ದಿವಾಳಿ ಮಾಡಿ, ಹೊಟ್ಟೆಗೆ ಬಡಿದು ಒಬ್ಬ ಅಂಬಾನಿಗೆ ಅನುಕೂಲ ಮಾಡುವುದು ಯಾವ ನ್ಯಾಯ?

ಕೋಡಿಹಳ್ಳಿ ಚಂದ್ರಶೇಖರ
ಅಧ್ಯಕ್ಷ, ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಸಂಘಟನೆ

ಆದಾಯಕ್ಕಿಂತ ವೆಚ್ಚ ಹೆಚ್ಚು

ಕಲ್ಯಾಣ ಕರ್ನಾಟಕ ಭಾಗದಲ್ಲಿ 300ಕ್ಕೂ ಹೆಚ್ಚು ದಾಲ್‌ಮಿಲ್ (ತೊಗರಿ ಖರೀದಿಸಿ ಬೇಳೆ ಮಾಡುವ ಮಿಲ್)ಗಳಿವೆ. ಮುಂಚೆ ತೊಗರಿ ಖರೀದಿಗೆ ಎಲ್ಲರೂ ಎಪಿಎಂಸಿಗೇ ಬರಬೇಕಾಗಿತ್ತು. ಪ್ರತಿ ವರ್ಷ ಸಂಗ್ರಹವಾಗುತ್ತಿದ್ದ ಸೆಸ್ ₹ 8.30 ಕೋಟಿ ದಾಟುತ್ತಿತ್ತು.ಆದರೆ, ಈಗ ₹ 3.20 ಕೋಟಿಗೆ ಕುಸಿಯುತ್ತಿದೆ. ಇದರಿಂದ ಮಾರುಕಟ್ಟೆ ಪ್ರಾಂಗಣದಲ್ಲಿ ಆದಾಯಕ್ಕಿಂತ ವೆಚ್ಚವೇ ಹೆಚ್ಚಾಗುತ್ತಿದೆ

ಗುರುಬಸಪ್ಪ ಕಣಕಿ, ಅಧ್ಯಕ್ಷ, ಎಪಿಎಂಸಿ ಕಲಬುರಗಿ

ಆನ್‌ಲೈನ್‌ನತ್ತ ಖಾಸಗಿ ಮಾರುಕಟ್ಟೆ ಒಲವು

• ಜಿ.ಬಿ.ನಾಗರಾಜ್

ಚಿತ್ರದುರ್ಗ: ಖಾಸಗಿ ಕೃಷಿ ಮಾರುಕಟ್ಟೆ ಸ್ಥಾಪನೆಗೆ ಮುಕ್ತ ಅವಕಾಶ ದೊರೆತರೂ ರಾಜ್ಯದಲ್ಲಿ ಇಂತಹ ಪ್ರಯತ್ನಗಳು ಪೂರ್ಣ ಪ್ರಮಾಣದಲ್ಲಿ ನಡೆದಿಲ್ಲ. ಆದರೆ, ಸ್ಥಳೀಯ ವ್ಯಾಪಾರಿಗಳು, ರೈತರ ಸಂಸ್ಥೆಗಳನ್ನು ಬಳಸಿ ಸಿಂಧನೂರು, ಕಲಬುರಗಿಯಂತಹ ಕಡೆ ಖಾಸಗಿ ಕಂಪನಿಗಳು ಖರೀದಿ ಆರಂಭಿಸಿವೆ. ಆನ್‌ಲೈನ್ ವಹಿವಾಟಿಗೂ ಒತ್ತು ನೀಡಿವೆ.

ಖಾಸಗಿ ಮಾರುಕಟ್ಟೆ ನಿರ್ಮಾಣಕ್ಕೆ ಸಿಕ್ಕ ಮುಕ್ತ ಅವಕಾಶವು ಕೃಷಿ ಸಂಬಂಧಿತ ಉದ್ಯಮದಲ್ಲಿ ತೊಡಗಿಸಿಕೊಂಡವರನ್ನು ಆಕರ್ಷಿಸಿದೆ. ಲಾಭ–ನಷ್ಟದ ಲೆಕ್ಕಾಚಾರದಲ್ಲಿ ತೊಡಗಿಕೊಂಡಿರುವ ಅವರು, ಮಾರುಕಟ್ಟೆ ಕಾರ್ಯಾರಂಭಿಸಲು ಕಾಯ್ದು ನೋಡುವ ತಂತ್ರ ಅನುಸರಿಸುತ್ತಿದ್ದಾರೆ.

ಹುಬ್ಬಳ್ಳಿಯ ಎಪಿಎಂಸಿಯಲ್ಲಿ ಶೇಂಗಾ ವಹಿವಾಟಿನ ದೃಶ್ಯ

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ‘ಅಕ್ಷಯ ಫುಡ್ ಪಾರ್ಕ್’ 2020ರ ಅಕ್ಟೋಬರ್‌ನಲ್ಲೇ ಎಪಿಎಂಸಿ ಸ್ಥಾಪನೆಗೆ ಪರವಾನಗಿ ಪಡೆದಿದೆ. ಫುಡ್ ಪಾರ್ಕ್ ನಿರ್ಮಿಸುವ ಉದ್ದೇಶದಿಂದ ಪಡೆದ 106 ಎಕರೆ ಭೂಮಿಯಲ್ಲಿ ಖಾಸಗಿ ಮಾರುಕಟ್ಟೆ ನಿರ್ಮಾಣಕ್ಕೆ ಸರ್ಕಾರ ಅನುಮತಿ ನೀಡಿದೆ.

ಎಪಿಎಂಸಿ ಮಾದರಿಯ ಮುಕ್ತ ಟೆಂಡರ್ ವ್ಯವಸ್ಥೆ ಇಲ್ಲಿಲ್ಲ. ಅಂತರ್ಜಾಲ ಕೇಂದ್ರಿತ ವಹಿವಾಟಿಗೆ ಒತ್ತು ನೀಡಲಾಗುತ್ತಿದೆ. ರಾಷ್ಟ್ರೀಯ ಕೃಷಿ ಮಾರುಕಟ್ಟೆ (ಇ–ನಾಮ್) ಮಾದರಿಯಲ್ಲಿ ಆ್ಯಪ್ ಅಭಿವೃದ್ಧಿಪಡಿಸುವ ಪ್ರಯತ್ನ ನಡೆಯುತ್ತಿದೆ. ಕೋಲ್ಡ್ ಸ್ಟೋರೇಜ್‌ನಲ್ಲಿ ದಾಸ್ತಾನು ಮಾಡಿದ ಹಣ್ಣು ಹಾಗೂ ಧಾನ್ಯಗಳನ್ನು ಬೇಡಿಕೆ ಇರುವ ಭಾಗಕ್ಕೆ ರವಾನೆ ಮಾಡಲಾಗುತ್ತದೆ. ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡು ದಾಸ್ತಾನು ಇಟ್ಟ ರೈತರಿಗೆ ಮಾತ್ರ ಇದರ ಪ್ರತಿಫಲ ಸಿಗಲಿದೆ.

1,250 ಟನ್ ಸಾಮರ್ಥ್ಯದ ಕೋಲ್ಡ್ ಸ್ಟೋರೇಜ್ ನಿರ್ಮಾಣವಾಗಿದೆ. ಪ್ರತಿ ಚೇಂಬರ್‌ನಲ್ಲಿ 150 ಟನ್ ಆಹಾರ ಧಾನ್ಯ ದಾಸ್ತಾನು ಇಡಬಹುದಾಗಿದೆ. ಅನೇಕ ರೈತರು ಹಣ್ಣು, ಧಾನ್ಯಗಳನ್ನು ಇಲ್ಲಿ ಇಡುತ್ತಿದ್ದಾರೆ. ಧಾನ್ಯಗಳ ಸ್ವಚ್ಛತೆ, ಗ್ರೇಡಿಂಗ್ ಹಾಗೂ ಪ್ಯಾಕಿಂಗ್ ಸೇವೆ ಪಡೆಯುತ್ತಿದ್ದಾರೆ. ಕಾಶ್ಮೀರದ ಸೇಬು ಕೂಡ ಸಂಗ್ರಹಿಸಿ ಇಡಲಾಗುತ್ತಿದೆ.

ಚಳ್ಳಕೆರೆ ತಾಲ್ಲೂಕಿನ ಚೆನ್ನಮ್ಮಹಳ್ಳಿ ಸಮೀಪ, ಟೊಮೆಟೊಗೆ ಖಾಸಗಿ ಮಾರುಕಟ್ಟೆಯೊಂದು ಜುಲೈನಲ್ಲಿ ಸ್ಥಾಪನೆಯಾಗಿದೆ. ಅಂದಾಜು ಹತ್ತು ಎಕರೆ ಪ್ರದೇಶದಲ್ಲಿರುವ ಮಾರುಕಟ್ಟೆಯಲ್ಲಿ ಎಪಿಎಂಸಿ ಮಾದರಿಯಲ್ಲಿ ಬಹಿರಂಗ ಹರಾಜು ನಡೆಯುತ್ತದೆ. ಟೊಮೆಟೊ ಖರೀದಿಸಲು ಉತ್ತರ ಭಾರತದ ವಿವಿಧ ರಾಜ್ಯಗಳ ವ್ಯಾಪಾರಸ್ಥರು ಇಲ್ಲಿಗೆ ಬರುತ್ತಿದ್ದಾರೆ.

ರಾಮನಗರದಲ್ಲಿ ಖಾಸಗಿ ಮಾವು ಮಾರಾಟ ಮಂಡಿ ಕಾರ್ಯನಿರ್ವಹಿಸುತ್ತಿದೆ. ಮಾವಿನ ಕೊಯ್ಲು ಅವಧಿಯಲ್ಲಿ ಉತ್ತಮ ವಹಿವಾಟು ನಡೆಯುತ್ತಿದೆ. ಮೂರು ವರ್ಷಗಳಿಂದ ಈ ಖಾಸಗಿ ಮಾರುಕಟ್ಟೆ ಕಾರ್ಯನಿರ್ವಹಿಸುತ್ತಿದ್ದು, ಹೊರ ಜಿಲ್ಲೆಗಳಿಂದಲೂ ಇಲ್ಲಿಗೆ ಮಾವು ಬರುತ್ತಿದೆ. ಏಪ್ರಿಲ್‌ನಿಂದ ಆರಂಭವಾಗಿ ಜೂನ್‌ವರೆಗೆ ಮಾತ್ರ ಈ ಮಾರುಕಟ್ಟೆ ತೆರೆದಿರುತ್ತದೆ.

ವರ್ಷ	ಆವಕ(ಲಕ್ಷ ಕ್ವಿಂಟಲ್‌ಗಳಲ್ಲಿ)	ಆದಾಯ (ಕೋಟಿಗಳಲ್ಲಿ)
ಬೆಳಗಾವಿ		
2019–20	23.30	7.31
2020–21	18.58	3.01
2021–22	5.23	1.14
(ಸೆಪ್ಟೆಂಬರ್ ಅಂತ್ಯದವರೆಗೆ)		
ಬ್ಯಾಡಗಿ ಎಪಿಎಂಸಿ		
2019–20	8.42	18.92
2020–21	11.23	12.07
2021–22	3.45	3.02
ಬೈಲಹೊಂಗಲ		
2019–20	4.43	2.52
2020–21	4.55	1.31
2021–22	0.69	0.16
(ಸೆಪ್ಟೆಂಬರ್ ಅಂತ್ಯದವರೆಗೆ)		
ದಾವಣಗೆರೆ		
2019–20	40.57	15.46
2020–21	18.04	9.50
2021–22	3.57	0.19
ಕಲಬುರಗಿ		
2019–20	7.21	8.22
2020–21	8.90	5.94
2021–22	3.31	2.07

ಸೌಲಭ್ಯದ ಕೊರತೆ

ಮೈಸೂರು: ಬಹುತೇಕ ಎಲ್ಲ ಎಪಿಎಂಸಿಗಳಲ್ಲಿ ಗೋದಾಮುಗಳಿದ್ದರೂ ಕ್ಲೀನಿಂಗ್, ಗ್ರೇಡಿಂಗ್ ಹಾಗೂ ಪ್ಯಾಕಿಂಗ್ ಸೌಲಭ್ಯಗಳು ಇರುವುದು ಕೆಲವೆಡೆ ಮಾತ್ರ. ಶೈತ್ಯಾಗಾರಗಳು ಬಹುತೇಕ ಕಡೆ ಇಲ್ಲ.

ಮೈಸೂರು ಭಾಗದಲ್ಲಿ ಶೈತ್ಯಾಗಾರಕ್ಕಾಗಿ ರೈತರು ಖಾಸಗಿಯವರನ್ನೇ ಅವಲಂಬಿಸಬೇಕಿದೆ. ಖಾಸಗಿ ಹಾಗೂ ಬಹುರಾಷ್ಟ್ರೀಯ ಕಂಪನಿಗಳು ಕೃಷಿ ಮಾರುಕಟ್ಟೆಯನ್ನು ಪ್ರವೇಶಿಸಿದರೆ ಈ ಎಲ್ಲ ಸೌಲಭ್ಯಗಳು ದೊರಕುತ್ತವೆ ಎಂಬ ನಿರೀಕ್ಷೆ ರೈತರದು.

ಮೈಸೂರು ಒಂದರಲ್ಲೇ 100ಕ್ಕೂ ಅಧಿಕ ಮಂದಿ ಲೈಸೆನ್ಸ್ ಪಡೆದ ಖರೀದಿದಾರರು ಎಪಿಎಂಸಿ ಬಿಟ್ಟು ಹೊರ ನಡೆದಿದ್ದಾರೆ. ತಮ್ಮದೇ ಮಳಿಗೆ ತೆರೆದು, ತಮ್ಮ ಬಳಿಯೇ ಸದಾ ಬರುವ ರೈತರಿಂದ ಖರೀದಿಸುತ್ತಿದ್ದಾರೆ. ಎಪಿಎಂಸಿಯಲ್ಲಿನ ಸ್ಪರ್ಧಾತ್ಮಕ ಬೆಲೆ ರೈತರಿಗೆ ಇಲ್ಲಿ ಸಿಗದಿರುವುದರಿಂದ ಅವರೂ ನಷ್ಟ ಅನುಭವಿಸುವಂತಾಗಿದೆ.

ಮೈಸೂರು ಜಿಲ್ಲೆಯ ಎಪಿಎಂಸಿಗಳಲ್ಲಿ ಒಂದು ವರ್ಷದಿಂದ ಶೇ 50ರಷ್ಟು ಉದ್ಯೋಗ ಕಡಿತ ಮಾಡಲಾಗಿದೆ ಎನ್ನುತ್ತಾರೆ ಎಪಿಎಂಸಿ ಕಾರ್ಯದರ್ಶಿ ನಂಜುಂಡಸ್ವಾಮಿ. ಹಾಸನ, ಮಂಡ್ಯದಲ್ಲಿಯೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ.

ಹಿಂದಿನ ವರ್ಷಗಳಿಗೆ ಹೋಲಿಸಿದರೆ, ತುಮಕೂರು ಎಪಿಎಂಸಿಯಲ್ಲಿ ಶೇ 10ರಷ್ಟೂ ಆದಾಯ ಇಲ್ಲ. ಹೀಗಾಗಿ, ಗುತ್ತಿಗೆ ಸಿಬ್ಬಂದಿಯನ್ನು ಮುಂದುವರಿಸಿಲ್ಲ. ಆಡಳಿತ ವೆಚ್ಚ ಕಡಿತವಾಗಿದೆ.

ತುಮಕೂರು ಜಿಲ್ಲೆಯಲ್ಲಿ ಎಪಿಎಂಸಿಗಳು ನೇರವಾಗಿ ಗೋದಾಮು, ಶೀತಲ ಘಟಕಗಳನ್ನು ನಿರ್ವಹಣೆ ಮಾಡುತ್ತಿಲ್ಲ. ತಿಪಟೂರು ಎಪಿಎಂಸಿಯಲ್ಲಿ ಕೊಬ್ಬರಿ ವರ್ತಕರೇ ಗ್ರೇಡಿಂಗ್, ಪ್ಯಾಕಿಂಗ್ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಕಲ್ಯಾಣ ಕರ್ನಾಟಕದ ಭಾಗದಲ್ಲಿ ಬೀದರ್ ಹೊರತುಪಡಿಸಿ ಉಳಿದ ಕಡೆ ಶೈತ್ಯಾಗಾರಗಳು ಇಲ್ಲ. ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗದಲ್ಲಿ ಶೇ 50ರಷ್ಟು ಸಿಬ್ಬಂದಿ ಕಡಿತ ಮಾಡಲಾಗಿದೆ.

ಆದಾಯ ಕುಸಿತ

ಮಂಗಳೂರು: ಎಪಿಎಂಸಿ ಕಾಯ್ದೆ ತಿದ್ದುಪಡಿಯ ಪರಿಣಾಮ ನಿಧಾನವಾಗಿ ಗೋಚರಿಸತೊಡಗಿದೆ. ರಾಜ್ಯದ ವಿವಿಧೆಡೆ ಎಪಿಎಂಸಿ ಮೂಲಕ ಮಾರಾಟವಾಗುತ್ತಿದ್ದ ಕೃಷಿ ಉತ್ಪನ್ನಗಳು ಖಾಸಗಿ ವ್ಯಾಪಾರಸ್ಥರ ಕೈ ಸೇರುತ್ತಿವೆ.

ಕಲಬುರಗಿ ತೊಗರಿ ಮಾರುಕಟ್ಟೆಯಲ್ಲಿ, ಸರ್ಕಾರದ ಬೆಂಬಲ ಬೆಲೆಗಿಂತ ಹೆಚ್ಚಿನ ದರ ಖಾಸಗಿ ಮಾರುಕಟ್ಟೆಯಲ್ಲಿ ಸಿಗುತ್ತಿರುವುದರಿಂದ ರೈತರು ಅತ್ತ ಹೊರಳಿದ್ದಾರೆ. ಪರಿಣಾಮ, ಎಪಿಎಂಸಿಯ ಆದಾಯ ಕುಸಿದಿದೆ.

ಮಂಡ್ಯದ ಬೆಲ್ಲದ ಮಾರುಕಟ್ಟೆಯಲ್ಲೂ ಉತ್ಪನ್ನದ ದರ ಕುಸಿತವಾಗಿದೆ. ಕ್ವಿಂಟಲ್‌ಗೆ ಸರಾಸರಿ ₹ 1,800ಕ್ಕೆ ದೊರೆಯುತ್ತಿದ್ದ ಬೆಲ್ಲ ಈಗ ₹ 1,200ಕ್ಕೆ ಮಾರಾಟವಾಗುತ್ತಿದೆ. ಆನ್‌ಲೈನ್ ವಹಿವಾಟು ವ್ಯವಸ್ಥೆ ಸಮರ್ಪಕವಾಗಿ ಜಾರಿಗೊಳಿಸುವಲ್ಲಿ ವಿಫಲವಾಗಿರುವ ಎಪಿಎಂಸಿ ಮತ್ತೆ ಹಳೆಯ ಪದ್ಧತಿಗೆ ಮರಳಿದೆ.

ಅಕ್ಕಿಯ ಕಣಜವಾದ ಕೊಪ್ಪಳ ಜಿಲ್ಲೆ ಗಂಗಾವತಿಯಲ್ಲಿ ರೈತರು ವ್ಯಾಪಾರ ವಹಿವಾಟಿಗೆ ಎಪಿಎಂಸಿಯನ್ನೇ ನೆಚ್ಚಿಕೊಂಡಿದ್ದಾರೆ. ಇಲ್ಲಿನ ಅಕ್ಕಿ ವಿದೇಶಕ್ಕೆ ರಫ್ತಾಗುತ್ತದೆ. ಹೀಗಾಗಿ, ಭದ್ರತೆಯ ದೃಷ್ಟಿಯಿಂದ ಎಪಿಎಂಸಿಯಲ್ಲಿ ರೈತರು ಹೆಚ್ಚು ವಹಿವಾಟು ನಡೆಸುತ್ತಾರೆ. ಆದರೆ, ಕೊಪ್ಪಳ ಜಿಲ್ಲೆಯ ಇತರ ಕೆಲವೆಡೆ ರೈತರ ಉತ್ಪನ್ನಗಳನ್ನು ಖಾಸಗಿಯವರೇ ಹೆಚ್ಚಾಗಿ ಖರೀದಿಸುತ್ತಿದ್ದು, ಎಪಿಎಂಸಿಗಳು ನಷ್ಟ ಅನುಭವಿಸುತ್ತಿವೆ.

‘ಬ್ಯಾಡಗಿ ಮೆಣಸಿನಕಾಯಿಗೆ ಕ್ವಿಂಟಲ್ ಒಂದಕ್ಕೆ ಸರಾಸರಿ ₹15 ಸಾವಿರ ದರ ಸಿಗುತ್ತಿತ್ತು. ಮೂರ್ನಾಲ್ಕು ತಿಂಗಳಿಂದ ₹ 10 ಸಾವಿರಕ್ಕೆ ಇಳಿಕೆಯಾಗಿದೆ. ಕೋವಿಡ್ ಕಾರಣಕ್ಕೆ ರೈತರ ಬಳಿ ಉತ್ಪನ್ನಗಳ ಸಂಗ್ರಹ ಹೆಚ್ಚಿರುವುದೂ ಕಾರಣವಾಗಿರಬಹುದು. ಕಾಯ್ದೆ ತಿದ್ದುಪಡಿ ರೈತರಿಗೆ ಅಷ್ಟಾಗಿ ಅರಿವಿಗೆ ಬಂದಿಲ್ಲ’ ಎನ್ನುತ್ತಾರೆ ಬ್ಯಾಡಗಿಯ ರೈತ ತಿಮ್ಮಾರೆಡ್ಡಿ.

ಬೆಂಬಲ ಬೆಲೆಯಡಿ, ಪ್ರತಿ ಕ್ವಿಂಟಲ್‌ಗೆ ₹7,275ರಂತೆ ಹೆಸರುಕಾಳು ಖರೀದಿಸ ಲಾಗುತ್ತಿದೆ. ಒಬ್ಬರಿಂದ ಆರು ಕ್ವಿಂಟಲ್ ಮಾತ್ರ ಖರೀದಿ ಮಾಡಲಾಗುತ್ತದೆ. ಉಳಿದದ್ದನ್ನು ರೈತರು ಹೊರಗಡೆಯೇ ಮಾರಾಟ ಮಾಡಬೇಕಾಗಿದೆ. ಎಪಿಎಂಸಿ ಹಾಗೂ ಖಾಸಗಿ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ್‌ಗೆ ₹6,200ಕ್ಕೆ ಖರೀದಿ ಮಾಡುತ್ತಿದ್ದಾರೆ. ನೂತನ ಕಾಯ್ದೆಯಲ್ಲಿ ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಗೆ ಖರೀದಿಸುವಂತಿಲ್ಲ ಎನ್ನುವುದನ್ನು ಸೇರಿಸಿದರೆ ರೈತರಿಗೆ ಅನುಕೂಲವಾಗುತ್ತದೆ ಇಲ್ಲದಿದ್ದರೆ, ನಷ್ಟ ಕಟ್ಟಿಟ್ಟ ಬುತ್ತಿ

ಗುರು ರಾಯನಗೌಡ್ರ, ರೈತ, ಕಿರೇಸೂರ

ಬಾಡಿಗೆಯಲ್ಲಿ ಎಪಿಎಂಸಿ ನಿರ್ವಹಣೆ

ದಾವಣಗೆರೆ: 2020–21ನೇ ಸಾಲಿನಲ್ಲಿ ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ)ಗೆ ₹ 6 ಕೋಟಿ ಮಾರುಕಟ್ಟೆ ಶುಲ್ಕ ಸಂಗ್ರಹಿಸುವ ಗುರಿ ಇದ್ದು, ₹ 5.73 ಕೋಟಿ ಸಂಗ್ರಹವಾಗಿತ್ತು. ಪ್ರಸಕ್ತ ಸಾಲಿನಲ್ಲಿ ₹ 6 ಕೋಟಿಗೆ ₹ 80 ಲಕ್ಷ ಮಾತ್ರ ಸಂಗ್ರಹವಾಗಿದೆ.

ಎಪಿಎಂಸಿಗಳ ವಹಿವಾಟು ಕುಸಿದಿರುವುದಕ್ಕೆ ಮೇಲಿನ ಅಂಕಿ ಅಂಶಗಳೇ ಸಾಕು. ತಿಂಗಳಿಗೆ ₹ 10 ಲಕ್ಷ ಬಾಡಿಗೆ ಬರುವುದರಿಂದ ಇಲ್ಲಿನ ಎಪಿಎಂಸಿ ಹೇಗೋ ನಿರ್ವಹಣೆ ಮಾಡಿಕೊಂಡು ಹೋಗುತ್ತಿದೆ.

ಎಪಿಎಂಸಿ ತಿದ್ದುಪಡಿ ಕಾಯ್ದೆ ಬರುವುದಕ್ಕೂ ಮುನ್ನ ಶೇ 92ರಷ್ಟು ಮಾರುಕಟ್ಟೆಯ ಹೊರಗೆ ಹಾಗೂ ಶೇ 8ರಷ್ಟು ಹೊರಗೆ ವಹಿವಾಟು ನಡೆಯುತ್ತಿತ್ತು. ಹೊರಗಡೆ ವಹಿವಾಟು ನಡೆದರೂ ಮಾರುಕಟ್ಟೆಯ ಶುಲ್ಕ ಸಂಗ್ರಹವಾಗುತ್ತಿತ್ತು. ಕಾಯ್ದೆಯ ತಿದ್ದುಪಡಿ ಬಳಿಕ ವಹಿವಾಟು ಕುಸಿದಿದೆ. ಕಾಯ್ದೆಗೂ ಮೊದಲು ತಿಂಗಳಿಗೆ ₹ 2 ಕೋಟಿಯಿಂದ ₹ 3 ಕೋಟಿ ಸಂಗ್ರವಾಗುತ್ತಿದ್ದ ಶುಲ್ಕ ಈಗ ₹15 ಲಕ್ಷಕ್ಕೆ ಕುಸಿದಿದೆ.

ವಿಶೇಷವಾಗಿ ಮೆಕ್ಕೆಜೋಳ ಹಾಗೂ ಭತ್ತದ ವಹಿವಾಟು ಹೊರಗಡೆಯೇ ಹೆಚ್ಚಾಗಿ ನಡೆಯುತ್ತಿದೆ. ಖಾಸಗಿ ಕಂಪನಿಗಳು ಮೆಕ್ಕೆಜೋಳವನ್ನು ಹೊರಗಡೆಯೇ ಹೆಚ್ಚಾಗಿ ಖರೀದಿಸುತ್ತಿವೆ. ಭದ್ರತೆ, ನಿರ್ವಹಣೆ ಹಾಗೂ ಸ್ವಚ್ಛತೆಗೆ ₹15 ಲಕ್ಷ ವೆಚ್ಚವಾಗುತ್ತಿದ್ದು, ಅಭಿವೃದ್ಧಿಗೆ ಹಣ ಉಳಿಯುತ್ತಿಲ್ಲ.

ಜಗಳೂರು, ಹೊನ್ನಾಳಿ ಹಾಗೂ ಹರಿಹರ ತಾಲ್ಲೂಕುಗಳ ಎಪಿಎಂಸಿಗಳಲ್ಲಿ ಮಾರುಕಟ್ಟೆ ಶುಲ್ಕ ಸಂಗ್ರಹ ಕ್ಷೀಣಿಸುತ್ತಿದ್ದು, ನಿರ್ವಹಣೆ ಕಷ್ಟವಾಗಿದೆ. ಚನ್ನಗಿರಿ ಎಪಿಎಂಸಿಯಲ್ಲಿ ತೋಟ ಉತ್ಪನ್ನಗಳ ಅಡಿಕೆ ಮಾರುಕಟ್ಟೆ ಸಂಘ ಹಾಗೂ ಮಲೆನಾಡು ಅಡಿಕೆ ಮಾರಾಟ ಸಹಕಾರ ಸಂಘ ಇರುವುದರಿಂದ ಸೆಸ್ ಸಂಗ್ರಹದಲ್ಲಿ ಜಿಲ್ಲೆಯಲ್ಲೇ 2ನೇ ಸ್ಥಾನದಲ್ಲಿದೆ.

ದಾವಣಗೆರೆ ಎಪಿಎಂಸಿಯಲ್ಲಿ ಕಣದ ವ್ಯವಸ್ಥೆ ಹಾಗೂ ಉತ್ತಮ ಸೌಲಭ್ಯಗಳು ಇರುವುದರಿಂದ ಎಪಿಎಂಸಿಗೆ ಬರುತ್ತಾರೆ. ಮೆಕ್ಕೆಜೋಳ ಖರೀದಿ ಹೆಚ್ಚಾಗಿ ಹೊರಗಡೆಯೇ ನಡೆಯುತ್ತದೆ. ರೈತರಿಗೆ ದಲ್ಲಾಳರ ಮೇಲೆ ವಿಶ್ವಾಸ ಕುಂದಿಲ್ಲ

ದೊಗ್ಗಳ್ಳಿ ಬಸವರಾಜು, ವರ್ತಕ ಪ್ರತಿನಿಧಿ

ಕೊಬ್ಬರಿ ವಹಿವಾಟು ಕುಸಿತ

ತುಮಕೂರು: ಏಷ್ಯಾದಲ್ಲೇ ಅತಿ ದೊಡ್ಡದಾದ ತಿಪಟೂರು ಕೊಬ್ಬರಿ ಮಾರುಕಟ್ಟೆ ಎನ್ನುವ ಗರಿಮೆಗೆ ಹೊಸ ಕಾಯ್ದೆ ಪೆಟ್ಟು ನೀಡಿದ್ದು, ವಹಿವಾಟು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ.

ಕೃಷಿ ಉತ್ಪನ್ನಗಳ ಮುಕ್ತ ಮಾರಾಟಕ್ಕೆ ಅವಕಾಶ ನೀಡಿದ ನಂತರ ಕೊಬ್ಬರಿ ಆವಕ ತಗ್ಗಿದ್ದು, ವಹಿವಾಟಿನ ಚಿತ್ರಣ ಸಿಗದಾಗಿದೆ. ಎಪಿಎಂಸಿ ವ್ಯಾಪ್ತಿಯಲ್ಲಿ 576 ವರ್ತಕರು (ಖರೀದಿದಾರರು), 324 ದಲ್ಲಾಳಿಗಳು, ಮೂವರು ರಫ್ತುದಾರರು ಇದ್ದಾರೆ. 2 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ.

ಮಾರುಕಟ್ಟೆಗೆ ಕೊಬ್ಬರಿ ಬರುವುದು ಕಡಿಮೆಯಾದಂತೆ ವರ್ತಕರು ಹಳ್ಳಿಗಳಿಗೆ ಹೋಗಿ ಖರೀದಿಸುತ್ತಿದ್ದಾರೆ. ದಲ್ಲಾಳಿಗಳು ಎಪಿಎಂಸಿ ಬಿಟ್ಟು ಊರು ಸುತ್ತುತ್ತಿದ್ದಾರೆ. ಎಷ್ಟು ಬೆಲೆ? ಯಾವ ಗುಣಮಟ್ಟಕ್ಕೆ ಯಾವ ದರ ಸಿಗುತ್ತಿದೆ? ಕಡಿಮೆ ಬೆಲೆಗೆ ಮಾರಾಟ ಮಾಡಿ ಮೋಸ ಹೋಗಿದ್ದಾರೆಯೇ ಎಂಬ ಮಾಹಿತಿಯೂ ಗೊತ್ತಾಗುವುದಿಲ್ಲ. ಎಪಿಎಂಸಿ ಒಳಗೆ ನಡೆಯುವ ವಹಿವಾಟು ಮಾತ್ರ ಲೆಕ್ಕಕ್ಕೆ ಸಿಗುತ್ತಿದೆ.

‘ಕೃಷಿ ಉತ್ಪನ್ನಗಳನ್ನು ಜಿಎಸ್‌ಟಿಯಿಂದ ಮುಕ್ತಗೊಳಿಸಬೇಕು. ಇದರಿಂದ ಕೇವಲ ಅಧಿಕಾರಿಗಳಿಗೆ ಲಾಭವಾಗುತ್ತಿದ್ದು, ರೈತರು–ವರ್ತಕರು ತೊಂದರೆಗೆ ಸಿಲುಕಿದ್ದಾರೆ’ ಎನ್ನುತ್ತಾರೆ ತಿಪಟೂರು ಎಪಿಎಂಸಿ ಅಧ್ಯಕ್ಷ ಎಚ್.ಬಿ. ದಿವಾಕರ್.

ಗಾಯದ ಮೇಲೆ ಬರೆ

ಒಂದನೇ ಪುಟದಿಂದ...

ಎಪಿಎಂಸಿಯಲ್ಲಿ ಖರೀದಿ ಮಾಡಿದರೆ ₹100 ಕ್ಕೆ 60 ಪೈಸೆ ಸೆಸ್ ಕಟ್ಟಬೇಕು. ಈ ಮೊದಲು ಹೊರಗಡೆ ಖರೀದಿ ನಡೆಯುತ್ತಿತ್ತು. ಆದರೆ, ಸೆಸ್ ಪಾವತಿಸಬೇಕಿತ್ತು. ಈಗ ಹೊರಗಡೆ ಖರೀದಿಸಿದರೆ, ಸೆಸ್ ಕಟ್ಟಬೇಕಿಲ್ಲ. ವ್ಯಾಪಾರಿಗಳು ಎಪಿಎಂಸಿಯಿಂದ ಕಾಲು ಕೀಳಲಾರಂಭಿಸಿದ್ದಾರೆ. ಇನ್ನೂ ಎಪಿಎಂಸಿಯಲ್ಲಿರುವವರು ಬಾಡಿಗೆ, ವಿದ್ಯುತ್ ಬಿಲ್, ನೌಕರರಿಗೆ ವೇತನ ನೀಡಲೂ ತೊಂದರೆ ಎದುರಿಸುವಂತಾಗಿದೆ. ಹೊರಗಡೆ ಹೋಗಿ ಕೆಲಸ ಮಾಡಲಾಗದ ಹಮಾಲಿ ಕಾರ್ಮಿಕರ ಕುಟುಂಬಗಳು ಆದಾಯವಿಲ್ಲದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ.

ಹೊರಗಡೆ ನಡೆಯುತ್ತಿದ್ದ ವಹಿವಾಟಿನಿಂದ ಬರುತ್ತಿದ್ದ ಆದಾಯ ನಿಂತು ಹೋಗಿದೆ. ಜೊತೆಗೆ ಈ ಮೊದಲು ಎಪಿಎಂಸಿಯ ಒಳಗೆ ವ್ಯಾಪಾರಸ್ಥರಿಂದ ಪ್ರತಿ ₹100 ವಹಿವಾಟಿಗೆ ಒಂದೂವರೆ ರೂಪಾಯಿ ಸೆಸ್ ಸಂಗ್ರಹಿಸಲಾಗುತ್ತಿತ್ತು. ಅದನ್ನು ಈಗ 60 ಪೈಸೆಗೆ ಇಳಿಸಿರುವುದೂ ಆದಾಯ ಕುಸಿತಕ್ಕೆ ಕಾರಣವಾಗಿದೆ.

ಸೌಲಭ್ಯಕ್ಕೆ ಆದಾಯದ ಕೊರತೆ: ಎಪಿಎಂಸಿಗಳಿಗೆ ಸೆಸ್‌ನಿಂದ ಬರುವ ಆದಾಯದಲ್ಲಿ ಶೇ 0.01ರಷ್ಟನ್ನು ಸಾಫ್ಟ್‌ವೇರ್ ಒದಗಿಸಿರುವ ರಿಮ್ಸ್‌ಗೆ, ಶೇ 10 ಅನ್ನು ಆವರ್ತ ನಿಧಿಗೆ, ಶೇ 0.05 ರಷ್ಟನ್ನು ಕೃಷಿ ಮಾರಾಟ ಮಂಡಳಿಗೆ ನೀಡಬೇಕು. ಉಳಿದ ಮೊತ್ತವನ್ನು ನಿರ್ವಹಣೆಯ ವೆಚ್ಚಗಳ ಜತೆಗೆ ಎಪಿಎಂಸಿಗಳ ಅಭಿವೃದ್ಧಿಗೆ ಬಳಸಿಕೊಳ್ಳಬೇಕು. ಆದಾಯ ಕುಸಿತದಿಂದಾಗಿ ಮುಂದಿನ ದಿನಗಳಲ್ಲಿ ಎಪಿಎಂಸಿಗಳಲ್ಲಿ ಸೌಲಭ್ಯ ಒದಗಿಸಲು ಸಾಧ್ಯವಾಗುವುದಿಲ್ಲ.

ವಂಚನೆಗಿಲ್ಲ ಕಡಿವಾಣ?

ಹುಬ್ಬಳ್ಳಿ: ಬೆಳಗಾವಿ ಜಿಲ್ಲೆಯ ಅಂಕಲಗಿಯಲ್ಲಿ 10 ಲಾರಿ ಸೋಯಾಬಿನ್ ವಹಿವಾಟು ಎಪಿಎಂಸಿ ಹೊರಗಡೆ ನಡೆದಿತ್ತು. ಆರಂಭದಲ್ಲಿ ರೈತರಿಗೆ ಹಣ ಪಾವತಿಸಿದ್ದ ವಿಶ್ವಾಸ ಗಳಿಸಿದ್ದ ವ್ಯಾಪಾರಿ, ನಂತರ ರಾತ್ರೋರಾತ್ರಿ ಪರಾರಿಯಾದ. ವಂಚನೆ ದೂರು ದಾಖಲಾಯಿತು. ರಾಜ್ಯದ ಹಲವೆಡೆ ಇಂತಹ ಪ್ರಕರಣಗಳು ನಡೆದಿವೆ.

ದಾವಣಗೆರೆ ಎಪಿಎಂಸಿ ಯಾರ್ಡ್‌ನಲ್ಲಿ ರೈತರು ಹಾಗೂ ವರ್ತಕರಿಂದ ಖರೀದಿಸಿದ್ದ ಮೆಕ್ಕೆಜೋಳಕ್ಕೆ ಹಣ ನೀಡದೇ ವಂಚಿಸಿದ ಪ್ರಕರಣ ನಡೆದಿದೆ. 96 ರೈತರು ಹಾಗೂ 29 ವರ್ತಕರಿಗೆ ₹ 2.68 ಕೋಟಿ ವಂಚಿಸಲಾಗಿತ್ತು. ಡಿಸಿಆರ್‌ಬಿ ಪೊಲೀಸರು ಆರೋಪಿಗಳಿಂದ ಅಷ್ಟೂ ಹಣವನ್ನು ವಶಪಡಿಸಿಕೊಂಡಿದ್ದಾರೆ. ಎಚ್.ಡಿ.ಕೋಟೆ ಹಾಗೂ ಸರಗೂರು ತಾಲ್ಲೂಕಿನ ಹಲವು ರೈತರಿಗೆ ಅಂದಾಜು ₹ 10ರಿಂದ ₹ 15 ಲಕ್ಷ ಹಣ ಪಾವತಿಸದೇ ವಂಚಿಸಲಾಗಿದೆ.

ಈಗ, ಕಾನೂನು ಕ್ರಮದ ಅಂಜಿಕೆ ಇಲ್ಲದಿರುವುದೇ ಇದಕ್ಕೆ ಕಾರಣ ಎನ್ನುತ್ತಾರೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಕುರುಬೂರು ಶಾಂತಕುಮಾರ್.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 7-11-1996

• ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗಿ ಧರ್ಮಸಿಂಗ್ ನೇಮಕ

ನವದೆಹಲಿ, ನ. 6– ಕಳೆ ಗುಂದಿದ್ದ ಕಾಂಗ್ರೆಸ್ಸನ್ನು ಪುನಶ್ಚೇತನಗೊಳಿಸುವ ಕಾರ್ಯವನ್ನು ಕೈಗೊಂಡಿರುವ ಎಐಸಿಸಿ ಅಧ್ಯಕ್ಷ ಸೀತಾರಾಂ ಕೇಸರಿ ಅವರು ಮಾಜಿ ಸಚಿವ ಧರ್ಮಸಿಂಗ್ ಅವರನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ.

ಕಳೆದ ಲೋಕಸಭೆ ಚುನಾವಣೆಯಲ್ಲಿ ಪಕ್ಷದ ಸೋಲಿನ ಹಿನ್ನೆಲೆಯಲ್ಲಿ ನಾಯ್ಕರ್ ರಾಜೀನಾಮೆ ನೀಡಲು ಮುಂದೆ ಬಂದಿದ್ದರು ಅವರು ಈಗ ರಾಜೀನಾಮೆ ನೀಡಿದ್ದರೆನ್ನಲಾಗಿದೆ. ನಾಯ್ಕರ್ ಅವರು ನೀಡಿರುವ ರಾಜೀನಾಮೆಯನ್ನು ಅಂಗೀಕರಿಸಿ ಹೊಸ ನೇಮಕ ಮಾಡಿರುವುದನ್ನು ಪಕ್ಷದ ವಕ್ತಾರ ವಿ.ಎನ್. ಗಾಡ್ಗೀಳ್ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

ಧರ್ಮಸಿಂಗ್ ಅವರ ನೇಮಕವನ್ನು ಪ್ರಕಟ ಮಾಡುವ ಮುನ್ನ ನಾಯ್ಕರ್ ಸಂಜೆ ಬೆಂಗಳೂರಿಗೆ ಮರಳಿದರು.

• ಭಾರತಕ್ಕೆ ಟೈಟನ್ ಕಪ್

ಮುಂಬೈ, ನ.6– ಕೆಚ್ಚೆದೆಯಿಂದ ಹೋರಾಡಿದ ಭಾರತದ ತಂಡದವರು ಇದುವರೆಗೆ ಅಜೇಯರಾಗಿದ್ದ ದಕ್ಷಿಣ ಆಫ್ರಿಕ ತಂಡದವರಿಗೆ 35 ರನ್‌ಗಳ ಸೋಲಿನ ಕಹಿ ಉಣಿಸಿ ಟೈಟನ್ ಕಪ್ ಕ್ರಿಕೆಟ್ ಟೂರ್ನಿ ಪ್ರಶಸ್ತಿ ಪಡೆದು ಬಹಳ ದಿನಗಳಿಂದ ನಿರಾಶರಾಗಿದ್ದ ಅಭಿಮಾನಿಗಳು ಇಂದು ರಾತ್ರಿ ಹುಚ್ಚೆದ್ದು ಕುಣಿಯುವಂತೆ ಮಾಡಿದರು.

• ಲಕ್ಕೂಬಾಯಿ ವಂಚನೆ ಹಗರಣ ರಾವ್‌ಗೆ ಷರತ್ತಿನ ಜಾಮೀನು

ನವದೆಹಲಿ, ನ. 6 (ಪಿಟಿಐ)– ಲಕ್ಕೂಬಾಯಿ ವಂಚನೆ ಹಗರಣದಲ್ಲಿ ಮಾಜಿ ಪ್ರಧಾನಿ ಪಿ.ವಿ. ನರಸಿಂಹರಾವ್ ಅವರಿಗೆ ದೆಹಲಿ ನ್ಯಾಯಾಲಯ ಒಂದು ಲಕ್ಷ ರೂಪಾಯಿ ವೈಯಕ್ತಿಕ ಬಾಂಡ್ ಮತ್ತು ಅಷ್ಟೇ ಮೊತ್ತದ ಭದ್ರತೆ ನೀಡುವ ಷರತ್ತು ವಿಧಿಸಿ ಜಾಮೀನು ನೀಡಿದೆ.

ದಿನ ಭವಿಷ್ಯ

ಭಾನುವಾರ 7ನವೆಂಬರ್ 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ವಿಶಾಖಾ ತೃತೀಯಾ ಗಂ. 35-5 (ರಾ. 8-23) ಭಾನುವಾರ ನಿತ್ಯ ನಕ್ಷತ್ರ ಜ್ಯೇಷ್ಠ ಗಂ. 45-47 (ರಾ. 1-49) ಅತಿಗಂಡ ನಾಮ ಯೋಗ ಗಂ. 44-53 ತೈತಲ ಕರಣ ಗಂ. 8-3 ವಿಷ ಗಂ. 5-53 ಅಮೃತ ಗಂ 28-12 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-18 ಸೂರ್ಯಾಸ್ತ: 5-48 ಅದೃಷ್ಟ ಸಂಖ್ಯೆ 5

ಮೇಷ: ಸಾಂಸಾರಿಕ ಬದುಕು ಸಂತೋಷ ಕೊಡುವ ದಿನ. ಮಕ್ಕಳಿಂದ ಸಂತೋಷ ಪ್ರಾಪ್ತಿ. ತಂದೆ ತಾಯಿ ಗಳಿಂದ ಮಕ್ಕಳಿಗೆ ಸಂತೋಷ. ದೇವಿ ಆರಾಧನೆಯಿಂದ ಉತ್ತಮ ಫಲ.

ವೃಷಭ: ವಾಹನಾದಿಗಳಿಂದ ಸಂತೋಷ ಪಡುವ ದಿನ. ಸಮಾಜದಲ್ಲಿ ಪುರಸ್ಕಾರ. ಆರೋಗ್ಯದಲ್ಲಿ ಉತ್ತಮ ಫಲ. ಕಬ್ಬಿಣ ವಸ್ತುಗಳ ವಿಚಾರದಲ್ಲಿ ಜಾಗ್ರತೆ ಅಗತ್ಯ. ಗುರುವಿನ ಆರಾಧನೆಯಿಂದ ಉತ್ತಮ ಫಲ.

ಮಿಥುನ: ವಸ್ತ್ರ ವಿನ್ಯಾಸಕಾರರಿಗೆ ಉತ್ತಮ ಲಾಭದೊರೆಯಲಿದೆ. ವಾಸ್ತು ತಜ್ಞರು ಒಳಾಂಗಣ ವಿನ್ಯಾಸಕಾರರಿಗೆ ಅತ್ಯುತ್ತಮ ಬೇಡಿಕೆ ಬರಲಿದೆ. ಗೃಹ ನಿರ್ಮಾಣ ಆರಂಭ. ವಿದ್ಯಾರ್ಥಿಗಳಿಗೆ ಉತ್ತಮ ಫಲಗಳು, ಸಂಭ್ರಮದ ದಿನ.

ಕರ್ಕಾಟಕ: ಸರ್ಕಾರಿ ಕೆಲಸಗಳಲ್ಲಿ ಯಶಸ್ಸು ಕಾಣುವಿರಿ. ಉದ್ಯೋಗದಲ್ಲಿ ಸಮಾಧಾನಕರ ವಾತಾವರಣ, ಹಿರಿಯ ಅಧಿಕಾರಿಗಳಿಂದ ಕೆಲಸದ ಒತ್ತಡ. ದೇವಿ ಆರಾಧನೆಯಿಂದ ಕಾರ್ಯಗಳು ಸುಗಮ.

ಸಿಂಹ: ಬಹಳ ಕಾಲದಿಂದ ಯೋಚಿಸಿದ್ದ ಕಾರ್ಯಗಳಲ್ಲಿ ಯಶಸ್ಸು ಕಾಣುವಿರಿ. ಆರೋಗ್ಯದಲ್ಲಿ ವ್ಯತ್ಯಯ ವಾಗಬಹುದು. ನಿಮ್ಮ ಉತ್ತಮ ಗುಣಗಳನ್ನು ದುರ್ಬಳಕೆ ಮಾಡಿಕೊಳ್ಳದೇ ಮುನ್ನಡೆಯಿರಿ. ವಿಷ್ಣು ಆರಾಧನೆ ಮಾಡಿ.

ಕನ್ಯಾ: ಉದ್ಯೋಗದಲ್ಲಿರುವ ಒತ್ತಡಗಳು ಕಮ್ಮಿಯಾಗಿ ಮನಸ್ಸಿಗೆ ಸಂತೋಷ ಪ್ರಾಪ್ತಿ. ಭೂ ವ್ಯವಹಾರಗಳಲ್ಲಿ ಅಪಜಯ ಕಂಡುಬರುವುದು. ಆರೋಗ್ಯದಲ್ಲಿ ಸಮಾಧಾನ. ದೇವಿ ಆರಾಧನೆಯಿಂದ ಉತ್ತಮ ಫಲ.

ತುಲಾ: ವ್ಯವಹಾರದಲ್ಲಿ ಒತ್ತಡಗಳು ಅಧಿಕವಾಗಿರುವುದು. ಆದರೂ ಆರ್ಥಿಕವಾಗಿ ಲಾಭಾದಿಗಳು ಕಂಡುಬರುವುದು. ಮನಸ್ಸಿಗೆ ಸಂತೋಷಕರವಾದ ವಾತಾವರಣಗಳು ಇರುವುದು. ಸುಬ್ರಹ್ಮಣ್ಯ ಆರಾಧನೆ ಶ್ರೇಯಸ್ಕರ.

ವೃಶ್ಚಿಕ: ಕಾರ್ಯದಲ್ಲಿ ಕೀರ್ತಿ, ಯಶಸ್ಸು ಲಾಭಗಳು ನಿಮ್ಮದಾಗಲಿವೆ. ಒಟ್ಟಾರೆ ಇಂದು ಉತ್ತಮ ಫಲವನ್ನು ನಿರೀಕ್ಷಿಸುವ ದಿನ. ಸಂಸಾರದಲ್ಲಿ ಸಂತೋಷದ ದಿನ. ಗುರುವಿನ ಆರಾಧನೆ ಮಾಡಿ.

ಧನು: ರಾಜಕೀಯ ವಿಷಯಗಳ ಬಗ್ಗೆ ಗಂಭೀರ ಚಿಂತನೆ. ಚಿಲ್ಲರೆ ವ್ಯಾಪಾರಿಗಳಿಗೆ ಉತ್ತಮ ಲಾಭದಿಗಳು. ಸಾಮಾಜಿಕ ಕೆಲಸಗಳಲ್ಲಿ ಆಸಕ್ತಿ. ಸುಬ್ರಹ್ಮಣ್ಯ ಆರಾಧನೆ ಶ್ರೇಯಸ್ಕರ.

ಮಕರ: ಕೋರ್ಟು ಸಂಬಂಧಿ ಕಲಹಗಳಲ್ಲಿ ಜಯ ಕಂಡುಬರುವುದು. ವ್ಯವಹಾರದಲ್ಲಿ ಅಧಿಕ ಲಾಭಾದಿಗಳು. ಆರೋಗ್ಯದಲ್ಲಿ ವ್ಯತ್ಯಯಗಳು ಆಗಬಹುದು. ಶಿವನ ಆರಾಧನೆ ಯಿಂದ ಯಶಸ್ಸು.

ಕುಂಭ: ವಿದ್ಯಾರ್ಥಿಗಳಿಗೆ ಆಲಸ್ಯ ಕಂಡುಬರುವುದು. ಅತಿಯಾದ ಶ್ರಮದಿಂದ ಉತ್ತಮ ಫಲಪ್ರಾಪ್ತಿ. ಹಿರಿಯರ ಪ್ರಶಂಸೆಗಳಿಗೆ ಪಾತ್ರವಾಗಿ ಮನಸ್ಸಿಗೆ ಸಂತೋಷ –ಗುರು ಆರಾಧನೆ ಮಾಡಿ.

ಮೀನ: ಸಂಕಲ್ಪಿತ ಕೆಲಸಗಳಲ್ಲಿ ಯಶಸ್ಸು ಸಾಧ್ಯತೆ. ಹಿರಿಯರ ಮತ್ತು ಸ್ನೇಹಿತರ ಸೂಕ್ತ ಸಲಹೆಯಿಂದ ಕಾರ್ಯಗಳಲ್ಲಿ ಯಶಸ್ಸು. ಉತ್ತಮ ಆರೋಗ್ಯ ಪಡೆಯುವಿರಿ. ಶಿವನ ಆರಾಧನೆ ಉತ್ತಮ

ನಿಮ್ಮ ಜನ್ಮದಿನ 7-ನವೆಂಬರ್ ಈ ದಿನ ಅತ್ಯಂತ ಶುಭ ದಿನವಾಗಿದೆ. ಈ ದಿನಾಂಕದಲ್ಲಿ ಹುಟ್ಟಿದವರಿಗೆ ಉದ್ಯೋಗದಲ್ಲಿ ಮಿಶ್ರಫಲವನ್ನು ಅನುಭವಿಸುವ ಯೋಗ ಫಲಗಳು ಕಂಡುಬರುತ್ತಿವೆ. ವಿದ್ಯಾಭ್ಯಾಸದಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಿದರೂ ಸರ್ಕಾರಿ ನೌಕರಿಗಾಗಿ ಕಷ್ಟಪಡಬೇಕಾದೀತು. ರೈತಾಪಿ ವರ್ಗದವರಿಗೆ ಹೆಚ್ಚಿನ ಆದಾಯ ದೊರೆಯಲಿದೆ.

ಪದಬಂಧ 4770

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಡುವೆ ಲಾಯ ಕಂಡಾಗ ಓಡಿಹೋಗುವಿಕೆ (4)
3.ಮಂದಿಯ ಒಳಿತು (4)
5.ಕಡಿಯಲು ಬಂದಿರುವ ಭಲ್ಲೂಕ! (3)
6.ತುಂಬಾ ಹದಗೆಟ್ಟ ಸ್ಥಿತಿ (3)
7.ಗಣಪತಿ ಚಿಕ್ಕದಾಗಿ ಮೂಡಿದ್ದಾನೆ (3)
9.ಮಾನಿನಿಯ ಗುಣದ ಬಗ್ಗೆಯೇ ಸಂಶಯ! (3)
11.ಕುದುರೆಯ ಸವಾರನೀತ (3)
12.ಗುಲಾಲು ಹಿಡಿದಿರುವ ಸೇವಕ (3)
13.ಈತ ನೈಪುಣ್ಯವುಳ್ಳವನು (4)
15.ತಿಂಡಿಪೋತನನ್ನು ಹೀಗೂ ಕರೆಯಬಹುದಲ್ಲವೇ? (4)

ಮೇಲಿಂದ ಕೆಳಕ್ಕೆ

1.ಸದಭಿಪ್ರಾಯ ಸಂಪಾದನೆಗಾಗಿ ಕೊಡುವ ಹಣ (3)
2.ತಿರುಗಿ ನಿಂತಿರುವ ಮಂದಿ (2)
4.ತುಸುವೇ ಬೀರಿದ ಮಂದಹಾಸ (4)
5.ಕರದಿಂದ ಆರಂಭವಾದ ಉತ್ಸವ (3)
8.ಒಂದೇ ವಿಷಯದಲ್ಲಿ ಬಹಳ ಆಸಕ್ತನಾದವನು (4)
10.ಯಮ ಕೊನೆಗಿದ್ದಾಗಿನ ಸೂತ್ರ (3)
12.ಗುಣಿಸುವ ಸಂಖ್ಯೆಯಿದು (3)
14.ತತ್ತಿ ಪಡೆಯಲು ಸೇರಿರುವ ಗುಂಪು (2)



4769ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಅಣ್ಣ 4.ನಳ್ಳಿ 6.ರತ್ನಾಕರ 7.ಯುಗಳ 9.ಸುಸಂಧಿ 10.ನಕಲಿ 12.ಮನ್ವಂತರ 13.ಧನ 14.ಹಾವು

ಮೇಲಿಂದ ಕೆಳಕ್ಕೆ: 1.ಬಣ್ಣ 2.ಕಳ್ಳಿ 3.ಅಲ್ವಾಯು 4.ನರಭಕ್ಷಕ 5.ನಾಳ 6.ರಕ್ತ ಸಂಚಾರ 8.ಗಜಗಮನ 10.ನಕ್ಷೆ 11.ಲಿಲಾವು 13.ಧರ್ಮ 14.ಹಾಯಿ

ಸುಡೊಕು 5156

	1				5	4		9
4		7	6				5	
	6			4	8	1		
	2				7			6
5		1		6			2	
			5					7
	3	9				6		
6			8		4		3	1
		4		3		2		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5155 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

AllToPoll

ಮತದಾನ ಚಲಾಯಿಸಿ ಪ್ರಜಾಪ್ರಭುತ್ವ ಗೆಲ್ಲಿಸಿ!

ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ - 2022

01.01.2022ಕ್ಕೆ 18 ವರ್ಷ ಮತ್ತು ಮೇಲ್ಪಟ್ಟ ಎಲ್ಲಾ ಅರ್ಹ ನಾಗರಿಕರು ಮತದಾರರಾಗಲು ಹಾಗೂ ಮತದಾರರ ಪಟ್ಟಿಯಲ್ಲಿನ ನಿಮ್ಮ ವಿವರಗಳಲ್ಲಿ ತಿದ್ದುಪಡಿ ಮಾಡಬಹುದು.

ನಿಮ್ಮ ಇತ್ತೀಚಿನ 2 ಭಾವಚಿತ್ರಗಳು, ವಿಳಾಸ ಹಾಗೂ ವಯಸ್ಸಿನ ಪುರಾವೆ / ಗುರುತಿನ ಚೀಟಿಯೊಂದಿಗೆ ಬಿಬಿಎಂಪಿ/ನಗರಸಭೆ/ಪುರಸಭೆಗಳ ಸಂಬಂಧಪಟ್ಟ ಕಂದಾಯ ವಾರ್ಡ್ ಕಛೇರಿಗಳಿಗೆ, ತಹಶೀಲ್ದಾರ್ ಕಛೇರಿಗೆ ಅಥವಾ ಮತಗಟ್ಟೆ ಕೇಂದ್ರಗಳಿಗೆ ಭೇಟಿ ನೀಡಿ.

ಇಂದೇ ನಿಮ್ಮ ಹೆಸರಿನ ನೋಂದಣಿಗೆ ಅಥವಾ ಇತರೆ ಬದಲಾವಣೆಗಳಿಗಾಗಿ ಅರ್ಜಿ ಸಲ್ಲಿಸಿ!

ವಿಶೇಷ ಅಭಿಯಾನ ದಿನಾಂಕ : 7, 14, 21 & 28 (ಭಾನುವಾರ), ನವೆಂಬರ್ 2021, ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ.

ಉಚಿತ ಕರೆ ಮಾಡಿ 1950

ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ : www.ceokarnataka.kar.nic.in ಅಥವಾ www.nsvp.in

ಮುಖ್ಯ ಚುನಾವಣಾಧಿಕಾರಿ, ಕರ್ನಾಟಕ

ಆಹಾರ ಇಲಾಖೆಯ ಕಾರ್ಯದರ್ಶಿ ಸುಧಾಂಶು ಪಾಂಡೆ ಮಾಹಿತಿ

ಅಡುಗೆ ಎಣ್ಣೆ ರಿಟೇಲ್ ದರ ಇಳಿಕೆ

ನವದೆಹಲಿ (ಪಿಟಿಐ): ದೇಶದಾದ್ಯಂತ ಪ್ರಮುಖ ರಿಟೇಲ್ ಮಾರುಕಟ್ಟೆಗಳಲ್ಲಿ ಅಡುಗೆ ಎಣ್ಣೆಯ ರಿಟೇಲ್ ದರವು ಪ್ರತಿ ಕೆ.ಜಿಗೆ ₹ 5 ರಿಂದ 20ರವರೆಗೆ ಇಳಿಕೆ ಆಗಿದೆ ಎಂದು ಆಹಾರ ಇಲಾಖೆಯ ಕಾರ್ಯದರ್ಶಿ ಸುಧಾಂಶು ಪಾಂಡೆ ಹೇಳಿದ್ದಾರೆ.

ಕೇಂದ್ರ ಸರ್ಕಾರವು ಆಮದು ಸುಂಕ ಕಡಿತ ಮಾಡಿರುವುದು ಮತ್ತು ಇತರೆ ಕ್ರಮಗಳಿಂದಾಗಿ ಅಡುಗೆ ಎಣ್ಣೆಯ ರಿಟೇಲ್ ದರದಲ್ಲಿ ಈ ಪ್ರಮಾಣದಲ್ಲಿ ಇಳಿಕೆ ಕಂಡುಬಂದಿದೆ ಎಂದು ಅವರು ತಿಳಿಸಿದ್ದಾರೆ.

ದೆಹಲಿಯಲ್ಲಿ ರಿಟೇಲ್ ತಾಳೆ ಎಣ್ಣೆ ದರವು ಕೆ.ಜಿಗೆ ₹ 6ರಷ್ಟು ಕಡಿಮೆ ಆಗಿದ್ದು, ₹ 139 ರಿಂದ ₹ 133ಕ್ಕೆ ಇಳಿಕೆ ಆಗಿದೆ. ಉತ್ತರ ಪ್ರದೇಶದ ಅಲಿಘಡದಲ್ಲಿ ಕೆ.ಜಿಗೆ ₹ 140ರಷ್ಟು ಇದ್ದಿದ್ದು ₹ 122ಕ್ಕೆ ಅಂದರೆ ₹ 18ರಷ್ಟು ಇಳಿಕೆ ಆಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಅಕ್ಟೋಬರ್ 31 ರಿಂದ ನವೆಂಬರ್ 3ರವರೆಗಿನ ಅವಧಿಯಲ್ಲಿ ಕಡಲೆಕಾಯಿ ಎಣ್ಣೆ ದರವು ಕೆ.ಜಿಗೆ ₹ 5 ರಿಂದ 10ರವರೆಗೆ, ಸೋಯಾಬಿನ್ ಎಣ್ಣೆ ಬೆಲೆ ಕೆ.ಜಿಗೆ ₹ 5 ರಿಂದ 11ರವರೆಗೆ ಹಾಗೂ ಸೂರ್ಯಕಾಂತಿ ಎಣ್ಣೆಯ ಬೆಲೆ ಕೆ.ಜಿಗೆ ₹ 5 ರಿಂದ 20ರವರೆಗೂ ಇಳಿಕೆ ಆಗಿದೆ.

ಹಳೆಯ ದಾಸ್ತಾನಿಗೂ ಆಮದು ಸುಂಕ ಕಡಿತವನ್ನು ಅನ್ವಯಿಸಿ ಗ್ರಾಹಕರಿಗೆ ಸುಂಕ ಕಡಿತದ ಪ್ರಯೋಜನ ನೀಡುವಂತೆ ವಿತರಕರು, ರಿಟೇಲ್ ಮತ್ತು ಸಗಟು ವ್ಯಾಪಾರಿಗಳಿಗೆ ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಷನ್ (ಎಸ್‌ಇಎ) ಸಲಹೆ ನೀಡಿರುವುದಾಗಿ ಅವರು ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲಿ ಕಳೆದ 10 ದಿನಗಳಲ್ಲಿ ಅಡುಗೆ ಎಣ್ಣೆಗಳ ಬೆಲೆ ಗರಿಷ್ಠ ಮಟ್ಟದಲ್ಲಿ ಇದೆ. ಹೀಗಿದ್ದರೂ ದೇಶದಲ್ಲಿ ಆಮದು ಸುಂಕ ಕಡಿತ, ದಾಸ್ತಾನು ಮಿತಿಯಂತಹ ನಿರ್ಧಾರಗಳಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ದರವು ಇಳಿಕೆ ಆಗಿದೆ. ಪೆಟ್ರೋಲ್, ಡೀಸೆಲ್ ದರದಲ್ಲಿ ಇಳಿಕೆ ಆಗಿರುವುದರಿಂದ ಉತ್ಪನ್ನಗಳ ವಿತರಣಾ ವೆಚ್ಚ ಕಡಿಮೆ ಆಗಲಿದೆ. ಇದರಿಂದಾಗಿ ಸ್ಥಳೀಯವಾಗಿ ಅಡುಗೆ ಎಣ್ಣೆ ದರವು ಇನ್ನಷ್ಟು ಕಡಿಮೆ ಆಗಲಿದೆ ಎಂದೂ ಅವರು ಹೇಳಿದ್ದಾರೆ.

ಮಹಾರಾಷ್ಟ್ರ: ಸಹಕಾರ ಬ್ಯಾಂಕ್‌ನ ₹ 53 ಕೋಟಿ ಠೇವಣಿ ಜಪ್ತಿ

ನವದೆಹಲಿ (ಪಿಟಿಐ): ಮಹಾರಾಷ್ಟ್ರ ಮೂಲದ ಸಹಕಾರ ಸಂಘವೊಂದಕ್ಕೆ ಸೇರಿದ್ದ ₹53 ಕೋಟಿಗೂ ಹೆಚ್ಚು ಮೊತ್ತದ ಠೇವಣಿಯನ್ನು ಆದಾಯ ತೆರಿಗೆ ಇಲಾಖೆಯು ಜಪ್ತಿ ಮಾಡಿದೆ.

ಮೂಲಗಳ ಪ್ರಕಾರ, ಈ ಠೇವಣಿಯು ಮಹಾರಾಷ್ಟ್ರದ ಬುಲ್ಡಾನಾ ಅರ್ಬನ್ ಕೋ ಆಪರೇಟಿವ್ ಕ್ರೆಡಿಟ್ ಬ್ಯಾಂಕ್‌ಗೆ ಸೇರಿದ್ದಾಗಿದೆ. ಅಧಿಕಾರಿಗಳು ಅ. 27ರಂದು ಬ್ಯಾಂಕ್ ಹಾಗೂ ಅಧ್ಯಕ್ಷ ಮತ್ತು ನಿರ್ದೇಶಕರ ನಿವಾಸಗಳ ಮೇಲೆ ದಾಳಿ ನಡೆಸಿದ್ದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹485
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹490

ಉಚಿತ ಪಡಿತರ ವಿತರಣೆ ವಿಸ್ತರಣೆ ಇಲ್ಲ: ಕೇಂದ್ರ

ನವದೆಹಲಿ (ಪಿಟಿಐ): ಉಚಿತವಾಗಿ ಪಡಿತರ ವಿತರಣೆ ಮಾಡುವ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ (ಪಿಎಂಜಿಕೆಎವೈ) ಈ ತಿಂಗಳು ಅಂತ್ಯಗೊಳ್ಳಲಿದ್ದು, ಅದನ್ನು ವಿಸ್ತರಿಸುವ ಯಾವುದೇ ಪ್ರಸ್ತಾವವಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಸರ್ಕಾರವು ಈ ಯೋಜನೆಯನ್ನು ಇನ್ನಷ್ಟು ಕಾಲ ವಿಸ್ತರಿಸುತ್ತದೆಯೇ ಎಂದು ಕೇಳಿದಾಗ, ಆಹಾರ ಇಲಾಖೆಯ ಕಾರ್ಯದರ್ಶಿ ಸುಧಾಂಶು ಪಾಂಡೆ 'ಆರ್ಥಿಕತೆಯು ಪುನಶ್ಚೇತನಗೊಳ್ಳುತ್ತಿರುವುದರಿಂದ ಮತ್ತು ನಮ್ಮ ಒಎಂಎಸ್‌ಎಸ್ (ಮುಕ್ತ ಮಾರುಕಟ್ಟೆ ಮಾರಾಟ ಯೋಜನೆ) ಆಹಾರ

ಧಾನ್ಯಗಳ ವಿಲೇವಾರಿಯು ಈ ವರ್ಷ ಉತ್ತಮವಾಗಿದೆ. ಗ್ರಾಹಕ ಸ್ನೇಹಿ ಯಾಗಿದೆ. ಆದ್ದರಿಂದ, ವಿಸ್ತರಿಸುವ ಯಾವುದೇ ಪ್ರಸ್ತಾಪವಿಲ್ಲ' ಎಂದು ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

ದೇಶೀಯ ಮಾರುಕಟ್ಟೆಯಲ್ಲಿ ಲಭ್ಯತೆ ಸುಧಾರಿಸಲು ಮತ್ತು ಬೆಲೆಗಳನ್ನು ಪರಿಶೀಲಿಸಲು ಒಎಂಎಸ್‌ಎಸ್ ನೀತಿಯ ಅಡಿಯಲ್ಲಿ ಸರ್ಕಾರವು ಅಕ್ಕಿ ಮತ್ತು ಗೋಧಿಯನ್ನು ಬೃಹತ್ ಪ್ರಮಾಣದಲ್ಲಿ ಗ್ರಾಹಕರಿಗೆ ಮಾರಾಟ ಮಾಡುತ್ತಿದೆ. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (ಎನ್‌ಎಫ್‌ಎಸ್‌ಎ) ಅಡಿಯಲ್ಲಿ 80 ಕೋಟಿ ಫಲಾನುಭವಿಗಳಿಗೆ ಕೇಂದ್ರವು ಪ್ರತಿ ವ್ಯಕ್ತಿಗೆ ತಿಂಗಳಿಗೆ 5 ಕೆ.ಜಿ ಆಹಾರ-ಧಾನ್ಯಗಳನ್ನು ಹೆಚ್ಚುವರಿ ಪ್ರಮಾಣದಲ್ಲಿ ಉಚಿತವಾಗಿ ನೀಡುತ್ತಿದೆ.

ಕೋವಿಡ್-19 ನಿಂದ ಉಂಟಾದ ಬಿಕ್ಕಟ್ಟು ನಿವಾರಿಸಲು ಯೋಜನೆ ಯನ್ನು ಕಳೆದ ವರ್ಷ ಮಾರ್ಚ್‌ನಲ್ಲಿ ಪ್ರಾರಂಭಿಸಲಾಯಿತು. ಕಳೆದ ವರ್ಷ ಜೂನ್‌ಗೆ ಅಂತ್ಯಗೊಳ್ಳಬೇಕಿದ್ದ ಯೋಜನೆಯನ್ನು ಕೋವಿಡ್ ಎರಡನೇ ಅಲೆಯಿಂದಾಗಿ ಈ ವರ್ಷದ ನ.30ರವರೆಗೆ ವಿಸ್ತರಿಸಲಾಗಿದೆ

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಚಾಂಚಲ್ಯವೇ ವಾಂಛಲ್ಯವಾಗಬಾರದು

ಚಿತ್ತಚಾಂಚಲ್ಯವೇ ಮನುಷ್ಯನ ಬಹುದೊಡ್ಡ ದೌರ್ಬಲ್ಯ ಅಂತ ಎಲ್ಲ ಧರ್ಮ-ಗ್ರಂಥಗಳೂ ಹೇಳುತ್ತವೆ. ಚಿತ್ತಸ್ತಿಮಿತಕ್ಕೆ ಧ್ಯಾನ-ಯೋಗಗಳ ಸಲಹೆಗಳೂ ಹೇರಳವಾಗಿವೆ. ಆದರೆ ಮನುಷ್ಯ ಎಷ್ಟೇ ಮನಸ್ಸನ್ನು ನಿಯಂತ್ರಿಸಲು ಯತ್ನಿಸಿದರೂ, ಅದು ಹಿಡಿತಕ್ಕೆ ಸಿಗದೆ ನುಣುಚಿಕೊಳ್ಳುತ್ತಲೇ ಇರುತ್ತೆ. ಮನಸ್ಸಿನ ಗುಣವೇ ಅಂತಹದ್ದು, ಯಾವ ಹಿಡಿತಕ್ಕೂ, ಯಾರ ಬಲವಂತಕ್ಕೂ ಸಿಗುವುದಿಲ್ಲ. ಹೀಗಾಗಿಯೇ ಮನೋನಿಗ್ರಹ ಅಷ್ಟು ಸುಲಭವಲ್ಲ. ಎಂಥ ಯೋಗಿ-ತ್ಯಾಗಿಗಳಲ್ಲೂ ಚಂಚಲಗುಣ ಸಂಪೂರ್ಣ ನಿಯಂತ್ರಣದಲ್ಲಿರುವುದಿಲ್ಲ. ಜೀವ ಇರುವ ಯಾವ ದೇಹದಲ್ಲೂ ಮನಸ್ಸು ಸ್ತಿಮಿತಕ್ಕೆ ಬರುವುದಿಲ್ಲ. ಜೀವ ಇರುವವರೆಗೂ ಮನಸ್ಸು ಮತ್ತೊಂದರಿಂದ ಮತ್ತೊಂದೆಡೆಗೆ ಜಿಗಿಯುತ್ತಲೇ ಇರುತ್ತೆ. ಇಂಥ ಪುಟಿಯುವ ಮನಃಸ್ಥಿತಿಯೇ ಜೀವಚೈತನ್ಯದ ಗುಟ್ಟು ಅನ್ನೋದು ಸುಳ್ಳಲ್ಲ. ಜೀವವಿಕಾಸಕ್ಕೆ ಮನೋವಿಕಾಸವೇ ಮೂಲಪ್ರೇರಣೆಯಾಗಿರುವುದರಿಂದ ಚಿತ್ತ ಚಾಂಚಲ್ಯ ಜೀವಚೈತನ್ಯಕ್ಕೆ ಅಗತ್ಯ. ಹಾಗಂತ, ಚಿತ್ತಚಾಂಚಲ್ಯವೇ ಮನುಷ್ಯನಿಗೆ ವಾಂಛಲ್ಯವಾಗಬಾರದು. ಅದರಲ್ಲೂ ಚಪಲಚಿತ್ತತೆ ಮತ್ತಷ್ಟು ಅಪಾಯಕಾರಿ.

ಭೌತಿಕ ಜಗತ್ತಿಗೂ, ಬೌದ್ಧಿಕ ಮನಸ್ಸಿಗೂ ಅವಿನಾಭಾವ ಸಂಬಂಧವಿದೆ. ಇದಕ್ಕೆ ಸೋದಾಹರಣವಾದ ವಿವರಣೆಗಳು ಬಹಳಷ್ಟಿವೆ. ವೇದವ್ಯಾಸರ ಶಿವ-ಮಹಾಪುರಾಣದಲ್ಲಿ ಬರುವ 'ರುದ್ರಸಂಹಿತೆ'ಯ ಮೊದಲ ಖಂಡವಾದ 'ಸೃಷ್ಟಿ-ಖಂಡ'ದಲ್ಲಿ ವಿಶ್ವದ ಸೃಷ್ಟಿಯ ಬಗ್ಗೆ ಹೇಳಲಾಗಿದೆ. ಇದು ವಿಜ್ಞಾನ ಹೇಳುವ 'ಸೂಪರ್ ನೋವಾ' ಅಥವ 'ಬಿಗ್‌ಬ್ಯಾಂಗ್' ವಿಚಾರಕ್ಕೂ ಸಾಮ್ಯತೆ ಇದೆ. ವಿಶ್ವ ಉಗಮಕ್ಕೂ ಮುನ್ನ ಬ್ರಹ್ಮಾಂಡದಲ್ಲಿ ಸೃಷ್ಟಿ-ಸ್ಥಿತಿ-ಲಯಗಳು ನಿಷ್ಕ್ರಿಯವಾಗಿದ್ದವು. ಇಡೀ ಜಗತ್ತು ಕತ್ತಲಲ್ಲಿ ಮುಳುಗಿ ಹೋಗಿತ್ತು. ಹೀಗೆ ಜಡವಾಗಿದ್ದ ಭೌತಿಕ ಜಗತ್ತಿನೊಳಗೆ ಸುಪ್ತವಾಗಿದ್ದ ಬೌದ್ಧಿಕ ಗುಣವಾದ ಸತ್ವ-ರಜಸ್ಸು-ತಮಸ್ಸುಗಳು ಚಂಚಲಗೊಂಡಾಗ ಸೃಷ್ಟಿ ವಿಕಾಸವಾಯಿತು ಎಂದು 'ಸೃಷ್ಟಿಖಂಡ'ದಲ್ಲಿ ಹೇಳಲಾಗಿದೆ. ಅದರಂತೆ ವಿಜ್ಞಾನ ಕೂಡ ವಿಶ್ವಸೃಷ್ಟಿಗೆ ಒಂದು ನಕ್ಷತ್ರದ ಹುಟ್ಟು ಮತ್ತು ಸಾವಿನ ಬಗ್ಗೆ 'ಬ್ಲ್ಯಾಕ್‌ಹೋಲ್' ಅಥವಾ 'ಶ್ವೇತಕುಬ್ಜ'ದ ವಿಚಾರ ಮಂಡಿಸುತ್ತೆ. ಆದರೆ ಮನಸ್ಸಿನ ವಿಕಾಸ ಮತ್ತು ವಿಕಾರಗಳ ಬಗ್ಗೆ ಹಿಂದೂ ಶಾಸ್ತ್ರಗ್ರಂಥಗಳು ಹೇಳುವಷ್ಟು ನಿಖರವಾಗಿ ಮನೋವಿಜ್ಞಾನವೂ ಹೇಳುವುದಿಲ್ಲ. ಮನೋವಿಕಾಸವೇ, ಜೀವವಿಕಾಸಕ್ಕೆ ನಾಂದಿಯಾಯಿತೆಂಬ 'ಸೃಷ್ಟಿಖಂಡ'ದ ಸತ್ಯಸಾರವನ್ನು ಎಲ್ಲರೂ ಒಪ್ಪಲೇಬೇಕು.

ಎಷ್ಟೋ ಜನ ಕೇಳುತ್ತಾರೆ. ಸೃಷ್ಟಿಕರ್ತನಾದ ದೇವರು ಕೆಟ್ಟವರನ್ನೇಕೆ ಸೃಷ್ಟಿಸುತ್ತಾನೆ. ಒಳ್ಳೆಯವರನ್ನಷ್ಟೇ ಸೃಷ್ಟಿಸಿದ್ದರೆ, ದೇವರು ಅವತಾರ ಎತ್ತಿ ದುಷ್ಟರನ್ನು ಸಂಹರಿಸುವ ಕಷ್ಟವೇ ಇರುತ್ತಿರಲಿಲ್ಲ ಅಂತ. ಆದರೆ, ಸೃಷ್ಟಿಯ ಮೂಲಗುಣವೇ ಚಂಚಲ ಅನ್ನೋ ಸತ್ಯವನ್ನ ಇವರು ಮರೆಯುತ್ತಾರೆ. ಇವರ ಪ್ರಶ್ನೆ ಹೇಗಿದೆ ಎಂದರೆ, ವಿದ್ಯುತ್ ಶಕ್ತಿಗೆ ಋಣಾತ್ಮಕ (ನೆಗೆಟಿವ್) ವಾಹಕ ಏಕೆ ಬೇಕು? ಧನಾತ್ಮಕ (ಪಾಸಿಟಿವ್) ವಿದ್ಯುದ್ವಾಹಕವಷ್ಟೇ ಇದ್ದರೆ ಸಾಕಾಗುವುದಿಲ್ಲವೇ ಎಂಬಂತಿದೆ. 'ಸೃಷ್ಟಿಖಂಡ'ದಲ್ಲಿ ಹೇಳಿದಂತೆ, ಬ್ರಹ್ಮಾಂಡ ಸೃಷ್ಟಿಯಾಗುವ ಪೂರ್ವದಲ್ಲಿ ಭೌತಿಕ ಜಗತ್ತು ಜಡವಾಗಿತ್ತು. ಇದರೊಳಗೆ ಸುಪ್ತವಾಗಿದ್ದ ಸತ್ವ-ರಜಸ್ಸು-ತಮಸ್ಸುಗಳ ಬೌದ್ಧಿಕ ತಾಕಲಾಟದಲ್ಲಿ ಜೀವೋತ್ಪತ್ತಿಯಾಯಿತು. ಇಲ್ಲಿ ರಜಸ್ಸು (ಒಳ್ಳೆಯ) ಮತ್ತು ತಮಸ್ಸು (ಕೆಟ್ಟದ್ದು) ಎರಡೂ ಇದ್ದರೇನೆ ಜೀವ ಸೃಷ್ಟಿಯಾಗುವುದು. ಒಂದೇ ಇದ್ದರೆ ಜೀವ ಚೈತನ್ಯಶೀಲವಾಗುವುದಿಲ್ಲ. ಋಣಾತ್ಮಕ ಮತ್ತು ಧನಾತ್ಮಕ ಗುಣಕಾಂತಿಯಿಂದಲೇ ವಿಶ್ವಕ್ರಾಂತಿಯಾಗಿದೆ.

ಮನೋಚಾಂಚಲ್ಯದಿಂದಲೇ ಗುಣವೈರುಧ್ಯಗಳು ಮನುಷ್ಯನಲ್ಲಿ ಮೇಳೈಸಿವೆ. ಮನಸ್ಸಿನೊಳಗೆ ಉತ್ಪತ್ತಿಯಾಗುವ ಕೆಟ್ಟ ಗುಣಗಳನ್ನೂ ಸಂಪೂರ್ಣ ನಿಗ್ರಹಿದರೆ, ನಾವು ನಿಶ್ಚೇಷ್ಟಿತರಾಗುತ್ತೇವೆ. ಕೆಟ್ಟಗುಣಗಳನ್ನು ಸಂಪೂರ್ಣವಾಗಿ ನಿಗ್ರಹಿಸದಿದ್ದರೆ, ಮತ್ತೊಬ್ಬರ ಬದುಕನ್ನು ಹಾಳು ಮಾಡುವ ಕುಚೇಷ್ಟಿತರಾಗುತ್ತೇವೆ. ಅದಕ್ಕಾಗಿ ಒಳ್ಳೆಯ ಗುಣಗಳು ಆದಷ್ಟು ಚಂಚಲಗೊಳ್ಳದಂತೆ, ಕೆಟ್ಟಗುಣಗಳ ಕಡೆ ವಾಂಛಲ್ಯ ಬೆಳೆಯದಂತೆ 'ಸತ್ಸಂಗ'ದಲ್ಲಿ ಮನಸ್ಸು ಹೊರಳಿಸಬೇಕು. ಆಗ 'ಸಚ್ಚಿದಾನಂದ'ದ ಸುಂದರ ಬದುಕು ಸಾಕಾರವಾಗುತ್ತದೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಕ್ಲಬ್ ಹೌಸ್ — ಪ್ರಜಾವಾಣಿ ಆಲದಮರ

ಡಾ.ರಾಜ್ ಕುಮಾರ್ ಮತ್ತು ಕನ್ನಡ

ಎಸ್.ಕೆ.ಭಗವಾನ್, ಹಿರಿಯ ನಿರ್ದೇಶಕ.

ಕೆ.ಕಲ್ಯಾಣ್, ಸಂಗೀತ ನಿರ್ದೇಶಕ.

ಎಲ್.ಎನ್.ಮುಕುಂದರಾಜ್, ಪ್ರಾಧ್ಯಾಪಕ, ಸಾಹಿತಿ. ರವಿಕುಮಾರ್ ಟೆಲೆಕ್ಸ್, ಕವಿ, ಪತ್ರಕರ್ತ.

ಶಮಿತಾ ಮಲ್ನಾಡ್, ಹಿನ್ನೆಲೆ ಗಾಯಕಿ

ನಿರ್ವಹಣೆ: ...

10.30 ರಿಂದ 12.30

ಪಾಡ್‌ಕಾಸ್ಟ್: ಪ್ರತೀ ದಿನ: ಬೆಳಿಗ್ಗೆ 7 ವಚನವಾಣಿ, ಬೆ. 7.30 ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್, ಬೆಳಿಗ್ಗೆ 9.30 ಸಂಪಾದಕೀಯ, ಬೆಳಿಗ್ಗೆ 9 ಪ್ರಚಲಿತ

ಪ್ರಜಾವಾಣಿ ಕನ್ನಡ ಧ್ವನಿ

ಪೇಟಿಎಂ ಐಪಿಒ ನಾಳೆ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಮುಂದಿನ ವಾರ ಐಪಿಒ (ಆರಂಭಿಕ ಸಾರ್ವಜನಿಕ ಕೊಡುಗೆ) ಮೂಲಕ ಪೇಟಿಎಂ ಕಂಪನಿಯ ಮಾತೃಸಂಸ್ಥೆ ಒನ್97 ಕಮ್ಯುನಿಕೇಷನ್ಸ್, ಸಫೈರ್ ಫುಡ್ಸ್ ಇಂಡಿಯಾ ಮತ್ತು ಲೇಟೆಂಟ್‌ವೀವ್ ಅನಲಿಟಿಕ್ಸ್ ಕಂಪನಿಗಳು ಬಂಡವಾಳ ಸಂಗ್ರಹಿಸಲಿವೆ. ಈ ಮೂರು ಕಂಪನಿಗಳ ಐಪಿಒದಿಂದ ಒಟ್ಟಾರೆ ₹ 21 ಸಾವಿರ ಕೋಟಿ ಸಂಗ್ರಹ ಆಗುವ ನಿರೀಕ್ಷೆ ಇದೆ.

ಪೇಟಿಎಂ ಬ್ರ್ಯಾಂಡ್ ಅಡಿಯಲ್ಲಿ ಕಾರ್ಯಾಚರಿಸುವ ಒನ್97 ಕಮ್ಯುನಿಕೇಷನ್ಸ್ ಐಪಿಒಗೆ ಅರ್ಜಿ ಸಲ್ಲಿಸಲು ಸೋಮವಾರದಿಂದ ಬುಧವಾರದವರೆಗೆ ಅವಕಾಶ ಇರಲಿದೆ. ₹ 18,300 ಕೋಟಿ ಸಂಗ್ರಹಿಸುವ ನಿರೀಕ್ಷೆಯನ್ನು ಕಂಪನಿ ಇಟ್ಟುಕೊಂಡಿದೆ. ಇದರಲ್ಲಿ ₹ 8,300 ಕೋಟಿ ಮೊತ್ತದ ಹೊಸ ಷೇರುಗಳು ಮತ್ತು ಹಾಲಿ ಷೇರುದಾರರಿಂದ ₹ 10 ಸಾವಿರ ಕೋಟಿ ಮೊತ್ತದ ಆಫರ್ ಫರ್ ಸೇಲ್ (ಒಎಫ್‌ಎಸ್) ಸೇರಿದೆ. ಪ್ರತಿ ಷೇರಿಗೆ ₹ 2,080 ರಿಂದ ₹ 2,150 ದರ ನಿಗದಿ ಮಾಡಲಾಗಿದೆ.

ಪೇಟಿಎಂ ಐಪಿಒ ದೇಶದಲ್ಲಿ ಇದುವರೆಗೆ ನಡೆದಿರುವ ಐಪಿಒಗಳ ಪೈಕಿ ಅತಿ ದೊಡ್ಡ ಮೊತ್ತದ್ದಾಗಿರಲಿದೆ. ಈ ಹಿಂದೆ 2010ರಲ್ಲಿ ಕೋಲ್ ಇಂಡಿಯಾ ಕಂಪನಿಯು ಐಪಿಒ ಮೂಲಕ ₹ 15,200 ಕೋಟಿ ಸಂಗ್ರಹಿಸಿತ್ತು.

ಸಫೈರ್ ಫುಡ್ಸ್ ಇಂಡಿಯಾದ ಐಪಿಒ ನವೆಂಬರ್ 9ರಂದು ಆರಂಭ ಆಗಲಿದೆ. ₹ 2,073 ಕೋಟಿ ಸಂಗ್ರಹ ಆಗುವ ನಿರೀಕ್ಷೆ ಇದೆ. ಲೇಟೆಂಟ್‌ವೀವ್ ಅನಲಿಟಿಕ್ಸ್ ಕಂಪನಿಯ ಐಪಿಒದಲ್ಲಿ ₹ 474 ಕೋಟಿ ಮೊತ್ತದ ಹೊಸ ಷೇರುಗಳು ಹಾಗೂ ₹ 126 ಕೋಟಿ ಮೊತ್ತದ ಒಎಫ್‌ಎಸ್ ಒಳಗೊಂಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಕಾರ್ಕಳ	
ಹೊಸತು	35000-42500
ಹಳತು	46000-51000
ಕುಂದಾಪುರ	
ಹಳೆಚಾಲಿ	46000-49500
ಹೊಸಚಾಲಿ	30000-37000
ಪುತ್ತೂರು	
ಹೊಸತು	35500-50000
ಕಾಫಿ (50ಕೆ.ಜಿಗೆ)	
ಮುದ್ರೆಮನೆ	
ಎಪಿ	13200
ಎಸಿ	5850
ಆರ್‌ಪಿ	6075
ಆರ್‌ಸಿ	3535

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

केनरा बैंक Canara Bank — Syndicate

ದೂರವಾಣಿ : 080–26548863
ಪ್ರಾದೇಶಿಕ ಕಛೇರಿ, ಬೆಂಗಳೂರು ದಕ್ಷಿಣ

ಕೆನರಾ ಬ್ಯಾಂಕ್, ಇದರಲ್ಲಿ ಚಿನ್ನ ಮೌಲ್ಯಮಾಪಕರ ನೇಮಕಾತಿ ಪ್ರಸ್ತಾವನೆ

ಬೆಂಗಳೂರಿನ ಕೆಳಕಂಡ ಬಡಾವಣೆಗಳಲ್ಲಿರುವ ನಮ್ಮ ಶಾಖೆಗಳಿಗೆ ಚಿನ್ನಾಭರಣ ಮೌಲ್ಯಮಾಪನ ಕಾರ್ಯಕ್ಕಾಗಿ, ಚಿನ್ನಾಭರಣ ಮೌಲ್ಯಮಾಪಕರ ಅಗತ್ಯವಿರುತ್ತದೆ. ಚಿನ್ನಾಭರಣ ಮೌಲ್ಯಮಾಪಕರು ಕೆಳಕಂಡ ಷರತ್ತುಗಳಿಗೆ ತಕ್ಕವರಾಗಿರತಕ್ಕದ್ದು.

1) ಚಿನ್ನಾಭರಣ ಮೌಲ್ಯಮಾಪಕರನ್ನು ಗುತ್ತಿಗೆ ಆಧಾರದಲ್ಲಿ 3 ವರ್ಷಗಳ ಅವಧಿಗೆ ನೇಮಕಾತಿ ಮಾಡಿಕೊಳ್ಳಲಾಗುವುದು.
2) ಅರ್ಜಿದಾರರು ಕನಿಷ್ಠ 5 ವರ್ಷಗಳ ಅನುಭವದೊಂದಿಗೆ 30 ರಿಂದ 60 ವರ್ಷ ವಯಸ್ಸಿನವರಾಗಿರಬೇಕು.
3) ಕನಿಷ್ಠ ಶೈಕ್ಷಣಿಕ ವಿದ್ಯಾರ್ಹತೆ 10ನೇ ತರಗತಿ ಉತ್ತೀರ್ಣರಾಗಿರಬೇಕು.
4) ಆಯ್ಕೆ ಮಾಡಿಕೊಳ್ಳಲಾಗಿರುವ ಚಿನ್ನಾಭರಣ ಮೌಲ್ಯ ಮಾಪಕರು ಇನ್ನಾವುದೇ ಹಣಕಾಸು ಸಂಸ್ಥೆ / ಬ್ಯಾಂಕ್/ಶಾಖೆಯ ನಿಯಮಿತ ಮೌಲ್ಯಮಾಪಕರಾಗಿರಬಹುದು. ಆದರೆ ಮಾರ್ಗಸೂಚಿಗಳು ನಮ್ಮ ಶಾಖೆಯ ಮೌಲ್ಯಮಾಪನ ಕಾರ್ಯಕ್ಕೆ ಅಡ್ಡಿ ಉಂಟಾಗಕೂಡದು.
5) ಮೇಲಿನ ಷರತ್ತಿನಲ್ಲಿ ತಿಳಿಸಿರುವಂತೆ, ಸದರಿ ಚಿನ್ನಾಭರಣ ಮೌಲ್ಯಮಾಪಕರು ನಮ್ಮ ಶಾಖೆಯ ಅಗತ್ಯಕ್ಕೆ ಅನುಗುಣವಾಗಿ ಕಾರ್ಯಕ್ಕೆ ಹಾಜರಾಗುವೆನೆಂದು ಮುಚ್ಚಳಿಕೆ ನೀಡತಕ್ಕದ್ದು.
6) ಆಸಕ್ತಿಯುಳ್ಳವರು ಮೇಲ್ಕಂಡ ನಮ್ಮ ಪ್ರಾದೇಶಿಕ ಕಛೇರಿಯನ್ನು ಸಂಪರ್ಕಿಸಬಹುದು.

ಬಡಾವಣೆಗಳ ಹೆಸರು
ಜಯನಗರ
ಬಸವನಗುಡಿ
ಜೆ.ಪಿ.ನಗರ
ಆರ್.ಆರ್.ನಗರ
ಬಿ.ಟಿ.ಎಂ ಲೇಔಟ್
ಬನಶಂಕರಿ
ಗಿರಿನಗರ
ಕಾಳಿದಾಸ ಲೇಔಟ್
ಕುಂಬಳಗೂಡು
ಬೊಮ್ಮನಹಳ್ಳಿ
ಕೋಣನಕುಂಟೆ
ವಿಲ್ಸನ್ ಗಾರ್ಡನ್

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 20.11.2021.

ಸ್ಥಳ : ಬೆಂಗಳೂರು ದಿನಾಂಕ : 6.11.2021 — ಸಹಿ, ಅಧಿಕೃತ ಅಧಿಕಾರಿ ಕೆನರಾ ಬ್ಯಾಂಕ್

NOTICE

Sri.Eshwar.B.S :Petitioner
And
Smt.Suma.B. :Respondent

NOTICE TO THE RESPONDENT BY WAY OF PAPER PUBLICATION

To: Smt. Suma.B., W/o.Eshwar.B.S. D/o.Basavaraj Aged about 30 Years, R/at Nettegere Village, Harohalli Hobli, Bengaluru South Taluk, Kanakapura Road, Bengaluru -562112.

WHEREAS the petitioner in the above petition has filed the above petition for Divorce, filed U/S. 13 (I) (i-a)&(111) of H.M. Act.

You are hereby summoned to appear in person before this Hon'ble 1st Addl. Principal Family Judge at Bengaluru.

Take Notice that in default of your appearance on the day of 30.11.2021, the petition will be heard and determined in your absence.

Given under my hand and seal of this Hon'ble Court on 25-10-21

BY ORDER OF THE COURT,
Sd/- Sheristedar
Family Court Bangalore

ADVOCATE FOR THE PETITIONER
Sri. N.K.Venkata Ravana Reddy, Advocate,
No. 2, 1st Floor, Jaraganahalli, Kanakapura Main Road, Metro Pillar No.94 Bengaluru-560078.
Mob: 90088 29839

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್, ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಬೈಯಿಂಗ್

Farm House/ Land/ Resorts

WANTED 3 Acres Land Near Hosakote For SSI Within 10 km (Budget 40-60 lakhs) Ph - 7483731856/ 9845081002

ರೆಂಟಲ್ ಪ್ರಾಪರ್ಟೀಸ್

Accommodation Available

House

2 BEDROOM Hall Kitchen Independent house covered car park Jalahalli Kalathur Layout contact 9840025751

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8103990990

ಉದ್ಯೋಗಾವಕಾಶ

Call Centre

ಮಹಿಳಾ ಟೆಲಿಕಾಲರ್ಸ್ ಬೇಕಾಗಿದ್ದಾರೆ. (ಮನೆಯಿಂದಲೇ ಕೆಲಸ) ತಮಿಳು ಅಥವಾ ತೆಲುಗು ನಲ್ಲಿ ನಿರರ್ಗಳವಾಗಿ ಮಾತನಾಡುವುದು ಕಡ್ಡಾಯ ನಿಗದಿತ ಸಂಬಳ ರೂ. 7000/- + ಉತ್ತಮ ಇನ್ಸೆಂಟಿವ್. ಸಂಪರ್ಕಿಸಿ : 9943046899

General

ಬೇಕಾಗಿದ್ದಾರೆ: ಮನೆಕೆಲಸ (11,000-13,000) /ಹೋಂನರ್ಸ್ (13,000-15,000) ಹೆಂಗಸರು/ ಹುಡುಗಿಯರು ಬೇಕಾಗಿದ್ದಾರೆ. ಊಟ-ವಸತಿ ಸೌಕರ್ಯವಿದೆ. ಉಡುಪಿ (ಉಚಿತ ನೋಂದಣಿ). 9901402916

Hospital & Medical Jobs

WANTED:- LADY Pharmacist for our Rajarajeshwari Nagar Outlet, Urgent Requirement Intrested candidate's call below No:- 9986891424

Hotel

WANTED 1) Cook/ Maker: IDLI/ Wada/ Pani Puri/ Pav Bhaji Maker/ Dosa. 2) Pizza Maker/ Chef: Experience in Fast Food Outlets like McDonald, KFC etc. 3) Chef/ Bawarchi: Hyderabadi Biryani, Harees/ Haleem, 4) Waiters 5) Restaurant Manager, Work Locaton: HUMNABAD Pincode 585330, Dist: Bidar, Karnataka. CALL: 9741828206

Wanted

ದಾವಣಗೆರೆ ನಗರದ ಹೋಟೆಲ್‌ನಲ್ಲಿ ಕೆಲಸ ಮಾಡಲು ಮ್ಯಾನೇಜರ್, ಅಕೌಂಟೆಂಟ್, ಕೆಲಸಕ್ಕಾಗಿ ಹುಡುಗರು ಬೇಕಾಗಿದ್ದಾರೆ ಹೊರ ಪ್ರದೇಶದವರಿಗೆ ಉಚಿತ ಊಟ-ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : 7022460137, 9886314000, 9060375678

SAMRUDHI GRAND Hotel Kamakshi Palya Opp Pooja Kalyana Mantappa Magadi Main Road Bangalore Cityಗೆ ಎಲ್ಲಾ ರೀತಿಯ ಕೆಲಸಗಾರರು ಬೇಕಾಗಿದ್ದಾರೆ. Chandrashekar 9342552428

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

CONNECT

ಸಿರಿಚೈತನ್ಯ ಮಿಲ್ಲೆಟ್ ಮಿಕ್ಸ್
ಮಧುಮೇಹ ಕೊಲೆಸ್ಟ್ರಾಲ್ ಥೈರಾಡ್ ಸಮಸ್ಯೆಗಳಿಗೆ ಉತ್ತಮ ಪರಿಣಾಮ
ಸೇವಿಸಿ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಿ
"ಸಿರಿಚೈತನ್ಯ ಮಿಲ್ಲೆಟ್ ಮಿಕ್ಸ್ ಸೇವನೆ ದಿನವೆಲ್ಲ ಉತ್ಸಾಹ"
ಎಲ್ಲಾ ಹಾಪ್ ಕಾಮ್ ಅಂಗಡಿಗಳಲ್ಲಿ, ಎಲ್ಲಾ ಕದಂಬ ಹೋಟೆಲ್‌ನಲ್ಲಿ ಹಾಗೂ ಇತರ ಅಂಗಡಿಗಳಲ್ಲಿ ದೊರೆಯುತ್ತದೆ.
ರಾಜ್ಯಾದ್ಯಂತ ವಿತರಕರು ಬೇಕಾಗಿದ್ದಾರೆ. 99002 65678
http://www.sirichaitanya.com

ವ್ಯಾಪಾರ

Business Offers

Distributors

PARTNER TO manage the teamat Rajajinagar with zero investment. Call 7019246661

Finance

APERIO FUNDS get from 15CR TO 150 CR, Interest @3-6%, Against Viable Projects, LAP, Business, Binding Properties, Institutions, Industries, Sickunits & Takeover, Transparent Process, Solicit Enquiry. Ct.7200418844. Mail: aperiofunds@gmail.com

ಭವಿಷ್ಯ

Astrology

★॥ಸ್ತ್ರೀವಶೀಕರಣ ಸ್ಪೆಷಲಿಸ್ಟ್॥★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ ಕರೆಮಾಡಿ. ಪಂಡಿತ್.ಜೈದೇವಭಟ್. 9901724082

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

ಸಾಯಿಅಂಜನ್ ಜ್ಯೋತಿಷ್ಯರು ಸ್ತ್ರೀ-ಪುರುಷ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಸಮಸ್ಯೆಗಳು ಏನೇಇರಲಿ 11 ಗಂಟೆಯಲ್ಲಿ ಪರಿಹಾರ ಶತಸಿದ್ಧ.ಪರಿಹಾರ ಆಗದಿದ್ದಲ್ಲಿ ನಿಮ್ಮ ಹಣ ವಾಪಸ್. 9535852216

ವಶೀಕರಣ ಸ್ಪೆಷಲಿಸ್ಟ್: ಸ್ತ್ರೀಪುರುಷ ವಶೀಕರಣ, ಲೈಂಗಿಕ ವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ. ಸ್ತ್ರೀಯರಿಗೆ ಉಚಿತ ಪರಿಹಾರ. 9448687421

★॥ವಶೀಕರಣ ಸ್ಪೆಷಲಿಸ್ಟ್॥★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಪರಿಹಾರ. 9900511008

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ

Travel

ಶ್ರೀಶ್ರೇಯಸ್ ಟೂರ್ಸ್: 23.11.2021 13ದಿನಗಳು ದೆಹಲಿ,ಚಂಡೀಗಡ್,ಸಿಮ್ಲಾ, ಮನಾಲಿ, 5ದೇವಿಯರು,ಚಂಭ, ಡಾಲ್‌ಹೌಸಿ,ಜಮ್ಮು, ವೈಷ್ಣೋದೇವಿ,ಅಮೃತಸರ್, ಕುರುಕ್ಷೇತ್ರ.,23.12.2021 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ (ಅಮರಕಂಟಕ ಮಯ್ಯಾರ್ ಸಹಿತ).,22.12.2021 16ದಿನಗಳು ಅಖಂಡ ಆಂಧ್ರ ತೆಲಂಗಾಣ ರಾಜ್ಯಪ್ರವಾಸ 49ಸ್ಥಳಗಳು.9743351212/ 9206979202/ 9902050065

30.11.2021: 12ದಿವಸಗಳ ಸುಸಜ್ಜಿತ_ಊಟ,ರೂಂ, ವಸತಿಯೊಂದಿಗೆ ಕಾಶಿ,ವೈಷ್ಣವಿದೇವಿ, ಅಮೃತಸರ,ವಾಘಗಡಿ, ಅಲಹಾಬಾದ್, ಹರಿದ್ವಾರ,ಚಂಡಿಗಡ, ಆಗ್ರಾ,ಅಯೋಧ್ಯೆ,ದೆಹಲಿ ಪ್ಯಾಕೇಜ್ ಪ್ರವಾಸ,ವಿಮಾನದರ ಸೇರಿ ರೂ.29500/. "ಜಿ.ಆರ್.ಟ್ರಾವೆಲ್ಸ್". 7204667712

12-11-2021 ಈಶ ಫೌಂಡೇಶನ್,ಏರ್ಕಾಡ್. 25.11.2021 ಶಿರಡಿ, ಕೊಲ್ಲಾಪುರ್. 22-12-2021 ಗುಜರಾತ್. 6-1-2022 ಅಂಡಮಾನ್. 18-1-2022 ಕಾಶಿ,ಅಯೋಧ್ಯ. ನಂದಿನಿ ಟೂರಿಸ್ಟ್. 9916574089

ಶ್ರೀ ರಾಜರಾಜೇಶ್ವರಿ ಟೂರ್,9743895346, 9739618243, 2-12-2021, 3ದಿನಗಳು ಗೋವಾ, ದೂದ್ ಸಾಗರ್, 14-2-2022, 11 ದಿನಗಳು, ಕಾಶಿ, ಅಯೋಧ್ಯ, ನೇಪಾಳ, ಮುಕ್ತಿನಾಥ

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 18/11/21 ರಾಮೇಶ್ವರಂ, ಕನ್ಯಾಕುಮಾರಿ, ನವಗ್ರಹ. 07/12/21 ಉಜ್ಜಯಿನಿ 2 ಜ್ಯೋತಿರ್ಲಿಂಗ, 23/12/21 ಶಿರಡಿ, 3 ಜ್ಯೋತಿರ್ಲಿಂಗ. 9964527782

ಭಾವಪೂರ್ಣ ಶ್ರದ್ಧಾಂಜಲಿ



ಜನನ : 25–01–1983 – ಮರಣ : 06–11–2021

ಮಾಸ್ಟರ್ ವಿವೇಕ್ .ಎಸ್

ಇವರ ಅಂತಿಮ ಸಂಸ್ಕಾರವು ದಿನಾಂಕ 07–11–2021ರ ಭಾನುವಾರ ಮಾಗಡಿ ರಸ್ತೆ, ಸುಮನಹಳ್ಳಿ ಮಧ್ಯಾಹ್ನ 2–00 ಘಂಟೆಗೆ ನಡೆಸಲಾಗುವುದು.

ಇಂತಿ ದುಃಖತಪ್ತರು
ಮಾಸ್ಟರ್ ಸೋಮಶೇಖರ್ - 9844065157

LOOKING FOR JOB OPPORTUNITY
Refer Classifieds on Wednesday

ಚಿರಸ್ಮರಣೆ



ಶ್ರೀಮತಿ ಯಶೋದಮ್ಮ — 28.10.1938 – 16.09.2021
ಶ್ರೀ ಹೆಚ್. ಕೆಂಪಯ್ಯ — 23.3.1924 – 6.11.2020

ನೀವು ನಮ್ಮನ್ನ ಅಗಲಿದರೂ ನಿಮ್ಮ ಸವಿನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ

ಕುಟುಂಬವರ್ಗ, ಬಂಧು ಮಿತ್ರರು ಹಾಗೂ ಬಾಗಲೂರು ಗ್ರಾಮಸ್ಥರು

EDUCATION SPECIAL

We are coming out with special offer for Admission Notice, Education Success Congratulation Ads

DH Classifieds — More value, more impact

For details contact:
Jerry : 9731810277
Vishal : 9845114560
Tanveer: 9886213331
E-Mail: dhclassifieds@deccanherald.co.in

ಇಂಧನ ಟ್ಯಾಂಕರ್ ಸ್ಫೋಟ: 99 ಜನ ಸಾವು

ಸಿಯೆರಾ ಲಿಯೋನ್ (ರಾಯಿಟರ್ಸ್): ಸಿಯೆರಾ ಲಿಯೋನ್‌ನ ರಾಜಧಾನಿ ಫ್ರೀಟೌನ್‌ನಲ್ಲಿ ಗುರುವಾರ ಇಂಧನ ಟ್ಯಾಂಕರ್ ಸ್ಫೋಟಗೊಂಡು ಸಂಭವಿಸಿದ ಅವಘಡದಲ್ಲಿ ಕನಿಷ್ಠ 99 ಜನರು ಮೃತಪಟ್ಟಿದ್ದಾರೆ. ಉಳಿದಂತೆ 100ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಸ್ಥಳೀಯ ಅಧಿಕಾರಿಗಳು ಕನಿಷ್ಠ 99 ಶವಗಳನ್ನು ಗುರುತಿಸಿರುವುದನ್ನು ದೃಢಪಡಿಸಿದ್ದಾರೆ. ತುರ್ತು ಪರಿಹಾರ ಸಿಬ್ಬಂದಿ ಅವಶೇಷಗಳ ತೆರವು ಕಾರ್ಯದಲ್ಲಿ ತೊಡಗಿದ್ದಾರೆ. ಸ್ಫೋಟದ ತೀವ್ರತೆಗೆ ಹಲವರು ಜೀವಂತವಾಗಿ ದಹನವಾಗಿದ್ದರೆ, ಕಾರು, ಬೈಕುಗಳು ಸುಟ್ಟು ಕರಕಲಾಗಿವೆ.

ಮೃತರ ಸಂಖ್ಯೆಯೂ ಇನ್ನಷ್ಟು ಏರಿಕೆಯಾಗುವ ಸಂಭವವಿದೆ. ಗಾಯಾಳುಗಳನ್ನು ರಾಜಧಾನಿಯ ವಿವಿಧ ಆಸ್ಪತ್ರೆ, ಕ್ಲಿನಿಕ್‌ಗಳಿಗೆ ದಾಖಲಿಸಲಾಗಿದೆ ಎಂದು ಉಪ ಆರೋಗ್ಯ ಸಚಿವ ಅಮರ ಜಂಬೈ ತಿಳಿಸಿದ್ದಾರೆ.

ಸಿಯೆರಾ ಲಿಯೋನಲ್ಲಿ ಇಂಧನ ಟ್ಯಾಂಕರ್ ಸ್ಫೋಟಗೊಂಡ ಸ್ಥಳದ ದೃಶ್ಯ

ಜಖಂಗೊಂಡಿದ್ದ ಟ್ಯಾಂಕರ್‌ನಿಂದ ಸೋರಿಕೆಯಾಗುತ್ತಿದ್ದ ಇಂಧನವನ್ನು ಸಂಗ್ರಹಿಸಲು ಮುಗಿಬಿದ್ದಿದ್ದ ಸಾರ್ವಜನಿಕರು ಮೃತರಲ್ಲಿ ಸೇರಿದ್ದಾರೆ ಎಂದು ಅಧಿಕಾರಿ ಮೇರ್ ವೊನ್ನೆ ಅಕಿ ಸಾಯೆರ್ ಫೇಸ್‌ಬುಕ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

'ಹಲವರು ಗಾಯಗೊಂಡಿದ್ದಾರೆ. ಕೆಲವರು ಜೀವಂತವಾಗಿ ಸುಟ್ಟುಹೋಗಿದ್ದಾರೆ. ಇದೊಂದು ಭೀಕರ ಅವಘಡ' ಎಂದು ರಾಷ್ಟ್ರೀಯ ವಿಕೋಪ ನಿರ್ವಹಣಾ ಸಂಸ್ಥೆಯ ಅಧಿಕಾರಿ ಬ್ರಿಮಾ ಬುರೆ ಸೆಸೆ ಪ್ರತಿಕ್ರಿಯಿಸಿದ್ದಾರೆ.

ಸಿಯೆರಾ ಲಿಯೋನ್ ಅಧ್ಯಕ್ಷ ಜುಲಿಯಸ್ ಮಾಡಾ ಬಯೊ ಅವರೂ ದುರಂತ ಕುರಿತು ಟ್ವೀಟ್ ಮಾಡಿದ್ದು, ಬಾಧಿತ ಕುಟುಂಬಗಳಿಗೆ ಸರ್ಕಾರ ನೆರವು ನೀಡಲಿದೆ ಎಂದು ಭರವಸೆ ನೀಡಿದ್ದಾರೆ.

ಅವಘಡದ ಹಿಂದೆಯೇ ಪರಿಸರವನ್ನು ದಟ್ಟ ಹೊಗೆ ಆವರಿಸಿದ್ದು, ಬೆಂಕಿಯ ಕೆನ್ನಾಲಿಗೆ ಎತ್ತರದವರೆಗೂ ಕಾಣಿಸಿಕೊಂಡಿತ್ತು. ಅವಘಡವು ಈಗಾಗಲೇ ಸಂಕಷ್ಟವನ್ನು ಎದುರಿಸುತ್ತಿರುವ ಆರೋಗ್ಯ ವ್ಯವಸ್ಥೆಗೆ ಸವಾಲಾಗಿ ಪರಿಣಮಿಸಿದೆ.

2014–2015ರಲ್ಲಿ ದೇಶವನ್ನು ಬಾಧಿಸಿದ್ದ ಎಬೋಲಾ ಸಾಂಕ್ರಾಮಿಕ, , ಸಾಂಕ್ರಾಮಿಕ, ಇಲಾಖೆಯ ಮೇಲೂ ಪರಿಣಾಮ ಬೀರಿದ್ದು, ಇದರಿಂದಾಗಿ ಆರೋಗ್ಯ ಇಲಾಖೆಯ ಸುಮಾರು 250 ಸಿಬ್ಬಂದಿ ಮೃತಪಟ್ಟಿದ್ದರು.

ಪ್ರಮುಖ ಕನ್ನಾಟ್ ಆಸ್ಪತ್ರೆಯು ಗಾಯಾಳುಗಳಿಂದ ತುಂಬಿದೆ. ನೆರವಿಗೆ ಧಾವಿಸುವಂತೆ ಸೇವಾ ಸಂಸ್ಥೆಗಳಿಗೂ ಕೋರಲಾಗಿದೆ ಎಂದು ರೆಡ್‌ಕ್ರಾಸ್‌ನ ಕಾರ್ಯಕ್ರಮ ವ್ಯವಸ್ಥಾಪಕ ಸ್ವಾರೆ ಲೆಂಗೊರ್ ಅವರು ಪ್ರತಿಕ್ರಿಯಿಸಿದರು.

ಕಾಲ್ತುಳಿತ: 8 ಜನರ ಸಾವು

ಹ್ಯೂಸ್ಟನ್ (ಪಿಟಿಐ/ಎಎಫ್‌ಪಿ): ಅಮೆರಿಕದ ಟೆಕ್ಸಸ್ ನಗರದಲ್ಲಿ ಶುಕ್ರವಾರ ರಾತ್ರಿ ಆಯೋಜಿಸಲಾಗಿದ್ದ ಆಸ್ಟ್ರೊ ವರ್ಲ್ಡ್ ಸಂಗೀತ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಉಂಟಾದ ಕಾಲ್ತುಳಿತದಲ್ಲಿ, ಕನಿಷ್ಠ ಎಂಟು ಮಂದಿ ಮೃತಪಟ್ಟಿದ್ದಾರೆ. ನೂರಾರು ಜನರು ಗಾಯಗೊಂಡಿದ್ದಾರೆ.

ಅಮೆರಿಕದ ರ್‍ಯಾಪ್ ಗಾಯಕ ಟ್ರಾವಿಸ್ ಸ್ಕಾಟ್ ಅವರ ಕಾರ್ಯಕ್ರಮಕ್ಕೆ 50 ಸಾವಿರಕ್ಕೂ ಹೆಚ್ಚು ಸಂಖ್ಯೆಯ ಅಭಿಮಾನಿಗಳು ಸೇರಿದ್ದರು. ಟ್ರಾವಿಸ್ ಪ್ರದರ್ಶನ ನೀಡುವಾಗ, ರಾತ್ರಿ 9 ಗಂಟೆ ವೇಳೆಗೆ ಜನರ ಗುಂಪು ವೇದಿಕೆಯ ಮುಂಭಾಗಕ್ಕೆ ನುಗ್ಗಿ ಬಂತು. ಇದರಿಂದಾಗಿ, ಸ್ಥಳದಲ್ಲಿ ವಿಪರೀತ ನೂಕುನುಗ್ಗಲು ಉಂಟಾಯಿತು.

ಇದರಿಂದ ಜನರು ಆತಂಕಕ್ಕೀಡಾದರು. ಕೆಲವರು ಬಿದ್ದು ಗಾಯಗೊಂಡರೆ, ಮತ್ತೆ ಕೆಲವರು ಪ್ರಜ್ಞಾಹೀನರಾದರು. ಇದರಿಂದ ಜನರು ಮತ್ತಷ್ಟು ಗಾಬರಿಗೀಡಾದರು. ಕಾಲ್ತುಳಿತಕ್ಕೆ ಸಿಕ್ಕು ಹಲವರು ಗಾಯಗೊಂಡರು. ವಿಷಯ ಗೊತ್ತಾಗುತ್ತಿದ್ದಂತೆಯೇ ಕಾರ್ಯಕ್ರಮವನ್ನು ಸ್ಥಗಿತಗೊಳಿಸಲಾಯಿತು ಎಂದು ಹ್ಯೂಸ್ಟನ್ ಅಗ್ನಿಶಾಮಕ ವಿಭಾಗದ ಮುಖ್ಯಸ್ಥ ಸ್ಯಾಮ್ ಪೆನಾ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಈ ಘಟನೆಯನ್ನು 'ಸಾಮೂಹಿಕ ಸಾವು ನೋವು' ಎಂದಿರುವ ಪೆನಾ, 'ಶುಕ್ರವಾರ ರಾತ್ರಿ ಕನಿಷ್ಠ ಎಂಟು ಮಂದಿ ದೃಢಪಟ್ಟಿರುವುದು ಖಚಿತವಾಗಿದೆ. ವೈದ್ಯಕೀಯ ಪರೀಕ್ಷೆ ಬಳಿಕ ಅವರ ಸಾವಿಗೆ ನಿಖರ ಕಾರಣ ತಿಳಿಯಲಿದೆ.

300ಕ್ಕೂ ಹೆಚ್ಚು ಜನರಿಗೆ ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. 17 ಮಂದಿಯನ್ನು ಆಸ್ಪತ್ರೆಗೆ ದಾಖಲಿಸಿದ್ದು, ಅವರಲ್ಲಿ 11 ಮಂದಿಗೆ ಹೃದಯ ಸ್ತಂಭನ ಆಗಿದೆ' ಎಂದು ಹೇಳಿದ್ದಾರೆ.

ಕಾಲ್ತುಳಿತದಿಂದಾಗಿ, ಸಂಗೀತ ಉತ್ಸವದ ಎರಡನೇ ದಿನದ ಕಾರ್ಯಕ್ರಮ ರದ್ದುಗೊಳಿಸಲಾಗಿದೆ. ರ್‍ಯಾಪ್ ಗಾಯಕ ಸ್ಕಾಟ್, 2018ರಲ್ಲಿ ಆಸ್ಟ್ರೊ ವರ್ಲ್ಡ್ ಉತ್ಸವ ಆರಂಭಿಸಿದ್ದರು. 2020ರಲ್ಲಿ ನಡೆಯಬೇಕಿದ್ದ ಕಾರ್ಯಕ್ರಮವನ್ನು ಕೋವಿಡ್–19 ಕಾರಣಕ್ಕೆ ರದ್ದು ಮಾಡಲಾಗಿತ್ತು.

ಸುದ್ದಿ 2 ನಿಮಿಷ

ಅಕ್ರಮ ಹಣ ವರ್ಗಾವಣೆ ಪ್ರಕರಣ: ದೇಶ್‌ಮುಖ್‌ಗೆ ನ್ಯಾಯಾಂಗ ಬಂಧನ

ಮುಂಬೈ (ಪಿಟಿಐ): ಅಕ್ರಮ ಹಣ ವರ್ಗಾವಣೆ ಪ್ರಕರಣದ ಆರೋಪಿ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶ್‌ಮುಖ್ ಅವರನ್ನು ವಿಶೇಷ ಪಿಎಂಎಲ್‌ಎ ನ್ಯಾಯಾಲಯಕ್ಕೆ ಶನಿವಾರ ಹಾಜರುಪಡಿಸಲಾಗಿದ್ದು, ನ್ಯಾಯಾಲಯ ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಅನಿಲ್ ದೇಶಮುಖ್ ಅವರನ್ನು ಜಾರಿ ನಿರ್ದೇಶನಾಲಯ(ಇಡಿ) ಬಂಧಿಸಿದೆ.



ದೇಶಮುಖ್ ಅವರನ್ನು ನ.6ರವರೆಗೆ ಇ.ಡಿ ಕಸ್ಟಡಿಗೆ ಒಪ್ಪಿಸಲಾಗಿತ್ತು. ಶನಿವಾರ ದೇಶ್‌ಮುಖ್ ಅವರನ್ನು ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ವಿಚಾರಣೆಯ ಸಂದರ್ಭದಲ್ಲಿ, ಇ.ಡಿ ಹೆಚ್ಚಿನ ವಿಚಾರಣೆಗೆ 9 ದಿನಗಳವರೆಗೆ ಆರೋಪಿಯನ್ನು ತನ್ನ ಕಸ್ಟಡಿಗೆ ನೀಡುವಂತೆ ಕೋರಿತ್ತು, ಆದರೆ ನ್ಯಾಯಾಲಯ ಇದನ್ನು ನಿರಾಕರಿಸಿ, ನ್ಯಾಯಾಂಗ ಬಂಧನಕ್ಕೆ ಆದೇಶಿಸಿದೆ.

ಈ ಪ್ರಕರಣದಲ್ಲಿ 12 ಗಂಟೆಗಳ ವಿಚಾರಣೆಯ ನಂತರ ಇ.ಡಿ ಕಳೆದ ಸೋಮವಾರ ಅನಿಲ್ ದೇಶಮುಖ್ ಅವರನ್ನು ಬಂಧಿಸಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದೇಶ್ ಮುಖ್ ಅವರಲ್ಲದೆ, ಅವರ ಇಬ್ಬರು ಸಹಾಯಕರಾದ ಕುಂದನ್ ಶಿಂಧೆ ಮತ್ತು ಸಂಜೀವ್ ಪಲಾಂಡೆ ಅವರನ್ನು ಇ.ಡಿ ಬಂಧಿಸಿದೆ. ಸದ್ಯ ಇವರಿಬ್ಬರು ನ್ಯಾಯಾಂಗ ಬಂಧನದಲ್ಲಿದ್ದಾರೆ.

ಪೊಲೀಸ್ ವಶಕ್ಕೆ ಸಚಿನ್ ವಾಜೆ

ಮುಂಬೈ (ಪಿಟಿಐ): ಸುಲಿಗೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಮಾಜಿ ಸಹಾಯಕ ಪೊಲೀಸ್ ಇನ್‌ಸ್ಪೆಕ್ಟರ್ ಸಚಿನ್ ವಾಜೆ ಅವರನ್ನು ಪೊಲೀಸ್ ವಶಕ್ಕೆ ಒಪ್ಪಿಸಿದ್ದ ಅವಧಿಯನ್ನು ಕೋರ್ಟ್ ನ. 13ರವರೆಗೂ ವಿಸ್ತರಿಸಿದೆ.

ಉದ್ಯಮಿ ಬಿಮಲ್ ಅಗರವಾಲ್ ಅವರ ದೂರು ಆಧರಿಸಿ ಗೋರೆಗಾವ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ಮುಂಬೈನ ಮಾಜಿ ಪೊಲೀಸ್ ಕಮಿಷನರ್ ಪರಂ ವೀರ್ ಸಿಂಗ್ ಅವರೂ ಆರೋಪಿಯಾಗಿದ್ದಾರೆ.

ಹೆಚ್ಚುವರಿ ತನಿಖೆಗೆಗಾಗಿ ವಾಜೆ ಅವರನ್ನು ಏಳು ದಿನ ವಶಕ್ಕೆ ಒಪ್ಪಿಸಬೇಕು ಎಂದು ಪೊಲೀಸರು ಕೋರಿದ್ದರು. ಇದಕ್ಕೆ ಕೋರ್ಟ್ ಸಮ್ಮತಿಸಿತು. ಉದ್ಯಮಿ ಮುಖೇಶ್ ಅಂಬಾನಿ ನಿವಾಸದ ಬಳಿ ಸ್ಫೋಟಕವಿದ್ದ ವಾಹನಪತ್ತೆ ಪ್ರಕರಣ ಕುರಿತು ಎನ್‌ಐಎ ಅಧಿಕಾರಿಗಳು ಮಾರ್ಚ್‌ನಲ್ಲಿ ವಾಜೆ ಅವರನ್ನು ಬಂಧಿಸಿದ್ದರು.

ಅಲ್ಲದೆ, ಇವರ ವಿರುದ್ಧ ಪ್ರತ್ಯೇಕ ದೂರು ನೀಡಿದ್ದ ಉದ್ಯಮಿ ಅಗರವಾಲ್ ಅವರು ತಮಗೆ ಸೇರಿದ್ದ ಎರಡು ಹೋಟೆಲ್‌ಗಳ ಮೇಲೆ ದಾಳಿ ಮಾಡದಿರಲು ₹9 ಲಕ್ಷ ಲಂಚ ಕೇಳಿದ್ದರು ಎಂದು ಆರೋಪಿಸಿದ್ದರು. ಈ ಪ್ರಕರಣ ಜನವರಿ 2020 ಮತ್ತು ಮಾರ್ಚ್ 2021ರ ನಡುವೆ ನಡೆದಿತ್ತು ಎಂದು ಹೇಳಲಾಗಿದೆ.

'ದೊಡ್ಡ ಮೊತ್ತದ ಹಣ ಸುಲಿಗೆ': ಸೇವೆಯಿಂದ ವಜಾಗೊಂಡಿರುವ ಸಚಿನ್ ವಾಜೆ ಮತ್ತು ಮಾಜಿ ನಗರ ಪೊಲೀಸ್ ಕಮಿಷನರ್ ಪರಂ ವೀರ್ ಸಿಂಗ್ ಅವರು ಕ್ರಿಕೆಟ್ ಬುಕ್ಕಿಗಳಿಂದ ಬಂಧಿಸುವ ಬೆದರಿಕೆಯೊಡ್ಡಿ ದೊಡ್ಡ ಮೊತ್ತವನ್ನು ಸುಲಿಗೆ ಮಾಡಿದ್ದಾರೆ ಎಂದು ಮುಂಬೈ ಪೊಲೀಸರು ಇದೇ ಸಂದರ್ಭದಲ್ಲಿ ಕೋರ್ಟ್‌ಗೆ ಮಾಹಿತಿ ನೀಡಿದರು.

ಕ್ರೂಸ್ ಡ್ರಗ್ಸ್ ಪ್ರಕರಣ: ಮುಂಬೈ ತಲುಪಿದ ಎಸ್‌ಐಟಿ

ಮುಂಬೈ (ಪಿಟಿಐ): ವಿವಾದಾತ್ಮಕ ಕ್ರೂಸ್ ಡ್ರಗ್ಸ್ ಪ್ರಕರಣ ಸೇರಿದಂತೆ ಆರು ಪ್ರಕರಣಗಳ ತನಿಖೆಯನ್ನು ವಹಿಸಿಕೊಂಡ ಒಂದು ದಿನದ ನಂತರ ಎನ್‌ಸಿಬಿ (ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ)ಯ ವಿಶೇಷ ತನಿಖಾ ತಂಡವು (ಎಸ್‌ಐಟಿ) ಶನಿವಾರ ಮುಂಬೈ ತಲುಪಿದೆ.

ಕ್ರೂಸ್ ಡ್ರಗ್ಸ್ ಪ್ರಕರಣದಲ್ಲಿ ಶಾರುಖ್ ಖಾನ್ ಪುತ್ರ ಆರ್ಯನ್ ಖಾನ್ ಬಂಧನವಾಗಿದೆ. ದೆಹಲಿಯಿಂದ ಬಂದ ತಂಡವು ಮಧ್ಯಾಹ್ನ ದಕ್ಷಿಣ ಮುಂಬೈನಲ್ಲಿರುವ ಎನ್‌ಸಿಬಿಯ ವಲಯ ಕಚೇರಿಗೆ ಭೇಟಿ ನೀಡಿತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ತನಿಖೆಯ ನೇತೃತ್ವ ವಹಿಸುವ ಹಿರಿಯ ಐಪಿಎಸ್ ಅಧಿಕಾರಿ ಸಂಜಯ್ ಕುಮಾರ್ ಸಿಂಗ್, 'ನಾವು ಕೆಲವು ಪ್ರಕರಣಗಳನ್ನು ವಹಿಸಿಕೊಂಡಿದ್ದೇವೆ. ನಮ್ಮ ತನಿಖೆ ಪ್ರಾರಂಭಿಸುತ್ತೇವೆ' ಎಂದರು.

ಪ್ರಕರಣಗಳ ಮರುತನಿಖೆ ನಡೆಸುತ್ತೀರಾ ಎಂಬ ಪ್ರಶ್ನೆಗೆ, 'ಮೊದಲು ಪ್ರಕರಣದ ದಾಖಲಾತಿ ಮತ್ತು ಇದುವರೆಗಿನ ತನಿಖೆಯ ಪ್ರಗತಿ ನೋಡಿ, ನಂತರ ನಿರ್ಧರಿಸುತ್ತೇವೆ. ಇದೀಗ, ಆ ಪ್ರಕರಣಗಳಲ್ಲಿ ಹೆಚ್ಚಿನ ತನಿಖೆಯನ್ನು ಮಾತ್ರ ನಡೆಸಲಾಗುವುದು' ಎಂದರು.

ಬೆಂಕಿ ಅನಾಹುತ: 11 ಕೋವಿಡ್ ರೋಗಿಗಳ ಸಾವು

ಒಂದನೇ ಪುಟದಿಂದ

ಘಟನೆಯಲ್ಲಿ ರೋಗಿಗಳು ಮೃತಪಟ್ಟಿರುವುದನ್ನು ಅಹ್ಮದ್ ನಗರ ಜಿಲ್ಲಾಧಿಕಾರಿ ರಾಜೇಂದ್ರ ಭೋಸಲೆ ದೃಢಪಡಿಸಿದ್ದಾರೆ. ಘಟನೆಗೆ ಶಾರ್ಟ್ ಸರ್ಕಿಟ್ ಕಾರಣ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ ಎಂದು ಅವರು ಹೇಳಿದ್ದಾರೆ.

ಐಸಿಯುನಲ್ಲಿದ್ದ 17 ಮಂದಿ ಪೈಕಿ 11 ಮಂದಿ ಮೃತಪಟ್ಟಿದ್ದು, ಗಾಯಗೊಂಡ ಉಳಿದವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಆಸ್ಪತ್ರೆಯಲ್ಲಿ ಎರಡು ಐಸಿಯುಗಳಿವೆ. ಎರಡನೇ ಮಹಡಿಯಲ್ಲಿ ಅವಘಡ ನಡೆದಿದೆ. ಬೆಂಕಿ ಕಾಣಿಸಿಕೊಂಡ ತಕ್ಷಣ, ಗಾಯಗೊಂಡ ರೋಗಿಗಳನ್ನು ಹತ್ತಿರದ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಮುಂಜಾಗ್ರತಾ ಕ್ರಮವಾಗಿ ಪಕ್ಕದ ವಾರ್ಡ್‌ಗಳಲ್ಲಿದ್ದ ರೋಗಿಗಳನ್ನೂ ಸ್ಥಳಾಂತರ ಮಾಡಲಾಯಿತು.

ಘಟನೆಗೆ ಶಾರ್ಟ್ ಸರ್ಕಿಟ್ ಕಾರಣ ಎಂದು ಶಂಕಿಸಲಾಗಿದೆ ಎಂದು ಅಹಮದ್ ನಗರ ಪಾಲಿಕೆಯ ಮುಖ್ಯ ಅಗ್ನಿಶಾಮಕ ಅಧಿಕಾರಿ ಶಂಕರ್ ಮಿಸಾಲ್ ಹೇಳಿದ್ದಾರೆ. 'ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ. ಸಾವಿಗೆ ಉಸಿರುಗಟ್ಟುವಿಕೆ ಅಥವಾ ವೈದ್ಯಕೀಯ ಆಮ್ಲಜನಕ ಪೂರೈಕೆಯಲ್ಲಿನ ಅಡಚಣೆ ಕಾರಣವೇ ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ'

> ಮೃತಪಟ್ಟವರ ಸಂಬಂಧಿಕರಿಗೆ ನನ್ನ ಸಂತಾಪಗಳು. ಪರಿಹಾರ ಕಾರ್ಯದಲ್ಲಿ ಸಹಕರಿಸುವಂತೆ ಕಾಂಗ್ರೆಸ್ ಕಾರ್ಯಕರ್ತರಲ್ಲಿ ನಾನು ಮನವಿ ಮಾಡುತ್ತೇನೆ
>
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಎಂದಿದ್ದಾರೆ.

'ಮೃತರಲ್ಲಿ ಬಹುತೇಕರು ಹಿರಿಯ ನಾಗರಿಕರಾಗಿದ್ದು, ಕೋವಿಡ್ ನಂತರದ ಚಿಕಿತ್ಸೆ ಪಡೆಯುತ್ತಿದ್ದರು. ಎಲ್ಲರೂ ವೆಂಟಿಲೇಟರ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು' ಎಂದು ಸಚಿವ ರಾಜೇಶ್ ಟೋಪೆ ಹೇಳಿದ್ದಾರೆ. ಪೊಲೀಸ್ ಪಂಚನಾಮೆ ಪೂರ್ಣಗೊಂಡ ನಂತರ ವಿದ್ಯುತ್ ತಪಾಸಣಾ ವಿಭಾಗವು ವಿಚಾರಣೆಯನ್ನು ಆರಂಭಿಸುತ್ತದೆ ಎಂದು ಇಂಧನ ಸಚಿವ ಡಾ. ನಿತಿನ್ ರಾವುತ್ ಹೇಳಿದ್ದಾರೆ.

ಘಟನೆಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಆಘಾತ ವ್ಯಕ್ತಪಡಿಸಿದ್ದು, ಮೃತರ ಕುಟುಂಬದವರಿಗೆ ಸಾಂತ್ವನ ಹೇಳಿದ್ದಾರೆ.

ಈ ವರ್ಷದ ಏಪ್ರಿಲ್‌ನಲ್ಲಿ ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ಖಾಸಗಿ ಆಸ್ಪತ್ರೆಯ ಐಸಿಯುನಲ್ಲಿ ಬೆಂಕಿ ಕಾಣಿಸಿಕೊಂಡು, 15 ಕೋವಿಡ್ ರೋಗಿಗಳು ಮೃತಪಟ್ಟಿದ್ದರು. ಕೋವಿಡ್ ಆಸ್ಪತ್ರೆಯನ್ನು ಹೊಂದಿದ್ದ ಮುಂಬೈನ ಭಾಂಡುಪ್‌ನಲ್ಲಿರುವ ಡ್ರೀಮ್ಸ್ ಮಾಲ್‌ನಲ್ಲಿ ಮಾರ್ಚ್‌ನಲ್ಲಿ ಸಂಭವಿಸಿದ ಮತ್ತೊಂದು ಬೆಂಕಿ ಅವಘಡದಲ್ಲಿ 9 ರೋಗಿಗಳು ಅಸುನೀಗಿದ್ದರು.

ಅಗ್ನಿ ಅನಾಹುತ ನಡೆದ ಆಸ್ಪತ್ರೆಯಿಂದ ರೋಗಿಗಳನ್ನು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಲಾಯಿತು ಪಿಟಿಐ ಚಿತ್ರ

ತನಿಖೆಗೆ ಠಾಕ್ರೆ ಆದೇಶ

ಅಹ್ಮದ್ ನಗರದ ಆಸ್ಪತ್ರೆಯಲ್ಲಿ ಕೋವಿಡ್–19ಗೆ ಚಿಕಿತ್ಸೆ ಪಡೆಯುತ್ತಿದ್ದ 11 ರೋಗಿಗಳ ಜೀವವನ್ನು ಆಹುತಿ ಪಡೆದ ಅಗ್ನಿ ಅವಘಡದ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಶನಿವಾರ ಆದೇಶಿಸಿದ್ದಾರೆ. ವಿಭಾಗೀಯ ಆಯುಕ್ತರ ನೇತೃತ್ವದಲ್ಲಿ ತನಿಖೆ ನಡೆಯಲಿದ್ದು, ವರದಿ ಸಲ್ಲಿಸಲು ಒಂದು ವಾರ ಸಮಯ ನೀಡಲಾಗಿದೆ.

ದುರಂತದ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಅವರು, ಇದಕ್ಕೆ ಕಾರಣರಾದವರಿಗೆ ಕಠಿಣ ಶಿಕ್ಷೆ ನೀಡಲಾಗುವುದು ಎಂದು ತಿಳಿಸಿದ್ದಾರೆ. ಮೃತರ ಕುಟುಂಬ ಸದಸ್ಯರಿಗೆ ತಲಾ ₹5 ಲಕ್ಷ ಪರಿಹಾರ ಘೋಷಿಸಿದ್ದಾರೆ. ಗಾಯಾಳು ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಅವರು ನಿರ್ದೇಶಿಸಿದ್ದಾರೆ.

ಬೀದಿ ಮಕ್ಕಳ ಪುನರ್ವಸತಿ: ವರದಿಗೆ ಸೂಚನೆ

ನವದೆಹಲಿ: ನಿರ್ಗತಿಕ ಮಕ್ಕಳ ಪುನರ್ವಸತಿ ಸಮಸ್ಯೆಯನ್ನು ಪರಿಶೀಲಿಸಲು ಮುಂದಾಗಿರುವ ಸುಪ್ರೀಂ ಕೋರ್ಟ್, ಪ್ರಮಾಣಿತ ಕಾರ್ಯಾಚರಣೆ ವಿಧಾನಗಳ (ಎಸ್‌ಒಪಿ) ಅನುಷ್ಠಾನದ ವಸ್ತುಸ್ಥಿತಿ ವರದಿಯನ್ನು ಸಲ್ಲಿಸುವಂತೆ ಮಕ್ಕಳ ಹಕ್ಕುಗಳ ರಕ್ಷಣೆಯ ರಾಷ್ಟ್ರೀಯ ಆಯೋಗಕ್ಕೆ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಮತ್ತು ಬಿ. ಆರ್. ಗವಾಯಿ ಅವರಿದ್ದ ಪೀಠವು, ಎರಡು ವಾರಗಳಲ್ಲಿ ವಿವರಗಳನ್ನು ಸಲ್ಲಿಸುವಂತೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ. ಎಂ. ನಟರಾಜ್ ಅವರಿಗೆ ಸೂಚಿಸಿತು.

ಎಸ್‌ಒಪಿಯನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ರವಾನಿಸಲಾಗಿದೆ ಎಂದು ಕಾನೂನು ಅಧಿಕಾರಿ ಮಾಹಿತಿ ನೀಡಿದರು. ನಿಯಮಗಳಿಗೆ ಅನುಗುಣವಾಗಿ ನಿರ್ಗತಿಕ ಮಕ್ಕಳ ಪುನರ್ವಸತಿ ಮಾಡಲಾಗಿದೆಯೇ ಎಂಬ ಕುರಿತು ವರದಿ ಸಲ್ಲಿಸುವಂತೆ ನ್ಯಾಯಾಲಯವು ತಿಳಿಸಿತು.

ಎಸ್‌ಸಿಪಿಸಿಆರ್ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಸಂಸ್ಥೆಗಳ ಮೂಲಕ ಬೀದಿ ಮಕ್ಕಳ ದತ್ತಾಂಶ ಸಂಗ್ರಹಿಸಲು ತಂಡಗಳನ್ನು ರಚಿಸಬಹುದು. ನಂತರ ಕಾನೂನಿನ ಪ್ರಕಾರ, ಮಕ್ಕಳ ರಕ್ಷಣಾ ಕಾರ್ಯಾಚರಣೆಗಳನ್ನು ಕೈಗೊಳ್ಳಬಹುದು ಎಂದು 2020 ರಲ್ಲಿ ಸಿದ್ಧಪಡಿಸಲಾದ ಎಸ್‌ಒಪಿ ತಿಳಿಸುತ್ತದೆ.

ಕರಡು ಎಸ್‌ಒಪಿಯನ್ನು ರಾಜ್ಯ ಸರ್ಕಾರಗಳು ಮತ್ತು ಎಲ್ಲಾ ಹೈಕೋರ್ಟ್‌ಗಳ ಅಭಿಪ್ರಾಯ ತಿಳಿಸಲು ಕಳುಹಿಸಲಾಗುವುದು ಎಂದು ತಿಳಿಸಿರುವುದರಿಂದ, ಎರಡು ವಾರಗಳಲ್ಲಿ ವರದಿ ಸಲ್ಲಿಸಬೇಕು ಎಂದು ನ್ಯಾಯಾಲಯ ಹೇಳಿದೆ. ಮುಂದಿನ ವಿಚಾರಣೆಯನ್ನು ನ್ಯಾಯಾಲಯವು ನವೆಂಬರ್ 15ಕ್ಕೆ ನಿಗದಿಪಡಿಸಿದೆ. ಸುಪ್ರೀಂ ಕೋರ್ಟ್, ಈ ಪ್ರಕರಣವನ್ನು ಸ್ವಯಂ ಪ್ರೇರಣೆಯಿಂದ ಕೈಗೆತ್ತಿಕೊಂಡಿದೆ.

ಪ್ರಧಾನಿ ಮೋದಿ ಮೆಚ್ಚಿದ್ದಾರೆ: ಶಿಲ್ಪಿ ಅರುಣ್ ಯೋಗಿರಾಜ್

ಪ್ರಜಾವಾಣಿ ವಾರ್ತೆ

ಮೈಸೂರು: 'ಪ್ರಧಾನಿ ಕಚೇರಿಯಿಂದ ಸಂದೇಶ ಬಂದಿದ್ದು, ಆದಿ ಶಂಕರಾಚಾರ್ಯರ ಪ್ರತಿಮೆ ಸ್ವರೂಪ ಮೆಚ್ಚಿ ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಒಬ್ಬ ಕಲಾವಿದನಿಗೆ ಇದಕ್ಕಿಂತ ಸಂತೋಷ ಯಾವುದಿದೆ?'

ಉತ್ತರಾಖಂಡದ ಕೇದಾರನಾಥದಲ್ಲಿ ಶುಕ್ರವಾರ ಪ್ರಧಾನಿ ಮೋದಿ ಅನಾವರಣಗೊಳಿಸಿದ ಆದಿ ಶಂಕರಾಚಾರ್ಯರ ಪ್ರತಿಮೆ ಕೆತ್ತಿದ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರ ಖುಷಿಯ ಮಾತಿದು.

ಮೈಸೂರಿನ ಕಶ್ಯಪ ಶಿಲ್ಪಕಲಾ ನಿಕೇತನದ ಅರುಣ್ ಯೋಗಿರಾಜ್ ಮತ್ತು 7 ಜನ ಸಹ ಕಲಾವಿದರ ಕೆತ್ತನೆಯಲ್ಲಿ 12 ಅಡಿ ಎತ್ತರದ ಈ ಪ್ರತಿಮೆ ಮೂಡಿಬಂದಿದೆ. ಎಚ್.ಡಿ.ಕೋಟೆ ತಾಲ್ಲೂಕಿನ ಕೃಷ್ಣಶಿಲೆಯನ್ನು ಬಳಸಲಾಗಿದೆ.

'ಶಂಕರಾಚಾರ್ಯರ ಮೂರ್ತಿ ಕೆತ್ತನೆ ಕಾರ್ಯ ದೊರೆತದ್ದು ನಮ್ಮ ಪುಣ್ಯ. ಇದಕ್ಕಾಗಿ 9 ತಿಂಗಳು ತೆಗೆದುಕೊಂಡಿದ್ದು, ಬೇರೆ ರಾಜ್ಯ ಹಾಗೂ ವಿದೇಶದಿಂದಲೂ ಮೆಚ್ಚುಗೆ ವ್ಯಕ್ತವಾಗುತ್ತಿದೆ. ನನ್ನ ಕಲಾ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ' ಎಂದು ತಿಳಿಸಿದರು.

'13 ವರ್ಷಗಳಿಂದ ಶಿಲ್ಪ ಕೆತ್ತನೆ ಕಾರ್ಯದಲ್ಲಿ ತೊಡಗಿಕೊಂಡಿದ್ದೇನೆ. ಈಗ 25 ಅಡಿ ಎತ್ತರದ ಹನುಮಂತನ ಕಲ್ಲಿನ ಪ್ರತಿಮೆ ನಿರ್ಮಿಸುತ್ತಿದ್ದೇನೆ' ಎಂದರು.

ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಇಂದು; ಉಪಚುನಾವಣೆಗಳ ಫಲಿತಾಂಶದ ಆತ್ಮಾವಲೋಕನ

ಪಂಚರಾಜ್ಯ ಚುನಾವಣೆ ಕಾರ್ಯತಂತ್ರಕ್ಕೆ ಮುನ್ನುಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿಯ ಪ್ರಮುಖ ನಾಯಕರು ಭಾನುವಾರ ಇಲ್ಲಿ ನಡೆಯಲಿರುವ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಇತ್ತೀಚೆಗಷ್ಟೇ ನಡೆದ ವಿವಿಧ ರಾಜ್ಯಗಳ ವಿಧಾನಸಭೆಯ 30 ಹಾಗೂ ಲೋಕಸಭೆಯ ಮೂರು ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯ ಮಿಶ್ರ ಫಲಿತಾಂಶದ ಆತ್ಮಾವಲೋಕನ ಹಾಗೂ ಮುಂದಿನ ವರ್ಷದ ಆರಂಭದಲ್ಲಿ ನಡೆಯಲಿರುವ ಐದು ರಾಜ್ಯಗಳ ವಿಧಾನಸಭೆ ಚುನಾವಣೆಯ ಕಾರ್ಯತಂತ್ರ ರೂಪಿಸುವ ಕುರಿತು ಸಭೆಯಲ್ಲಿ ಚರ್ಚೆಯಾಗುವ ಸಾಧ್ಯತೆಯಿದೆ.

ಕೊರೊನಾ ಸಾಂಕ್ರಾಮಿಕದಿಂದ ಸಾವಿಗೀಡಾಗಿರುವ ಲಕ್ಷಾಂತರ ಜನರಿಗೆ ಸಂತಾಪ ಸೂಚಕ ನಿರ್ಣಯವನ್ನು ಅಂಗೀಕರಿಸಲಾಗುವುದು. ಜೊತೆಗೆ ಕೋವಿಡ್ ಸಂದರ್ಭದಲ್ಲಿ ಅಸಮರ್ಪಕ ನಿರ್ವಹಣೆಯಿಂದ ಕೆಲ ರಾಜ್ಯಗಳಲ್ಲಿ ಎದ್ದಿರುವ ಆಡಳಿತ ವಿರೋಧಿ ಅಲೆಯನ್ನು ನೀಗಿಸುವ ಕುರಿತಂತೆ ಪ್ರಮುಖವಾಗಿ ಚರ್ಚೆಯಾಗಲಿದೆ. ಕೋವಿಡ್ ಸಾಂಕ್ರಾಮಿಕ ಹತೋಟಿಗೆ ಬಂದ ನಂತರ ನಡೆಯುವ ಮೊದಲ ಕಾರ್ಯಕಾರಿಣಿ ಇದಾಗಿದೆ.

ಉತ್ತರ ಪ್ರದೇಶ ಮತ್ತು ಉತ್ತರಾಖಂಡ ವಿಧಾನಸಭೆ ಚುನಾವಣೆಗಳನ್ನು ದೃಷ್ಟಿಯಲ್ಲಿ ಇರಿಸಿಕೊಂಡೇ ಕೇದಾರನಾಥ ದೇವಾಲಯದ ಪುನರ್‌ನಿರ್ಮಾಣ, ಕಾಶಿ ವಿಶ್ವನಾಥ ದೇವಾಲಯದ ಸುತ್ತಮುತ್ತಲಿನ ಪ್ರದೇಶಗಳ ನವೀಕರಣ ಹಾಗೂ ಅಯೋಧ್ಯೆಯ ರಾಮ ಮಂದಿರದ ನಿರ್ಮಾಣ ಕಾರ್ಯಕ್ಕೆ ಚಾಲನೆ ನೀಡಿರುವಂಥ ಮಹತ್ವದ ನಿರ್ಧಾರಗಳು ಪಕ್ಷಕ್ಕೆ ಯಾವ ರೀತಿ ಸಹಕಾರಿ ಆಗಲಿವೆ ಎಂಬುದೂ ಚರ್ಚೆಯಾಗಲಿರುವ ವಿಷಯಗಳಲ್ಲಿ ಪ್ರಮುಖವಾಗಿವೆ.

ಕೋವಿಡ್ ಸಂದರ್ಭ ಬಿಜೆಪಿ ಕಾರ್ಯಕರ್ತರು ಪ್ರಾಣದ ಹಂಗು ತೊರೆದು ದೇಶದಾದ್ಯಂತ ಸೇವೆ ಸಲ್ಲಿಸಿದ್ದು, 100 ಕೋಟಿ ಡೋಸ್ ಕೋವಿಡ್ ಲಸಿಕೆಯ ಗುರಿ ಸಾಧಿಸಿರುವದೂ ಸರ್ಕಾರದ ಸಾಧನೆ ಎಂಬುದು ಸಭೆಗೆ ಮುನ್ನ ಪಕ್ಷ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿದೆ.

ಸಾಂಕ್ರಾಮಿಕದ ಸಂದರ್ಭ ದೇಶದ ಬಡವರಿಗೆ ಒಂದೂವರೆ ವರ್ಷ ಉಚಿತ ಪಡಿತರ ವಿತರಣೆ, ಮಹಿಳೆಯರು, ರೈತರು, ಹಿರಿಯ ನಾಗರಿಕರು, ವಿಧವೆಯರು ಮತ್ತು ಅಂಗವಿಕಲರ ಬ್ಯಾಂಕ್ ಖಾತೆಗಳಿಗೆ ನೇರ ಹಣ ವರ್ಗಾವಣೆ ಮಾಡಿರುವ ಕೇಂದ್ರ ಸರ್ಕಾರದ ಕ್ರಮದ ಕುರಿತು ಸಭೆಯಲ್ಲಿ ಬಹಿರಂಗಪಡಿಸುವ ಸ್ಪಷ್ಟ ಸೂಚನೆಯನ್ನು ಈ ಹೇಳಿಕೆ ನೀಡಿದೆ.

ಬೆಳಿಗ್ಗೆ 10ರಿಂದ ನಡೆಯಲಿರುವ ಸಭೆಯಲ್ಲಿ 124 ಜನ ಮುಖಂಡರು ನೇರವಾಗಿ ಭಾಗವಹಿಸಲಿದ್ದಾರೆ. ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಆಯಾ ರಾಜ್ಯದಲ್ಲಿರುವ ಪಕ್ಷದ ಕಚೇರಿಯಿಂದಲೇ ಭಾಗವಹಿಸಲಿದ್ದಾರೆ.

ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಪ್ರಾಸ್ತಾವಿಕದೊಂದಿಗೆ ಆರಂಭವಾಗುವ ಸಭೆಯು, ಪ್ರಧಾನಿ ಮೋದಿ ಅವರ ಭಾಷಣದೊಂದಿಗೆ ಅಂತ್ಯವಾಗಲಿದೆ. ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ ಸಿಂಗ್, ನಿತಿನ್ ಗಡ್ಕರಿ, ಪೀಯೂಷ್ ಗೋಯಲ್, ನಿರ್ಮಲಾ ಸೀತಾರಾಮನ್ ಸಭೆಯಲ್ಲಿ ಭಾಗವಹಿಸುವ ಪ್ರಮುಖರಾಗಿದ್ದಾರೆ ಎಂದು ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಶನಿವಾರ ತಿಳಿಸಿದ್ದಾರೆ.

ಭಾರತೀಯ ಪನೋರಮಾಗೆ ಕನ್ನಡದ 4 ಚಿತ್ರಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ಗೋವಾದಲ್ಲಿ ನವೆಂಬರ್ 20ರಿಂದ ಆರಂಭ ಆಗಲಿರುವ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ 'ಭಾರತೀಯ ಪನೋರಮಾ' ವಿಭಾಗಕ್ಕೆ ಕನ್ನಡದ 4 ಚಿತ್ರಗಳು ಸೇರಿದಂತೆ ಒಟ್ಟು 25 ಚಿತ್ರಗಳು ಆಯ್ಕೆಯಾಗಿವೆ.

ಸಾಗರ ಪುರಾಣಿಕ್ ನಿರ್ದೇಶನದ 'ಡೊಳ್ಳು', ಪ್ರವೀಣ ಕೃಪಾಕರ ನಿರ್ದೇಶನದ 'ತಲೆದಂಡ', ಗಣೇಶ ಹೆಗಡೆ ನಿರ್ದೇಶನದ 'ನೀಲಿ ಹಕ್ಕಿ' ಹಾಗೂ ಮನ್ಸೋರೆ ನಿರ್ದೇಶನದ 'ಆ್ಯಕ್ಟ್–1978' ಚಿತ್ರಗಳು ಕನ್ನಡ ವಿಭಾಗದಿಂದ ಆಯ್ಕೆಯಾದ ಚಿತ್ರಗಳು.

ಐಮೀ ಬರುವಾ ನಿರ್ದೇಶಿಸಿರುವ ದಿಮಾಸಾ ಭಾಷೆಯ 'ಶೆಮ್ಖೋರ್', ಭಾರತೀಯ ಪನೋರಮಾ ವಿಭಾಗದಲ್ಲಿ ಪ್ರದರ್ಶನಗೊಳ್ಳಲಿರುವ ಮೊದಲ ಚಿತ್ರವಾಗಿದ್ದು, ಆಸ್ಕರ್ ಪ್ರಶಸ್ತಿಗಾಗಿ ಅಧಿಕೃತ ಪ್ರವೇಶ ಪಡೆದಿರುವ ಪಿ.ಎಸ್. ವಿನೋದರಾಜ್ ನಿರ್ದೇಶನದ ತಮಿಳು ಚಿತ್ರ 'ಕೂಳಂಗಳ್', ಕಳೆದ ವರ್ಷ ನಿಧನರಾದ ಹಿರಿಯ ಬಂಗಾಳಿ ಚಿತ್ರ ನಟ ಸೌಮಿತ್ರ ಚಟರ್ಜಿ ಅವರ ಜೀವನಾಧರಿತ ಕಥೆಯ 'ಅಭಿಜಾನ್' (ನಿರ್ದೇಶನ ಪರಾಂಬ್ರತ ಚಟ್ಟೋಪಾಧ್ಯಾಯ) ಪ್ರಾದೇಶಿಕ ಭಾಷೆಯ ಪ್ರಮುಖ ಚಿತ್ರಗಳಾಗಿವೆ.

ಕನ್ನಡದ ಹಿರಿಯ ನಿರ್ದೇಶಕ ಎಸ್.ವಿ. ರಾಜೇಂದ್ರಸಿಂಗ್ ಬಾಬು ನೇತೃತ್ವದ ತೀರ್ಪುಗಾರರ ಸಮಿತಿಯು ಸ್ಪರ್ಧೆಯಲ್ಲಿದ್ದ 221 ಚಿತ್ರಗಳ ಪೈಕಿ 25 ಚಿತ್ರಗಳನ್ನು ಆಯ್ಕೆಮಾಡಿದೆ.

ಬಂಗಾಳಿ, ಮರಾಠಿ ವಿಭಾಗದ ಐದು ಹಾಗೂ ಹಿಂದಿ ಮತ್ತು ಮಲಯಾಳಂನಿಂದ ತಲಾ ಎರಡು, ತೆಲುಗಿನ ಒಂದು ಚಿತ್ರ ಪನೋರಮಾ ವಿಭಾಗಕ್ಕೆ ಆಯ್ಕೆಯಾದ ಚಿತ್ರಗಳ ಪಟ್ಟಿಯಲ್ಲಿವೆ. ಬೋಡೋ, ಮಿಶಿಂಗ್, ಸಂಸ್ಕೃತ ಮತ್ತು ಗುಜರಾತಿ ಭಾಷೆಗಳ ಚಿತ್ರಗಳೂ ಈ ವಿಭಾಗದಲ್ಲಿ ಪ್ರದರ್ಶನಗೊಳ್ಳಲಿವೆ.

ಎಸ್.ನಲ್ಲಮುತ್ತು ನೇತೃತ್ವದ ಇನ್ನೊಂದು ಸಮಿತಿಯು ಸಾಕ್ಷ್ಯಚಿತ್ರ ವಿಭಾಗಕ್ಕೆ 20 ಚಿತ್ರಗಳನ್ನು ಆಯ್ಕೆ ಮಾಡಿದೆ. ರಾಜೀವ್ ಪ್ರಕಾಶ್ ಅವರ 'ವೇದ– ದಿ ವಿಜನರಿ' ಭಾರತೀಯ ಪನೋರಮಾ ವಿಭಾಗದಲ್ಲಿ ಪ್ರದರ್ಶನಗೊಳ್ಳಲಿರುವ ಮೊದಲ ಚಿತ್ರವಾಗಿದೆ.

ಪೆಂಟಗನ್ ವರದಿ: ಪ್ರಧಾನಿ ಮೋದಿಗೆ ಕಾಂಗ್ರೆಸ್ ಆಗ್ರಹ

'ಚೀನಾಕ್ಕೆ ನೀಡಿದ್ದ 'ಕ್ಲೀನ್ ಚಿಟ್' ವಾಪಸ್ ಪಡೆಯಲಿ'

ನವದೆಹಲಿ (ಪಿಟಿಐ): ಅರುಣಾಚಲ ಪ್ರದೇಶದಲ್ಲಿ 4.5 ಕಿ.ಮೀ. ಭಾರತದ ಪ್ರದೇಶಕ್ಕೆ ಚೀನಾ ಪ್ರವೇಶಿಸಿದೆ ಎಂಬ ಪೆಂಟಗನ್ ವರದಿಯನ್ನು ಪ್ರಧಾನಿ ಮೋದಿ ಅವರು ಅಲ್ಲಗಳೆದು, ಭಾರತದ ಭೂಪ್ರದೇಶಕ್ಕೆ ಯಾರೂ ಪ್ರವೇಶಿಸಿಲ್ಲ ಎಂದು ಚೀನಾಕ್ಕೆ ನೀಡಿರುವ 'ಕ್ಲೀನ್ ಚಿಟ್' ಅನ್ನು ಹಿಂಪಡೆಯುವಂತೆ ಕಾಂಗ್ರೆಸ್ ಶನಿವಾರ ಒತ್ತಾಯಿಸಿದೆ. ಅಲ್ಲದೇ, ಜಗತ್ತನ್ನು ದಾರಿ ತಪ್ಪಿಸಿದ್ದಕ್ಕಾಗಿ ಪ್ರಧಾನಿ ಕ್ಷಮೆಯಾಚಿಸುವಂತೆ ಆಗ್ರಹಿಸಿದೆ.

ಚೀನಾದೊಂದಿಗಿನ ನಮ್ಮ ಎಲ್ಲಾ ಗಡಿಗಳಲ್ಲಿ ಏಪ್ರಿಲ್ 2020ರಂತೆ ಯಥಾಸ್ಥಿತಿಯು ಯಾವಾಗ ಮರುಸ್ಥಾಪನೆಯಾಗಲಿದೆ ಎಂಬುದಕ್ಕೆ ಪ್ರಧಾನಿ ಉತ್ತರಿಸಬೇಕು. ಅಲ್ಲದೇ, ಯಥಾಸ್ಥಿತಿಗೆ ತರಲು ಗಡುವು ನೀಡಬೇಕು ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರಾ ಒತ್ತಾಯಿಸಿದ್ದಾರೆ.

ಚೀನಾದ ಅತಿಕ್ರಮಣವನ್ನು ಈಗ ಪೆಂಟಗನ್ ತನ್ನ ವಾರ್ಷಿಕ ವರದಿಯಲ್ಲಿ ಅಮೆರಿಕದ ಕಾಂಗ್ರೆಸ್‌ಗೆ ದೃಢಪಡಿಸಿದೆ ಎಂದು ಖೇರಾ ಹೇಳಿದರು.

ಪ್ರಧಾನಿ ಮತ್ತು ಗೃಹ ಸಚಿವರು ಅತಿಕ್ರಮಣ ನಿರಾಕರಿಸಿದ್ದಾರೆ. ಮೋದಿ ಚೀನಾಕ್ಕೆ 'ಕ್ಲೀನ್ ಚಿಟ್' ನೀಡಿ 17 ತಿಂಗಳಾಗಿದೆ ಎಂದು ಖೇರಾ ಹೇಳಿದರು.

'ಆ ಕ್ಲೀನ್ ಚಿಟ್ ನಮ್ಮ ಇತಿಹಾಸದಲ್ಲಿ ಒಂದು ಕರಾಳ ಅಧ್ಯಾಯ. ಏಕೆಂದರೆ ಕ್ಲೀನ್ ಚಿಟ್ ಅನ್ನು ಚೀನಾ ಪ್ರಪಂಚದಾದ್ಯಂತ ಬಳಸಿದೆ. ಚೀನಾ ಈ ಕ್ಲೀನ್ ಚಿಟ್‌ನಿಂದ ಧೈರ್ಯಶಾಲಿಯಾಗಿದೆ. ಅರುಣಾಚಲಪ್ರದೇಶ ಮತ್ತು ಲಡಾಖ್‌ನಲ್ಲಿ ಮಾತ್ರವಲ್ಲದೆ ಉತ್ತರಾಖಂಡದಲ್ಲಿಯೂ ಸಹ ಚೀನಾ ಸೈನಿಕರು (ಪಿಎಲ್‌ಎ) ಪ್ರವೇಶಿಸಿ ನಮ್ಮ ಮೂಲಸೌಕರ್ಯ ನಾಶಪಡಿಸಿದರು' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಇದು ಬಹಳ ಗಂಭೀರ ವಿಷಯ. ಪ್ರಧಾನಿಯವರು ಚೀನಾಕ್ಕೆ ನೀಡಿರುವ ಕ್ಲೀನ್ ಚಿಟ್ ಅನ್ನು ಹಿಂಪಡೆಯಬೇಕು. ಚೀನಾದೊಂದಿಗೆ ನಮ್ಮ ಎಲ್ಲಾ ಗಡಿಗಳಲ್ಲಿ ಅದು ಡೆಪ್ಸಾಂಗ್ ಆಗಿರಲಿ, ಗೋಗ್ರಾ ಹಾಟ್ ಸ್ಪ್ರಿಂಗ್ಸ್, ದೌಲತ್ ಬೇಗ್ ಓಲ್ಡಿ ಅಥವಾ ಅರುಣಾಚಲ ಪ್ರದೇಶದಲ್ಲಿ ಏಪ್ರಿಲ್ 2020ರ ಹಿಂದಿನ ಯಥಾಸ್ಥಿತಿ ಮರುಸ್ಥಾಪಿಸಲು ಗಡುವು ನೀಡಬೇಕು' ಎಂದು ಅವರು ಹೇಳಿದರು.

ಗಾಲ್ವಾನ್ ಕಣಿವೆಯಲ್ಲಿ ಚೀನಾದ ಪೀಪಲ್ಸ್ ಲಿಬರೇಶನ್ ಆರ್ಮಿ (ಪಿಎಲ್‌ಎ) ಸೇನಾ ನೆಲೆ ಸ್ಥಾಪಿಸಿರುವುದು (ಸಂಗ್ರಹ ಚಿತ್ರ)

'ಗೋವಾ ಕಡಲ ಸಮಾವೇಶ'

ಪಣಜಿ (ಪಿಟಿಐ): ಭಾರತೀಯ ನೌಕಾಪಡೆಯ 'ಗೋವಾ ಕಡಲ ಸಮಾವೇಶ'ದ ಮೂರನೇ ಆವೃತ್ತಿಯು ಭಾನುವಾರ ಆರಂಭವಾಗಲಿದ್ದು, ಇದೇ 9ರವರೆಗೆ ನಡೆಯಲಿದೆ.

ಹಿಂದೂ ಮಹಾಸಾಗರ ಪ್ರದೇಶದ ಭದ್ರತೆಗೆ ಎದುರಾಗುವ ಸವಾಲುಗಳು ಮತ್ತು ಇತರ ವಿಷಯಗಳ ಬಗ್ಗೆ ಈ ಸಮಾವೇಶದಲ್ಲಿ ಚರ್ಚಿಸಲಾಗುವುದು ಎಂದು ನೌಕಾಪಡೆಯ ವಕ್ತಾರರೊಬ್ಬರು ಹೇಳಿದ್ದಾರೆ.

ಸಮಾವೇಶವನ್ನು ಗೋವಾದ ನಾವಲ್ ವಾರ್ ಕಾಲೇಜಿನ ಆಶ್ರಯದಲ್ಲಿ ಭಾರತೀಯ ನೌಕಾಪಡೆ ಈ ಸಮಾವೇಶ ಆಯೋಜಿಸಿದೆ.ಬಾಂಗ್ಲಾದೇಶ, ಇಂಡೋನೇಷ್ಯಾ, ಮಡಗಾಸ್ಕರ್, ಮಲೇಷ್ಯಾ, ಮಾಲ್ದೀವ್ಸ್, ಮಾರಿಷಸ್, ಮ್ಯಾನ್ಮಾರ್, ಸೀಶೆಲ್ಸ್, ಸಿಂಗಪುರ, ಶ್ರೀಲಂಕಾ ಮತ್ತು ಥಾಯ್ಲೆಂಡ್‌ನ ನೌಕಾಪಡೆಗಳ ಮುಖ್ಯಸ್ಥರು ಈ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದು ಅವರು ಹೇಳಿದರು.

ಕೇದಾರನಾಥದಲ್ಲಿ ಶುಕ್ರವಾರ ಆದಿಗುರು ಶಂಕರಾಚಾರ್ಯರ ಪ್ರತಿಮೆ ಅನಾವರಣಗೊಳಿಸಿದ ನಂತರ ಧ್ಯಾನ ನಿರತರಾಗಿದ್ದ ಮೋದಿ

ಕೇದಾರನಾಥ: ಶಂಕರಾಚಾರ್ಯರ 12 ಅಡಿ ಎತ್ತರದ ಪ್ರತಿಮೆ ಅನಾವರಣ

ಡೆಹ್ರಾಡೂನ್/ ಕೇದಾರನಾಥ: ಉತ್ತರಾಖಂಡದ ಕೇದಾರನಾಥದಲ್ಲಿ ಆದಿಗುರು ಶಂಕರಾಚಾರ್ಯರ 12 ಅಡಿ ಎತ್ತರದ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಲೋಕಾರ್ಪಣೆ ಮಾಡಿದರು.

ಈ ಸ್ಥಳದಲ್ಲಿ, ಶಂಕರಾಚಾರ್ಯರ ಸಮಾಧಿಯನ್ನು ಪುನರ್ ನಿರ್ಮಾಣ ಮಾಡಲಾಗಿದೆ.

ಇದಕ್ಕೂ ಮುನ್ನ ಕೇದಾರನಾಥದಲ್ಲಿನ ಶಿವನ ದೇವಾಲಯದಲ್ಲಿ ಅವರು ಪೂಜೆ ಸಲ್ಲಿಸಿದರು.

2013ರ ಪ್ರವಾಹದಿಂದ ತೀವ್ರ ಹಾನಿಗೆ ಒಳಗಾಗಿದ್ದ ಕೇದಾರನಾಥ ಪ್ರದೇಶವನ್ನು ಪುನರ್‌ನಿರ್ಮಿಸುವ ಕಾರ್ಯಭರದಿಂದ ಸಾಗಿದೆ.ಹಿಮಾಲಯ ಪರ್ವತ ಸಾಲಿನಲ್ಲಿರುವ ಕೇದಾರನಾಥದಲ್ಲಿ ಸುಮಾರು ₹400 ಕೋಟಿ ವೆಚ್ಚದ ಪುನರ್‌ನಿರ್ಮಾಣ ಯೋಜನೆಗಳಿಗೆ ಪ್ರಧಾನಿ ಮೋದಿ ಚಾಲನೆ ನೀಡಿದರು.

ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ ವಿವರಗಳನ್ನು ಒಳಗೊಂಡ ಸಾಕ್ಷ್ಯಚಿತ್ರವೊಂದನ್ನು ಮೋದಿ ವೀಕ್ಷಿಸಿದರು.

ಶಂಕರಾಚಾರ್ಯರ ಪ್ರತಿಮೆ ಅನಾವರಣದ ನಂತರ ಮೋದಿ ಅವರು ಅಲ್ಲಿಯೇ ಕೆಲ ಸಮಯ ಧ್ಯಾನಕ್ಕೆ ಕುಳಿತರು. 35 ಟನ್ ತೂಕದ ಶಂಕರಾಚಾರ್ಯರ ಪ್ರತಿಮೆ ರೂಪಿಸುವ ಕಾರ್ಯವನ್ನು 2019ರಲ್ಲಿ ಆರಂಭಿಸಲಾಗಿತ್ತು. ಈ ಪ್ರತಿಮೆಯನ್ನು ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ನಿರ್ಮಿಸಿದ್ದಾರೆ.

ಜೂನ್ 2013ರ ಪ್ರಕೃತಿ ವಿಕೋಪದಲ್ಲಿ ಪರ್ವತದಿಂದ ದೇವಾಲಯದ ಹಿಂಬದಿಗೆ ಉರುಳಿ ಬಂದ ಬೃಹತ್ ಬಂಡೆಯು, ದೇವಾಲಯಕ್ಕೆ ಆಗಬಹುದಾಗಿದ್ದ ಹೆಚ್ಚಿನ ಹಾನಿಯನ್ನು ತಡೆದಿತ್ತು. ಅದನ್ನು 'ಭೀಮ ಶಿಲಾ' ಎಂದು ಕರೆಯಲಾಗುತ್ತಿದೆ. ಅಲ್ಲಿಗೂ ಪ್ರಧಾನಿ ಭೇಟಿ ನೀಡಿದ್ದರು.

ಕೇದಾರಪುರಿಯ ಮರು ನಿರ್ಮಾಣವು ಪ್ರಧಾನಿ ಮೋದಿ ಅವರ ಕನಸಿನ ಯೋಜನೆಯಾಗಿದ್ದು, ಆಗಾಗ್ಗೆ ಯೋಜನೆಯ ಅಭಿವೃದ್ಧಿಯ ಬಗೆಗೆ ಪರಿಶೀಲನೆ ನಡೆಸುತ್ತಿರುತ್ತಾರೆ.

ಅಭಿನಂದನೆ: ಕೇದಾರನಾಥದಲ್ಲಿ ಆದಿಶಂಕರಾಚಾರ್ಯರ ಪ್ರತಿಮೆಯನ್ನು ಲೋಕಾರ್ಪಣೆ ಮಾಡಿದ ಪ್ರಧಾನಿ ಮೋದಿ ಅವರನ್ನು ಅಭಿನಂದಿಸಿ ಪತ್ರ ಬರೆದಿರುವ ಜೆಡಿಎಸ್ ವರಿಷ್ಠ ಎಚ್. ಡಿ. ದೇವೇಗೌಡ ಅವರು, ಕಪ್ಪು ಶಿಲೆಯಲ್ಲಿ ನಿರ್ಮಿಸಲಾದ ಸುಂದರವಾದ ಪ್ರತಿಮೆಯನ್ನು ನೋಡಲು ಉತ್ಸುಕತೆ ವ್ಯಕ್ತಪಡಿಸಿದ್ದಾರೆ.

ಈ ಪ್ರತಿಮೆಯನ್ನು ಮೈಸೂರಿನ ಶಿಲ್ಪಿ ಕೆತ್ತಿದ್ದಾರೆ ಮತ್ತು ಅದಕ್ಕೆ ಬಳಸಿದ ಶಿಲೆಯು ಮೈಸೂರು ಜಿಲ್ಲೆಯ ಎಚ್. ಡಿ. ಕೋಟೆಯದ್ದು ಎಂದು ತಿಳಿದು ಹೆಮ್ಮೆಯಾಗಿದೆ ಎಂದಿರುವ ಅವರು, 'ಈ ಕ್ಷೇತ್ರವನ್ನು ಪುನರ್ನಿರ್ಮಾಣ ಮಾಡುವಲ್ಲಿನ ನೀವು ತೋರಿದ ಬದ್ಧತೆಗೆ ನಿಮ್ಮನ್ನು ಅಭಿನಂದಿಸುತ್ತೇನೆ' ಎಂದು ಹೇಳಿದ್ದಾರೆ.

ವಾರ್ನರ್, ಮಾರ್ಷ್ ಅಬ್ಬರ ವೆಸ್ಟ್ ಇಂಡೀಸ್ ತತ್ತರ

ಸೆಮಿಫೈನಲ್ ಪ್ರವೇಶಿಸಿದ ಆಸ್ಟ್ರೇಲಿಯಾ ತಂಡ; ಕ್ರಿಸ್ ಗೇಲ್ ಕೊನೆಯ ಪಂದ್ಯ?

ಅಬುಧಾಬಿ: ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್ ಮತ್ತು ಮೂರನೇ ಕ್ರಮಾಂಕದ ಮಿಚೆಲ್ ಮಾರ್ಷ್ ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ಆಸ್ಟ್ರೇಲಿಯಾ ತಂಡ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೂಪರ್ 12ರ ಒಂದನೇ ಗುಂಪಿನ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ವೆಸ್ಟ್ ಇಂಡೀಸ್ ಎದುರು ಶನಿವಾರ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ಎಂಟು ವಿಕೆಟ್‌ಗಳಿಂದ ಜಯ ಗಳಿಸಿ ಸೆಮಿಫೈನಲ್ ಪ್ರವೇಶಿಸಿತು. ರಾತ್ರಿ ನಡೆದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡ ಇಂಗ್ಲೆಂಡ್ ವಿರುದ್ಧ ಜಯ ಗಳಿಸಿತು. ಆ ತಂಡವೂ ಎಂಟು ಪಾಯಿಂಟ್ ಕಲೆ ಹಾಕಿತು. ಆದರೆ ಸನ್‌ರೇಟ್ ಆಧಾರದಲ್ಲಿ ಆಸ್ಟ್ರೇಲಿಯಾ ನಾಲ್ಕರ ಘಟ್ಟ ಪ್ರವೇಶಿಸಿತು.

158 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ತಂಡ 22 ಎಸೆತ ಉಳಿದಿರುವಾಗಲೇ ದಡ ಸೇರಿತು. ನಾಯಕ ಆ್ಯರನ್ ಫಿಂಚ್ ಜೊತೆ ವಾರ್ನರ್ ಮೊದಲ ವಿಕೆಟ್‌ಗೆ 33 ರನ್ ಸೇರಿಸಿದ್ದರು.

ಫಿಂಚ್ ಔಟಾದ ನಂತರ ಭರ್ಜರಿ ಬ್ಯಾಟಿಂಗ್ ಮಾಡಿದ ವಾರ್ನರ್ ಮತ್ತು ಮಾರ್ಷ್ 124 ರನ್‌ಗಳ ಜೊತೆಯಾಟ ಆಡಿದರು. ಹೀಗಾಗಿ ಕೊನೆಯ ಪಂದ್ಯದಲ್ಲಿ ಜಯ ಗಳಿಸುವ ವೆಸ್ಟ್ ಇಂಡೀಸ್ ಕನಸು ಕಮರಿತು. ಐದು ಪಂದ್ಯಗಳಲ್ಲಿ ಏಕೈಕ ಗೆಲುವಿನೊಂದಿಗೆ ಹಾಲಿ ಚಾಂಪಿಯನ್ನರು ವಿಶ್ವಕಪ್ ಅಭಿಯಾನ ಮುಗಿಸಿದರು.

ಮಿಂಚಿದ ನಾಯಕ ಕೀರನ್ ಪೊಲಾರ್ಡ್: ಟಾಸ್ ಗೆದ್ದ ಆಸ್ಟ್ರೇಲಿಯಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತ್ತು. ಕ್ರಿಸ್ ಗೇಲ್ ಮತ್ತು ಎವಿನ್ ಲೂಯಿಸ್ ಮೊದಲ ವಿಕೆಟ್‌ಗೆ 14 ಎಸೆತಗಳಲ್ಲಿ 30 ರನ್‌ಗಳನ್ನು ಸೇರಿಸಿದರು. ಹೇಜಲ್‌ವುಡ್ ಓವರ್‌ನಲ್ಲಿ ಲೂಯಿಸ್ ಸತತ ಮೂರು ಬೌಂಡರಿಗಳನ್ನು ಸಿಡಿಸಿದರು. ಪ್ಯಾಟ್ ಕಮಿನ್ಸ್ ಎಸೆತ ಸೇರಿದಂತೆ ಗೇಲ್ ಎರಡು ಸಿಕ್ಸರ್‌ಗಳನ್ನು ಸಿಡಿಸಿದರು. ಆದರೆ ಅವರ ಎಸೆತದಲ್ಲೇ ಬೌಲ್ಡ್ ಆಗಿ ಮರಳಿದರು. ಇದು ಅವರ ಕೊನೆಯ ಅಂತರರಾಷ್ಟ್ರೀಯ ಪಂದ್ಯ ಆಗಿರುವ ಸಾಧ್ಯತೆ ಇದೆ. ಆದ್ದರಿಂದ ವಾಪಸಾಗುವಾಗ ತಂಡದ ಸಹ ಆಟಗಾರರು ಎದ್ದು ನಿಂತು ಚಪ್ಪಾಳೆ ತಟ್ಟಿದರು.

ಕ್ರಿಸ್ ಗೇಲ್ ಮತ್ತೊಮ್ಮೆ ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು. ಎರಡು ಸಿಕ್ಸರ್ ಸಿಡಿಸಿದರೂ 15 ರನ್ ಗಳಿಸಿದ್ದಾಗ ವಿಕೆಟ್ ಕಳೆದುಕೊಂಡರು. ಅವರ ನಿರ್ಗಮನದ ನಂತರ ತಂಡ ಮತ್ತೆರಡು ವಿಕೆಟ್‌ಗಳನ್ನು ಬೇಗನೇ ಕಳೆದುಕೊಂಡಿತು.

ಆದರೆ ಲೂಯಿಸ್, ಶಿಮ್ರಾನ್ ಹೆಟ್ಮೆಯರ್ ಮತ್ತು ನಾಯಕ ಕೀರನ್ ಪೊಲಾರ್ಡ್ ಅವರ ಭರ್ಜರಿ ಬ್ಯಾಟಿಂಗ್ ನೆರವಿನಿಂದ ತಂಡ ಏಳು ವಿಕೆಟ್‌ಗಳಿಗೆ 157 ರನ್ ಗಳಿಸಿತು. ಎವಿನ್ ಲೂಯಿಸ್ ಮತ್ತು ಶಿಮ್ರಾನ್ ಹೆಟ್ಮೆಯರ್ ನಾಲ್ಕನೇ ವಿಕೆಟ್‌ಗೆ 35 ರನ್ ಸೇರಿಸಿ ತಂಡದ ಮೊತ್ತವನ್ನು 70ಕ್ಕೆ ಏರಿಸಿದರು.

91ಕ್ಕೆ ಐದು ವಿಕೆಟ್ ಕಳೆದುಕೊಂಡಿದ್ದಾಗ ಪೊಲಾರ್ಡ್ ಸ್ಫೋಟಕ ಬ್ಯಾಟಿಂಗ್ ಮಾಡಿದರು. 31 ಎಸೆತಗಳಲ್ಲಿ 44 ರನ್ ಗಳಿಸಿದ ಅವರು ಡ್ವೇನ್ ಬ್ರಾವೊ ಜೊತೆ 35 ರನ್‌ಗಳನ್ನು ಸೇರಿಸಿದರು. ಕೊನೆಯ ಪಂದ್ಯ ಆಡಿದ ಬ್ರಾವೊ ಅವರಿಗೆ ಕೇವಲ 10 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಮಿಚೆಲ್ ಸ್ಟಾರ್ಕ್ ಹಾಕಿದ ಇನಿಂಗ್ಸ್‌ನ ಕೊನೆಯ ಓವರ್‌ನ ಕೊನೆಯ ಎರಡು ಎಸೆತಗಳನ್ನು ಆ್ಯಂಡ್ರೆ ರಸೆಲ್ ಸಿಕ್ಸರ್‌ಗೆ ಅಟ್ಟಿದರು.



ಡೇವಿಡ್ ವಾರ್ನರ್ ಬ್ಯಾಟಿಂಗ್ ವೈಖರಿ

ಕ್ರಿಸ್ ಗೇಲ್ –ಎಎಫ್‌ಪಿ ಚಿತ್ರಗಳು

ಮಿಚೆಲ್ ಮಾರ್ಷ್ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ವೆಸ್ಟ್ ಇಂಡೀಸ್ 7ಕ್ಕೆ 157 (20 ಓವರ್)
ಗೇಲ್ ಬಿ ಕಮಿನ್ಸ್ 15 (9 ಎ, 6x2), ಲೂಯಿಸ್ ಸಿ ಸ್ಮಿತ್ ಬಿ ಜಂಪಾ 29 (26 ಎ, 4x5), ಪೂರನ್ ಸಿ ಮಾರ್ಷ್ ಬಿ ಹೇಜಲ್‌ವುಡ್ 4 (4 ಎ, 4x1), ಚೇಸ್ ಬಿ ಹೇಜಲ್‌ವುಡ್ 0 (2 ಎ), ಹೆಟ್ಮೆಯರ್ ಸಿ ವೇಡ್ ಬಿ ಹೇಜಲ್‌ವುಡ್ 27 (28 ಎ, 4x2), ಪೊಲಾರ್ಡ್ ಸಿ ಮ್ಯಾಕ್ಸ್‌ವೆಲ್ ಬಿ ಸ್ಟಾರ್ಕ್ 44 (31 ಎ, 4x4, 6x1), ಬ್ರಾವೊ ಸಿ ವಾರ್ನರ್ ಬಿ ಹೇಜಲ್‌ವುಡ್ 10 (12 ಎ, 6x1), ರಸೆಲ್ ಔಟಾಗದೆ 18 (7 ಎ, 4x1, 6x2), ಹೋಲ್ಡರ್ ಔಟಾಗದೆ 1 (1 ಎ)
ಇತರೆ (ಲೆಗ್ ಬೈ 6, ವೈಡ್ 3) 9
ವಿಕೆಟ್ ಪತನ: 1-30 (ಕ್ರಿಸ್ ಗೇಲ್, 2.2), 2-35 (ನಿಕೋಲಸ್ ಪೂರನ್, 3.1), 3-35 (ರಾಸ್ಟನ್ ಚೇಸ್, 3.3), 4-70 (ಎವಿನ್ ಲೂಯಿಸ್, 9.3), 5-91 (ಶಿಮ್ರಾನ್ ಹೆಟ್ಮೆಯರ್, 12.5), 6-126 (ಡ್ವೇನ್ ಬ್ರಾವೊ, 17.3), 7-143 (ಕೀರನ್ ಪೊಲಾರ್ಡ್, 19.2)
ಬೌಲಿಂಗ್: ಮಿಷೆಲ್ ಸ್ಟಾರ್ಕ್ 4-0-33-1, ಜೋಶ್ ಹ್ಯಾಜಲ್‌ವುಡ್ 4-0-39-4, ಪ್ಯಾಟ್ ಕಮಿನ್ಸ್ 4-0-37-1, ಗ್ಲೆನ್ ಮ್ಯಾಕ್ಸ್‌ವೆಲ್ 1-0-6-0, ಮಿಚೆಲ್ ಮಾರ್ಷ್ 3-0-16-0, ಆ್ಯಡಂ ಜಂಪಾ 4-0-20-1

ಆಸ್ಟ್ರೇಲಿಯಾ 2ಕ್ಕೆ 161 (16.2 ಓವರ್)
ವಾರ್ನರ್ ಔಟಾಗದೆ 89 (56 ಎ, 4x9, 6x4), ಫಿಂಚ್ ಬಿ ಹೊಸೇನ್ 9 (11 ಎ, 4x1), ಮಾರ್ಷ್ ಸಿ ಹೋಲ್ಡರ್ ಬಿ ಗೇಲ್ 53 (32 ಎ, 4x5, 6x2), ಮ್ಯಾಕ್ಸ್‌ವೆಲ್ ಔಟಾಗದೆ 0 (0 ಎಸೆತ)
ಇತರೆ (ಲೆಗ್ ಬೈ 3, ನೋ ಬಾಲ್ 1, ವೈಡ್ 6)
ವಿಕೆಟ್ ಪತನ: 1-33 (ಆ್ಯರನ್ ಫಿಂಚ್, 3.3), 2-157 (ಮಿಷೆಲ್ ಮಾರ್ಷ್, 15.6)
ಬೌಲಿಂಗ್: ಅಕೀಲ್ ಹೊಸೇನ್ 4-0-29-1, ರಾಸ್ಟನ್ ಚೇಸ್ 1.2-0-17-0, ಜೇಸನ್ ಹೋಲ್ಡರ್ 2-0-26-0, ಡ್ವೇನ್ ಬ್ರಾವೊ 4-0-36-0, ಹೇಡನ್ ವಾಲ್ಶ್ 2-0-18-0, ಆ್ಯಂಡ್ರೆ ರಸೆಲ್ 2-0-25-0, ಕ್ರಿಸ್ ಗೇಲ್ 1-0-7-1

ಫಲಿತಾಂಶ: ಆಸ್ಟ್ರೇಲಿಯಾಗೆ 8 ವಿಕೆಟ್‌ಗಳ ಜಯ

ಅಫ್ಗಾನಿಸ್ತಾನ ತಂಡದ ಗೆಲುವಿಗೆ ಭಾರತದ ಕ್ರಿಕೆಟ್ ಅಭಿಮಾನಿಗಳ ಹಾರೈಕೆ

ಕಿವೀಸ್ ಗೆದ್ದರೆ ಭಾರತಕ್ಕೆ ತೊಂದರೆ

ಅಬುಧಾಬಿ (ಪಿಟಿಐ): 'ಭಾನುವಾರ ಅಫ್ಗಾನಿಸ್ತಾನದ ಎದುರು ನ್ಯೂಜಿಲೆಂಡ್ ಗೆದ್ದರೆ ನಾವು ಗಂಟುಮೂಟೆ ಕಟ್ಟಿಕೊಂಡು ಮನೆಗೆ ಮರಳುತ್ತೇವೆ'–

ಶುಕ್ರವಾರದ ಪತ್ರಿಕಾಗೋಷ್ಠಿಯಲ್ಲಿ ಭಾರತದ ಆಲ್‌ರೌಂಡರ್ ರವೀಂದ್ರ ಜಡೇಜ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದು ಹೀಗೆ. ಆ ಸಂದರ್ಭದಲ್ಲಿ ಅಲ್ಲಿದ್ದ ಎಲ್ಲರೂ ನಕ್ಕರು. ಆದರೆ, ಇದು ವಾಸ್ತವ.

ಶೇಖ್ ಝಯೇದ್ ಕ್ರೀಡಾಂಗಣದಲ್ಲಿ ನಡೆಯಲಿರುವ ಟ್ವೆಂಟಿ–20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸೂಪರ್ 12 ಹಂತದ ತನ್ನ ಕೊನೆಯ ಪಂದ್ಯದಲ್ಲಿ ಕೇನ್ ವಿಲಿಯಮ್ಸನ್ ಬಳಗವು ಅಫ್ಗನ್ ಎದುರು ಸೋತರೆ ಮಾತ್ರ ವಿರಾಟ್ ಕೊಹ್ಲಿ ಪಡೆಗೆ ನಾಲ್ಕರ ಘಟ್ಟಕ್ಕೆ ಹೋಗುವ ಅವಕಾಶ ಇರುತ್ತದೆ. ಸೋಮವಾರ ನಮಿಬಿಯಾ ವಿರುದ್ಧದ ಪಂದ್ಯದಲ್ಲಿ ಹೆಚ್ಚು ನೆಟ್ ರನ್‌ರೇಟ್‌ನೊಂದಿಗೆ ಭಾರತ ಗೆಲ್ಲಬೇಕು.

ಟೂರ್ನಿಯ ಮೊದಲೆರಡು ಪಂದ್ಯಗಳಲ್ಲಿ ಭಾರತವು ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ಎದುರು ಸೋತಿತ್ತು. ಇದೀಗ ಕಿವೀಸ್ ಬಳಗವು ಒಟ್ಟು ಆರು ಅಂಕ ಗಳಿಸಿದೆ. ಭಾರತ ಅಫ್ಗಾನಿಸ್ತಾನ ಮತ್ತು ಸ್ಕಾಟ್ಲೆಂಡ್ ವಿರುದ್ಧ ಗೆದ್ದು ನಾಲ್ಕು ಅಂಕ ಗಳಿಸಿದೆ. ಪಾಕ್ ತಂಡದ ಎದುರು ಉತ್ತಮವಾಗಿ ಆಡಿದ್ದ ಮೊಹಮ್ಮದ್ ನಬಿ ಬಳಗಕ್ಕೆ ಕಿವೀಸ್ ಬಳಗವನ್ನು ಸೋಲಿಸುವ ಸಾಮರ್ಥ್ಯ ಇದೇ ಎಂದೇ ವಿಶ್ಲೇಷಿಸಲಾಗುತ್ತಿದೆ.

ಸ್ಪಿನ್ನರ್ ರಶೀದ್ ಖಾನ್, ನವೀನ್ ಉಲ್ ಹಕ್ ಮತ್ತು ಗುಲ್ಬದೀನ್ ಅವರ ಬೌಲಿಂಗ್ ಪಡೆಯು ಇದುವರೆಗೆ ಉತ್ತಮವಾಗಿ ಆಡಿದೆ. ಆದರೆ, ಬ್ಯಾಟಿಂಗ್‌ನಲ್ಲಿ ಅಸ್ಥಿರತೆ ಇದೆ. ಕಿವೀಸ್ ಪಡೆಯ ಟ್ರೆಂಟ್ ಬೌಲ್ಟ್, ಟಿಮ್ ಸೌಥಿ ಅವರ ಬಿರುಗಾಳಿ ವೇಗ, ಮಿಚೆಲ್ ಸ್ಯಾಂಟನರ್ ಮತ್ತು ಈಶ್ ಸೋಧಿಯವರ ಸ್ಪಿನ್ ಮೋಡಿಯನ್ನು ಎದುರಿಸಿ ನಿಲ್ಲುವುದು ಅಫ್ಗನ್ ಬ್ಯಾಟಿಂಗ್ ಪಡೆಗೆ ಸವಾಲಾಗಬಹುದು. ಅಫ್ಗನ್ ತಂಡವೂ ನಾಲ್ಕು ಅಂಕ ಗಳಿಸಿದೆ. ಒಂದೊಮ್ಮೆ ಕಿವೀಸ್ ಎದುರು ಭಾರೀ ಅಂತರದ ಜಯ ಸಾಧಿಸಿದರೆ, ಸೆಮಿಗೆ ಪ್ರವೇಶಿಸುವ ಸಣ್ಣ ಅವಕಾಶವೂ ಅದಕ್ಕಿದೆ. ಆದ್ದರಿಂದ ಛಲದ ಆಟವಾಡುವ ಸಾಧ್ಯತೆಗಳು ಇವೆ. ಆದ್ದರಿಂದ ಪಂದ್ಯ ರೋಚಕವಾಗುವ ಎಲ್ಲ ಸಾಧ್ಯತೆಗಳೂ ಇವೆ. ಆದ್ದರಿಂದಲೇ ಭಾರತ ಈ ಪಂದ್ಯದತ್ತ ದೃಷ್ಟಿನೆಟ್ಟು ಕುಳಿತುಕೊಂಡಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30.
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ರಶೀದ್ ಖಾನ್

ಅಜೇಯ ಓಟದ ವಿಶ್ವಾಸದಲ್ಲಿ ಪಾಕ್

ಶಾರ್ಜಾ (ಪಿಟಿಐ): ಮಾಜಿ ಚಾಂಪಿಯನ್ ಪಾಕಿಸ್ತಾನ ತಂಡವು ಅಜೇಯ ಓಟವನ್ನು ಮುಂದುವರಿಸುವ ವಿಶ್ವಾಸದಲ್ಲಿದ್ದು, ಟಿ20 ವಿಶ್ವಕಪ್‌ನ ಎರಡನೇ ಗುಂಪಿನ ಪಂದ್ಯದಲ್ಲಿ ಭಾನುವಾರ ಸ್ಕಾಟ್ಲೆಂಡ್ ತಂಡಕ್ಕೆ ಎದುರಾಗಲಿದೆ.

2009ರಲ್ಲಿ ಚಾಂಪಿಯನ್ ಪಟ್ಟ ಧರಿಸಿದ್ದ ಪಾಕಿಸ್ತಾನ ತಂಡಕ್ಕೆ ಇದು ಸೂಪರ್ 12 ಹಂತದಲ್ಲಿ ಕೊನೆಯ ಪಂದ್ಯವಾಗಿದೆ. ಆಡಿದ ನಾಲ್ಕೂ ಪಂದ್ಯಗಳಲ್ಲಿ ಜಯಭೇರಿ ಮೊಳಗಿಸಿರುವ ಬಾಬರ್ ಆಜಂ ನಾಯಕತ್ವದ ಬಳಗ ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ. ಸೆಮಿಫೈನಲ್‌ನಲ್ಲೂ ಸ್ಥಾನ ಖಚಿತಪಡಿಸಿಕೊಂಡಿದೆ.

ಪಾಕ್ ತಂಡದ ಆರಂಭಿಕ ಬ್ಯಾಟರ್‌ಗಳಾದ ಬಾಬರ್ ಹಾಗೂ ಮೊಹಮ್ಮದ್ ರಿಜ್ವಾನ್ ಭರ್ಜರಿ ಲಯದಲ್ಲಿದ್ದಾರೆ. ಫಖರ್ ಜಮಾನ್, ಮೊಹಮ್ಮದ್ ಹಫೀಜ್ ಹಾಗೂ ಶೋಯಬ್ ಮಲಿಕ್ ಬ್ಯಾಟಿಂಗ್‌ನಲ್ಲಿ ಸ್ಥಿರತೆ ಕಾಯ್ದುಕೊಳ್ಳುವ ವಿಶ್ವಾಸದಲ್ಲಿದ್ದಾರೆ.

ಟ್ವೆಂಟಿ–20 ರ‍್ಯಾಂಕಿಂಗ್
2 ಪಾಕಿಸ್ತಾನ | 14 ಸ್ಕಾಟ್ಲೆಂಡ್
ಪಂದ್ಯ ಆರಂಭ ರಾತ್ರಿ 7.30 (ಭಾರತೀಯ ಕಾಲಮಾನ)
ಲೈವ್ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಗೆದ್ದರೂ ಸೆಮಿಫೈನಲ್‌ಗೇರಲು ದಕ್ಷಿಣ ಆಫ್ರಿಕಾ ತಂಡ ವಿಫಲ

ವ್ಯಾನ್ ಅಬ್ಬರ; ರಬಾಡ ಹ್ಯಾಟ್ರಿಕ್

ಶಾರ್ಜಾ: ವ್ಯಾನ್ ಡರ್ ಡಸೆ ಮತ್ತು ಏಡನ್ ಮರ್ಕರಂ ಅವರ ಜೊತೆಯಾಟದ ಅಬ್ಬರಕ್ಕೆ ಇಂಗ್ಲೆಂಡ್ ಬೌಲರ್‌ಗಳು ಕಂಗಾಲಾದರು.

ಮೂರನೇ ವಿಕೆಟ್ ಜೊತೆಯಾಟದಲ್ಲಿ ಡಸೆ (94; 60ಎಸೆತ, 5ಬೌಂಡರಿ, 6ಸಿಕ್ಸರ್) ಮತ್ತು ಮರ್ಕರಂ (52; 25ಎಸೆತ, 2ಬೌಂಡರಿ 4ಸಿಕ್ಸರ್) 103 ರನ್ ಸೇರಿಸಿದರು. ಇದು ದಕ್ಷಿಣ ಆಫ್ರಿಕಾಕ್ಕೆ ಜಯ ತಂದುಕೊಟ್ಟಿತು. ಆದರೆ ತಂಡದ ಸೆಮಿಫೈನಲ್ ಪ್ರವೇಶದ ಕನಸು ನನಸಾಗಲಿಲ್ಲ.

ದಕ್ಷಿಣ ಆಫ್ರಿಕಾ 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 189 ರನ್ ಗಳಿಸಿತು. ಇಂಗ್ಲೆಂಡ್ 20 ಓವರ್‌ಗಳಲ್ಲಿ 8ಕ್ಕೆ 179 ರನ್ ಗಳಿಸಿತು. ಕಗಿಸೊ ರಬಾಡ ಹ್ಯಾಟ್ರಿಕ್ ಗಳಿಸಿ ಮಿಂಚಿದರು.

ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಹೆನ್ರಿಕ್ಸ್ ವಿಕೆಟ್ ಗಳಿಸಿದ ಮೋಯಿನ್ ಅಲಿ ಸಂಭ್ರಮಿಸಿದರು. ಇನ್ನೊಂದು ಕಡೆ ಇದ್ದ ಕ್ವಿಂಟನ್ (34; 27ಎ) ಜೊತೆಗೂಡಿದ ವ್ಯಾನ್ ಎರಡನೇ ವಿಕೆಟ್‌ಗೆ 71 ರನ್ ಸೇರಿಸಿದರು. 12ನೇ ಓವರ್‌ನಲ್ಲಿ ಕ್ವಿಂಟನ್ ಔಟಾದರು. ವ್ಯಾನ್ ಮತ್ತು ಮರ್ಕರಂ ಜೋಡಿಯು ರನ್‌ಗಳನ್ನು ಸೂರೆ ಮಾಡಿತು. ಕ್ರಿಸ್ ವೋಕ್ಸ್, ಆದಿಲ್ ರಶೀದ್, ಕ್ರಿಸ್ ಜೋರ್ಡಾನ್ ಮತ್ತು ಮಾರ್ಕ್ ವುಡ್ ಅವರ ಎಸೆತಗಳಲ್ಲುದಕ್ಷಿಣ ಆಫ್ರಿಕಾ ಜೋಡಿಯು ಬೌಂಡರಿಯಾಚೆಗೆ ಕಳಿಸಿತು.

ವ್ಯಾನ್ ಡರ್ ಡಸೆ ಬ್ಯಾಟಿಂಗ್ ಸೊಬಗು –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 189 (ಕ್ವಿಂಟನ್ ಡಿ ಕಾಕ್ 34, ವ್ಯಾನ್ ಡರ್ ಡಸೆ ಔಟಾಗದೆ 94, ಏಡನ್ ಮರ್ಕರಂ ಔಟಾಗದೆ 52, ಮೋಯಿನ್ ಅಲಿ 27ಕ್ಕೆ1, ಆದಿಲ್ ರಶೀದ್ 32ಕ್ಕೆ1); ಇಂಗ್ಲೆಂಡ್: 20 ಓವರ್‌ಗಳಲ್ಲಿ 8ಕ್ಕೆ 179 (ಮೋಯಿನ್ ಅಲಿ 37, ಡೇವಿಡ್ ಮಲಾನ್ 33, ಲಿಯಾಮ್ ಲಿವಿಂಗ್‌ಸ್ಟೋನ್ 28; ಕಗಿಸೊ ರಬಾಡ 48ಕ್ಕೆ3). ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 10ರನ್‌ಗಳ ಜಯ.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ನೆಟ್ ರನ್‌ರೇಟ್	ಪಾಯಿಂಟ್ಸ್
ಗುಂಪು 1					
ಇಂಗ್ಲೆಂಡ್	5	4	1	+2.464	8
ಆಸ್ಟ್ರೇಲಿಯಾ	5	4	1	+1.216	8
ದಕ್ಷಿಣ ಆಫ್ರಿಕಾ	5	4	1	+0.739	8
ಶ್ರೀಲಂಕಾ	5	2	3	-0.269	4
ವೆಸ್ಟ್ ಇಂಡೀಸ್	5	1	4	-1.641	2
ಬಾಂಗ್ಲಾದೇಶ	5	0	5	-2.383	0
ಗುಂಪು 2					
ಪಾಕಿಸ್ತಾನ	4	4	0	+1.065	8
ನ್ಯೂಜಿಲೆಂಡ್	4	3	1	+1.277	6
ಭಾರತ	4	2	2	+1.619	4
ಅಫ್ಗಾನಿಸ್ತಾನ	4	2	2	+1.481	4
ನಮೀಬಿಯಾ	4	1	3	-1.851	2
ಸ್ಕಾಟ್ಲೆಂಡ್	4	0	4	-3.494	0

* ಶನಿವಾರದ ಪಂದ್ಯಗಳ ಅಂತ್ಯಕ್ಕೆ

14ರಂದು ಟೇಕ್ವಾಂಡೊ ಚಾಂಪಿಯನ್‌ಷಿಪ್

ಬೆಂಗಳೂರು: ರಾಜ್ಯಮಟ್ಟದ ಟೇಕ್ವಾಂಡೊ ಚಾಂಪಿಯನ್‌ಷಿಪ್ ಇದೇ 14 ಹಾಗೂ 21ರಂದು ಬೆಂಗಳೂರಿನಲ್ಲಿ ನಡೆಯಲಿದೆ. ರಾಜ್ಯ ಟೇಕ್ವಾಂಡೊ ಸಂಸ್ಥೆ ಈ ವಿಷಯ ತಿಳಿಸಿದೆ.

ಸಹಕಾರನಗರದ ದೇವ್ ಇಂಟರ್‌ನ್ಯಾಷನಲ್ ಸ್ಕೂಲ್ ಆವರಣದಲ್ಲಿ ನಡೆಯುವ ಚಾಂಪಿಯನ್‌ಷಿಪ್‌ಗೆ ರಾಜ್ಯದ ವಿವಿಧ ಕ್ಲಬ್ ಹಾಗೂ ಜಿಲ್ಲೆಗಳ ವಿವಿಧ ವಯೋವರ್ಗಗಳ ಅಂದಾಜು 400 ಟೇಕ್ವಾಂಡೊ ಪಟುಗಳು ಭಾಗವಹಿಸಲಿದ್ದಾರೆ.

ಬ್ಯಾಸ್ಕೆಟ್‌ಬಾಲ್: ಮಂಗಳೂರಿಗೆ ಜಯ

ಬೆಂಗಳೂರು: ಅಶ್ವಿಜ್ ಗಳಿಸಿದ 33 ಪಾಯಿಂಟ್ಸ್ ನೆರವಿನಿಂದ ಮಂಗಳೂರು ಬ್ಯಾಸ್ಕೆಟ್‌ಬಾಲ್ ತಂಡವು 18 ವರ್ಷದೊಳಗಿನವರ ರಾಜ್ಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಜಯ ಗಳಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಬಾಲಕರ ವಿಭಾಗದ ಸೆಮಿಫೈನಲ್ ಲೀಗ್ ಪಂದ್ಯದಲ್ಲಿ ಮಂಗಳೂರು 76–59ರಿಂದ ಬೀಗಲ್ಸ್ ಬಿ.ಸಿ. ಎದುರು ಗೆದ್ದಿತು. ಮತ್ತೊಂದು ಪಂದ್ಯದಲ್ಲಿ ಬಿ.ಸಿ ಬಿ.ಸಿ ತಂಡವು 89–79ರಿಂದ ಡಿವೈಇಎಸ್ ಬೆಂಗಳೂರು ತಂಡದ ವಿರುದ್ಧ ಜಯ ಗಳಿಸಿತು.

ಭಾನುವಾರ ಬಾಲಕರ ವಿಭಾಗದಲ್ಲಿ ಮಂಗಳೂರು ಬಿ.ಸಿ.– ಬಿ.ಸಿ ಬಿ.ಸಿ. ತಂಡಗಳು ಸೆಣಸಲಿವೆ. ಬಾಲಕಿಯರ ವಿಭಾಗದಲ್ಲಿ ಮೌಂಟ್ ಬಿ.ಸಿ–ಜೆಎಸ್‌ಸಿ ಮತ್ತು ಬೀಗಲ್ಸ್ ಬಿ.ಸಿ.– ಕೆ.ಎಸ್.ಹೆಗ್ಡೆ ನಿಟ್ಟೆ ತಂಡಗಳ ನಡುವೆ ಪಂದ್ಯಗಳು ನಡೆಯಲಿವೆ.

ಟಿವಿ ಕಾರ್ಯಕ್ರಮದಿಂದ ವಾನ್‌ಗೆ ಕೊಕ್

ಲಂಡನ್: ಜನಾಂಗೀಯ ನಿಂದನೆಗೆ ಸಂಬಂಧಿಸಿ ಆಟಗಾರರೊಬ್ಬರ ದೂರಿನ ಹಿನ್ನೆಲೆಯಲ್ಲಿ ಇಂಗ್ಲೆಂಡ್ ಕ್ರಿಕೆಟ್ ತಂಡದ ಮಾಜಿ ನಾಯಕ ಮೈಕೆಲ್ ವಾನ್ ಅವರನ್ನು ಬಿಬಿಸಿಯ ಕಾರ್ಯಕ್ರಮದಿಂದ ಕೈಬಿಡಲಾಗಿದೆ.

ಬಿಬಿಸಿ 5 ಲೈವ್ಸ್‌ನ ದಿ ಟಫರ್ಸ್ ಆ್ಯಂಡ್ ವಾನ್ ಕ್ರಿಕೆಟ್ ಷೋ ಕಾರ್ಯಕ್ರಮದಲ್ಲಿ ಟೆಸ್ಟ್ ಪಂದ್ಯಗಳ ವಿಶ್ಲೇಷಕರಾಗಿ ವಾನ್ 12 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದರು. ಆದರೆ ಅಜೀಮ್ ರಫೀಕ್ ಅವರ ದೂರಿನ ಹಿನ್ನೆಲೆಯಲ್ಲಿ ಅವರನ್ನು ಕಾರ್ಯಕ್ರಮದಿಂದ ದೂರ ಇರಿಸಲಾಗಿದೆ.

2009ರಲ್ಲಿ ಯಾರ್ಕ್‌ಷೈರ್‌ನಲ್ಲಿ ನಡೆದ ಪಂದ್ಯವೊಂದರಲ್ಲಿ ವಾನ್ ಅವರು ತಮ್ಮ ವಿರುದ್ಧ ಜನಾಂಗೀಯ ನಿಂದನೆ ಮಾಡಿರುವುದಾಗಿ ರಫೀಕ್ ಆರೋಪಿಸಿದ್ದಾರೆ. ವಾನ್ ಇದು ನಿರಾಧಾರ ಆರೋಪ ಎಂದಿದ್ದಾರೆ.

ಪುಣೆ ರೇಸ್

ಅಲಿಸಿಯಾ ಗೆಲ್ಲುವ ನಿರೀಕ್ಷೆ

ಎಸ್.ಎ.ಪೂನಾವಾಲ ಮಿಲಿಯನ್ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಲಿಸಿಯಾ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಚಾಸ್ಟಿಟಿ 3, ಮೆಮೋರಬಲ್ ಮೊಮೆಂಟ್ಸ್ 4, ಐರಾ 5
2ನೇ ರೇಸ್: ಇಂಪರ್ಮನೆನ್ಸ್ 6, ಡಾರ್ಕ್ ಸೀಕ್ರೆಟ್ 1, ಸ್ಪಿರಿಟ್ ಬೇ 8
3ನೇ ರೇಸ್: ಸಕ್ಸಸರ್ 2, ಆರ್ಕೇಡಿಯಾ 1, ಬೋಲ್ಡ್ ಲೆಜೆಂಡ್ 4
4ನೇ ರೇಸ್: ಎನಿಡ್ ಬ್ಲೈಟಾನ್ 2, ಜಯಂಟ್ ಸ್ಟಾರ್ 5, ಜೋವಕ್ವಿನ್ 7
5ನೇ ರೇಸ್: ಮಿಸ್ಟಿಕ್ ಬೇ 6, ಸಿಲ್ವರ್ ಫ್ಲೇಮ್ಸ್ 5, ಗಜಿನೊ 3
6ನೇ ರೇಸ್: ಅಲಿಸಿಯಾ 2, ಪೆಟ್ರೋನಿಯಾ 3, ಫ್ಲೇಮಿಂಗ್ ಫೈರ್ 1
7ನೇ ರೇಸ್: ದಿ ಬಾವಾಜಿ 2, ರಾಯಲ್ ಅಲಾಂದಾರ್ 5, ರಾಸ್‌ಪುಟಿನ್ 8
8ನೇ ರೇಸ್: ಅಲ್ಯೆಸ್ಟರ್ 5, ಫ್ಯೂರರ್ 2, ಪೆಪ್ಪೋಲಿ 7

ಉತ್ತಮ ಬೆಟ್: ಸಕ್ಸಸರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	2,3,4	5,6,7

ಸ್ಕಾಟ್ಲೆಂಡ್ ಡ್ರೆಸಿಂಗ್ ಕೊಠಡಿಯಲ್ಲಿ ಕೊಹ್ಲಿ ಬಳಗ

ದುಬೈ: ಟ್ವೆಂಟಿ–20 ವಿಶ್ವಕಪ್ ಟೂರ್ನಿಯಲ್ಲಿ ಗೆದ್ದ ನಂತರ ಎದುರಾಳಿ ತಂಡವಾದ ಸ್ಕಾಟ್ಲೆಂಡ್‌ನ ಡ್ರೆಸಿಂಗ್ ಕೊಠಡಿಗೆ ತೆರಳಿ ಅನುಭವಗಳನ್ನು ಹಂಚಿಕೊಂಡ ಭಾರತ ತಂಡದ ಆಟಗಾರರು ಕ್ರಿಕೆಟ್ ಜಗತ್ತಿನ ಗಮನ ಸೆಳೆದಿದ್ದಾರೆ.

ಶುಕ್ರವಾರ ರಾತ್ರಿ ನಡೆದ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಬಳಗ ಸ್ಕಾಟ್ಲೆಂಡ್ ಎದುರು ಜಯ ಗಳಿಸಿತ್ತು.

ಪಂದ್ಯದ ನಂತರ ನಾಯಕ ವಿರಾಟ್ ಕೊಹ್ಲಿ, ಉಪನಾಯಕ ರೋಹಿತ್ ಶರ್ಮಾ, ಆರಂಭಿಕ ಬ್ಯಾಟರ್ ಕೆ.ಎಲ್. ರಾಹುಲ್, ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಮತ್ತು ರವಿಚಂದ್ರನ್ ಅಶ್ವಿನ್ ಮತ್ತು ತಂಡದ ಪೋಷಕ ಮಹೇಂದ್ರ ಸಿಂಗ್ ಧೋನಿ ಅವರು ಸ್ಕಾಟ್ಲೆಂಡ್ ಆಟಗಾರರ ಜೊತೆ ಮಾತುಕತೆ ನಡೆಸಿದ್ದರು.

ಇದರಿಂದ ಪುಳಕಗೊಂಡ ಕ್ರಿಕೆಟ್ ಸ್ಕಾಟ್ಲೆಂಡ್ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿದ್ದು ವಿರಾಟ್ ಕೊಹ್ಲಿ ಮತ್ತು ತಂಡದ ಮೇಲಿನ ಗೌರವ ನೂರ್ಮಡಿಯಾಗಿದೆ ಎಂದು ಹೇಳಿದೆ.

ಸ್ಕಾಟ್ಲೆಂಡ್ ತಂಡದ ಡ್ರೆಸಿಂಗ್ ಕೊಠಡಿಯಲ್ಲಿ ಆಟಗಾರರ ಜೊತೆ ಮಾತುಕತೆ ನಡೆಸಿದ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ –ಟ್ವಿಟರ್ ಚಿತ್ರ

ಆಟಗಾರರು ಮಾತುಕತೆಯಲ್ಲಿ ತೊಡಗಿರುವ ಚಿತ್ರಗಳನ್ನು ಕೂಡ ಪೋಸ್ಟ್ ಮಾಡಿದ್ದು ಬೆಲೆ ಕಟ್ಟಲಾಗದ ಸೌಹಾರ್ದ ಎಂದು ಬಣ್ಣಿಸಲಾಗಿದೆ.

ಪಂದ್ಯದಲ್ಲಿ ಭಾರತ ಎಂಟು ವಿಕೆಟ್‌ಗಳಿಂದ ಸ್ಕಾಟ್ಲೆಂಡ್ ವಿರುದ್ಧ ಜಯಿಸಿತು.

ಟಾಸ್ ಗೆದ್ದ ಭಾರತ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರವೀಂದ್ರ ಜಡೇಜ (15ಕ್ಕೆ3) ಮತ್ತು ಮೊಹಮ್ಮದ್ ಶಮಿ (15ಕ್ಕೆ3) ಅವರಿಬ್ಬರ ದಾಳಿಗೆ ತತ್ತರಿಸಿದ ಸ್ಕಾಟ್ಲೆಂಡ್ 17.4 ಓವರ್‌ಗಳಲ್ಲಿ 85 ರನ್ ಗಳಿಸಿತು. ಅದಕ್ಕುತ್ತರವಾಗಿ ಭಾರತ ತಂಡವು 6.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 89 ರನ್ ಗಳಿಸಿ ಜಯಿಸಿತು.

ವೇಗದ ಅರ್ಧಶತಕ: ರಾಹುಲ್ ಸಾಧನೆ: ಭಾರತ ತಂಡದ ಆರಂಭಿಕ ಬ್ಯಾಟ್ಸ್‌ಮನ್ ಕೆ.ಎಲ್. ರಾಹುಲ್ ಅವರು ಶುಕ್ರವಾರ ಸ್ಕಾಟ್ಲೆಂಡ್ ವಿರುದ್ಧದ ಪಂದ್ಯದಲ್ಲಿ 18 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಈ ಸಾಧನೆ ಮಾಡಿದ ಭಾರತದ ಎರಡನೇ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾದರು. ಈ ಪಂದ್ಯದಲ್ಲಿ ಅವರು ಆರು ಬೌಂಡರಿ ಮತ್ತು ಮೂರು ಸಿಕ್ಸರ್ ಬಾರಿಸಿದರು.

ಅಂತರರಾಷ್ಟ್ರೀಯ ಟಿ20 ವಿಶ್ವಕಪ್ ಕ್ರಿಕೆಟ್‌ನಲ್ಲಿ ಅತಿ ವೇಗದ ಅರ್ಧಶತಕ ಬಾರಿಸಿದ ವಿಶ್ವದಾಖಲೆಯು ಯುವರಾಜ್ ಸಿಂಗ್ (12 ಎಸೆತಗಳಲ್ಲಿ) ಅವರ ಹೆಸರಿನಲ್ಲಿದೆ. ಇದೀಗ ರಾಹುಲ್ ಎರಡನೇ ಭಾರತೀಯರಾಗಿ ಪಟ್ಟಿಯಲ್ಲಿ ಸೇರ್ಪಡೆಯಾಗಿದ್ದಾರೆ.

ಸಂಕ್ಷಿಪ್ತ ಸ್ಕೋರು: ಸ್ಕಾಟ್ಲೆಂಡ್: 17.4 ಓವರ್‌ಗಳಲ್ಲಿ 85 (ಮುನ್ಸಿ 24,ಲೀಸ್ಕ್21ಮೆಕ್‌ಲಾಯ್ಡ್ 16, ಮೊಹಮ್ಮದ್ ಶಮಿ 15ಕ್ಕೆ3, ರವೀಂದ್ರ ಜಡೇಜ 15ಕ್ಕೆ3)

ಭಾರತ: 6.3 ಓವರ್‌ಗಳಲ್ಲಿ 2 ವಿಕೆಟ್‌ಗೆ89 (ಕೆ.ಎಲ್. ರಾಹುಲ್ 50, ರೋಹಿತ್ ಶರ್ಮಾ 30, ಮಾರ್ಕ್ ವಾಟ್ 20ಕ್ಕೆ1, ಬ್ರಾಡ್ಲಿ ವೀಲ್ 32ಕ್ಕೆ1) **ಫಲಿತಾಂಶ:**ಭಾರತಕ್ಕೆ 8 ವಿಕೆಟ್ ಜಯ.

ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ

ಕರ್ನಾಟಕ ತಂಡಕ್ಕೆ ಗೆಲುವಿನ 'ಹ್ಯಾಟ್ರಿಕ್

ಗುವಾಹಟಿ: ನಾಯಕ ಮನೀಷ್ ಪಾಂಡೆಯ ಅರ್ಧಶತಕ ಮತ್ತು ವೈಶಾಖ್ ವಿಜಯಕುಮಾರ್ ಅವರ ನಿಖರ ದಾಳಿಯ ಬಲದಿಂದ ಕರ್ನಾಟಕ ತಂಡವು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರ ಸರ್ವಿಸಸ್ ವಿರುದ್ಧ ಜಯಿಸಿತು.

ಬಿ ಗುಂಪಿನಲ್ಲಿ ಸತತ ಮೂರು ಪಂದ್ಯಗಳನ್ನು ಜಯಿಸಿ 'ಹ್ಯಾಟ್ರಿಕ್' ಸಾಧಿಸಿತು. ಟಾಸ್ ಗೆದ್ದ ಸರ್ವಿಸಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕರ್ನಾಟಕ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 142 ರನ್ ಗಳಿಸಿತು. ಅದಕ್ಕುತ್ತರವಾಗಿ ಸರ್ವಿಸಸ್ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 109 ರನ್ ಗಳಿಸಲಷ್ಟೇ ಶಕ್ತವಾಯಿತು. ಪಾಂಡೆ ಬಳಗವು 33 ರನ್‌ಗಳಿಂದ ಗೆದ್ದಿತು.

ಕರ್ನಾಟಕ ತಂಡದ ಆರಂಭ ಉತ್ತಮವಾಗಿರಲಿಲ್ಲ. ಮೂರನೇ ಓವರ್‌ನಲ್ಲಿ ದೇವದತ್ತ ಪಡಿಕ್ಕಲ್ ಔಟಾದರು. ಮಯಂಕ್ ಅಗರವಾಲ್ (28) ಮತ್ತು ಪಾಂಡೆ ಎರಡನೇ ವಿಕೆಟ್‌ಗೆ 43 ರನ್ ಸೇರಿಸಿದರು. ಇನಿಂಗ್ಸ್‌ಗೆ ಸ್ಥಿರತೆ ಒದಗಿಸುವ ಪ್ರಯತ್ನ ಮಾಡಿದರು.

ಮನೀಷ್ ಪಾಂಡೆ–ಪ್ರಜಾವಾಣಿ ಚಿತ್ರ

ಆದರೆ 11ನೇ ಓವರ್‌ನಲ್ಲಿ ಈ ಜೊತೆಯಾಟವನ್ನು ರಾಹುಲ್ ಸಿಂಗ್ ಮುರಿದರು. ಮಯಕ್ ಅವಿಕೆಟ್ ಗಳಿಸಿದರು. ಕರುಣ್ ನಾಯರ್ ಕೇವಲ ಆರು ರನ್ ಗಳಿಸಿದ ನಿರ್ಗಮಿಸಿದರು.

ಅನಿರುದ್ಧ ಜೋಶಿ ರನ್ ಗಳಿಕೆಯ ವೇಗ ಹೆಚ್ಚಿಸಲು ಪ್ರಯತ್ನಿಸಿದರು. ಇನ್ನೊಂದು ಕಡೆ ಮನೀಷ್ ಕೂಡ ಬೀಸಾಟವಾಡಿದರು. ಇದರಿಂದಾಗಿ ಬೌಲರ್‌ಗಳಿಗೆ ಒತ್ತಡ ಹೆಚ್ಚಿತು. ಆದರೆ, ಸಚ್ಚಿದಾನಂದ ಪಾಂಡೆಯ ಬೌಲಿಂಗ್‌ನಲ್ಲಿ ಮನೀಷ್ ಔಟಾದರು.

ಗುರಿ ಬೆನ್ನಟ್ಟಿದ ಸರ್ವಿಸಸ್ ತಂಡಕ್ಕೆ ಆರಂಭದಲ್ಲಿಯೇ ಗೌತಮ್ ಮತ್ತು ಸುಚಿತ್ ಜೋಡಿಯು ಪೆಟ್ಟುಕೊಟ್ಟಿತು. ಇದರಿಂದಾಗಿ ಕೇವಲ 20 ರನ್ ಗಳಿಸುವಷ್ಟರಲ್ಲಿ ತಂಡವು ಎರಡು ವಿಕೆಟ್ ಕಳೆದುಕೊಂಡಿತ್ತು. ಗೆಹ್ಲೋಟ್ ರಾಹುಲ್ ಸಿಂಗ್ (34 ರನ್) ಮತ್ತು ಅಮಿತ್ ಪಚಾರ್ (23 ರನ್) ಅವರು ರನ್ ಗಳಿಸುವ ಪ್ರಯತ್ನ ಮಾಡಿದರು. ಆದರೆ, ಎಂಬಿ. ದರ್ಶನ್ ಮತ್ತು ವೈಶಾ ವಿಜಯಕುಮಾರ್ (3 ವಿಕೆಟ್) ಅವರ ಬೌಲಿಂಗ್ ಮುಂದೆ ಸರ್ವಿಸಸ್ ತಲೆಬಾಗಿತು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 20 ಓವರ್‌ಗಳಲ್ಲಿ 6ಕ್ಕೆ 142 (ಮಯಂಕ್ ಅಗರವಾಲ್ 28, ಮನೀಷ್ ಪಾಂಡೆ 51, ಅನಿರುದ್ಧ ಜೋಶಿ 23; ದಿವೇಶ್ ಪಠಾಣಿಯಾ 31ಕ್ಕೆ2, ಸಚ್ಚಿದಾನಂದ ಪಾಂಡೆ 31ಕ್ಕೆ1, ರಾಹುಲ್ ಸಿಂಗ್ 24ಕ್ಕೆ1, ಲಖನ್ ಸಿಂಗ್ 14ಕ್ಕೆ1); **ಸರ್ವಿಸಸ್:** 20 ಓವರ್‌ಗಳಲ್ಲಿ 8ಕ್ಕೆ 109 (ರಾಹುಲ್ 34, ರಜತ್ 12, ಪಚ್ಚಾರ 23, ಪಠಾಣಿಯಾ 14; ಜಗದೀಶ್ ಸುಚಿತ್ 15ಕ್ಕೆ1, ಕೃಷ್ಣಪ್ಪ ಗೌತಮ್ 19ಕ್ಕೆ1, ವಿಜಯಕುಮಾರ್ ವೈಶಾಖ್ 25ಕ್ಕೆ3, ಎಂ.ಬಿ.ದರ್ಶನ್ 30ಕ್ಕೆ2) ಫಲಿತಾಂಶ: ಕರ್ನಾಟಕ ತಂಡಕ್ಕೆ 33 ರನ್‌ಗಳ ಜಯ.

ಗೌತಮ್, ಕಾರ್ಯಪ್ಪ ದಾಳಿ: ಛತ್ತೀಸಗಡಕ್ಕೆ ಸೋಲು

ಶುಕ್ರವಾರದ ಪಂದ್ಯದಲ್ಲಿ ಛತ್ತೀಸಗಡದ ವಿರುದ್ಧ ಕರ್ನಾಟಕ 4 ವಿಕೆಟ್‌ಗಳಿಂದ ಜಯಿಸಿತು. ಟಾಸ್ ಗೆದ್ದ ಕರ್ನಾಟಕ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕೆ. ಗೌತಮ್ (26ಕ್ಕೆ2) ಮತ್ತು ಕೆ.ಸಿ. ಕಾರ್ಯಪ್ಪ (14ಕ್ಕೆ2) ಅವರ ಬೌಲಿಂಗ್ ಮುಂದೆ ಛತ್ತೀಸಗಡ 20 ಓವರ್ ಗಳಲ್ಲಿ 5ಕ್ಕೆ 145 ರನ್ ಗಳಿಸಿತು. ಶಶಾಂಕ್ ಸಿಂಗ್ (52; 27ಎಸೆತ) ಮಿಂಚಿನ ಅರ್ಧಶತಕ ಗಳಿಸಿದರು. ಅದಕ್ಕುತ್ತರವಾಗಿ ಕರ್ನಾಟಕ ತಂಡವು 19.3 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 146 ರನ್ ಗಳಿಸಿತು. ದೇವದತ್ತ ಪಡಿಕ್ಕಲ್ (42 ರನ್) ಮತ್ತು ಬಿ.ಆರ್. ಶರತ್ (ಔಟಾಗದೆ 42) ತಂಡದ ಗೆಲುವಿಗೆ ಕಾಣಿಕೆ ನೀಡಿದರು.

ಕೋಚ್ ತಾರಕ್ ಸಿನ್ಹಾ ಇನ್ನಿಲ್ಲ

ನವದೆಹಲಿ(ಪಿಟಿಐ): ಕ್ರಿಕೆಟ್ ವಲಯದಲ್ಲಿ 'ಉಸ್ತಾದ್ ಜೀ' ಎಂದೇ ಖ್ಯಾತರಾಗಿದ್ದ ಕೋಚ್ ತಾರಕ್ ಸಿನ್ಹಾ(71) ಶನಿವಾರ ಬೆಳಿಗ್ಗೆ ನಿಧನರಾದರು.

ಅವರು ದೀರ್ಘಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರು ಅವಿವಾಹಿತರಾಗಿದ್ದರು. ಅವರಿಗೆ ಸಹೋದರಿ ಇದ್ದಾರೆ.

ದೆಹಲಿಯ ಕ್ರಿಕೆಟ್ ವಲಯದಲ್ಲಿ ತಾರಕ್ ಸಿನ್ಹಾ ಅವರೆಂದರೆ 'ದ್ರೋಣಾಚಾರ್ಯ'ನೇ ಆಗಿದ್ದರು. ಸಾನೆಟ್ ಕ್ರಿಕೆಟ್ ಕ್ಲಬ್‌ನ ಸಂಸ್ಥಾಪಕರಾಗಿದ್ದರು.

ಟೆಸ್ಟ್ ಆಟಗಾರರಾದ ಸುರೀಂದರ್ ಖನ್ನಾ, ಮನೋಜ್ ಪ್ರಭಾಕರ್, ದಿವಂಗತ ರಮಣ್ ಲಾಂಬಾ, ಅಜಯ್ ಶರ್ಮಾ, ಅತುಲ್ ವಾಸನ್, ಸಂಜೀವ್ ಶರ್ಮಾ, ಆಕಾಶ್ ಚೋಪ್ರಾ, ಕೆ.ಪಿ. ಭಾಸ್ಕರ್, ಶಿಖರ್ ಧವನ್, ಆಶಿಶ್ ನೆಹ್ರಾ ಮತ್ತು ಸದ್ಯ ಭಾರತ ತಂಡದ ವಿಕೆಟ್‌ಕೀಪರ್ ಆಗಿರುವ ರಿಷಭ್ ಪಂತ್, ಮಹಿಳಾ ತಂಡದ ಮಾಜಿ ನಾಯಕಿ ಅಂಜುಮ್ ಚೋಪ್ರಾ, ರುಮೇಲಿ ಧಾರ್ ಅವರು ಸಿನ್ಹಾ ಮಾರ್ಗದರ್ಶನದಲ್ಲಿ ಬೆಳೆದ ಪ್ರಮುಖರು.

ಇವರ ಕ್ಲಬ್‌ನಲ್ಲಿ ತರಬೇತಿ ಪಡೆದ ಹಲವರು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಆಡುತ್ತಿದ್ದಾರೆ.

'ತಾರಕ್ ಸಿನ್ಹಾ ಅವರು ಶನಿವಾರ ಬೆಳಗಿನ ಜಾವ ಮೂರು ಗಂಟೆ ಸುಮಾರಿಗೆ ಕೊನೆಯುಸಿರೆಳೆದರು ಎಂದು ತಿಳಿಸಲು ಹೃದಯ ಭಾರವಾಗಿದೆ. ಕಳೆದೆರಡು ತಿಂಗಳಿನಿಂದ ಶ್ವಾಸಕೋಶದ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು' ಎಂದು ಸಾನೆಟ್ ಕ್ಲಬ್ ಪ್ರಕಟಣೆಯಲ್ಲಿ ತಿಳಿಸಿದೆ.

ತಾರಕ್ ಸಿನ್ಹಾ

ಐದು ದಶಕಗಳಿಂದ ಅವರು ಕ್ರಿಕೆಟ್ ತರಬೇತಿ ನೀಡುತ್ತಿದ್ದರು. ರಿಷಭ್ ದೆಹಲಿಗೆ ಕ್ರಿಕೆಟ್ ತರಬೇತಿಗೆ ಬಂದಾಗ ಗುರುದ್ವಾರದಲ್ಲಿ ಉಳಿದುಕೊಂಡಿದ್ದರು. ಆರ್ಥಿಕ ಸಂಕಷ್ಟದಲ್ಲಿದ್ದ ರಿಷಭ್‌ಗೆ ಉಳಿಯಲು ಬಾಡಿಗೆ ಮನೆ ವ್ಯವಸ್ಥೆ ಮಾಡಿದ್ದ ಸಿನ್ಹಾ, 10 ಮತ್ತು 12ನೇ ತರಗತಿಯ ಪರೀಕ್ಷೆಗಳನ್ನು ಬರೆಯಲೂ ಅನುಕೂಲ ಮಾಡಿಕೊಟ್ಟಿದ್ದರು. ತಮ್ಮ ಸಹಾಯಕ ಕೋಚ್ ದೇವೆಂದರ್ ಶರ್ಮಾ ಅವರು ರಿಷಭ್ ತರಬೇತಿಗೆ ವ್ಯವಸ್ಥೆ ಮಾಡಿದ್ದರು.

'ನನಗೆ ಪಿತೃಸಮಾನರಾಗಿದ್ದರು ತಾರಕ್ ಸರ್' ಎಂದು ರಿಷಭ್ ಕಂಬನಿ ಮಿಡಿದಿದ್ದಾರೆ.

ರಿಷಭ್ ರಂತಹ ಹಲವಾರು ಮಕ್ಕಳಿಗೆ ಕ್ರಿಕೆಟ್ ಮತ್ತು ಶಿಕ್ಷಣದಲ್ಲಿ ಬೆಳಗಲು ದಾರಿ ಮಾಡಿಕೊಟ್ಟವರು ಸಿನ್ಹಾ. 2018ರಲ್ಲಿ ಅವರಿಗೆ ಜೀವಮಾನ ಸಾಧನೆಗಾಗಿ ದ್ರೋಣಾಚಾರ್ಯ ಪುರಸ್ಕಾರ ಸಂದಿದೆ.





ಪುನೀತ್ ಮಿಂಚಿ ಮಾಯವಾದ ಮಂದಹಾಸ

ಕಲೆ: ಕರಣ್ ಆಚಾರ್ಯ

ಕೆ. ಪುಟ್ಟಸ್ವಾಮಿ

ಪುನೀತ್ ರಾಜ್‌ಕುಮಾರ್ ಅವರ ಅನಿರೀಕ್ಷಿತ ಸಾವು ಸೃಷ್ಟಿಸಿದ ಭಾವಸ್ಪಂದನ ಕನ್ನಡನಾಡು ಕಂಡ ಅಪೂರ್ವ ವಿದ್ಯಮಾನ. ಡಾ.ರಾಜ್ ಅವರ ದೊಡ್ಡ ಕುಟುಂಬದ ಸದಸ್ಯರ ದುಃಖದಲ್ಲಿ ಇಡೀ ನಾಡು ಮಾತ್ರವಲ್ಲ, ದೇಶದ ನಾನಾ ಮೂಲೆಗಳಲ್ಲಿದ್ದ ಜನಸಮುದಾಯ ಕೂಡ ಭಾಗಿಯಾಯಿತು. ಇದೊಂದು ಅನ್ಯಾಯದ ಸಾವೆಂದು ಮಮ್ಮುಲ ಮರುಗಿತು. ಎಲ್ಲರ ಮನೆ ಮತ್ತು ಮನದಲ್ಲಿ ಸೂತಕದ ಛಾಯೆ ಆವರಿಸಿಕೊಂಡ ಇಂಥ ದುರಂತಕ್ಕೆ ನಮ್ಮ ನಾಡು ಹಿಂದೆಂದೂ ಈ ಪ್ರಮಾಣದಲ್ಲಿ ಸಾಕ್ಷಿಯಾಗಿರಲಿಲ್ಲ. ಇದಕ್ಕೆ ವ್ಯಾಪಕವಾಗಿರುವ ಈಗಿನ ಮಾಹಿತಿ ಜಾಲ ಮತ್ತು ಸಾಮಾಜಿಕ ಮಾಧ್ಯಮ ಮಾತ್ರ ಕಾರಣವಲ್ಲ. ಪುನೀತ್ ಅವರ ಸಾವು ನಿಜಕ್ಕೂ ಜನತೆಯನ್ನು ದುಃಖದ ಕಡಲಿನಲ್ಲಿ ಮುಳುಗಿಸಿದ ಬಹುದೊಡ್ಡ ದುರಂತ.

> ಡಾ.ರಾಜ್‌ಕುಮಾರ್ ಅವರ ಜನಪ್ರಿಯತೆಯ ಮುಂದೆ ಯಾರೂ ಸಮಾನರಲ್ಲ. ಅವರ ಐವತ್ತು ವರ್ಷಗಳ ಸುದೀರ್ಘ ವೃತ್ತಿ ಬದುಕು ಕನ್ನಡ ಚಿತ್ರರಂಗದ ಚರಿತ್ರೆಯ ಭಾಗವಾಗಿತ್ತು. ಇಂಥ ಬೃಹತ್ ಮರದ ನೆರಳಲ್ಲಿ ಬೆಳೆದ ಪುನೀತ್, ಆ ನೆರಳಿನಿಂದಾಚೆ ತಮ್ಮದೇ ವ್ಯಕ್ತಿತ್ವ ರೂಪಿಸಿಕೊಂಡು ಜನಮಾನಸದಲ್ಲಿ ನೆಲೆಯಾದದ್ದು ಮಾತ್ರ ತರ್ಕಕ್ಕೆ ಸಿಗದ ಸಂಗತಿ

ಅಕ್ಟೋಬರ್ 29ರಂದು ಪುನೀತ್ ಅವರು ಆಸ್ಪತ್ರೆಗೆ ಸೇರಿದ ಸುದ್ದಿ ಬಂದ ಕೂಡಲೇ ಅವರು ಗುಣಮುಖರಾಗಲು ಇಡೀ ನಾಡು ಹರಕೆ ಹೊತ್ತಿತು. ಮರಣ ಖಚಿತವಾದಂತೆ ದಿಗ್ಭ್ರಾಂತಿ ಆವರಿಸಿತು. ಮನೆಯಲ್ಲಿ ಮಕ್ಕಳು 'ಅಪ್ಪು ಅಪ್ಪು' ಎಂದು ಬಿಕ್ಕಿದರೆ, ಹೆಣ್ಣುಮಕ್ಕಳು ತಮ್ಮ ಕುಟುಂಬದ ಪ್ರೀತಿಪಾತ್ರ ಸಹೋದರನನ್ನು ಕಳೆದುಕೊಂಡಂತೆ ಕಣ್ಣೀರಾದರು. ವಯಸ್ಸಾದವರು, 'ಕಣ್ಣ ಮುಂದೆ ಬೆಳೆದ ಹುಡುಗ'ನ ಸಾವಿನ ಸುದ್ದಿ ಕೇಳಿ ಅನಾಥರಾದಂತೆ ಭಾವಿಸಿದರು. ರಾಜ್ ಕುಟುಂಬದ ದುಃಖ ನಾಡಿನ ದುಃಖವಾಯಿತು. ಅವರ ಪಾರ್ಥಿವ ಶರೀರದ ದರ್ಶನಕ್ಕೆ ನಾಡಿನ ಮೂಲೆಮೂಲೆಯಿಂದ ಜನಸಾಗರ ಹರಿದುಬಂತು. ಹಿರಿಯ ಪೊಲೀಸ್ ಅಧಿಕಾರಿಯೊಬ್ಬರ ಪ್ರಕಾರ ಮಳೆಗಾಳಿಯನ್ನು ಲೆಕ್ಕಿಸದೆ ಪ್ರವಾಹದೋಪಾದಿಯಲ್ಲಿ ಬಂದ ಜನರ ಅಭಿಮಾನದ ಸಂಯಮ ವರ್ತನೆಯನ್ನು ಮತ್ತು ಮರಣಿಸಿದ ತಮ್ಮ ಪ್ರೀತಿಯ ಕಲಾವಿದನಿಗೆ ತೋರಿದ ಗೌರವಭಾವನೆಯನ್ನು ಅವರ ವೃತ್ತಿ ಬದುಕಿನಲ್ಲಿ ಹಿಂದೆಂದೂ ಕಂಡಿರಲಿಲ್ಲ. ಅನ್ಯ ಚಿತ್ರರಂಗದ ಪ್ರಖ್ಯಾತ ನಟರು, ತಂತ್ರಜ್ಞರು ಪುನೀತ್ ಅವರನ್ನು ನೆನೆದ ಪರಿ ಅವರ ಜನಪ್ರಿಯತೆಯ ಹರಹನ್ನು ತೆರೆದು ತೋರಿಸಿತು. ಸಾಮಾಜಿಕ ಜಾಲತಾಣದಲ್ಲಿ ಕಾಣಿಸಿಕೊಂಡ- 'ನಾನು ಪುನೀತ್ ಅವರ ಅಭಿಮಾನಿಯೂ ಅಲ್ಲ. ಅವರ ಹೆಚ್ಚಿನ ಚಿತ್ರಗಳನ್ನೂ ನೋಡಿಲ್ಲ. ಆದರೂ ಅವರ ಸಾವು ನನ್ನ ಹೃದಯವನ್ನು ಹಿಂಡಿದೆ' ಎಂಬ ಮಾತು ಅಭಿಮಾನಿಗಳಲ್ಲದವರ ಮನದಾಳದ ದುಃಖಕ್ಕೂ ಸಾಕ್ಷಿಯಾಗಿತ್ತು.

ಪುನೀತ್ ಅವರ ಅಕಾಲ ಮರಣಕ್ಕೆ ಜನ ತೋರಿದ ಪ್ರತಿಕ್ರಿಯೆ ಸುಲಭ ವ್ಯಾಖ್ಯೆಗೆ ಮತ್ತು ಸರಳ ಗ್ರಹಿಕೆಗೆ ಸಿಗುವಂಥದ್ದಲ್ಲ. ಅವರು ಗಳಿಸಿದ ಜನಪ್ರಿಯತೆ, ಜನಮಾನಸವನ್ನು ಆವರಿಸಿಕೊಂಡ ರೀತಿಯನ್ನು ನಮ್ಮ ಸಾಮಾನ್ಯ ವಿಶ್ಲೇಷಣಾ ಹತಾರುಗಳಿಂದ ವಿವರಿಸಲು ಸಾಧ್ಯವಾಗದು. ನಿಜ, ಡಾ.ರಾಜ್ ಅವರ ಜನಪ್ರಿಯತೆಯ ಮುಂದೆ ಯಾರೂ ಸಮಾನರಲ್ಲ. ಅವರ ಐವತ್ತು ವರ್ಷಗಳ ಸುದೀರ್ಘ ವೃತ್ತಿ ಬದುಕು ಕನ್ನಡ ಚಿತ್ರರಂಗದ ಚರಿತ್ರೆಯ ಭಾಗವಾಗಿತ್ತು. ಉದ್ಯಮದ ಒಳಬಲವಾಗಿತ್ತು. ಅವರು ಕನ್ನಡ ಜನರ ಕಲ್ಪನೆಯ ಸಾಂಸ್ಕೃತಿಕ ನಾಯಕನ ಮೂರ್ತರೂಪವಾಗಿದ್ದರು. ಅವರ ಕಲೆ, ಕನ್ನಡಾಭಿಮಾನ ಮತ್ತು ತೆರೆಯಿಂದಾಚೆಗಿನ ನಡವಳಿಕೆ, ವಿನಯ ಮತ್ತು ಘನತೆ ಕನ್ನಡದ ಸಾಂಸ್ಕೃತಿಕ ವಿದ್ಯಮಾನವೇ ಆಗಿತ್ತು. ಇಂಥ ಬೃಹತ್ ಮರದ ನೆರಳಲ್ಲಿ ಬೆಳೆದ ಪುನೀತ್ ತನ್ನದೇ ವ್ಯಕ್ತಿತ್ವವನ್ನು ಆ ನೆರಳಿನಿಂದಾಚೆಗೆ ರೂಪಿಸಿಕೊಂಡು ಜನಮಾನಸದಲ್ಲಿ ನೆಲೆಯಾದದ್ದು ಮಾತ್ರ ತರ್ಕಕ್ಕೆ ಸಿಗದ ಸಂಗತಿ.

ಪುನೀತ್ ಅವರನ್ನು ರಾಜ್ ಕುಟುಂಬ ಮಾತ್ರವಲ್ಲ, ಇಡೀ ಕರ್ನಾಟಕ 'ಅಪ್ಪು'ವಾಗಿ ಸ್ವೀಕರಿಸಿತ್ತು. ಡಾ. ರಾಜ್ ತಮ್ಮ ಮಕ್ಕಳನ್ನು ಅವರ ಬೆಳವಣಿಗೆಯ ಹಂತದಲ್ಲಿ ಎಂದೂ ಚಿತ್ರಗಳಲ್ಲಿ ಅಥವಾ ಸಾರ್ವಜನಿಕವಾಗಿ ಮುನ್ನೆಲೆಗೆ ತಂದವರಲ್ಲ. ಶಿವಣ್ಣ ಮತ್ತು ಪೂರ್ಣಿಮಾ ಒಂದೆರಡು ಚಿತ್ರಗಳಲ್ಲಿ ಬಾಲಕಲಾವಿದರಾಗಿ ಕಾಣಿಸಿಕೊಂಡದ್ದು ಬಿಟ್ಟರೆ ಅವರ ಮಕ್ಕಳು ಮುಂದೆ ಚಿತ್ರರಂಗಕ್ಕೆ ಆಗಮಿಸುವ ಸೂಚನೆಗಳು ಇರಲಿಲ್ಲ. ಅವರೆಲ್ಲ ದೊಡ್ಡ ವಿದ್ಯಾವಂತರಾಗಬೇಕೆಂಬ ಕನಸನ್ನು ರಾಜ್ ಅವರ ಕುಟುಂಬ ಕಂಡಿತ್ತು. ಆದರೆ, ಅಪ್ಪು ವಿಷಯದಲ್ಲಿ ಅದು ಅಪವಾದವಾಗಿತ್ತು. ಚಿತ್ರಗಳಲ್ಲಿ ಮತ್ತು ಸಾರ್ವಜನಿಕವಾಗಿಯೂ ಅವರು ರಾಜ್ ಜೊತೆ ಹೆಚ್ಚು ಕಾಣಿಸಿಕೊಂಡರು. ಅವರ ಸಿನಿಮಾ ಪಯಣ ಸಹ 'ನಮ್ಮ ಕಣ್ಣ ಮುಂದೆ ಬೆಳೆದ ಹುಡುಗ'ನ ಇಮೇಜಿಗೆ ಅನುಗುಣವಾಗಿ ಸಾಗಿಬಂತು.

'ಪ್ರೇಮದ ಕಾಣಿಕೆ' (1976) ಚಿತ್ರದಲ್ಲಿ ಅಪ್ಪು ಮೊದಲು ಕಾಣಿಸಿಕೊಂಡಾಗ ಆರು ತಿಂಗಳ ಕೈಗೂಸು. ಮಾರನೇ ವರ್ಷ 'ಸನಾದಿ ಅಪ್ಪಣ್ಣ' ಚಿತ್ರದಲ್ಲಿ ತಪ್ಪು ಹೆಜ್ಜೆ ಹಾಕುತ್ತಾ ನಡೆದು ಅಪ್ಪನ ಕೊರಳು ತಬ್ಬುವ ಬಾಲಕ ಹನುಮಂತುವಿನ ಪಾತ್ರ. 'ತಾಯಿಗೆ ತಕ್ಕ ಮಗ' ಚಿತ್ರದಲ್ಲಿ (1978) ಬಾಕ್ಸಿಂಗ್ ಗವಸು ತೊಟ್ಟ ರಾಜ್ ಪಾತ್ರದ ಬಾಲಕ.

14ನೇ ಪುಟಕ್ಕೆ...

ಚಿತ್ರ: ಮಹೇಂದ್ರ ಸಿಂಹ

ಎಲ್ಲರ ಪ್ರೀತಿ ದೋಚಲೆಂದೇ ಹುಟ್ಟಿದ ಮಗು ಈ ಅಪ್ಪು!

ಜಯಮಾಲಾ

ಅದು 1975. ರಾಜ್‌ಕುಮಾರ್ ಅವರ ಜೊತೆಗೆ ನಾನು ನಟಿಸಿದ ಮೊದಲ ಸಿನಿಮಾ 'ಪ್ರೇಮದ ಕಾಣಿಕೆ'ಯ ಶೂಟಿಂಗ್ ಶಿಮ್ಲಾದಲ್ಲಿ ನಡೆದಿತ್ತು. ನಾವು ಇಲ್ಲಿಂದ ಹೋಗುವಾಗಲೇ ಪಾರ್ವತಮ್ಮ ಅವರು ತುಂಬು ಗರ್ಭಿಣಿ. ಶಿಮ್ಲಾದಿಂದ ಪ್ರತಿದಿನ ಟ್ರಂಕ್ ಕಾಲ್ ಮಾಡಿ ರಾಜ್‌ಕುಮಾರ್ ಅವರು ಪಾರ್ವತಮ್ಮನವರ ಆರೋಗ್ಯ ವಿಚಾರಿಸುತ್ತಿದ್ದರು. ನಮ್ಮ ಶೂಟಿಂಗ್ ಮುಗಿಯುವ ಹೊತ್ತಿಗೆ (ಆಗ ರಾಜ್‌ಕುಮಾರ್ ಅವರ ಮಯೂರ ಚಿತ್ರದ ಚಿತ್ರೀಕರಣವೂ ಶುರುವಾಗಿತ್ತು) ಪಾರ್ವತಮ್ಮನವರಿಗೆ ಹೆರಿಗೆಯಾದ ಮತ್ತು ತಾಯಿ-ಮಗು ಆರೋಗ್ಯವಾಗಿರುವ ಸುದ್ದಿ ಚೆನ್ನೈನಿಂದ (ಆಗ ಮದ್ರಾಸ್) ಬಂತು. ನಮ್ಮ ತಂಡ ಮರುದಿನ ಶೂಟಿಂಗ್ ಪ್ಯಾಕಪ್ ಮಾಡಿ ಬಂದು ನೇರವಾಗಿ ಹೋದದ್ದೇ ಆಸ್ಪತ್ರೆಗೆ. ಎಲ್ಲರಿಗೂ ಅಮ್ಮ ಮಗುವನ್ನು ನೋಡುವ ಆಸೆ. ಮುದ್ದಾದ ಆರೋಗ್ಯಪೂರ್ಣ ಗಂಡು ಮಗು. ಹಾಗೆ ನಾನು ಅಪ್ಪುವನ್ನು ಮೊದಲು ನೋಡಿದ್ದು ಆಸ್ಪತ್ರೆಯಲ್ಲಿ.

'ಪ್ರೇಮದ ಕಾಣಿಕೆ' ಚಿತ್ರದಲ್ಲಿ ರಾಜ್‌ಕುಮಾರ್ ಅವರ ಪುತ್ರಿ ಪೂರ್ಣಿಮಾ ನನ್ನ ಮಗಳ ಪಾತ್ರ ಮಾಡಿದ್ದಳು. ಆಗ ಪೂರ್ಣಿಮಾಗೆ ಏಳೆಂಟು ವರ್ಷ ಆಗಿರಬೇಕು. ಆ ಸಿನಿಮಾದಲ್ಲಿ ಇಬ್ಬರು ಪುಟ್ಟ ಮಕ್ಕಳ ನಟನೆ ಇತ್ತು. ಹಾಡಿನ ದೃಶ್ಯದಲ್ಲಿ ಟ್ರಾಲಿನಲ್ಲಿ ಮಗು ಇತ್ತಲ್ಲ, ನಾವು ಎತ್ತಿಕೊಂಡು ಹಾಡೋದು- ಅದು ಅಪ್ಪು. ಅದಕ್ಕಿನ್ನೂ ಆರೇಳು ತಿಂಗಳಾಗಿರಬೇಕು. ಇನ್ನೊಂದು ಸ್ಕರ್ಟ್ ಹಾಕಿ ನಮ್ಮ ಜೊತೆಗೆ ನಡೆಯುವ ಮಗು ಇದೆಯಲ್ಲ- ಅದು ರಾಜೇಶ್ವರಿ, ರಾಜ್‌ಕುಮಾರ್ ಅವರ ತಂಗಿ ಮಗಳು. ನನ್ನದು ಅದು ರಾಜ್‌ಕುಮಾರ್ ಜೊತೆಗೆ ಮೊದಲ ಸಿನಿಮಾ, ಅಪ್ಪುವಿನದ್ದೂ ಮೊದಲ ಸಿನಿಮಾ!

'ಬೆಟ್ಟದ ಹೂವು' ಚಿತ್ರಕ್ಕೆ ಅವನು ಶೂಟಿಂಗ್‌ಗೆ ಹೋಗಿ ಬಂದಾಗ ಅವನ ಸಹಜ ಅಭಿನಯದ ಬಗ್ಗೆ ಅಶ್ವತ್ಥ್, ಸಂಪತ್ ಅವರಂತಹ ಹಿರಿಯರೂ ಮಾತನಾಡುತ್ತಿದ್ದರು. ಸಂಪತ್ ಅವರಿಗಂತೂ ಆ ಕುಟುಂಬದ ಜೊತೆಗೆ ತುಂಬ ಪ್ರೀತಿ. ಅವರನ್ನು ರಾಜ್‌ಕುಮಾರ್ ಅಪ್ಪಾಜಿ ಅಂತಲೇ ಕರೆಯುತ್ತಿದ್ದರು. ಅಪ್ಪು ಶೂಟಿಂಗ್ ತಂಡದ ಜೊತೆಗೇ ಬೆಳೆದವನು. ಹೊನ್ನವಳ್ಳಿ ಕೃಷ್ಣ, ನಿರ್ದೇಶಕ ರಾಜ್‌ಶೇಖರ್, ಭಟ್ಟಿ ಮಹಾದೇವಪ್ಪ, ಶನಿ ಮಹಾದೇವಪ್ಪ... ಅಲ್ಲಿ ಇದ್ದ ತಂಡದ ಎಲ್ಲರೂ ಅವನನ್ನು ಹೆಗಲ ಮೇಲೆ ಕೂಸುಮರಿ ಮಾಡಿ ಬೆಳೆಸಿದವರು.

1978ರವರೆಗೂ ನಾನು ರಾಜ್‌ಕುಮಾರ್ ಅವರ ಜೊತೆಗೆ ಉದ್ದಕ್ಕೂ ಪಾತ್ರ ಮಾಡಿದೆ. ನಾವೂ ಹೈಲ್ಯಾಂಡ್ಸ್ ಹೋಟೆಲ್‌ನಲ್ಲೇ ವಾಸವಿದ್ದೆವು. ಪದೇ ಪದೇ ಚಿಕ್ಕಮಗಳೂರಿಗೆ ಹೋಗಲು ಆಗುತ್ತಿರಲಿಲ್ಲ. ಆಗೆಲ್ಲ ಇಡೀ ಯೂನಿಟ್‌ನವರನ್ನು ಕೆಂಪೇಗೌಡ ಥಿಯೇಟರಿಗೆ ರಾಜ್‌ಕುಮಾರ್ ಅವರ ಹಳೆಯ ಸಿನಿಮಾಗಳನ್ನು ನೋಡಲು ಕರೆದುಕೊಂಡು ಹೋಗುತ್ತಿದ್ದರು. ಪಾರ್ವತಮ್ಮನವರು ಯಾವುದಾದರೂ ಸಿನಿಮಾ ನೋಡಿಲ್ಲ ಎಂದರೆ ಅವರೂ ಥಿಯೇಟರಿಗೆ ಬರೋರು. ಅಪ್ಪುವನ್ನು ಎತ್ತಿಕೊಂಡು ಬಂದು ತೊಡೆಯಲ್ಲಿ ಮಲಗಿಸಿಕೊಂಡು ಸಿನಿಮಾ ನೋಡೋರು. ಒಮ್ಮೊಮ್ಮೆ ಅಪ್ಪುವನ್ನು ನಾವು ಯಾರಾದರೂ ಎತ್ಕೊಳ್ತಿದ್ದೆವು. ಅಪ್ಪೂನೂ ಸಿನಿಮಾ ನೋಡ್ತಿದ್ದ. ಹೀಗೆ ಬೆಳೆದ ಮಗು ಅದು. ಅವನು ಜೀವನದಲ್ಲಿ ಸಿನಿಮಾ ಬಿಟ್ಟು ಬೇರೆ ಏನನ್ನಾದರೂ ಯೋಚಿಸಲು ಸಾಧ್ಯವಿತ್ತೇ?

ಪೂರ್ಣಿಮಾ ಹುಟ್ಟಿದ ಬಹಳ ವರ್ಷಗಳ ನಂತರ ಅಪ್ಪು ಹುಟ್ಟಿದ್ದು. ಅವಳ ಮೇಲೆ ನಮಗೆಲ್ಲರಿಗೂ ಪ್ರೀತಿ. ಅದರ ನೂರರಷ್ಟು ಪ್ರೀತಿ ಅಪ್ಪುವಿಗೆ ಸಿಕ್ಕಿತ್ತು. ಪ್ರೀತಿ ಅಂದ್ರೆ ರಾಜ್‌ಕುಮಾರ್ ಅವರ ಮಕ್ಕಳು ಎಂಬ ಪ್ರೀತಿಯಲ್ಲ. ಆ ಮನೆಯ ವಾತಾವರಣವೇ ಬೇರೆ. ಆ ಮನೆಗೆ ಎಲ್ಲರೂ ತನ್ನವರೇ. ಕೋಡಂಬಾಕ್ಕಂನಲ್ಲಿ ಇದ್ದ ರಾಜ್‌ಕುಮಾರ್ ಅವರ ಮನೆಯಲ್ಲಿ ಸುಮಾರು 50-60 ಜನ ಇದ್ದರು. ಎಲ್ಲರೂ ಕುಟುಂಬದ ಸದಸ್ಯರೇ, ಜೊತೆಗೆ ಬಳಗವೂ ಇತ್ತು. ಯಾರನ್ನೂ ಆ ಕುಟುಂಬ ಬೇರೆಯವರಾಗಿ ನೋಡಲಿಲ್ಲ.

ಎಲ್ಲರಿಗೂ ಪ್ರೀತಿ ಹಂಚಲೆಂದೇ ಹುಟ್ಟಿದವನಂತೆ ಅಪ್ಪು ಇದ್ದ. ನಾನು ಯಾವತ್ತೂ ಪುನೀತ್ ಅಂತ ಅವನನ್ನು ಕರೆದೇ ಇಲ್ಲ. ಅವನು ಯಾವತ್ತೂ ಅಪ್ಪುವೇ. ನನ್ನ ಪುಣ್ಯದಿಂದಾಗಿ ರಾಜ್‌ಕುಮಾರ್ ಅವರ ಜೊತೆಗೆ ನಟಿಸಲು ಅವಕಾಶ ಸಿಕ್ಕಿತು. ಶೂಟಿಂಗ್ ಸಮಯದಲ್ಲಿ ರಾಜ್‌ಕುಮಾರ್ ಅವರ ದಿನಚರಿ ಎಲ್ಲರಿಗೂ ಗೊತ್ತಿರುವಂಥದ್ದೇ. ಅವರು ಬೆಳಿಗ್ಗೆ ನಾಲ್ಕು ಗಂಟೆಗೆ ಏಳುತ್ತಿದ್ದರು. ಯೋಗಾಸನ ಮಾಡುತ್ತಿದ್ದರು. ಕೆಲವು ಸಲ ರಾಜ್‌ಕುಮಾರ್ ಅವರು ಸ್ವಲ್ಪ ಬೇಗ ಮಲಗುತ್ತಿದ್ದರು. ಆಗ ಮಗು ಅತ್ತರೆ ಅವರ ನಿದ್ರೆಗೆ ತೊಂದರೆ ಆದೀತೆಂದು ಪಾರ್ವತಮ್ಮ ಅಪ್ಪುವನ್ನು ಎತ್ತಿಕೊಂಡು ನಮ್ಮ ರೂಮಿಗೆ ಬರುತ್ತಿದ್ದರು. ಅವನಿಗೆ ಹಾಲು ಕುಡಿಸಿ ನನ್ನ ಪಕ್ಕನೇ ಮಲಗಿಸುತ್ತಿದ್ದರು. ನಾನು ಅವನಿಗೆ ತಟ್ಟಿ ಮಲಗಿಸುತ್ತಿದ್ದೆ. ನಾನು ಅವನಿಗೆ ಊಟ ಮಾಡಿಸಿದ್ದೀನಿ. ಎಷ್ಟೋ ಸಲ ಅವನ ಕಕ್ಕಾನೂ ತೊಳೆದಿದ್ದೀನಿ, ಅವನಿಗೆ ಸ್ನಾನಾನೂ ಮಾಡಿಸಿದ್ದೀನಿ. ಅವನು ಬೆಳೆದು ದೊಡ್ಡವನಾದ ಬಳಿಕವೂ ನಾನು ಅವನಿಗೆ ಹೇಳಿದ್ದುಂಟು -ಲೋ ಅಪ್ಪೂ... ನಿನ್ನ ಕಕ್ಕ ತೊಳೆದಿದ್ದೀನಲ್ಲೋ... ಸ್ನಾನ ಮಾಡಿಸಿದ್ದೀನಲ್ಲೋ- ಅಂತ. ಅವನು ಬಂದು ತಬ್ಕೊಂಡು, 'ಆಂಟೀ... ಆಂಟೀ...' ಅಂತ ನಾಚಿಕೆಯಿಂದ ಹೇಳುತ್ತಿದ್ದ. ಆ ಮಗುವಿನ ಮುಖವೇ ನನಗೆ ಈಗಲೂ ನೆನಪಿಗೆ ಬರುವುದು. ಮೊನ್ನೆ ಅವನ ಮುಖ ನೋಡಿದಾಗ ಬಹಳ ದುಃಖವಾಯಿತು. ಎಷ್ಟೊಂದು ಜೀವಗಳು ಇವತ್ತು ಅಪ್ಪುವಿಗಾಗಿ ಮರುಗುತ್ತಿವೆ. ಇಷ್ಟೊಂದು ಅಗಾಧ ಪ್ರೀತಿಯನ್ನು ಇಷ್ಟು ಚಿಕ್ಕ ವಯಸ್ಸಿನಲ್ಲಿ ಆತ ಹೇಗೆ ಸಂಪಾದಿಸಿದ ಎಂದು ಆಶ್ಚರ್ಯವಾಗುತ್ತಿದೆ. ಆತ ನಿರ್ಗಮಿಸಿದ ಬಳಿಕ ಯಾರಿಗೆಲ್ಲ ಎಷ್ಟು ಪ್ರೀತಿ ಹಂಚಿದ್ದ, ಎಷ್ಟೊಂದು ಜನರಿಗೆ ಹೇಗೆಲ್ಲ ಸಹಾಯ ಮಾಡಿದ್ದ ಎನ್ನುವುದು ಗೊತ್ತಾಗುತ್ತಿದೆ. ಮನುಷ್ಯನೊಬ್ಬನ ನಿಜವಾದ ಸಾಧನೆ ಅವನ ಸಾವಿನಲ್ಲಿ ಗೊತ್ತಾಗುತ್ತದೆ ಅಂತಾರೆ. ಅದು ನಿಜ. ನಮಗೆಲ್ಲ ವಯಸ್ಸಾಗ್ತಿದೆ. ನಮ್ಮನ್ನು ಕೊನೆಯದಾಗಿ ನೋಡಲು ಬರಬೇಕಿದ್ದ ಮಕ್ಕಳು ನಮಗಿಂತ ಮುಂಚೆ ಹೋಗ್ಬಿಡ್ತಿದ್ದಾರಲ್ಲ... ನಿಜಕ್ಕೂ ಸಂಕಟವಾಗುತ್ತಿದೆ.

ಹೈಲ್ಯಾಂಡ್ ಹೋಟೆಲ್‌ನಲ್ಲಿ ಇದ್ದಾಗ ಅವನಿಗೆ ಟ್ಯೂಷನ್ ಕೊಡಲು ಮೇಷ್ಟ್ರು ಬರೋರು. ಅಮ್ಮಂಗೆ ಮತ್ತು ರಾಜ್‌ಕುಮಾರ್ ಅವರಿಗೆ ಒಂದು ಚಿಂತೆ ಇತ್ತು. ಅವನಿಗೆ ರೆಗ್ಯುಲರ್ ಸ್ಕೂಲ್‌ಗೆ ಕಳಿಸಲು ಆಗಲಿಲ್ಲ ಅಂತ. ಆದರೆ ಆ ಹುಡುಗನನ್ನು ನೋಡಿ- ಯಾರಾದರೂ ಅವನು ಸ್ಕೂಲ್‌ಗೆ ಹೋಗಿಲ್ಲ ಎನ್ನಲು ಸಾಧ್ಯವಿತ್ತೇ? ಯಾವ ಯೂನಿವರ್ಸಿಟಿಯಲ್ಲಿ ಕಲಿತವರೂ ಅವನಷ್ಟು ಚೆನ್ನಾಗಿ ಮಾತನಾಡುತ್ತಿರಲಿಲ್ಲ. ಎಷ್ಟೊಂದು ವಿಷಯಜ್ಞಾನ ಇತ್ತು. ವಿಶ್ವ ಸಿನಿಮಾದ ಬಗ್ಗೆ, ಫ್ಯಾಷನ್ ಬಗ್ಗೆ, ಎಕಾನಮಿ ಬಗ್ಗೆ, ಟೆಕ್ನಾಲಜಿ ಬಗ್ಗೆ ಅಪಾರಜ್ಞಾನ ಅವನಲ್ಲಿತ್ತು.

13ನೇ ಪುಟಕ್ಕೆ...

ನೈಜ ಸೂಪರ್‌ಸ್ಟಾರ್

ಚೇತನ್ ಅಹಿಂಸಾ

ಸಿನಿಮಾ ಉದ್ಯಮದಲ್ಲಿ ಸಂಬಂಧಗಳು ಸಾಮಾನ್ಯವಾಗಿ ವ್ಯಾವಹಾರಿಕವಾಗಿರುತ್ತವೆ. ಸಿನಿಮಾ ಕಾರ್ಯಕ್ರಮಗಳಲ್ಲಿ ಆಗೀಗ ಭೇಟಿಯಾಗುತ್ತೇವೆ, ಅಲ್ಲಿ ಇಲ್ಲಿ ಸಿಕ್ಕಾಗ ನಗುತ್ತೇವೆ, ಕೆಲವು ಹಾಡುಗಳಿಗೆ ಒಟ್ಟಿಗೇ ದನಿಗೂಡಿಸುತ್ತೇವೆ, ಒಂದಿಷ್ಟು ಮಾತುಕತೆಯಾಡುತ್ತೇವೆ, ಇನ್ನೂ ಹೆಚ್ಚೆಂದರೆ ಒಟ್ಟಿಗೇ ಕೆಲಸ ಮಾಡುತ್ತೇವೆ... ಆಮೇಲೆ ನಮ್ಮ ದಾರಿ ನಮಗೆ, ಅವರ ದಾರಿ ಅವರಿಗೆ.

ಬಹಳ ಅಪರೂಪಕ್ಕೆ ಭಾವನಾತ್ಮಕವಾದ ಕಳ್ಳುಬಳ್ಳಿಯ ತಂತುವೊಂದು ಬೆಸೆಯುತ್ತದೆ. ಹೀಗೆ ಅಪ್ಪು ಸರ್ ಜೊತೆಗೆ ಸುಮಾರು ಹದಿಮೂರು ವರ್ಷಗಳಿಂದ ಇಂಥದೊಂದು ಅರ್ಥಪೂರ್ಣ ಬಾಂಧವ್ಯವೊಂದು ಬೆಸುಗೆಯಾಗಿದ್ದು ನನ್ನ ಸುದೈವವೆಂದೇ ಹೇಳಬೇಕು. ಅವರು ನನಗೆ ಅತ್ಯುತ್ತಮ ಸ್ನೇಹಿತ ಮಾತ್ರವಲ್ಲ, ಹಿರಿಯಣ್ಣನೂ ಆಗಿದ್ದರು. ನನ್ನ ಬಗ್ಗೆ ತುಂಬು ಕಾಳಜಿ ವಹಿಸುತ್ತಿದ್ದರು. ಇದು ಒಳ್ಳೆಯದು ಎಂದು ಅವರು ಆಲೋಚಿಸಿದ ಮಾರ್ಗದಲ್ಲಿ ನಾನು ಸಾಗುವಾಗ ಅಗತ್ಯ ಮಾರ್ಗದರ್ಶನವನ್ನೂ ನೀಡುತ್ತಿದ್ದರು.

ನಿಜವೆಂದರೆ ಅಪ್ಪು ಸರ್ ಜೊತೆಗೆ ನನ್ನ ನಂಟು ನಾನು ಅಮೆರಿಕದಲ್ಲಿ ಕಳೆದ ಬಾಲ್ಯ ಕಾಲಕ್ಕೆ ಸಾಗುತ್ತದೆ. ಅಲ್ಲಿನ ವಿವಿಧ ಕಡೆಯ ಕನ್ನಡ ಸಂಘಗಳು ನಡೆಸುವ ಕಾರ್ಯಕ್ರಮಗಳಲ್ಲಿ ನಾನು 'ಭಕ್ತ ಪ್ರಹ್ಲಾದ' ಪೌರಾಣಿಕ ಸಿನಿಮಾದಲ್ಲಿ ಹಿರಣ್ಯಕಶಿಪು ಮತ್ತು ಆತನ ಏಳು ವರ್ಷದ ಮಗನ ನಡುವೆ ನಡೆಯುವ ಆ ಸುಪ್ರಸಿದ್ಧ ಸಂಭಾಷಣೆಯ ಪ್ರದರ್ಶನ ನೀಡುತ್ತಿದ್ದೆ. ನನಗೆ ಅದಾಗಲೇ 'ಪ್ರಹ್ಲಾದ' ಎಂಬ ಅಡ್ಡಹೆಸರೂ ಅಂಟಿಕೊಂಡಿತ್ತು. ಆದರೆ 1985ರಲ್ಲಿಯೇ ಬಾಲಕಲಾವಿದನಾಗಿ 'ಪ್ರಹ್ಲಾದ'ನ ಪಾತ್ರವನ್ನು ಲೀಲಾಜಾಲವಾಗಿ ಅಭಿನಯಿಸಿದ್ದು ಅಪ್ಪು ಸರ್ ಎಂಬ ಯಾವ ಕಲ್ಪನೆಯೂ ನನಗಾಗ ಇರಲಿಲ್ಲ. ನಾನು ಚಂದನವನನ್ನು ಪ್ರವೇಶಿಸಿದ ನಂತರ, ಈ ಪ್ರಹ್ಲಾದ ಎಂಬ ನನ್ನ ಅಡ್ಡಹೆಸರಿನ ಬಗ್ಗೆ ಅಮೆರಿಕದಲ್ಲಿದ್ದ ಅಪ್ಪು ಅವರ ಗೆಳೆಯರಾರೋ ಹೇಳಿದ್ದಾರೆ ಎಂಬುದೂ ನನಗೆ ಗೊತ್ತಿರಲಿಲ್ಲ. 2020ರಲ್ಲಿ ನನ್ನ ಮದುವೆಗೆ ಕರೆಯೋಲೆ ಕೊಡಲು ಹೋದಾಗ ಅಪ್ಪು ಸರ್ ಇದನ್ನು ನೆನಪಿಸಿಕೊಂಡು, ನನ್ನತ್ತ ಅಕ್ಕರೆಯ ನಗು ಬೀರಿದ್ದರು.

ಅವರೊಂದಿಗೆ ಹೆಜ್ಜೆಹಾಕಿದ ಪಯಣಕ್ಕೆ ನಾಂದಿಯಾಗಿದ್ದ ಆ ಒಂದು ನಿರ್ದಿಷ್ಟ ಕ್ಷಣವು ಇನ್ನೂ ನನ್ನ ಕಣ್ಣಿಗೆ ಕಟ್ಟಿದಂತಿದೆ. 2009ರ ಫೆಬ್ರವರಿಯಲ್ಲಿ ನನ್ನ ಎರಡನೇ ಸಿನಿಮಾ 'ಬಿರುಗಾಳಿ' ಬಿಡುಗಡೆಯಾದ ಹಿನ್ನೆಲೆಯಲ್ಲಿ 'ಅಮೃತ ಮಹೋತ್ಸವ'ಕ್ಕೆ ರಿಹರ್ಸಲ್ ನಡೆಸುತ್ತಿದ್ದೆವು. ನಾವು ಸುಮಾರು 50 ಜನರು ನೃತ್ಯದ ಅಭ್ಯಾಸ ನಡೆಸಲು ನಮ್ಮ ಸರದಿ ಬರುವುದನ್ನೇ ಕಾಯುತ್ತ ಕೂತಿದ್ದೆವು. ಅಪ್ಪು ಸರ್ ಸರದಿ ಬಂದಾಗ, ಅವರು ಮೊಬೈಲನ್ನು ಕೈಯಲ್ಲಿ ಹಿಡಿದು ಎದ್ದು ನಿಂತು, ಚಕ್ಕಳಮಕ್ಕಳ ಹಾಕಿ ಕೂತಿದ್ದ ನಮ್ಮೆಲ್ಲರನ್ನು ಅರೆಕ್ಷಣ ದಿಟ್ಟಿಸುತ್ತ ನಿಂತರು, ಅರೆ, ಯಾಕೆ ಹೀಗೆ ತಡ ಮಾಡ್ತ ನಿಂತಿದ್ದಾರೆ ಎಂದು ನಾನು ಅಚ್ಚರಿಪಡುವಷ್ಟರಲ್ಲಿ, ಅವರು ನನ್ನ ಬಳಿ ಬಂದರು... ಸಿನಿಮಾ ಜಗತ್ತಿಗೆ ಮಾತ್ರವಲ್ಲ, ಕರ್ನಾಟಕಕ್ಕೇ ಹೊಸಬನಾಗಿದ್ದೆ ನಾನಾಗ... ಅವರು ಮೊಬೈಲನ್ನು ಸರಕ್ಕನೆ ನನ್ನ ಮಡಿಲಿಗೆ ಹಾಕಿ, ಆರಾಮಾಗಿ ಡಾನ್ಸ್ ಫ್ಲೋರಿನತ್ತ ನಡೆದು, ನೃತ್ಯದ ಅಭ್ಯಾಸದಲ್ಲಿ ಮಗ್ನರಾದರು. ಆ ಕ್ಷಣದಲ್ಲಿ ಅಪ್ಪು ಸರ್ ನನ್ನಲ್ಲಿ ಅದೆಂಥ ವಿಶ್ವಾಸವಿರಿಸಿದ್ದಾರೆ ಎಂದು ಅರಿವಾಯಿತು; ಆ ವಿಶ್ವಾಸವನ್ನು ಉಳಿಸಿಕೊಳ್ಳುವುದು ನನ್ನ ಜವಾಬ್ದಾರಿಯಾಗಿತ್ತು, ಮತ್ತೆ ಅದು ಮೊಬೈಲ್ ಕುರಿತಾಗಿ ಮಾತ್ರವಲ್ಲ, ಒಟ್ಟಾರೆ ಬದುಕಿನಲ್ಲಿ ಅವರ ವಿಶ್ವಾಸ ಉಳಿಸಿಕೊಳ್ಳುವುದು ನನಗೆ ಮುಖ್ಯವಾಗಿತ್ತು.

ರಿಹರ್ಸಲ್ ನಡೆದ ಆ ವಾರವಿಡೀ ಅಪ್ಪು ಸರ್ ಜೊತೆಗೆ ನಾನು ಹಲವಾರು ವಿಷಯಗಳ ಕುರಿತು ಚರ್ಚಿಸಲು ಶುರುಮಾಡಿದೆ, ಹಾಗೇ ನಮ್ಮ ನಡುವೆ ಬಾಂಧವ್ಯವೊಂದು ಗಟ್ಟಿಯಾಗುತ್ತ ಹೋಯಿತು. ಅದೇ ವರ್ಷದ ಕೊನೆಯಲ್ಲಿ 'ರಾಮ್' ಸಿನಿಮಾದಲ್ಲಿ ಅವರೊಂದಿಗೆ ನಟಿಸುವ ಅವಕಾಶ ದೊರೆತಾಗ, ನಾನು ತಟ್ಟನೆ ಒಪ್ಪಿಕೊಂಡೆ. ರಾಕ್‌ಲೈನ್ ಸ್ಟುಡಿಯೊದ ಶೂಟಿಂಗ್ ಸೆಟ್ಟಿನಲ್ಲಿ ಅವರು ನನಗೆ ಸದಾಶಿವನಗರದಲ್ಲಿರುವ ತಮ್ಮ ಜಿಮ್‌ಗೆ ಸೇರಿಕೋ ಎಂದು ಹುರುಪಿನಿಂದ ಸಲಹೆ ಮಾಡಿದರು. ನನ್ನ ಮನೆಯೂ ಅಲ್ಲಿಗೆ ಸಮೀಪವಿದ್ದಿದ್ದರಿಂದ ನಾನು ಸುಮಾರು 2012ರಿಂದ ಅದೇ ಜಿಮ್ಮಿಗೆ ಹೋಗತೊಡಗಿದೆ.

ಅದೇ ವರ್ಷ, ರಾಜ್ಯದ ಕರಾವಳಿಯ ಹಲವೆಡೆಗಳಲ್ಲಿ ಎಂಡೋಸಲ್ಫಾನ್ ಸಂತ್ರಸ್ತರಿಗೆ ಸರ್ಕಾರದ ಅನುಕೂಲತೆಗಳನ್ನು ದೊರಕಿಸಿಕೊಡಲು ನಡೆಸಿದ ಹೋರಾಟದ ನೇತೃತ್ವ ವಹಿಸಿದೆ, ಅದು ನನ್ನ ಮೊದಲ ಹೋರಾಟವೂ ಆಗಿತ್ತು. ಹಾಗೆ ನೋಡಿದರೆ ಸಾಮಾಜಿಕ ಚಳವಳಿಗಳ ಕುರಿತಾದ ನನ್ನ ಅರಿವು ಇತಿಹಾಸದ ಕೃತಿಗಳಿಂದ ಎರವಲು ಪಡೆದಿದ್ದಾಗಿತ್ತು, ಹೀಗಾಗಿ ನಾನು ಅಪ್ಪು ಸರ್ ಅವರ ಮಾರ್ಗದರ್ಶನ ಪಡೆಯಲು ಮೊದಲಸಲ ಅವರ ಮನೆಗೆ ಹೋದೆ. ಅವರು ತಮ್ಮ ಲ್ಯಾಪ್‌ಟಾಪಿನಲ್ಲಿ ಎಂಡೋಸಲ್ಫಾನ್ ಸಂತ್ರಸ್ತರ ವಿಡಿಯೊಗಳನ್ನು ಗಮನವಿಟ್ಟು ನೋಡಿದವರೇ, ಇಂಥದೊಂದು ಜೀವಕಾಳಜಿಯ ಹೋರಾಟಕ್ಕೆ ಎಲ್ಲಿ ಕರೆದರೂ ಬರುವುದಾಗಿ ಒಪ್ಪಿದರು. ನನಗೆ ಆಸರೆಯೊಂದು ಸಿಕ್ಕಿದಂತೆ ಧೈರ್ಯವೆನ್ನಿಸಿತು. ಅದಾಗಿ ಆರು ತಿಂಗಳಿನಲ್ಲಿಯೇ ನಾವು ಆ ಹೋರಾಟದಲ್ಲಿ ಗೆದ್ದೆವು, ರಾಜ್ಯ ಸರ್ಕಾರವು ಸಂತ್ರಸ್ತರಿಗಾಗಿ 90 ಕೋಟಿ ರೂಪಾಯಿ ಬಿಡುಗಡೆ ಮಾಡಿತು. ದೀನದುರ್ಬಲರ ಕುರಿತಾಗಿ ಅಪ್ಪು ಸರ್‌ಗಿದ್ದ ಪ್ರಾಮಾಣಿಕ ಜವಾಬ್ದಾರಿಯ ಅರಿವಾದ ನಾನು ಆಗಿನಿಂದ ಅವರ ಸಾಮಾಜಿಕ ಕಾಳಜಿಯನ್ನು ಗಮನಿಸಲಾರಂಭಿಸಿದೆ.

ಪತ್ನಿ ಅಶ್ವಿನಿ ಅವರೊಂದಿಗೆ ಪುನೀತ್

ತದನಂತರ ಕಳೆದ ಒಂಬತ್ತು ವರ್ಷಗಳಲ್ಲಿ, ಅಪ್ಪು ಸರ್ ಜೊತೆಗೆ ನಾನು ಅದೇ ಜಿಮ್‌ನಲ್ಲಿ ವರ್ಕ್‌ಔಟ್ ಮಾಡಿದ್ದೇನೆ, ಅಕ್ಕಪಕ್ಕ ಇರುವ ಟ್ರೆಡ್‌ಮಿಲ್ಲಿನಲ್ಲಿ ಓಡುತ್ತಲೇ ಸಂವಾದಿಸಿದ್ದೇವೆ, ಒಬ್ಬರ ನಂತರ ಇನ್ನೊಬ್ಬರು ಭಾರ ಎತ್ತಿದ್ದೇವೆ, ಜೊತೆಗೂಡಿ ಯೋಗಾಸನ ಹಾಕಿದ್ದೇವೆ. ಅವರ ದೈಹಿಕ ಸದೃಢತೆ, ಶಕ್ತಿ, ಬಾಗಿಬಳುಕುವಿಕೆ ಕಂಡು ಸದಾ ಅಚ್ಚರಿಗೊಂಡಿದ್ದೇನೆ. ಎಲ್ಲಾ ಸಮಯದಲ್ಲಿಯೂ ಅವರ ಮೊಗವಿಡೀ ನಗುವೊಂದು ಹರಡಿರುತ್ತಿತ್ತು, ಜೊತೆಗೊಂದು ಹುಮ್ಮಸ್ಸಿನ ಕೂಗು... 'ಏನಪ್ಪಾ ಚೇತನ್... ಹೇಗಿದೀಯಾ? ಮತ್ತೆ ಈ ವಾರ ಯಾವುದಾದರೂ ಒಳ್ಳೆ ಸಿನಿಮಾ ನೋಡಿದ್ಯಾ?'

2020ರ ಆರಂಭದಲ್ಲಿ ನಾನು ಅಪ್ಪು ಸರ್ ಮನೆಗೆ ಹೋಗಿ, ಅವರು ಅಶ್ವಿನಿ ಮೇಡಂ ಜೊತೆಗೆ ಬಂದು ಹತ್ತಿರದ ಅನಾಥಾಶ್ರಮದಲ್ಲಿ ನಡೆಯಲಿದ್ದ ನನ್ನ ಮದುವೆ ಸಂಭ್ರಮದಲ್ಲಿ ವಿಶೇಷ ಅತಿಥಿಯಾಗಿ ಪಾಲ್ಗೊಳ್ಳಬೇಕೆಂದು ಆಹ್ವಾನಿಸಿದೆ. ಆಗಲೂ ನಾವು ನಾರಾಯಣ ಗುರುಗಳ ಕೊಡುಗೆಗಳಿಂದ ಹಿಡಿದು ಇಂದಿನ ಸಂದರ್ಭದಲ್ಲಿ ಕಲಿಯುವ ಅಗತ್ಯಗಳು, ಸಮಾಜ ಸೇವೆಯಲ್ಲಿ ತೊಡಗುವುದು ಯಾಕೆ ಮುಖ್ಯ ಎಂಬವರೆಗೆ ಹಲವಾರು ವಿಷಯಗಳನ್ನು ಚರ್ಚಿಸಿದೆವು.

13ನೇ ಪುಟಕ್ಕೆ...

ಹಕ್ಕಿ ಹಾರುತಿದೆ ನೋಡಿದಿರಾ...

ಆಡಲು
ಹಾಡಲು ತಾ
ಹಾರಾಡಲು...

ನೀಲಮೇಘಮಂಡಲ-ಸಮ ಬಣ್ಣ !
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ !

ಮುಟ್ಟಿದೆ ದಿಗ್ಮಂಡಲಗಳ ಅಂಚ
ಆಚೆಗೆ ಚಾಚಿದೆ ತನ್ನಯ ಚುಂಚ...

ಚಿತ್ರ-ಬರಹ: ಗಿರಿಧರ್ ಖಾಸನೀಸ್

ಕೊರೊನಾ ಮಹಾಮಾರಿಯ ದೆಸೆಯಿಂದ ಇಪ್ಪತ್ನಾಲ್ಕು ಗಂಟೆ ಮನೆಯಲ್ಲೇ ಉಳಿಯುವುದು ಅನಿವಾರ್ಯವಾಗಿ ಮುದುಡಿದ ಮನಸ್ಸಿಗೊಂದಿಷ್ಟು ಸಮಾಧಾನ ತರಲು ಅಪಾರ್ಟ್‌ಮೆಂಟ್‌ನ ತಾರಸಿಯ ಮೇಲೆ ದಿನಕ್ಕೆ ಮೂರ್ನಾಲ್ಕು ಬಾರಿ ಹೋಗಿ ಬರುವ ಅಭ್ಯಾಸ ತನ್ನಿಂದ ತಾನಾಗಿಯೇ ಶುರುವಾಗಿತ್ತು.

ತಾರಸಿಯ ನೆಲದ ಮೇಲೆ ಓಡಾಡುವುದು, ಮೈ ಕೈ ಆಡಿಸುವುದು, ಓದುವುದು ... ಇವುಗಳ ಜೊತೆ ಚಲಿಸುವ ಮೋಡಗಳ, ಚಿಲಿಪಿಲಿ ಹಕ್ಕಿಗಳ, ಗೋಡೆ, ಪ್ಯಾರಪೆಟ್, ಮೆಟ್ಟಿಲ ಮೇಲಿನ ನೆರಳು ಬೆಳಕಿನಾಟವನ್ನು ನೋಡುವುದು ಸಾಮಾನ್ಯವಾಗಿ ಹೋಯಿತು.

ಆಗಲೇ ಈ ಪಾರಿವಾಳಗಳ ಪರಿಚಯವಾಗಿದ್ದು. ಅವುಗಳ ಬಿರುಗಣ್ಣ ನೋಟ, ಹಾರಿಳಿಯುವ ವೈಖರಿ, ಹತ್ತು ಹಲವು ಹಾವಭಾವಗಳು, ಚಲನವಲನಗಳು, ಸಣ್ಣ ಕದನಗಳು, ಕೀಟಲೆ, ಕುಚೇಷ್ಟೆಗಳು - ಇವುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ಸಾಮಾನ್ಯ ಹಕ್ಕಿಗಳಲ್ಲಡಗಿದ ಅಸಾಧಾರಣ ಬೆಡಗು, ಲವಲವಿಕೆ ಹಾಗೂ ನಾಟಕೀಯತೆ ಚಕಿತಗೊಳಿಸಿತು.

ನನ್ನ ಉತ್ಸಾಹವನ್ನು ಕ್ಯಾಮೆರಾ ಕಣ್ಣಿಗೆ ವರ್ಗಾಯಿಸುವುದು ಸವಾಲಾದರೂ, ಬರಬರುತ್ತಾ ಅದು ದೈನಂದಿನ ದಿನಚರಿಯ ಅಂಗವಾಗಿ ಹೋಯಿತು. ಹಾಗೆ ಸೆರೆಹಿಡಿದ ಅನೇಕ ಚಿತ್ರಗಳಲ್ಲಿ ಕೆಲವನ್ನು ಆರಿಸಿ ಹಂಚಿಕೊಳ್ಳಬೇಕ್ಕೆನ್ನುವಾಗ ದ.ರಾ. ಬೇಂದ್ರೆಯವರ ಚಿರಪರಿಚಿತ ಹಾಡು 'ಹಕ್ಕಿ ಹಾರುತಿದೆ ನೋಡಿದಿರಾ...' ತಾನಾಗಿ ತುಟಿಯ ಮೇಲೆ ನಲಿದು ಬಂದಿತು. ❖

ನೈಜ ಸೂಪರ್‌ಸ್ಟಾರ್

12ನೇ ಪುಟದಿಂದ...

ಕನ್ನಡದ 'ಕೋಟ್ಯಧಿಪತಿ' ಕಾರ್ಯಕ್ರಮವನ್ನು ನಡೆಸಿಕೊಟ್ಟ ನಂತರ, ಶಿಕ್ಷಣದ ಮಹತ್ವದ ಕುರಿತು ಮನಗಂಡೆ ಎಂದು ಅಪ್ಪು ಸರ್ ಹೇಳಿದ್ದರು. ಇದರ ಪರಿಣಾಮವಾಗಿಯೇ ಅವರು ನಮ್ಮ ಗ್ರಾಮೀಣ ಯುವಜನರ ಏಳಿಗೆಗೆ ಸಹಾಯವಾಗಲೆಂದು ಶಿಕ್ಷಣದ ಹಕ್ಕು ಹಾಗೂ ಕೌಶಲಾಭಿವೃದ್ಧಿ ಮಂಡಳಿಯ ಬ್ರಾಂಡ್ ಅಂಬಾಸಡರ್ ಆಗಲು ಒಪ್ಪಿದ್ದರು, ಅಷ್ಟೇ ಮುಖ್ಯವಾಗಿ ಇವುಗಳಿಗಾಗಿ ಚಿಕ್ಕಾಸು ತೆಗೆದುಕೊಂಡಿರಲಿಲ್ಲ. ಸಮಾಜ ಸೇವೆಯ ಕುರಿತು ಅವರ ದೃಷ್ಟಿಕೋನದ ಬಗ್ಗೆ ಹೇಳಬೇಕೆಂದರೆ, ಸ್ವಂತದ ಹಾಗೂ ಕುಟುಂಬದ ಮೂಲಭೂತ ಅಗತ್ಯಗಳನ್ನು ಹೊಂದಿಸಿಕೊಂಡ ನಂತರ, ನಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸಮಾಜಕ್ಕೆ ಮರಳಿ ಕೊಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂಬುದು ಅವರ ನಂಬಿಕೆಯಾಗಿತ್ತು.

ಕೊರೊನಾ ಮೊದಲ ಅಲೆಯ ಸಂದರ್ಭದಲ್ಲಿ ಅವರು ರಾಜ್ಯ ಸರ್ಕಾರಕ್ಕೆ 50 ಲಕ್ಷ ರೂಪಾಯಿ ಕೊಡುಗೆ ನೀಡಿದ್ದರು. ಜೊತೆಗೆ ಜಿಮ್, ಯೋಗ ಮತ್ತು ಸಿನಿಮಾ ಇನ್ನಿತರ ಕಡೆಗೆ ನಮಗಿಬ್ಬರಿಗೂ ಗೊತ್ತಿದ್ದ ಹಲವಾರು ಕೆಲಸಗಾರರ ಕುಟುಂಬಗಳಿಗೂ ಯಾವುದೇ ಪ್ರಚಾರದ ಅಬ್ಬರವಿಲ್ಲದೆಯೇ ಸಹಾಯ ಮಾಡಿದ್ದರು. ಹಾಗೆಯೇ ಅವರು ತಾವು ಹಾಡಿದ ಯಾವುದೇ ಹಾಡಿಗೂ ದುಡ್ಡು ತೆಗೆದುಕೊಂಡಿರಲಿಲ್ಲ. ಸಂಗೀತ ಹಾಗೂ ಗೀತಸಾಹಿತ್ಯಕ್ಕಾಗಿ ಹಾಡುತ್ತಿದ್ದರು ಮತ್ತು ಆ ದುಡ್ಡನ್ನು ಅವರ ಕುಟುಂಬದ ಚಾರಿಟಿ ಸಂಸ್ಥೆಗಳಿಗೆ ದಾನ ಮಾಡುವಂತೆ ಕೇಳಿಕೊಳ್ಳುತ್ತಿದ್ದರು.

ಕಳೆದ ವರ್ಷ ಫೆಬ್ರುವರಿ 2ರಂದು ನಡೆದ ನನ್ನ ಮದುವೆಯಲ್ಲಿ ಅಪ್ಪು ಸರ್ ಅಶ್ವಿನಿ ಮೇಡಂ ಅವರೊಂದಿಗೆ ಸರಿಯಾಗಿ ಸಂಜೆ 7.15ಕ್ಕೆ ಆಗಮಿಸಿದ್ದರು. ನನ್ನ ತಂದೆತಾಯಿ ಮಾತನಾಡಿ, ನಾನು ಹಾಗೂ ಮೇಘ ನಾವೇ ಅಚ್ಚಕನ್ನಡದಲ್ಲಿಯೇ ಬರೆದ ಪ್ರತಿಜ್ಞೆಯನ್ನು ನೆರೆದ ಜನರೆದುರು ಓದಿ ಮುಗಿಸುವವರೆಗೂ ನಸುನಗುತ್ತ ಕಾಯುತ್ತ ಕುಳಿತಿದ್ದರು. ಅಪ್ಪು ಸರ್ ಸೇರಿದಂತೆ, ಆಪ್ತೇಷ್ಟರ ಎದುರಿನಲ್ಲಿ ನಾವಿಬ್ಬರೂ ನಮ್ಮ ದೇಶದ ಸಂವಿಧಾನದ ಪ್ರತಿಯನ್ನು ಎತ್ತಿ ಹಿಡಿದು ನಿಂತಿದ್ದ ಆ ಗಳಿಗೆಯನ್ನು ನಾನೆಂದೂ ಮರೆಯಲಾರೆ.

ಕಳೆದ ವರ್ಷ ವೈಯಕ್ತಿಕವಾಗಿ ಹಾಗೂ ವೃತ್ತಿಪರವಾಗಿ, ಎರಡೂ ರೀತಿಯಲ್ಲಿ ನಮ್ಮ ಒಡನಾಟ ಇನ್ನಷ್ಟು ಹೆಚ್ಚಿತ್ತು. ಸಿನಿಮಾ ಉದ್ಯಮದ ಯಾವುದೇ 'ಬಿಕ್ಕಟ್ಟಿನ' ಸಮಯದಲ್ಲಿ ಸ್ಪಷ್ಟ ನಿಲುವು ತಳೆಯುವಂತೆ ಅವರು ನನಗೆ ಹೇಳಿದ ಮಾತಿಗೆ ನಾನು ತುಂಬ ಬೆಲೆ ಕೊಡುತ್ತೇನೆ. ಯಾಕೆಂದರೆ ಒಂದು ಆಪ್ತ ಕಾಳಜಿಯ ಎದೆಯಿಂದ ಹೊರಹೊಮ್ಮಿದ ಮಾತದು.

ಸಮಾಜ ಹಾಗೂ ಚಂದನವನದ ಸ್ಟಾರ್ ಸಂಸ್ಕೃತಿ, ಎರಡೂ ಕಡೆ ಹಲವಾರು ಜನರ ದುಡಿಮೆಯ ಬೆಲೆ ತೆತ್ತು ಕೇವಲ ಕೆಲವೇ ಜನರಿಗೆ ಸೌಲಭ್ಯಗಳನ್ನು ಒದಗಿಸುವ ಕುರಿತು ನನಗಿದ್ದ ವಿರೋಧವು ಹೆಚ್ಚೆಚ್ಚು ತೀವ್ರವಾಗಿ ಪ್ರತಿಭಟನೆ, ಭಾಷಣ, ಬರಹ ಇತ್ಯಾದಿಗಳ ಮೂಲಕ ಹೊರಹೊಮ್ಮತೊಡಗಿತು. ಅಪ್ಪು ಸರ್ ಹುಟ್ಟಿನಿಂದಲೇ 'ಸ್ಟಾರ್' ಆಗಿದ್ದವರು, ನಾನೆಂದೂ ಸ್ಟಾರ್ ಆಗದವನು, ಆದರೆ ಇದ್ಯಾವುದೂ ನಮ್ಮ ನಡುವಣ ಬಾಂಧವ್ಯಕ್ಕೆ ಧಕ್ಕೆ ಒಡ್ಡಲೇ ಇಲ್ಲ. ಶೇಕ್ಸ್‌ಪಿಯರ್‌ನ 'ಟ್ವೆಲ್ತ್ ನೈಟ್'ನಲ್ಲಿ ಹೇಳುವಂತೆ, ಅಪ್ಪು ಸರ್ ಮೇಲೆ 'ತಾರಾಗಿರಿ'ಯನ್ನು 'ಹೊರಿಸಲಾಗಿತ್ತು'. ಆದರೆ ಅದರೊಂದಿಗೆ ಬರುವ ಹಾರಾಟ, ಅಹಂಕಾರ, ಧಾರ್ಷ್ಟ್ಯ ಅಥವಾ ದೊಡ್ಡಸ್ತಿಕೆಗಳು ಅವರ ಬೆನ್ನಿಗೆ ಇರಲಿಲ್ಲ. ಪ್ರಜಾಪ್ರಭುತ್ವದ ಕಟ್ಟಾ ಪ್ರತಿಪಾದಕರು ಒಳ್ಳೆಯ ರಾಜರೂ ಇದ್ದರು ಎಂಬುದನ್ನು ಒಪ್ಪಿಕೊಳ್ಳುವಂತೆ, ಅಪ್ಪು ಸರ್ ನೋಡಿದಾಗ 'ಒಳ್ಳೆಯ' ಸ್ಟಾರ್ ಕೂಡ ಇರುತ್ತಾರೆ ಎಂಬುದನ್ನು ಸಿದ್ಧಾಂತದಲ್ಲಿ ಮಾತ್ರವಲ್ಲ, ವಾಸ್ತವದಲ್ಲಿಯೂ ಸಮಾನತೆಯ ಸಮರ್ಥಕರು ಒಪ್ಪಬಹುದಿತ್ತು.

ಒಬ್ಬ ಒಳ್ಳೆಯ ನಟನಾಗಿ ಅಪ್ಪು ಸರ್ ಅವರ ಕೆಲಸ ಮತ್ತು ನಿರ್ಮಾಪಕರಾಗಿ ಅವರು ಮುಖ್ಯಪಾತ್ರಧಾರಿಗಳು ಹಾಗೂ ಚಿತ್ರಕಥೆಯ ವಿಷಯವನ್ನು ಆಯ್ಕೆ ಮಾಡಿಕೊಳ್ಳುತ್ತ ಇದ್ದುದ್ದು ಮೇಲಿನ ಮಾತಿಗೆ ಸಾಕ್ಷಿಯಾಗಿವೆ. ಜನರ ವೆಚ್ಚದಲ್ಲಿ ಲಾಭಗಳಿಸುವುದನ್ನು ಆದ್ಯತೆಯಾಗಿರಿಸಿಕೊಂಡ ಸಮಾಜ ಹಾಗೂ ಸಿನಿಮಾ ಉದ್ಯಮದಲ್ಲಿ, ತಾವು ನಟಿಸುತ್ತಿದ್ದ ಸಿನಿಮಾಗಳು ಇಡೀ ಕುಟುಂಬ ಕುಳಿತು ನೋಡಿ, ಆನಂದಪಡುವಂತೆ ಇರಬೇಕೆಂಬುದಕ್ಕೆ ಅವರು ಒತ್ತು ನೀಡಿದ್ದರು. ಹಿಂಸೆ, ಕ್ರೌರ್ಯ ಮತ್ತು ನಾಯಕ-ವೈಭವೀಕರಣದ ಸಿನಿಮಾಗಳು ಅವರ ಬ್ಯಾಂಕ್ ಬ್ಯಾಲೆನ್ಸ್ ವೃದ್ಧಿಸುವ ಜೊತೆಗೆ ಜನಾಕರ್ಷಣೆಯನ್ನು ಮಗದಷ್ಟು ಹೆಚ್ಚಿಸುತ್ತಿತ್ತೇನೋ, ಆದರೆ ಅವರು ಮಾತ್ರ ಅಣ್ಣಾವ್ರು ಹಾಕಿಕೊಟ್ಟ ಸಮೃದ್ಧ ಪರಂಪರೆಯಲ್ಲಿ, ಕಲಾತ್ಮಕತೆ ಹಾಗೂ ಮನರಂಜನೆ ಎರಡೂ ಹದವಾಗಿ ಮೇಳೈಸಿದ ದೊಡ್ಮನೆ ಹುಡುಗನಾಗಿ ನಟಿಸುವುದನ್ನೇ ಮುಂದುವರೆಸಿದರು. ಒಬ್ಬ ನಿರ್ಮಾಪಕನಾಗಿ, ವಿಷಯಾಧಾರಿತ ಚಿತ್ರಕಥೆಗಳ ಮೂಲಕ ಹೊಸಬರನ್ನು ಉತ್ತೇಜಿಸುತ್ತ, ಕನ್ನಡ ಸಿನಿಮಾಗಳ ಸೃಜನಶೀಲ ಮನಸ್ಸುಗಳಿಗೆ ವೇದಿಕೆ ಕಲ್ಪಿಸುತ್ತಲೇ, ಹೆಚ್ಚಿನ ಸಿನಿಮಾಗಳು ಬಾಕ್ಸಾಫೀಸಿನಲ್ಲಿಯೂ ಯಶ ಗಳಿಸುವಂತೆ ನೋಡಿಕೊಂಡರು.

ಸಿನಿ ಜಗತ್ತಿನಲ್ಲಿ ಮತ್ತು ಹೊರಗೆ, ಎಲ್ಲರೊಂದಿಗೆ ಅಪ್ಪು ಸರ್ ಒಂದು ಬೆಚ್ಚನೆಯ ಸೌಹಾರ್ದಯುತ ಸಂಬಂಧವನ್ನು ಇರಿಸಿಕೊಂಡಿದ್ದರು, ಆದರೆ ನಟನಾ ಕೌಶಲವನ್ನು ಒರೆಗೆ ಹಚ್ಚಿ, ಇನ್ನಷ್ಟು ಮಿಂಚುವಂತೆ ಮಾಡುವ ಕಲಾವಿದರನ್ನು ಬಹಳ ಮೆಚ್ಚಿ, ಮಾತಾಡುತ್ತಿದ್ದರು. ಒಮ್ಮೆ ಜಿಮ್ಮಿನಲ್ಲಿ ಹೀಗೆಯೇ ಹರಟುತ್ತಿರುವಾಗ, ಹಿಂದಿ ಸಿನಿಮಾರಂಗದಲ್ಲಿ ಪ್ರತಿಭಾವಂತ ನಟರಾದ ಆಮೀರ್ ಖಾನ್ ಜೊತೆಗಿನ ತಮ್ಮ ಆಪ್ತ ಸಂಬಂಧದ ಕುರಿತು ಮಾತನಾಡಿದ್ದರು. ಯಾವುದೋ ಒಂದು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ, ಅಲ್ಲಿ ಕಿಕ್ಕಿರಿದಿದ್ದ ಸೆಲೆಬ್ರಿಟಿಗಳು, ತಾರಾಮಣಿಗಳ ನಡುವೆ ಅಪಾರ ನಟನಾ ಕೌಶಲದ ಹಿಂದಿ ನಟ ಪಂಕಜ್ ತ್ರಿಪಾಠಿಯವರ ಜೊತೆಗೆ ಮಾತುಕತೆಯಲ್ಲಿ ಅಪ್ಪು ಸರ್ ಮಗ್ನರಾಗಿದ್ದರು ಎಂಬ ಬಗ್ಗೆಯೂ ನಾನು ಓದಿದ್ದೇನೆ. ಸೂಪರ್ ಸ್ಟಾರ್‌ಗಿರಿಯ ಕಿರೀಟ ಇಟ್ಟುಕೊಂಡವರನ್ನು ಹೊಗಳುತ್ತ ಕೂರವ ಬದಲಿಗೆ, ನಟನಾ ಚಾತುರ್ಯವಿರುವವರನ್ನು ಮೆಚ್ಚುವ ಅಪ್ಪು ಸರ್ ಅನಗತ್ಯ ಪ್ರಾಮುಖ್ಯತೆ ಪಡೆಯುವ ಹಣಕಾಸಿನ ಆದ್ಯತೆಗಳ ಬದಲಿಗೆ ಸಿನಿಮಾದ ನೈಜ ಕಲಾತ್ಮಕ ಆಯಾಮಗಳ ಮೇಲೆ ಒತ್ತು ನೀಡುತ್ತಿದ್ದರು. 'ಏನೇ ಆದರೂ ದುಡ್ಡೊಂದಿರಲಿ' ಎಂಬ ಮನೋಭಾವದ ನಡುವೆ ಅವರು ಮರಳುಗಾಡಿನ ಓಯಸಿಸ್ಸಿನಂತೆ ಇದ್ದರು; ಚಂದನವನಕ್ಕೆ ಅವರ ಅಗಲಿಕೆಯ ನಷ್ಟದ ಅಂದಾಜು ಮುಂಬರುವ ವರ್ಷಗಳಲ್ಲಿ ಅರಿವಾಗುತ್ತದೆ.

ಅಪ್ಪು ಸರ್ ವ್ಯಕ್ತಿತ್ವದ ಎರಡು ಅಂಶಗಳಿಗೆ ನಾನು ತುಂಬ ಬೆಲೆಕೊಡುತ್ತೇನೆ; ಒಂದು ಕಲಿಯುವ, ದಿನಗಳೆದಂತೆ ಇನ್ನಷ್ಟು ಉತ್ತಮ ಮನುಷ್ಯನಾಗಿ ಬೆಳೆಯುವ ಇಚ್ಛೆ ಮತ್ತು ಇನ್ನೊಂದು, ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ನಮ್ಮಲ್ಲಿ ಬಹುತೇಕರಿಗೆ ಅವರು ತೋರಿದ ಪ್ರೀತಿ, ಅಕ್ಕರೆ, ಕಾಳಜಿ. ಈ ಬಗೆಯ ನಿಷ್ಕಾಮ ಪ್ರೀತಿ ಹಾಗೂ ಒಳ್ಳೆಯತನ ಕೆಲವರಲ್ಲಿ ಮಾತ್ರವಿರುತ್ತದೆ.

ತಮ್ಮ ತಂದೆ, ತಾಯಿಯ ಹಾಗೆಯೇ ಅಪ್ಪು ಸರ್ ಕೂಡ ತಮ್ಮ ಕಣ್ಣುಗಳನ್ನು ದಾನ ಮಾಡಿದರು. ಅವರ ಕೊನೆಯಾಸೆಯನ್ನು ನೆರವೇರಿಸಿದ ಕುಟುಂಬಕ್ಕೆ ಗೌರವಾದರಗಳು. ಅಪ್ಪು ಮರಣದ ನಂತರವೂ ನಾಲ್ವರಿಗೆ ಬೆಳಕಿನ ಬದುಕು ನೀಡಿದ್ದಾರೆ. ನಾನು ಹಾಗೆ ಮಾಡುತ್ತೇನೆ ಎಂದು ವಾಗ್ದಾನ ಮಾಡುತ್ತ, ಬೇರೆಯವರೂ ಇದೇ ಹೆಜ್ಜೆಯಿಡಲು ಪ್ರೇರೇಪಿಸಲು ಆಂದೋಲನವನ್ನು ಆರಂಭಿಸುವ ಆಶಯದಲ್ಲಿದ್ದೇನೆ.

ಕನ್ನಡಕ್ಕೆ: ಸುಮಂಗಲಾ

ಎಲ್ಲರ ಪ್ರೀತಿ ದೋಚಲೆಂದೇ...

12ನೇ ಪುಟದಿಂದ...

ರಾಜ್‌ಕುಮಾರ್ ಅವರ ಮನೇಲಿ ಹೆಚ್ಚು ಚರ್ಚೆ ಆಗುತ್ತಿದ್ದುದೇ ಸಿನಿಮಾದ ಬಗ್ಗೆ. ಹೊಸ ಹೊಸ ಲೆನ್ಸುಗಳನ್ನು ತರಿಸೋರು. ಅಮ್ಮ ಹೇಳ್ತಿದ್ರು - ಇವ್ನು ಬಂದ್ನಪ್ಪಾ... ಆ ಲೆನ್ಸ್ ತರಿಸು, ಈ ಲೆನ್ಸ್ ತರಿಸು ಅಂತ ದುಂಬಾಲು ಬೀಳ್ತಾನೆ- ಅಂತ. ತಾಯಿ ಗಲ್ಲ ಸವರಿ, 'ಅಮ್ಮಾ ಇದು ನೋಡು, ಇದನ್ನು ನಾವು ತರಿಸ್ಬೇಕು' ಅಂತ ಹೇಳ್ತಿದ್ದ. ಅವರದ್ದೇ ಯೂನಿಟ್ ಇತ್ತಲ್ಲಾ? ಬರೀ ಸಿನಿಮಾದ ಮಾತು. ಕಂಡವರ ಬಗ್ಗೆ ಮಾತಾಡಿದ್ದು ಆ ಕುಟುಂಬದಲ್ಲಿ ನಾನು ನೋಡಿಯೇ ಇಲ್ಲ. ಅಪ್ಪೂಗೆ ಅಪ್ಪ-ಅಮ್ಮನಿಂದ ಬಳುವಳಿಯಾಗಿ ಬಂದ ಗುಣವದು.

ಅಪ್ಪು ಇಷ್ಟೊಂದು ಎತ್ತರಕ್ಕೆ ಬೆಳೆದು, ತಾನು ದುಡಿದದ್ದನ್ನು ಇನ್ನೊಂದು ಕೈಗೆ ಗೊತ್ತಾಗದಂತೆ ಬಡವರಿಗಾಗಿ, ನಿರ್ಗತಿಕರಿಗಾಗಿ ಖರ್ಚು ಮಾಡಿದ್ದು ಎಂತಹ ಆದರ್ಶದ ಗುಣ. ಎಷ್ಟೊಂದು ಮಕ್ಕಳ ವಿದ್ಯಾಭ್ಯಾಸಕ್ಕೆ ಅವನು ಸದ್ದಿಲ್ಲದೆ ನೆರವು ನೀಡಿದ್ದ! ನಮ್ಮ ಮೈಸೂರಿನ ಅಬಲೆಯರ ಆಶ್ರಯತಾಣ ಶಕ್ತಿಧಾಮಕ್ಕೆ ತೊಂದರೆ ಬಂದಾಗಲೂ ಅವನು ನೆರವಾಗಿದ್ದ. ಶಕ್ತಿಧಾಮವನ್ನು ಕಟ್ಟಿದ್ದು ರಾಜ್‌ಕುಮಾರ್. ಬೆಳೆಸಿದ್ದು ಪಾರ್ವತಮ್ಮ. ಇವತ್ತು ಬೆಳೆಸಿಕೊಂಡು ಹೋಗುತ್ತಿರುವವರು ಗೀತಾ ಶಿವರಾಜ್‌ಕುಮಾರ್. ಹಣದ ಅವಶ್ಯಕತೆ ಇದೆ, ಯಾವ ಸರ್ಕಾರವನ್ನೂ ಹೋಗಿ ಕೇಳಲು ಆಗುವುದಿಲ್ಲ ಎಂದಾಗ ಮೂವರೂ ಮಕ್ಕಳು ಪಿಲ್ಲರ್‌ಗಳಂತೆ ನಿಂತು ನೆರವಾದವರು. ಸಿನಿಮಾದ ಒಂದು ಕಾರ್ಯಕ್ರಮ ಮಾಡಿದಾಗ ಅದರ ಹಣ ನೇರವಾಗಿ ಶಕ್ತಿಧಾಮಕ್ಕೆ ಹೋಗುತ್ತಿತ್ತು. ಆ ಕುಟುಂಬ ನೀಡಿದ ನೆರವು ಎಷ್ಟು ಹೇಳಿದರೂ ಸಾಲದು. ಅದರಲ್ಲೂ ಅಪ್ಪುವಿನ ಪಾತ್ರ

ಕಂಠೀರವ ಕ್ರೀಡಾಂಗಣದಲ್ಲಿ ನಟ ಪುನೀತ್ ರಾಜಕುಮಾರ್ ಅವರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಲು ಬಂದಿದ್ದ ಸಾವಿರಾರು ಅಭಿಮಾನಿಗಳು -ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

ಮಹತ್ವದ್ದು. 'ಅಪ್ಪೂ... ಎಷ್ಟೊಂದು ದುಡ್ಡು ಕೊಟ್ಟಿದ್ದೀಯಾ!' ಅಂದ್ರೆ 'ಅಯ್ಯೋ ಆಂಟಿ... ನೀವು ಬೇರೆ...' ಅಂತ ಕತ್ತು ಕೆಳಗೆ ಹಾಕಿ ಸಣ್ಣದಾಗಿ ನಗುತ್ತಿದ್ದ!

ನನಗೆ ಇವತ್ತು ಅನ್ನಿಸ್ತಿದೆ- ಈ ಹುಡುಗ ಇನ್ನೂ 20-30 ವರ್ಷ ಎಷ್ಟೊಂದು ಸಿನಿಮಾಗಳನ್ನು ಮಾಡಬೇಕಿತ್ತು, ಎಷ್ಟು ಲಕ್ಷ ಜನರಿಗೆ ನೆರವಾಗಬೇಕಿತ್ತು. ಸೂಪರ್ ಸ್ಟಾರ್ ಆಗಿದ್ದವನು ಅವನು. ಅವನ ಜೊತೆಗೆ ಎಷ್ಟೊಂದು ನಟ, ನಟಿಯರು, ನಿರ್ಮಾಪಕರು ಬೆಳೆಯುತ್ತಿದ್ದರು. ಎಷ್ಟೊಂದು ಕುಟುಂಬಗಳನ್ನು ಉಳಿಸುತ್ತಿದ್ದ. ನಮ್ಮ ಇಂಡಸ್ಟ್ರಿ ಎಷ್ಟೊಂದು ಎತ್ತರಕ್ಕೆ ಬೆಳೆಯುತ್ತಿತ್ತು! ಈಗ ಯೋಚನೆ ಮಾಡಿದಾಗ ನಮ್ಮ ಅಪ್ಪು ನಮ್ಮ ಕಣ್ಮುಂದೆನೇ ಇಲ್ಲ ಅನ್ನೋದು ಇದೆಯಲ್ಲ, ನನಗೆ ನಿಜಕ್ಕೂ ಕಷ್ಟ ಆಗ್ತಿದೆ. ಅವನ ಚೈತನ್ಯದ ಹಿಂದೆ ಪ್ರೇರಣೆಯಾಗಿ ಅಶ್ವಿನಿ ಇದ್ದಳು, ಪ್ರೀತಿಸಿ ಮದುವೆಯಾದವಳು. ಇಬ್ಬರು ಮಕ್ಕಳು. ಆ ಇಡೀ ಕುಟುಂಬ ಒಗ್ಗಟ್ಟಿನ ಕುಟುಂಬ, ಅಣ್ಣಂದಿರು, ಅಕ್ಕಂದಿರು ಎಲ್ಲರ ಪ್ರೀತಿಯ ದೊಡ್ಡ ಹೊರೆ ಆತನ ಮೇಲಿತ್ತು. ಬಹುಶಃ ನೂರು ವರ್ಷಕ್ಕೆ ಮಾಡೋದನ್ನು ಎಲ್ಲವನ್ನೂ ಮಾಡಿ ಬಿಟ್ಟು ಈಗ ನಿಶ್ಯಬ್ದವಾಗಿ ಮಲಗಿಬಿಟ್ಟ.

ನನಗೆ ಈಗಲೂ ನೆನಪಿದೆ. ಅಪ್ಪುವಿನ 'ರಾಜ್' ಸಿನಿಮಾ ಶೂಟಿಂಗ್ ನಡೆಯುತ್ತಿತ್ತು. ಇದ್ದಕ್ಕಿದ್ದಂತೆ ಒಂದು ದಿನ ಅಮ್ಮ ಫೋನ್ ಮಾಡಿದರು. 'ಜಯಮಾಲಾ... ಅಣ್ಣಾವ್ರ ಜೊತೆ ನಟಿಸಿದ ಐದು ಜನ ಹೆಣ್ಣುಮಕ್ಕಳ ಹಾಡುಗಳನ್ನು ಈ ಚಿತ್ರದಲ್ಲಿ ರಿಶೂಟ್ ಮಾಡ್ತಿದೀವಿ ಕಣೇ, ಅಪ್ಪು ಜೊತೆಗೆ. ನೀನೂ ಅದರಲ್ಲಿ ಆ್ಯಕ್ಟ್ ಮಾಡಬೇಕು. ಒಬ್ಬೊಬ್ಬರದ್ದೂ ಒಂದೊಂದು ತುಣುಕು ಹಾಡು ಬರುತ್ತೆ, ನೀನೂ ಅದರಲ್ಲಿ ಇರಬೇಕು' ಅಂತ. ನಾನು, 'ಅಮ್ಮಾ... ನಾನಾ? ಇಷ್ಟು ದಪ್ಪ ಆಗಿದ್ದೀನಿ, ಈವಾಗ ನಾನು ಬೇಡಮ್ಮಾ...' ಅಂದೆ. ಒಂದ್ನಿಮಿಷಕ್ಕೇ ಫೋನ್‌ನಲ್ಲಿ ಅಪ್ಪು! 'ಆಂಟೀ... ನೀವು ಈವಾಗ ಹೇಗಿದ್ದೀರಾ ಅನ್ನೋದು ಪ್ರಶ್ನೆಯೇ ಅಲ್ಲ ಆಂಟೀ. ನೀವು ಈ ಪಿಕ್ಚರಲ್ಲಿ ಮಾಡ್ತೀರ ಅಂದ್ರೆ ಮಾಡ್ತೀರಾ... ಅಷ್ಟೆ. ಅಪ್ಪಾಜಿ ಹೆಸರು ಇರೋದದು. ಅಪ್ಪಾಜಿ ಜೊತೆಯಲ್ಲಿ ನೀವು ಮಾಡಿದ ಆ ಹಾಡು ಮತ್ತೆ ನೀವು ನನ್ನೊತೆ ಮಾಡ್ತೀರಾ' ಅಂದ.

ನನಗೆ ಎಷ್ಟು ಸಂತೋಷವಾಯಿತೆಂದರೆ ನಾನು ವಯಸ್ಸಾಗಿರೋದನ್ನು, ದಪ್ಪ ಇರೋದನ್ನೂ ಮರೆತುಬಿಟ್ಟೆ. ಬಹುಶಃ ಎರಡು ದಿನ ಶೂಟಿಂಗ್ ಮಾಡಿದೆವು. ಆ ಹುಡುಗನ ಜೊತೆ ಭಾರತಿ, ಜಯಂತಿ, ಜಯಪ್ರದಾ, ಊರ್ವಶಿ ಮತ್ತು ನಾನು ಹೆಜ್ಜೆ ಹಾಕಿದೆವು. ಎಷ್ಟು ಲವಲವಿಕೆಯ ಹುಡುಗ. ಜೊತೆಯಲ್ಲಿ ಕಾನ್ಫಿಡೆನ್ಸ್. ದೃಶ್ಯಗಳ ಬಗ್ಗೆ ಅವನದ್ದೇ ಆದ ನಿಲುವುಗಳಿದ್ದವು. ಭಾರತಿಯವರದ್ದು ಬಹುಶಃ 'ಬಾಳ ಬಂಗಾರ ನೀನು' ಹಾಡು. ನನ್ನದು ಗಿರಿಕನ್ಯೆ ಸಿನಿಮಾದ್ದು. ಎಲ್ಲವೂ ಸೂಪರ್ ಹಿಟ್ ಹಾಡುಗಳು, ಎಲ್ಲರದ್ದೂ ಒಂದೊಂದು ಹಾಡು ಹಾಕಿ ನಾವು ಐದೂ ಜನರ ಜೊತೆಯಲ್ಲಿ ಆ ರಾಜ್ ಅನ್ನುವ ಹೆಸರು, ಅವನು ರಾಜ್‌ಕುಮಾರ್ ಆಗಿ. ನಿಜಕ್ಕೂ ಆನಂದದ ದಿನಗಳು. ಹುಡುಗ ಎಷ್ಟು ಸಿಂಪಲ್. 'ಆಂಟೀ ನನ್ನೊತೆಗೆ ಆ್ಯಕ್ಟ್ ಮಾಡಿದ್ದಕ್ಕೆ ಥ್ಯಾಂಕ್ಸ್' ಎಂದಾಗ ನಂಗಾದ ಖುಷಿ ವರ್ಣಿಸಲು ಸಾಧ್ಯವಿಲ್ಲ.

ಪಾರ್ವತಮ್ಮ ಮತ್ತು ರಾಜ್‌ಕುಮಾರ್ ಇಬ್ಬರಿಗೂ ಬಾಲ್ಯದಿಂದಲೇ ಅಪ್ಪು ಎಂದರೆ ಪಂಚಪ್ರಾಣ. ಅವನು ಸದಾ ತಂದೆಯ ನೆರಳು. ಶೂಟಿಂಗ್‌ನಲ್ಲಿ 'ಅಪ್ಪಾಜಿ ಅಪ್ಪಾಜಿ' ಅಂತ ಸುತ್ತಲೂ ಓಡಾಡುತ್ತಿದ್ದ. ಅಪ್ಪಾಜಿಗೆ ಹತ್ತಾರು ಪ್ರಶ್ನೆಗಳನ್ನು ಕೇಳೋನು. ಅವರೂ ತಾಳ್ಮೆಯಿಂದ ಉತ್ತರ ಹೇಳೋರು. ಅಪ್ಪುವನ್ನು ಯಾರಾದರೂ ಹೊಗಳುತ್ತಿದ್ದರೆ ಅಮ್ಮನಿಗೆ ತಡೆಯಲಾಗದ ಸಂತೋಷ. ಅವ್ರು ಹೇಳೋರು- 'ಜಯಮಾಲಾ ನೀ ನೋಡ್ತಿರು... ನಮ್ಮ ಅಪ್ಪೂ ಅವರ ಅಪ್ಪಾಜಿಯನ್ನೂ ಮೀರಿಸಿ ಬೆಳೆಯುತ್ತಾನೆ' ಅಂತ. ಅವನು ಸೂಪರ್‌ಸ್ಟಾರ್ ಆಗಿಯೇ ಬಿಟ್ಟ. ತಾನೂ ಬೆಳೆದ. ಚಿತ್ರರಂಗವನ್ನೂ ಬೆಳೆಸಿದ. ಈಗ ಹೀಗೆ ಹೇಳದೆ ಕೇಳದೆ ಹೊರಟುಬಿಟ್ಟ. ಇವತ್ತು ಬಹುಶಃ ಪಾರ್ವತಮ್ಮ ಏನಾದರೂ ಇದ್ದಿದ್ದರೆ, ಈ ದೃಶ್ಯವನ್ನು ಅವರಿಗೆ ಅರಗಿಸಿಕೊಳ್ಳುವುದು ಸಾಧ್ಯವೇ ಇರುತ್ತಿರಲಿಲ್ಲ!

ನಿರೂಪಣೆ: ಬಿ.ಎಂ. ಹನೀಫ್

ಮುನ್ನೋಟ 07-11-2021 ರಿಂದ 13-11-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ದೈನಂದಿನ ಚಟುವಟಿಕೆಯಲ್ಲಿ ಬಹಳ ಉತ್ಸಾಹ ಮೂಡುತ್ತದೆ. ಸಾಲ ಕೊಟ್ಟವರು ಮರು ಪಾವತಿಗಾಗಿ ತಗಾದೆ ಮಾಡಬಹುದು. ದ್ವೇಷಕ್ಕೆ ಮುಂದಾಗದೆ ಉಪಾಯದಿಂದ ಪಾರಾಗುವ ಬಗ್ಗೆ ಯೋಚಿಸಿರಿ. ಕೌಟುಂಬಿಕ ಜೀವನದಲ್ಲಿ ನೆಮ್ಮದಿಯನ್ನು ಕಾಣಬಹುದು. ಸರ್ಕಾರಿ ಕೆಲಸದಲ್ಲಿ ಇರುವವರಿಗೆ ಬಿಡುವಿಲ್ಲದ ಕೆಲಸಗಳಿಂದಾಗಿ ಮನೆಯಲ್ಲಿ ಕಿರಿಕಿರಿ ಉಂಟಾಗಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಕೆಲವರೊಂದಿಗೆ ಅತಿಯಾಗಿ ಸ್ನೇಹ ಸಂಬಂಧ ವೃದ್ಧಿಸುವ ಸಾಧ್ಯತೆ ಇದೆ. ನಿಮ್ಮ ನಿಷ್ಠೆ, ಪ್ರಾಮಾಣಿಕತೆಯಿಂದ ಒಳ್ಳೆಯ ಹೆಸರನ್ನು ಪಡೆಯುವಿರಿ. ಪಾಲುದಾರಿಕೆಯ ವ್ಯವಹಾರದಲ್ಲಿ ಪ್ರಗತಿ ಇರುತ್ತದೆ. ವ್ಯವಹಾರದಲ್ಲಿ ಸಂಬಂಧ ಹಳಸದಂತೆ ಎಚ್ಚರವಾಗಿರಿ. ದೈನಂದಿನ ಕೆಲಸಗಳು ಯಶಸ್ವಿಯಾಗಿ ನಡೆಯುತ್ತವೆ. ಹಿತಶತ್ರುಗಳ ವಿಚಾರದಲ್ಲಿ ಎಚ್ಚರಿಕೆ ಅಗತ್ಯ. ಮಕ್ಕಳಿಂದ ಆರ್ಥಿಕ ಸಹಕಾರ ಒದಗಿಬರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಕೆಲಸಕಾರ್ಯಗಳಲ್ಲಿ ನಿಮ್ಮ ದ್ವಂದ್ವ ನಿರ್ಧಾರಗಳಿಂದ ಹಿನ್ನಡೆಯಾಗಬಹುದು. ಒಟ್ಟಿನ ವ್ಯವಹಾರಗಳಲ್ಲಿ ಹೆಚ್ಚು ಜಾಗರೂಕರಾಗಿರಿ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಯಂತ್ರೋಪಕರಣಗಳ ದುರಸ್ತಿಗಾಗಿ ಹಣ ಖರ್ಚಾಗುವುದು. ಕೆಲವು ವಿದ್ವಾಂಸರಿಗೆ ಗೌರವಾದರ ದೊರೆಯುವ ಸಾಧ್ಯತೆ ಇದೆ. ಸಾಹಸ ಕ್ರೀಡಾ ಚಟುವಟಿಕೆಯಲ್ಲಿರುವ ಮಹಿಳೆಯರಿಗೆ ಸಾಧನೆಯ ಹಾದಿ ತೆರೆಯುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ನಿಮ್ಮ ಹೆಸರನ್ನು ದುರ್ಬಳಕೆ ಮಾಡಿಕೊಂಡು ಲಾಭ ಮಾಡಿಕೊಳ್ಳುವವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಮುಂದಾಗುವಿರಿ. ಕೃಷಿಕ್ಷೇತ್ರದಲ್ಲಿ ಇರುವವರೆಗೆ ಬಿಡುವಿಲ್ಲದ ಕೆಲಸಗಳು ಇರುತ್ತವೆ. ಗೃಹ ನಿರ್ಮಾಣ ಕಾರ್ಯದಲ್ಲಿ ಇದ್ದ ತೊಡಕುಗಳು ನಿವಾರಣೆಯಾಗುತ್ತದೆ. ಮಹಿಳೆಯರಿಗೆ ಅವರ ಕೆಲಸ ಕಾರ್ಯಗಳಲ್ಲಿ ಸ್ನೇಹಿತೆಯರಿಂದ ಉತ್ತಮ ಸಹಕಾರ ದೊರೆಯುತ್ತದೆ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಕಳೆದು ಹೋದ ದಿನಗಳ ಬಗ್ಗೆ ಚಿಂತಿಸುವುದರಿಂದ ಪ್ರಯೋಜನವಿಲ್ಲ. ಇರುವುದನ್ನು ಸರಿಯಾಗಿ ಅರಿತು ನಡೆಯಿರಿ. ಯಾವುದೋ ಸತ್ಯವನ್ನು ಹೊರತೆಗೆಯಲು ಹೋಗಿ ನೀವೇ ತೊಂದರೆಗೆ ಸಿಕ್ಕಿಹಾಕಿಕೊಳ್ಳುವಂತಹ ಸಾಧ್ಯತೆಗಳಿವೆ. ಹೀಗಾಗಿ ಎಚ್ಚರವಹಿಸಿರಿ. ವಾಹನ ಖರೀದಿಯ ಯೋಗವಿದೆ. ಯಂತ್ರೋಪಕರಣಗಳ ವ್ಯವಹಾರವನ್ನು ಮಾಡುವವರಿಗೆ ವ್ಯಾಪಾರ ವೃದ್ಧಿಸುತ್ತದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಕೆಲವು ಮುಖ್ಯ ಕಾರ್ಯಕ್ರಮಗಳನ್ನು ಸ್ವಲ್ಪಕಾಲ ಮುಂದೂಡುವುದು ಉತ್ತಮ. ಬಹಳ ದೂರದ ಪ್ರಯಾಣ ಸದ್ಯಕ್ಕೆ ಬೇಡ. ಮಕ್ಕಳಿಗಾಗಿ ಹೆಚ್ಚು ಹಣ ಖರ್ಚು ಮಾಡಬೇಕಾಗುವುದು. ಭೂಮಿಯ ವ್ಯವಹಾರಗಳಿಂದ ಹೆಚ್ಚು ಲಾಭ ಬರುತ್ತದೆ. ವೈಯಕ್ತಿಕ ಜೀವನದಲ್ಲಿ ನಿಧಾನಗತಿಯ ಅಭಿವೃದ್ಧಿ ಇರುತ್ತದೆ. ಬರಹಗಾರರು ತಮ್ಮ ಬರವಣಿಗೆಯ ಬಗ್ಗೆ ಎಚ್ಚರದಿಂದ ಇರುವುದು ಒಳ್ಳೆಯದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ಆತ್ಮಸ್ಥೈರ್ಯ ಹೆಚ್ಚಿಗೆ ಇರುತ್ತದೆ. ಸಂಬಂಧವಿಲ್ಲದ ವಿಷಯಗಳನ್ನು ಕೆದಕಲು ಹೋಗಿ ಅವಮಾನಕ್ಕೀಡಾಗುವ ಸಾಧ್ಯತೆ ಇದೆ. ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ಕುಟುಂಬದಲ್ಲಿ ನೆಮ್ಮದಿಯ ವಾತಾವರಣವನ್ನು ಕಾಣಬಹುದು. ವ್ಯವಹಾರದಲ್ಲಿ ಮಾತಿನ ಮೇಲೆ ಹಿಡಿತ ಸರಿಯಾಗಿರಲಿ. ಇಲ್ಲವಾದಲ್ಲಿ ವ್ಯವಹಾರಕ್ಕೆ ಧಕ್ಕೆಯಾಗುವ ಸಾಧ್ಯತೆಗಳಿವೆ. ಧಾನ್ಯ ವ್ಯಾಪಾರಿಗಳಿಗೆ ಲಾಭ ಹೆಚ್ಚುವ ಸಾಧ್ಯತೆಗಳಿವೆ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ನಿಮ್ಮ ವಿರುದ್ಧ ಸಹೋದ್ಯೋಗಿಗಳು ಮಾಡಿದ್ದ ಪಿತೂರಿಯ ಮೂಲ ಸಿಗುತ್ತದೆ ಹಾಗೂ ಅದರ ಕಾರಣಕರ್ತರು ಯಾರೆಂದು ಸಹ ತಿಳಿದುಬರುತ್ತದೆ. ಸರ್ಕಾರಿ ಕೆಲಸಗಳಲ್ಲಿ ಸ್ವಲ್ಪ ಹಿನ್ನಡೆಯಾದರೂ ಕೋರ್ಟು ಕಚೇರಿ ಕೆಲಸಗಳಲ್ಲಿ ಮುನ್ನಡೆ ಇರುತ್ತದೆ. ಕುಟುಂಬದ ಸದಸ್ಯರಿಂದ ನಿಮ್ಮ ಹೊಸ ಕಾರ್ಯಗಳಿಗೆ ಸಹಕಾರ ದೊರೆಯುತ್ತದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಬಹಳ ವಯಸ್ಸಾದವರು ಕುಟುಂಬದಲ್ಲಿ ಗುಂಪುಗಾರಿಕೆ ಮಾಡಲು ಹೋಗಿ ಅಪಖ್ಯಾತಿಗೆ ಗುರಿಯಾಗುವ ಸಾಧ್ಯತೆಗಳಿವೆ. ಎಲ್ಲರ ಮೇಲು ಅನುಮಾನ ಪಡುವುದು ಅಷ್ಟು ಒಳಿತಲ್ಲ. ಮಾತೃವರ್ಗದವರಿಂದ ಸಹಾಯ ಸಹಕಾರಗಳು ದೊರೆಯುತ್ತವೆ. ಹಣದ ಒಳಹರಿವಿನಲ್ಲಿ ಸ್ವಲ್ಪ ಏರಿಕೆಯನ್ನು ಕಾಣಬಹುದು. ಉನ್ನತ ಅಧ್ಯಯನವನ್ನು ಮಾಡುವವರು ಈಗ ಮಾಡಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಪ್ರೀತಿ ಪ್ರೇಮಗಳ ಹುಚ್ಚು ಹೊಳೆಗೆ ಕಡಿವಾಣ ಹಾಕುವುದು ಒಳ್ಳೆಯದು. ಅಪರಿಚಿತ ವ್ಯಕ್ತಿಗಳೊಡನೆ ವ್ಯವಹರಿಸುವಾಗ ಎಚ್ಚರವಿರಲಿ. ಸ್ನೇಹಸಂಬಂಧದ ವಿಷಯದಲ್ಲಿ ಮೋಸ ಹೋಗುವ ಸಾಧ್ಯತೆಗಳಿವೆ. ವ್ಯವಹಾರಗಳಲ್ಲಿ ಪಾಲುದಾರರಿಂದ ಪ್ರೋತ್ಸಾಹ ದೊರೆಯುತ್ತದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ವಿಶೇಷ ಕಾಳಜಿ ಅಗತ್ಯ. ಜನಗಳ ನಡುವೆ ನಿಮ್ಮ ಒಳ್ಳೆಯತನ ದುರುಪಯೋಗ ಆಗದಂತೆ ಎಚ್ಚರ ವಹಿಸಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಯುವಕರು ಬೇರೆಯವರ ಥಳುಕಿನ ಮಾತಿಗೆ ಮರುಳಾಗಿ ಮೋಸ ಹೋಗುವ ಸಾಧ್ಯತೆಗಳಿವೆ. ತಾಯಿಯ ಆರೋಗ್ಯದ ಬಗ್ಗೆ ಎಚ್ಚರವಹಿಸಿರಿ. ಕಟ್ಟಡ ನಿರ್ಮಾಣ ವಿಷಯದಲ್ಲಿ ನೆರೆಹೊರೆಯವರೊಂದಿಗೆ ಕಲಹ ಏರ್ಪಡುವ ಸಾಧ್ಯತೆಗಳಿವೆ. ವಜ್ರ ವೈಡೂರ್ಯ ವ್ಯಾಪಾರಿಗಳಿಗೆ ವ್ಯಾಪಾರದಲ್ಲಿ ಏಳಿಗೆ ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ವ್ಯಾಪಾರಸ್ಥರಿಗೆ ವ್ಯಾಪಾರದಲ್ಲಿ ಲಾಭ ಹೆಚ್ಚಾಗುತ್ತದೆ. ನಿರೀಕ್ಷಿತ ಮೂಲಗಳಿಂದ ಧನಾಗಮನದ ಸಾಧ್ಯತೆಗಳಿವೆ. ಕೆಲವೊಂದು ವಿವಾದಾತ್ಮಕ ಹೇಳಿಕೆಗಳಿಂದ ಬಂದ ಸಮಸ್ಯೆಗಳು ಮಧ್ಯವರ್ತಿಗಳಿಂದ ನಿವಾರಣೆಯಾಗುತ್ತವೆ. ಪಿತ್ರಾರ್ಜಿತ ಆಸ್ತಿಯ ವಿಷಯದಲ್ಲಿ ನ್ಯಾಯಾಲಯದ ಮೊರೆ ಹೋಗುವ ಸಾಧ್ಯತೆಗಳಿವೆ. ವರದಿಗಾರರಿಗೆ ದೊಡ್ಡ ಸತ್ಪುರುಷರ ಸಂದರ್ಶನ ಮಾಡುವ ಯೋಗವಿದೆ.

ಪದಬಂಧ 2712



ಮೇಲಿನಿಂದ ಕೆಳಕ್ಕೆ

1. ಹುಡುಕಿದಾಗ ಸಿಗುವ ದೊರೆ 3
2. ಬೆಕ್ಕು, ಕೋತಿಗಳಲ್ಲಿ ಗಡುಸಾದ ಗಂಡು 3
3. ಕೈಕೆಳಗೆ ಅಧೀನದಲ್ಲಿರುವ ಅರ್ಧಭಾಗ 2
4. ಏನೂ ಇಲ್ಲದ ಈಶ್ವರ 3
5. ವಿಷವನ್ನೊಳಗೊಂಡ ವಸ್ತು 3
7. ಶಿವನ ಆತ್ಮದಿಂದ ಹುಟ್ಟಿದವ 4
8. ದೀರ್ಘವಾಗಿ ಜೊತೆ ಜೊತೆಯಾಗಿ ಬೆರೆಯುವಿಕೆ 4
9. ಹಸು ಮತ್ತು ಅದರ ಎಳೆ ಕಂದಮ್ಮ 4
11. ಕೊನೆಯಲ್ಲಿ ಗೆಲುವು ಪಡೆದವ 3
13. ಗರಡಿಯಲ್ಲಿ ಪಳಗಿ ಆಯುಧಬಳಸದೆ ಹೊಡೆದಾಡುವ ಆಟಗಾರ 4
14. ಕೆಳಗಿನಿಂದ ಮೇಲೆ ಕಾಣಿಸುವ ಬೆಟ್ಟದ ತುತ್ತ ತುದಿ 3
16. ವರನಲ್ಲಿ ಭೂಮಿ ತುಂಬಾ ಚೆನ್ನಾಗಿ ಕಾಣಿಸುತ್ತಾಳೆ 4
17. ತಲೆತಗ್ಗಿಸಿ ಸೆರೆ ಒಡ್ಡುವ ಬೃಹತ್ ಕೂಟ 4
19. ವರುಷಕ್ಕೊಮ್ಮೆ ಈ ಋತುಗಳ ರಾಜನ ಆಗಮನ 3
21. ರಸವನ್ನು ಗ್ರಹಿಸುವ ಕಲೋಪಾಸಕ 3
23. ಫಲನೀಡದ ಭೂಮಿಯೊಡಲು 3
24. ಪುರಾತನಕಾಲದ ನಗರ 3
25. ಸಮಾಜದಲ್ಲಿ ಪಂಗಡ, ಕುಲ ವ್ಯವಸ್ಥೆ 2

ಎಡದಿಂದ ಬಲಕ್ಕೆ

1. ವೈಭವದಿಂದ ಮೆರೆದು ಮುಳುಗಿ ಮರೆಯಾಗಿ ಹೋದ 4
3. ಅಪಾರ ಮೆಚ್ಚುಗೆ ಮರ್ಯಾದೆಯನ್ನು ವ್ಯಕ್ತಪಡಿಸುವ ಕಲಾವಿದ ಪ್ರೇಮಿ 4
5. ಮುಂದೆ ನಡೆಯಬಹುದಾದದನ್ನು ಬರೆದಿಟ್ಟ ದೈವ ಶಾಸನ 2
6. ಸಂಗಸ್ನೇಹಗಳಿಂದ ವರ್ತನೆಯಲ್ಲಿ ಉಂಟಾಗುವ ಲೋಪ 6
9. ಹತ್ತು ವರ್ಷಗಳ ಎಣಿಕೆ 3
10. ಒಂದು ವ್ಯವಸ್ಥೆಯಲ್ಲಿ ಗೌರವಾನ್ವಿತ ಹಿರಿಯ 4
12. ಬೊಂಬೆ ಹೇಳುವ ಹಾಡಿನಲ್ಲಿ ಅರಸನಿಗೆ ಮಗನಾದ ಅರಸು 5
15. ಪರಿಕಲ್ಪನೆಯಲ್ಲಿ ಹೆಣ್ಣಿನ ಜನ್ಮಗೃಹ 5
18. ಅನ್ಯಲೋಕಕ್ಕೆ ಸೇರಿದ ಈಶ್ವರ 4
20. ನಯ, ಮೃದು ಸ್ವಭಾವಕ್ಕೆ ವ್ಯತಿರಿಕ್ತವಾದದ್ದು 3
22. ಇಹಲೋಕದ ಕುಟುಂಬ ಹಾಕಿರುವ ಸೆರೆ 6
25. ಸಂಸ್ಕೃತದಲ್ಲಿ 'ಹುಟ್ಟಿದ' 2
26. ಅತಿಯಾದ ಪ್ರೇಮ, ಮಮತೆ 4
27. ವಿಳಾಸ ಪತ್ತೆಹಚ್ಚಲು ಅಲೆಯಬೇಕಾದ ವಾಸ ಸ್ಥಳ, ಅಲ್ಲಿನ ಬೀದಿಗಳು 4

ಪದಬಂಧ ಉತ್ತರ -2711

ಮೇಲಿಂದ ಕೆಳಕ್ಕೆ

1.ಸಮಾಸ 2.ಜವಾನಿ 3.ಸರೀಕ 4.ತಮಾಷ 7.ಸಿಡಿತ 9.ಧಾರಾನಗರಿ 11.ಅಂಕ 13.ಮರಳು 14.ಹಕ್ಕಿಪಂಜರ 15.ಮತ್ತು 17.ಗದರು 18.ಬೆರಸು 19.ಗುಮಾನಿ 20.ಧಾವಿಸು 21.ಡಮರು

ಎಡದಿಂದ ಬಲಕ್ಕೆ

1.ಸರಸಿಜ 3.ಸಮ್ಮತ 5.ವಾಗೀಶ್ವರೀ 8.ಸಮಾಧಾನಿ 10.ಕಲ್ಮಷ 11.ಅಂತ 12.ಪಾವನ 13.ಮನಮೋಹಕ 15.ಮರಿಮಗಳು 16.ಪಂಡಿತ 17.ಗತ್ತು 18.ಬೆರಗು 20.ಧಾರವಾಡ 22.ತುಧಿರ 23.ಮಾಯಾದೇವಿ 24.ಸುದನಿ 25.ಸುರುಸುರು

ದೇಶ, ಕಾಲ ದಾಟಿ ಬಂದ ಕಾವ್ಯ

ಎಚ್.ದಂಡಪ್ಪ

ಬಿ.ಆರ್.ಲಕ್ಷ್ಮಣರಾವ್ ಅವರ 'ಮನಸು ಬಾವಲಿಯಂತೆ' ಸಂಕಲನದಲ್ಲಿ ಹಲವು ಕಾಲ, ದೇಶ, ಭಾಷೆಗಳಿಂದ ಆಯ್ಕೆ ಮಾಡಿ ಅನುವಾದಿಸಿರುವ ಐವತ್ತೊಂದು ಕವನಗಳಿವೆ. ಕವಿತೆಗಳ ರೂಪ, ಹಿನ್ನೆಲೆ, ವಸ್ತು, ಭಾಷೆ, ಲಯ, ಶೈಲಿ, ಬೇರೆ ಬೇರೆಯವು. ಬೇರೆ ಬೇರೆ ಮಾರ್ಗಗಳ, ಅಭಿರುಚಿಯ ಓದುಗರಿಗೆ ಮತ್ತು ಕವಿಗಳಿಗೆ ಬೇರೆ ಬೇರೆ ಕವಿಗಳ ಜೈವಿಕ, ಅನುಭಾವಿಕ, ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ, ಮಾನವಿಕ ಹಿನ್ನೆಲೆಯಲ್ಲಿ ಮೂಡಿರುವ ಬದುಕಿನ ಅನುಭವಗಳನ್ನು, ಸಂವೇದನೆಗಳನ್ನು ತಮ್ಮದಾಗಿಸಿಕೊಂಡು ಆ ಮೂಲಕ ತಮ್ಮ ಅರಿವನ್ನು ವಿಸ್ತರಿಸಿಕೊಳ್ಳಲು ಈ ಅನುವಾದಿತ ಕವಿತೆಗಳು ನೆರವಾಗುತ್ತವೆ. ಇವುಗಳಲ್ಲಿ ನಡೆಸಿರುವ ಮಾನವೀಯ ಮೌಲ್ಯಗಳ ಶೋಧನೆಯು ಕಲಾತ್ಮಕವಾಗಿದ್ದು, ಈ ಕವಿತೆಗಳ ಕೇಂದ್ರದಲ್ಲಿರುವ ತಾತ್ವಿಕ ಚಿಂತನೆಗಳು ವಿಶ್ವಾತ್ಮಕವಾಗಿವೆ.

ಬೇರೆ ಬೇರೆ ಮಣ್ಣ ಬದುಕಿನ ಅನುಭವಗಳಿಂದ ಮೂಡಿರುವ ಮೂಲ ಕವಿತೆಗಳ ಲಯ, ಛಂದಸ್ಸು, ಭಾವ, ವೈಚಾರಿಕತೆಯ ಸೊಗಸು ಕೆಡದಂತೆ ಕನ್ನಡದ ಓದುಗನಿಗೆ ಈ ಅನುಭವಗಳು ಪರಕೀಯವಾಗದಂತೆ ಭಾಷಾಂತರಿಸುವುದು ಸುಲಭದ ಸಂಗತಿಯಲ್ಲ. ಏಕೆಂದರೆ ಅನುವಾದ ಎಂಬುವುದು ಬರೀ ಭಾಷಾನುವಾದವಲ್ಲ, ಮೂಲದ ಆಳದಲ್ಲಿರುವ ಸೂಚ್ಯ ಸೂಕ್ಷ್ಮ ಧ್ವನ್ಯಾರ್ಥಗಳನ್ನು ಹಿಡಿದಿಡುವ ಕಲೆಗಾರಿಕೆಯೂ ಹೌದು. ಧ್ವನಿಶಕ್ತಿಯನ್ನೇ ಅವಲಂಬಿಸಿ ಮಾಡುವ ಅನುವಾದ ಕಷ್ಟಕರವೇ. ಉತ್ತಮ ಅನುವಾದವು ಮೂಲಕವಿತೆಯ ಶರೀರವನ್ನು ಮಾತ್ರವಲ್ಲ, ಅದರ ಆತ್ಮವನ್ನು ಅರ್ಥೈಸುವ ಕ್ರಿಯೆಯೂ ಆಗಿರುತ್ತದೆ. ಬಿ.ಆರ್.ಎಲ್. ಅವರ ಕವಿತೆಗಳು ಈ ದೃಷ್ಟಿಯಿಂದ ಮೂಲ ಕವಿತೆಗಳ ಅಂತಃಸತ್ವವನ್ನು ಹೀರಿಕೊಂಡೇ ಕನ್ನಡದ ಕನ್ನಡಿಯಲ್ಲಿ ಪ್ರತಿಬಿಂಬಿತವಾಗಿವೆ. ಕವಿತೆಗಳ ಆಯ್ಕೆ, ಅನುವಾದ, ಆಕೃತಿ ಹಾಗೂ ಆಶಯದ ದೃಷ್ಟಿಯಿಂದ ಕನ್ನಡದ್ದೇ ಮೂಲ ಅನ್ನಿಸುವಷ್ಟು ಸತ್ವಯುತವಾಗಿವೆ.



ಮನಸು ಬಾವಲಿಯಂತೆ
(ಅನುವಾದಿತ ಕವಿತೆಗಳು)
ಲೇ: ಬಿ.ಆರ್.ಲಕ್ಷ್ಮಣರಾವ್
ಪ್ರ: ಧಾತ್ರಿ ಪ್ರಕಾಶನ
ಸಂ: 9900580394
ಪು: 128 ₹130

ವಿಮರ್ಶೆ

ಇಲ್ಲಿನ ಹಲವಾರು ಕವಿತೆಗಳು, ಕವಿ ಹಾಗೂ ಕವಿತೆ, ಕಲಾವಿದ ಹಾಗೂ ಕಲಾಕೃತಿಗಳ ನಡುವಿನ ಅವಿನಾಭಾವ ಸಂಬಂಧಗಳ ಎಳೆಗಳನ್ನು ಬಿಡಿಸಿಡುತ್ತವೆ. ಉದಾಹರಣೆಗೆ ಜಾಯ್ಸ್ ಕಿಲ್ಮರ್‌ನ ಇಂಗ್ಲಿಷ್ ಕವಿತೆಯ ಅನುವಾದ 'ಮರ' ಕವಿತೆ. ಇಲ್ಲಿ ತನ್ನ ಕವಿತೆಗೆ ವಸ್ತುವಾಗುವ ಮರದ ಸೃಷ್ಟಿಯ ಹಿಂದಿರುವ ದಿವ್ಯವಾದ ನಿಗೂಢ ರಹಸ್ಯದ ಕುರಿತು ಕವಿಗೆ ಬೆರಗು. ಈ ಮರವು ಕವಿಗೆ ಒಮ್ಮೆ ನೆಲ ತಾಯಿಯ ತುಂಬು ಎದೆಗೆ ಬಾಯಿ ಒತ್ತಿದ ಹಸಿದ ಮಗುವಿನಂತೆ, ಇನ್ನೊಮ್ಮೆ ಹರಡಿದ ಕೇಶರಾಶಿಯಲ್ಲಿ ಹಕ್ಕಿ ಗೂಡುಗಳನ್ನು ಜಡೆಬಿಲ್ಲೆ ಮಾಡಿಕೊಂಡ ಹೆಣ್ಣಂತೆ, ಮತ್ತೊಮ್ಮೆ ಹಸಿರು ಕೈಗಳನ್ನು ನೀಡಿ ಮೊಗವೆತ್ತಿ ದೇವರನ್ನು ಪ್ರಾರ್ಥಿಸುವ ಭಕ್ತನಂತೆ, ಯೋಗಿಯಂತೆ ಕಾಣಿಸುತ್ತ ಬೇರಿಂದ ಆಗಸದ ಕಡೆ ಚಲಿಸುತ್ತದೆ. ಕೊನೆಯಲ್ಲಿ 'ನನ್ನಂಥ ಕತ್ತೆ ಬೇಕಾದರೂ ಕವಿತೆ ಕಟ್ಟುತ್ತೆ, ಇಂಥ ಮರ ಮಾಡಲು ಆ ದೇವರಿಗಲ್ಲದೆ ಮತ್ತೆ ಯಾರಿಗಾಗುತ್ತೆ?' ಎನ್ನುವ ಮೂಲಕ ಕವಿತೆ ಕಟ್ಟುವುದಲ್ಲ ಸಹಜ ಹುಟ್ಟು ಎಂಬುದರ ಮೇಲೆ ಬೆಳಕು ಬೀರುತ್ತದೆ.

ವಿಶೇಷವೆಂದರೆ 'ಕೆಲಸ' ಎಂಬ ಕವನದಲ್ಲಿ 'ಕೆಲಸಕ್ಕೆಂದು ಹೊರಟ ವ್ಯಕ್ತಿ ವಸಂತದ ಮರದಂತೆ ಜೀವಂತ' ಎಂಬ ಉಪಮೆ ಬಳಸುತ್ತಾನೆ ಕವಿ. ಇಲ್ಲಿರುವುದು ಎಲೆಗಳನ್ನು ಹೊರಚಿಮ್ಮುತ್ತ ತನ್ನ ಹಸಿರು ತಾನೇ ಹೊತ್ತ ಮರವು ಬಿಳಿಬಟ್ಟೆ ತೊಟ್ಟು ನೇಯುವ ಕೆಲಸದಲ್ಲೇ ತಲ್ಲೀನನಾಗಿ ಮೈಮರೆತ ನೇಕಾರನ ಪ್ರತಿಮೆ. ಇದು 'ಮರ' ಕವನದ್ದೇ ಇನ್ನೊಂದು ರೂಪ ಅನಿಸುತ್ತದೆ. 'ಖುಕ್ಕುಗಳು' ಎಂಬ ಕವನ ಕಾವ್ಯದ ವಸ್ತುಗಳ ಕುರಿತು ಆಶಯದ ಕುರಿತು, 'ಚೆಲುವು' ಕವಿತೆಯು ಕಾವ್ಯದ ಹುಟ್ಟಿಗೆ ಬೇಕಾದ ಸೌಂದರ್ಯ ಆಸ್ವಾದನೆಯ ಕುರಿತು ಮಾತನಾಡುತ್ತವೆ. 'ಕಾಗದದ ನಕ್ಷತ್ರಗಳು', 'ಹುಲ್ಲು', 'ಸುಳ್ಳುಗಾರರು', 'ಪ್ರತಿಬಿಂಬ', 'ಉಗ್ಗು' ಕವಿತೆಗಳು ಕವಿ ಅಥವಾ ಕಲಾವಿದನ ಸಹಜ ಸೃಜನಶೀಲ ಸೃಷ್ಟಿಕ್ರಿಯೆಯ ವಿವಿಧ ಆಯಾಮಗಳನ್ನು ಅರಿಯಲು, ಬಿ.ಆರ್.ಎಲ್. ಅವರ ಅನುವಾದದ ಸ್ವರೂಪವನ್ನು. ತಿಳಿಯಲು ಸಹಕಾರಿಯಾಗಿವೆ.

ಬಿ.ಆರ್.ಎಲ್. ಅವರು ನವ್ಯ ಕಾವ್ಯವು ಉತ್ತುಂಗ ಸ್ಥಿತಿಯಲ್ಲಿದ್ದಾಗ ಬರೆಯಲು ಆರಂಭಿಸಿದವರು. ನವ್ಯವನ್ನು ಪ್ರಭಾವಿಸಿದ ಯೇಟ್ಸ್, ಆಡೆನ್ ಮುಂತಾದ ಕವಿಗಳ ಕವಿತೆಗಳನ್ನು ಅನುವಾದಿಸಿದ್ದಾರೆ. ಯೇಟ್ಸ್ ಕವಿಯ ಕವನಗಳನ್ನು ಬಹಳಷ್ಟು ಪ್ರಸಿದ್ಧ ಕವಿಗಳೇ ಅನುವಾದಿಸಿದ್ದಾರೆ. ಬಿ.ಆರ್.ಎಲ್ ಅವರು ಅನುವಾದಿಸಿರುವ ಯೇಟ್ಸ್‌ನ 'The Four Ages of Man' ಕವಿತೆಯ ಅನುವಾದ 'ಮನುಷ್ಯನ ನಾಲ್ಕು ವಯೋಮಾನಗಳು' ಕವಿತೆಯನ್ನು ಮೂಲದ ಪಕ್ಕದಲ್ಲಿಟ್ಟು ನೋಡಿದಾಗ ಅನುವಾದದ ಸೊಗಸು ಗೊತ್ತಾಗುತ್ತದೆ. ಉದಾಹರಣೆಗೆ ಈ ಕವಿತೆಯ ಆರಂಭದ ನಾಲ್ಕು ಸಾಲುಗಳನ್ನು ಗಮನಿಸಿದರೆ;

> He with body waged a fight,
> But body won; it walks upright,
>
> Then he struggled with the heart,
> Innocence and peace depart

ಈ ಮೊದಲ ಎರಡು ದ್ವಿಪದಿಗಳ ಅನುವಾದ ಹೀಗಿದೆ;

> ಯುದ್ಧ ಹೂಡಿದ ಅವನು ದೇಹದ ವಿರುದ್ಧ
> ದೇಹ ಗೆದ್ದಿತು, ಎದೆ ಸೆಟೆಸಿ ನಡೆಯಿತು.
>
> ಆ ಬಳಿಕ ಹೋರಾಡಿದ ಹೃದಯದ ವಿರುದ್ಧ
> ಬಿಟ್ಟು ಹೊರಟವು ಅವನ ಮುಗ್ಧತೆ, ಶಾಂತಿ

ನಾಲ್ಕು ದ್ವಿಪದಿಗಳನ್ನು ಹೊಂದಿರುವ ಈ ಕವಿತೆಯು ದ್ವಿ ಪಾದಗಳ ಮನುಷ್ಯನು ನಾಲ್ಕು ವಯೋಮಾನದಲ್ಲಿ ಕಾಣುವ ಶರೀರ ಹಾಗೂ ಕಾಣದ ಮನಸ್ಸನ್ನು ಹೊತ್ತು ಸಾವಿನ ವಿರುದ್ಧ ನಡೆಸುವ ಜೀವನ ಹೋರಾಟದ ಯಾನ. ಮೂಲ ಕವಿತೆಯ ಲಯ, ಗತಿ, ಶೃತಿ, ಧ್ವನಿ ಕೆಡದಂತೆ ಕವಿತೆಯನ್ನು ಮುಟ್ಟಿಸುವ ಕವಿಯ ಕ್ರಿಯೆ ಇಲ್ಲಿ ನಡೆದಿರುವುದನ್ನು ಗಮನಿಸಬಹುದು.

ಬೇರೆ ಬೇರೆ ಕಾಲಘಟ್ಟದ, ಬೇರೆ ಬೇರೆ ದೇಶ - ಭಾಷೆಗಳ ಕವಿಗಳಾದ ಜಾಯ್ಸ್ ಕಿಲ್ಮರ್, ಡಿ.ಎಚ್. ಲಾರೆನ್ಸ್, ವಾಸ್ಕೊ ಪೋಪ, ರಾಬರ್ಟ್ ಬರ್ನ್ಸ್, ಬ್ರೆಕ್ಟ್, ಪಿತಿಕಾ ನತೂಲಿ, ಕ್ಲಾರಿಬೆಲ್ ಅಲೆಗ್ರಿಯ, ಜಾನ್ ಡನ್, ಎಮಿಲಿ ಡಿಕನ್ಸನ್ ಮುಂತಾದ ಜಗತ್ಪ್ರಸಿದ್ಧರ ಕವಿತೆಗಳ ಜತೆಗೆ ನಮ್ಮ ಹಲವು ಭಾರತೀಯ ಭಾಷೆಗಳ ಕವಿಗಳ ಕವಿತೆಗಳನ್ನೂ ಅನುವಾದಿಸಿದ್ದಾರೆ. ಪ್ರಕೃತಿ, ಶೋಷಣೆ, ಸಮಾಜವಾದ, ಪ್ರೀತಿ, ವಿರಹ, ನೋವು, ಸಾವು... ಮನುಷ್ಯರನ್ನು ಮಿಡಿಯುವ, ಕಾಡುವ ಸಂಗತಿಗಳನ್ನೇ ವಸ್ತುವಾಗಿರುವ ಕವನಗಳನ್ನು ಅನುವಾದ ಮಾಡುವ ಮೂಲಕ ಅವುಗಳ ವಸ್ತು, ಅನುಭವ, ಅಭಿವ್ಯಕ್ತಿ, ಧೋರಣೆಯು ನಮ್ಮದೇ ಆಗುವಂತೆ ಮಾಡಿದ್ದಾರೆ.

'ಸಾವಿರದೊಂದು ದೈವ'ಗಳ ಜಗತ್ತು

ಕರಾವಳಿಯ ಸಾವಿರದೊಂದು ದೈವಗಳು
–ಒಂದು ಐತಿಹಾಸಿಕ, ಸಾಂಸ್ಕೃತಿಕ, ವಿಶ್ಲೇಷಣಾತ್ಮಕ ನೋಟ
ಲೇ: ಲಕ್ಷ್ಮೀ ಜಿ. ಪ್ರಸಾದ್
ಪ್ರ: ಮಾತೃಶ್ರೀ ಪ್ರಕಾಶನ, ಬೆಂಗಳೂರು
ಸಂ: 9480516684
ಪು: 1,006 ₹2,000

ತುಳುನಾಡಿನಲ್ಲಿ ಅಥವಾ ಕರಾವಳಿ ಭಾಗದಲ್ಲಿ (ಕರ್ನಾಟಕ–ಕೇರಳ) ದೇವರಿಗಿಂತ ದೈವಗಳ ಆರಾಧನೆ ಹೆಚ್ಚು. ಇದು ತುಳು ಸಂಸ್ಕೃತಿಯ ಬಹುಮುಖ್ಯ ಭಾಗವೂ ಹೌದು. ಹಾಗೆಂದು ಎಷ್ಟು ದೈವಗಳ ಆರಾಧನೆ ನಡೆಯುತ್ತದೆ ಎಂದು ಪ್ರಶ್ನಿಸಿದರೆ ಇದಮಿತ್ಥಂ ಎಂದು ಉತ್ತರಿಸಲು ಸಾಧ್ಯವಿಲ್ಲ. ಹೀಗಾಗಿಯೇ ಇಲ್ಲಿ 'ಸಾರತ್ತೊಂಜಿ ದೈವೊಲು' (ಸಾವಿರದ ಒಂದು ದೈವಗಳು) ಎಂಬ ವಾಡಿಕೆ ಮಾತಿದೆ. ಈ ವಾಡಿಕೆ ಮಾತಿಗೆ ಪೂರಕವಾಗಿ ಡಾ.ಲಕ್ಷ್ಮೀ ಜಿ. ಪ್ರಸಾದ್ ಅವರ 'ಕರಾವಳಿಯ ಸಾವಿರದೊಂದು ದೈವಗಳು–ಒಂದು ಐತಿಹಾಸಿಕ, ಸಾಂಸ್ಕೃತಿಕ, ವಿಶ್ಲೇಷಣಾತ್ಮಕ ನೋಟ' ಕೃತಿಯು ಮೂಡಿಬಂದಿದೆ.

ಭೂತಾರಾಧನೆ ಬಹಳ ಸಂಕೀರ್ಣ. ಇದರ ಅರಿವಿಲ್ಲದೇ ಅಧ್ಯಯನ ಸುಲಭವಲ್ಲ. ಈ ಹಿಂದೆ 'ಅಣಿ ಅರಳದ ಸಿರಿ ಸಿಂಗಾರ' ಪುಸ್ತಕದಲ್ಲಿ 1,435 ದೈವಗಳ ಪಟ್ಟಿ ಮಾಡಿ, ಕೆಲವು ಅಪರೂಪದ ದೈವಗಳ, ವಿಶಿಷ್ಟ ಆರಾಧನೆಯ ಬಗ್ಗೆ ಲಕ್ಷ್ಮೀ ಅವರು ವಿವರವನ್ನು, ಈ ಹೊಸ ಕೃತಿಯಲ್ಲಿ ಅದರ ವಿಸ್ತರಣೆಯಾಗಿ, ಸಮಗ್ರ ಮಾಹಿತಿಯನ್ನು ಹೊತ್ತು ತಂದಿದ್ದಾರೆ.

ಕರಾವಳಿಯಲ್ಲಿ ಆರಾಧನೆ ಇರುವ 2,330 ದೈವಗಳ ಹೆಸರನ್ನು ಇಲ್ಲಿ ಪಟ್ಟಿ ಮಾಡಲಾಗಿದೆ. ಇದರಲ್ಲಿ ಕೊಡಗು ಸೇರಿದಂತೆ ಕಾರವಾರದಿಂದ ಕೊಟ್ಟಾಯಂವರೆಗಿನ ತುಳು, ಕನ್ನಡ, ಮಲಯಾಳ ಹಾಗೂ ಕೊಡವ ಪರಿಸರದ ದೈವ ನರ್ತಕ ಕಲಾವಿದರು ಹೇಳುವ ಪಾಡ್ದನಗಳನ್ನು, ಐತಿಹ್ಯಗಳನ್ನು ಮತ್ತು ಇತಿಹಾಸದ ಆಕರಗಳನ್ನು ಆಧರಿಸಿ 1,228 ದೈವಗಳ ಮಾಹಿತಿ ಸಂಗ್ರಹಿಸಿ, ವಿಶ್ಲೇಷಿಸಲಾಗಿದೆ. ಕಾಡ್ಯನಾಟ, ಪಾಣರಾಟ, ಸರ್ಪಂಕಳಿ, ಸರ್ಪಂತುಳ್ಳಲ್, ನಾಗಮಂಡಲಗಳಲ್ಲಿ ಆರಾಧನೆ ಪಡೆಯುವ ದೈವಗಳ ಸಂಕ್ಷಿಪ್ತ ಮಾಹಿತಿಯೂ ಇದರಲ್ಲಿದೆ. ಜೊತೆ ಅಪರೂಪದ ದೈವಗಳ ಫೋಟೊಗಳೂ ಇಲ್ಲಿವೆ. ಪೊಲೀಸ್ ವೇಷದಲ್ಲಿರುವ 'ಪೊಲೀಸ್ ತೆಯ್ಯಂ', ಬ್ರಾಹ್ಮಣ ವೇಷಧಾರಿ 'ಕಚ್ಚೆಭಟ್ಟ', ಅರಬ್ಬಿ ಭೂತ, ಶತ್ರು ರಾಷ್ಟ್ರದ ಸೇನೆಯ ಕೈಗೆ ಸಿಕ್ಕು ಗರೊಡಿಗೆ ಮಣೆ ಮಂಚದ ಹರಕೆ ಹೇಳಿ ತಪ್ಪಿಸಿಕೊಂಡು ಬಂದ 'ಮಿಲಿಟ್ರಿ ಅಜ್ಜ', ಒಂದು ಕಣಜದಷ್ಟು ಸೀಯಾಳ, ಹೊದಳ್ಳನ್ನು ಕೊಟ್ಟರೂ ಸಾಕಾಗದ 'ಬಲ್ಲಮಂಜತ್ತಾಯ' ಮುಂತಾದ ಹಿಂದೆಂದೂ ಕೇಳದ ಅಪರೂಪದ ದೈವಗಳ ಮಾಹಿತಿಯನ್ನು ಕೃತಿ ಒಳಗೊಂಡಿದೆ.

ಮೊದಲ ಓದು

ಕಾಸರಗೋಡು ಜಿಲ್ಲೆಯ ಕೋಳ್ಯೂರಿನಲ್ಲಿ ಜನಿಸಿದ ಲಕ್ಷ್ಮೀ ಅವರು ಪ್ರಸ್ತುತ ಬೆಂಗಳೂರಿನಲ್ಲಿ ಕನ್ನಡ ಉಪನ್ಯಾಸಕಿ. ತುಳು ಸಂಸ್ಕೃತಿ ಕುರಿತು ಎಂ.ಫಿಲ್ ಹಾಗೂ ಎರಡು ಡಾಕ್ಟರೇಟ್ ಪದವಿ ಪಡೆದ ಲಕ್ಷ್ಮೀ ಅವರು ದೈವಾರಾಧನೆಯ ಬಗ್ಗೆ ಕಳೆದ 20 ವರ್ಷಗಳಿಂದ ಹೆಚ್ಚಿನ ಕ್ಷೇತ್ರ ಕಾರ್ಯ ಮಾಡಿದ ಅನುಭವವುಳ್ಳವರಾಗಿದ್ದಾರೆ. ತುಳುನಾಡಿನ ದೈವ ಭೂತಗಳ ಕುರಿತಾಗಿ ಎ.ಸಿ.ಬರ್ನೆಲ್, ಡಾ.ಬಿ.ಎ.ವಿವೇಕ ರೈ, ಡಾ.ಕೆ.ಚಿನ್ನಪ್ಪಗೌಡ, ರಘುನಾಥ ಎಂ,ವರ್ಕಾಡಿ ಮುಂತಾದವರು ಬರೆದ ಲೇಖನ, ಕೃತಿಗಳಲ್ಲಿ ಸುಮಾರು ಮುನ್ನೂರೈವತ್ತು ನಾಲ್ನೂರು ದೈವಗಳ ಮಾಹಿತಿ ಮೊದಲೇ ದಾಖಲಾಗಿದೆ. ಈ ಅಧ್ಯಯನಕಾರರು ದಾಖಲಿಸಿರುವ ಮಾಹಿತಿಗಳನ್ನೊಳಗೊಂಡೇ ಲಕ್ಷ್ಮೀ ತಮ್ಮ ಅಧ್ಯಯನದ ಸೌಧವನ್ನು ಬೃಹದಾಗಿ ನಿರ್ಮಿಸಿದ್ದಾರೆ. ಸ್ವಂತ ಅಧ್ಯಯನದಿಂದ ಉಳಿದ ಎಲ್ಲ ದೈವಗಳ ಮಾಹಿತಿಯನ್ನು ಸಂಗ್ರಹಿಸಿದ್ದಾರೆ.

ಚಾಮುಂಡಿ ಮತ್ತು ಸೇರಿಗೆ ದೈವಗಳು, ಗುಳಿಗ ಮತ್ತು ಸೇರಿಗೆ ದೈವಗಳು, ಬ್ರಾಹ್ಮಣ, ಮುಸ್ಲಿಂ ಮೂಲದ ದೈವಗಳು ಹೀಗೆ ವಿಷಯದ ಅಧ್ಯಯನಕ್ಕೆ ಅನುಕೂಲವಾಗುವಂತೆ ಮುನ್ನೂರ ಹದಿನೈದು ಅಧ್ಯಾಯಗಳಲ್ಲಿ ವಿವರಣೆಯನ್ನು ನೀಡಲಾಗಿದೆ.

ಮಾತು–ಕೃತಿಗೆ ಜೀವದುಂಬುವ ಮಾತೃಪ್ರಯತ್ನ

ರಘುನಾಥ ಚ.ಹ.

ಸಮಾಜಶಾಸ್ತ್ರೀಯ ಅಳತೆಪಟ್ಟಿಗಳ ಮೂಲಕ ಕೃತಿಯನ್ನು ಬಗೆಯುವ ಹಾಗೂ ಕೃತಿಯ ಸಾಧ್ಯತೆಗಳೊಂದಿಗೆ ಲೇಖಕನ ಜಾತಿಯನ್ನು ತಳಕು ಹಾಕುವ ಒಲವುಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಪ್ರಕಟವಾಗಿರುವ ತುಂಬಾಡಿ ರಾಮಯ್ಯನವರ ಕೃತಿ 'ಓದೋರಂಗ' – ಪೂರ್ವಗ್ರಹಗಳನ್ನೆಲ್ಲ ಮರೆತು ಓದಿರಿ ಎಂದು ಸಹೃದಯರಿಗೆ ನೀಡುತ್ತಿರುವ ಕರೆಯಂತಿದೆ.

'ಓದೋರಂಗ' ಕನ್ನಡಿಗರೆಲ್ಲ ಸಂಭ್ರಮಿಸಬೇಕಾದ ಕೃತಿ. ಕನ್ನಡದ ಚೆಲುವು ಹಾಗೂ ಧ್ವನಿಶಕ್ತಿಯನ್ನು ಓದುಗನ ಅರಿವಿಗೆ ತಂದು ಚಕಿತಗೊಳಿಸುವ ಈ ಕಲಾಕೃತಿ, ಬದುಕಿನ ಸಾರ್ಥಕ ಗಳಿಗೆಗಳು ಯಾವುವು ಎನ್ನುವುದನ್ನೂ ನಮಗೆ ಕಾಣಿಸುತ್ತದೆ. ಭಾಷೆ ಮತ್ತು ಬದುಕು – ಎರಡರ ಘನತೆಯನ್ನೂ ಅನುಭವವೇದ್ಯವಾಗಿಸಲು ಸಾಧ್ಯವಾಗಿರುವುದು ಕೃತಿಯ ಹೆಚ್ಚುಗಾರಿಕೆ.

'ಮಣೆಗಾರ', 'ಮುತ್ತಿನ ಜೋಳ' ಪುಸ್ತಕಗಳ ಮೂಲಕ ಸಹೃದಯರ ಪ್ರೀತಿ–ಗೌರವಕ್ಕೆ ಪಾತ್ರರಾಗಿರುವ ತುಂಬಾಡಿ ರಾಮಯ್ಯನವರ ಮೂರನೇ ಕೃತಿ 'ಓದೋರಂಗ'. ಲೇಖಕರು ತಮ್ಮ ಹೊಸ ಕೃತಿಯನ್ನು ಕಾದಂಬರಿ ಎಂದು ಕರೆದಿದ್ದಾರೆ. ಕಾದಂಬರಿಯೊಂದು ಕೊಡುವ ಜೀವನದರ್ಶನ ಮತ್ತು ಲೋಕದರ್ಶನಗಳ ಕಾರಣದಿಂದಾಗಿ 'ಓದೋರಂಗ' ಕೃತಿಯನ್ನು ಕಾದಂಬರಿ ಎನ್ನಬಹುದು. ಆದರೆ, ಕಾದಂಬರಿಯ ಹರಹನ್ನು ಮೀರಿ, ಕಥೆ–ಕಾವ್ಯದ ಸ್ವರೂಪವನ್ನೂ ಕೃತಿ ತನ್ನದಾಗಿಸಿಕೊಂಡಿದೆ. ಮನುಷ್ಯಕುಲದ ತವಕತಲ್ಲಣಗಳನ್ನು ಹೇಳಲು ಕಥೆ–ಕಾವ್ಯ–ಕಾದಂಬರಿ–ಪುರಾಣಗಳ ಸಾಧ್ಯತೆಗಳನ್ನೆಲ್ಲ ರಾಮಯ್ಯನವರು ಬಳಸಿಕೊಂಡಿದ್ದಾರೆ. ಮೇಲ್ನೋಟಕ್ಕೆ ಪರಸ್ಪರ ಸಂಬಂಧವಿಲ್ಲದಂತೆ ಕಾಣಿಸುವ ಹಲವು ಕಥನಗಳು ಇಲ್ಲಿದ್ದು, ಅವುಗಳೆಲ್ಲ ಮತ್ತೆ ಮತ್ತೆ ಸಂಧಿಸುತ್ತಿರುವುದು ಹಾಗೂ ಒತ್ತಿಹೇಳುತ್ತಿರುವುದು ಒಂದೇ ಸಂಗತಿಯನ್ನು – ಒಂದು ಜೀವ ಮತ್ತೊಂದು ಜೀವದೊಂದಿಗೆ ಹೊಂದಿರಬೇಕಾದ ಪ್ರೀತಿ–ಗೌರವವನ್ನು. 'ಸಂಬಂಜ ಅನ್ನೋದು ದೊಡ್ಡದು ಕನಾ' ಎನ್ನುವ ದೇವನೂರರ ಕಾಣ್ಕೆಯ ಮಾನವೀಯತೆಯನ್ನೇ ರಾಮಯ್ಯನವರ ಕಥನಗಳೂ ಪಿಸುಗುಡುತ್ತಿವೆ.

ಕೃತಿಯ ಆಶಯ ಮೊದಲ ಅಧ್ಯಾಯ 'ಓದೋರಂಗ'ದಲ್ಲಿಯೇ ಸ್ಪಷ್ಟವಾಗಿ ಕಾಣಿಸುತ್ತದೆ. ರಂಗ ಎನ್ನುವ ಜಾಣ ಹುಡುಗ ಇಲ್ಲಿದ್ದಾನಾದರೂ, ಆ ಭಾಗದಲ್ಲಿ ಹೆಚ್ಚಿನ ಅವಕಾಶ ದೊರೆತಿರುವುದು ತಾಯಿಕೋಳಿಯ ಬಾಣಂತನಕ್ಕೆ. ರಂಗನ ತಾಯಿ ತನ್ನ ಮಗಳ ಬಾಣಂತನವನ್ನು ಸಂಭ್ರಮಿಸಿದಷ್ಟೇ ಆಸ್ಥೆಯಿಂದ ಕೋಳಿಯ ಬಾಣಂತನ ನಡೆಸುತ್ತಾಳೆ. ಮೊಟ್ಟೆಗಳು ಮರಿಯಾಗುವ ಸಂಭ್ರಮದಲ್ಲಿ ರಂಗನ ಕುಟುಂಬ ಭಾಗಿಯಾಗುವುದರ ಹಿಂದೆ ವ್ಯಾವಹಾರಿಕ ಲೆಕ್ಕಾಚಾರ ಇಲ್ಲದಿಲ್ಲ; ಆದರೆ, ಆ ಗಣಿತವನ್ನು ಮೀರಿ, ಜೀವಜಗತ್ತು ಪರಸ್ಪರ ಸ್ಪಂದಿಸುವ ಬಗೆಯನ್ನು 'ಓದೋರಂಗ' ಆರ್ದ್ರವಾಗಿ ಕಟ್ಟಿಕೊಡುತ್ತದೆ.



ಓದೋರಂಗ
ಲೇ: ತುಂಬಾಡಿ ರಾಮಯ್ಯ
ಪ್ರ: ಭೂಮಿ – ದಿ ಸೆಂಟರ್ ಫಾರ್ ಆರ್ಟ್ ಸ್ಟಡೀಸ್, ಬೆಂಗಳೂರು – 109.
ಫೋನ್: 98441 57982.
ಪು: 172 ₹180

ಕೋಳಿ, ನಾಯಿಗಳ ಪ್ರಾಣಿಜಗತ್ತಿನೊಂದಿಗೆ ಮನುಷ್ಯ ಜಗತ್ತಿನ ತಾಯ್ತನದ ತವಕತಲ್ಲಣಗಳನ್ನೂ ಕೃತಿ ಕಟ್ಟಿಕೊಡುತ್ತದೆ. ಕೋಳಿಯ ಬಾಣಂತನವನ್ನು ಮಾಡುವ ಹೆಣ್ಣು, ತಾನು ಬಸುರಿಯಾದಾಗ ಹೊಟ್ಟೆಗೆ ಅನ್ನವಿಲ್ಲದೆ ಅನುಭವಿಸುವ ಸಂಕಟ ಹಾಗೂ ಆ ನೋವನ್ನು ಮೀರುವ ದಿಟ್ಟತನ ತಾಯಿಯ ಕರುಣೆ–ಧಾರಣಾಶಕ್ತಿಯನ್ನು ಸೂಚಿಸುವಂತಿದೆ. ತಾಯ್ತನದ ಶಕ್ತಿ ಕೃತಿಯಲ್ಲಿ ಮತ್ತೊಮ್ಮೆ ಪ್ರಜ್ವಲಿಸುವುದು 'ಒಂದಾನೊಂದು ಕಾಲದಲ್ಲಿ' ಹಾಗೂ 'ಕದಿರಿಗನುಣ್ಣಿಮೆ' ಅಧ್ಯಾಯಗಳಲ್ಲಿನ ಬೆಳ್ಳಿಯ ಕಥೆಯಲ್ಲಿ. ದೊರೆತನದ ಅಧಿಕಾರದಲ್ಲಿ ಇರುವ ವ್ಯಕ್ತಿಯ ಕಣ್ಣು ಬೆಳ್ಳಿಯ ಮೇಲೆ ಬಿದ್ದಾಗ, ಅವನನ್ನು ಎದುರಿಸುವ ದಾರಿಯರಿಯದೆ, ಬೆಳ್ಳಿಯೊಂದಿಗೆ ಜೀವ ಕಳೆದುಕೊಳ್ಳಲು ಅವಳ ಸಹೋದರರು ನಿರ್ಧರಿಸುತ್ತಾರೆ. ಮಕ್ಕಳ ನಿರ್ಧಾರವನ್ನು ಒಪ್ಪದ ತಾಯಿ, ಮಗಳೊಂದಿಗೆ ಅರ್ಧ ರಾತ್ರಿಯಲ್ಲಿ ಊರು ತೊರೆಯುತ್ತಾಳೆ. ಅಸಹಾಯಕ ಹೆಣ್ಣುಮಕ್ಕಳಿಗೆ ಆಸರೆಯಾಗಿ ನಿಲ್ಲುವುದು ಕದಿರಿಗ ಎನ್ನುವ ಮಣೆಗಾರ. ಸುರಿಮಳೆಯ ಕಗ್ಗತ್ತಲ ಇರುಳಿನಲ್ಲಿ ಗುಡಿಸಲಿನ ಬಾಗಿಲಿನಲ್ಲಿ ಕಾಣಿಸುವ ತಾಯಿಮಗಳು – ಶಿವ ಪೂರ್ಣಪ್ರಮಾಣದ ಹೆಣ್ಣಾಗಿ ಗಿರಿಜೆಯೊಂದಿಗೆ ಬಂದಂತೆ ಕದಿರಿಗನಿಗೆ ಕಾಣಿಸುತ್ತಾರೆ.

ಒಳನೋಟ

ಅಪೂರ್ವ ಕಾವ್ಯಕ್ಷಣವೊಂದರ ಸಾಕ್ಷಾತ್ಕಾರದಂತೆ ಕಾಣಿಸುವ ಆ ಸನ್ನಿವೇಶ, ಜಗತ್ತಿನ ಕೇಡುಗಳಿಗೆಲ್ಲ ಹೆಣ್ಣಿನ ಅಂತಃಕರಣದಲ್ಲಿ ಮದ್ದಿದೆ ಎನ್ನುವುದನ್ನು ಹೇಳುವಂತಿದೆ. ತಾಯಿಮಗಳನ್ನು ನದಿ ದಾಟಿಸಲು ಮುಂದಾಗುವ ಕದಿರಿಗ, ಗೋದಾವರಿಯನ್ನು ಅಕ್ಕನೆಂದು ನಂಬಿ ನದಿಗಿಳಿಯುತ್ತಾನೆ. 'ಅಕ್ಕ, ತಮ್ಮನ ಬಲಿ ಪಡೆದಳೆಂಬ ಅಪ್ರಿಯವಾದ ಸುದ್ದಿ ಯಾರೂ ಕೇಳಬಾರದು. ಅಕ್ಕ ತಮ್ಮನ ಸಂಬಂಧವೆಂದರೆ ಸಾಮಾನ್ಯದ್ದಲ್ಲ, ಅದು ಸ್ಥಿರಸ್ಥಾಯಿಯಾಗಲಿ' ಎಂದು ನುಡಿಯುವ ಅಶರೀರವಾಣಿಯೂ ಸಂಬಂಧಗಳ ಮೌಲ್ಯವನ್ನು ಸ್ಥಿರೀಕರಿಸುತ್ತದೆ. ಅಶರೀರವಾಣಿಯಷ್ಟೇ ಅಲ್ಲ, ಮಾನವೀಯ ಮೌಲ್ಯಗಳ ಪ್ರತಿಪಾದನೆಗಾಗಿ ಲೇಖಕರು ಜಡ ವಸ್ತುಗಳಿಗೆಲ್ಲ ಮಾತು ಕರುಣಿಸಿದ್ದಾರೆ.

ಸಿರಿಯಜ್ಜಿ ಎನ್ನುವ ಕಥೆಗಾರ್ತಿ ಊರುಕೇರಿಗಳನ್ನು ಹೊಕ್ಕು, ಅಲ್ಲಿ ತಾನು ಓಗೊಟ್ಟ ಸುಖದುಃಖಗಳನ್ನೆಲ್ಲ ಕಥೆಯಾಗಿಸಿ ಮಂಗಳೆ ಎನ್ನುವ ಬಾಲಕಿಗೆ ಹೇಳುವ ತಂತ್ರ ಕೃತಿಯಲ್ಲಿದೆ. ರಾಮಯ್ಯನವರ ಈ ನಿರೂಪಣೆಗಳು ಒಂದಾನೊಂದು ಕಾಲದ ರಮ್ಯ ರೋಚಕ ಪ್ರಸಂಗಗಳಾಗಿಯಷ್ಟೇ ಉಳಿಯದೆ, ವರ್ತಮಾನದ ತವಕತಲ್ಲಣಗಳ ಕಥನಗಳೂ ಆಗಿವೆ. ಅನ್ನಕ್ಕೆ–ಅಕ್ಷರಕ್ಕೆ ಹಾತೊರೆಯುವ ದೀನದಲಿತರು ಇಲ್ಲಿದ್ದಾರೆ. ಕಾರ್ಮಿಕರು, ಬಾಲಕಾರ್ಮಿಕರಿದ್ದಾರೆ. ದೊಣ್ಣೆ ಬೀಸುವ ಸಂಘವಿದೆ. ಬಾವುಟಕ್ಕೆ ಕೈಮುಗಿಸಿ, 'ನಾವೆಲ್ಲ ಒಂದು' ಎಂದು ಬಾಯಿಪಾಠ ಮಾಡಿಸಿ, ಹಸಿವಿಗಿಂತ ಧರ್ಮ ಹೆಚ್ಚೆಂಬ ಪಾಠ ಹೇಳುವವರಿದ್ದಾರೆ. ತಾಯಿಯ ಸಾವಿನಲ್ಲಿ ಭಾಗಿಯಾಗಲು ಟಿಕೇಟಿಲ್ಲದೆ ರೈಲಿನಲ್ಲಿ ಪ್ರಯಾಣಿಸುವ ಕೆಂಚಮ್ಮನೆಂಬ ಮಹಿಳೆ ಕ್ಷಣಕ್ಷಣಕ್ಕೂ ಎದುರಿಸುವ ಅವಮಾನ, ಸಂಕಟ, ಹಸಿವುಗಳಿವೆ. ಅವಳ ಪುಟ್ಟ ಮಗಳಿಗೆ ಮಾನವೀಯತೆಯ ರೂಪದಲ್ಲಿ ತಬ್ಬಿಕೊಳ್ಳುವ ಕರುಳಬಳ್ಳಿ ಹಂಗಿಲ್ಲದ ಅಜ್ಜಿಯಿದ್ದಾಳೆ. ಉಸಿರು ನೀಡಬೇಕಾದ ಉದ್ಯಾನವೇ ಉಸಿರುಗಟ್ಟಿ ತನ್ನ ಸಂಕಟವನ್ನು ಹೇಳಿಕೊಳ್ಳುತ್ತ, ಮಹಾನಗರದ ನಾಗರಿಕರ ಬದುಕಿನ ಕಥೆಯನ್ನೂ ಒರೆಯುತ್ತಿದೆ. ಪರಿಸರಪ್ರೀತಿ ಕೃತಿಯುದ್ದಕ್ಕೂ ಜಿನುಗುತ್ತಿದೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಮಹಾಶಯರು ಯಾವಯಾವುದೋ ರೂಪದಲ್ಲಿ ಎದುರಾಗುತ್ತಾರೆ. ಗ್ರಾಮಭಾರತ, ಮಹಾನಗರಗಳ ಭಾರತವನ್ನೊಳಗೊಂಡ ಆಧುನಿಕ ಪುರಾಣ 'ಓದೋರಂಗ'ದಲ್ಲಿ ಸೃಷ್ಟಿಯಾಗಿ, ಆ ಪುರಾಣಕಥನದಲ್ಲಿ ಸಮಕಾಲೀನ ರಾಜಕಾಣಿಗಳೂ ಸಾಂಸ್ಕೃತಿಕ ವ್ಯಕ್ತಿತ್ವಗಳೂ ಪಾತ್ರಗಳಾಗಿದ್ದಾರೆ.

ಆದಿಜಾಂಬವ ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಕಟ್ಟಿಕೊಡುತ್ತಲೇ, ಸಮುದಾಯವೊಂದರ ಸಂಸ್ಕೃತಿಯೂ ಮಾನವೀಯತೆಯೂ ಬೇರೆಬೇರೆಯಲ್ಲ ಎಂದು ಮನಗಾಣಿಸುವುದರಲ್ಲಿ ಈ ಕೃತಿಯ ಸಾರ್ಥಕತೆಯಿದೆ. ಈ ನೆಲದ ಸಂಸ್ಕೃತಿಯ ಆಕರಪತ್ರಗಳು ಎಂದು ನಾವು ಈವರೆಗೆ ನಂಬಿಕೊಂಡು ಬಂದ ಕೃತಿಗಳಷ್ಟೇ ಮಹತ್ವದ ಕಾವ್ಯಗಳು ಈ ಮಣ್ಣಿನಲ್ಲೇ ಅಜ್ಞಾತವಾಗಿದ್ದು, ಅವುಗಳನ್ನು ನಾವು ಗಮನಿಸಬೇಕಾದ ಅಗತ್ಯವನ್ನು ಸಹೃದಯರ ಗಮನಕ್ಕೆ ತರುವುದರಲ್ಲಿ 'ಓದೋರಂಗ'ದ ಯಶಸ್ಸಿದೆ. ಪುರಾಣ ಸ್ಮೃತಿಗಳನ್ನು ಭಾವುಕತೆಗೆ ಸೀಮಿತಗೊಳಿಸದೆ, ಅವುಗಳನ್ನು ಸಮಕಾಲೀನ ಸಂದರ್ಭಕ್ಕೆ ಮುಖಾಮುಖಿಯಾಗಿಸಿ, ಇಂದಿನ ನಮ್ಮ ಬದುಕಿಗೆ ಅಗತ್ಯವಾದುದೇನು ಎನ್ನುವುದರ ಹುಡುಕಾಟದ ರೂಪವಾಗಿ ರಾಮಯ್ಯನವರ ಬರವಣಿಗೆಗೆ ವಿಶೇಷ ಮಹತ್ವವಿದೆ.

ವರ್ತಮಾನದ ಬಿಕ್ಕಟ್ಟುಗಳಿಗೆ ಸೃಜನಶೀಲ ಬರಹಗಾರನೊಬ್ಬನ ಸ್ಪಂದನದ ರೂಪದಲ್ಲೂ ಮುಖ್ಯವೆನ್ನಿಸುವ 'ಓದೋರಂಗ' – ಭಾಷೆ ಮತ್ತು ಬರವಣಿಗೆ ಆರ್ದ್ರತೆ ಕಳೆದುಕೊಳ್ಳುತ್ತಿರುವ ದಿನಗಳಲ್ಲಿ, ಮಾತು–ಕೃತಿಗೆ ಜೀವಶಕ್ತಿ ತುಂಬುವ ಮಾತೃಹೃದಯದ ಪ್ರಯತ್ನದಂತಿದೆ.

ಕಜಾಕರ ಸಂಸ್ಕೃತಿಯ ದರ್ಶನ

ಮೂರು ದಶಕಗಳ ಕಾಲ ರಷ್ಯಾದಲ್ಲಿ ನೆಲೆಸಿದ್ದ ಕನ್ನಡದ ಲೇಖಕ ಪ್ರೊ.ಎಚ್.ಎಸ್. ಹರಿಶಂಕರ್ ಅವರು ಲೆವ್ ತೊಲ್‌ಸ್ತೋಯ್ (ಲಿಯೊ ಟಾಲ್‌ಸ್ಟಾಯ್) ಅವರ 'ಕಜಕಿ' (The Cossacks) ಕೃತಿಯನ್ನು ನೇರವಾಗಿ ರಷ್ಯನ್ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದ ಅನನ್ಯ ಕೃತಿ 'ಕಜಾಕರು'. ಲೇಖಕರು ಇದನ್ನು ನೀಳ್ಗತೆ ಎಂದು ಕರೆದಿದ್ದರೂ ಗಾತ್ರದಲ್ಲಿ ಕಾದಂಬರಿಯ ಸ್ವರೂಪವನ್ನೇ ಪಡೆದುಕೊಂಡಿದೆ. ರಷ್ಯನ್ ಮತ್ತು ಉಕ್ರೇನ್‌ನ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿದ ಕಜಾಕರ ಕಥೆ ಇದು. ಸೀಸರ್ ನದಿಯ ಕೆಳದಂಡೆ ದಾನ್ ಮತ್ತು ತೇರಿಕ್ ಮುಖಜ ಭೂಮಿ ಅವರ ನೆಲೆಯಾಗಿತ್ತು.

ಕಥಾನಾಯಕ ಒಲೇನಿನ್, ಕಜಾಕರ ಹಳ್ಳಿಯಲ್ಲಿ ನೆಲೆಸಿದಾಗ ಅವನು ಆ ಸಮುದಾಯದ ಯುವತಿ ಮರ್ಯಾಳ ಮೇಲೆ ಮೋಹಿತನಾಗುತ್ತಾನೆ. ಇವರಿಬ್ಬರ ಪ್ರೇಮದ ಸುತ್ತ ಬೆಳೆಯುತ್ತಾ ಹೋಗುವ ಕಥೆ ಕಜಾಕರ ಸಂಸ್ಕೃತಿ, ಸಂಪ್ರದಾಯಗಳನ್ನೂ ಅನಾವರಣಗೊಳಿಸುತ್ತಾ ಹೋಗುತ್ತದೆ. ಕಥೆಯ ಅಂತ್ಯ ಸದಾ ಮನಸ್ಸಿನಲ್ಲಿ ಉಳಿದು, ಕಾಡುವಂತಿದೆ. ಕೃತಿಯಲ್ಲಿ ಬರುವ ಪ್ರಕೃತಿಯ ವರ್ಣನೆ, ವಿವರಗಳಂತೂ ಬಲು ಅನನ್ಯವಾಗಿವೆ.

ಕಜಾಕರು
ಲೇ: ಲೆವ್ ತೊಲ್‌ಸ್ತೋಯ್
ಕನ್ನಡಕ್ಕೆ: ಪ್ರೊ.ಎಚ್.ಎಸ್. ಹರಿಶಂಕರ್
ಪ್ರ: ಮಹರ್ಷಿ ಪ್ರಕಾಶನ
ಸಂ: 9448759815
ಪು: 252 ₹260

ಒಂದರ್ಥದಲ್ಲಿ ಇದು ಟಾಲ್‌ಸ್ಟಾಯ್ ಅವರ ಆತ್ಮಕಥೆಯೇ ಇರಬಹುದೆಂದು ಹಲವು ವಿಮರ್ಶಕರು ಅಭಿಪ್ರಾಯಪಟ್ಟಿರುವುದು ಇಲ್ಲಿ ಉಲ್ಲೇಖನಾರ್ಹ ಸಂಗತಿ. 'ಸತ್ಯಾಸತ್ಯಗಳು ಏನೇ ಇದ್ದರೂ ಟಾಲ್‌ಸ್ಟಾಯ್ ಅವರು ಕಜಾಕರೊಡನೆ ಹಲವಾರು ತಿಂಗಳು ಕಳೆದಿರುವುದು ಐತಿಹಾಸಿಕ ಸತ್ಯ' ಎಂದು ಅನುವಾದಕರು ಹೇಳಿದ್ದಾರೆ. ರಷ್ಯಾದಲ್ಲಿ ಅವರಿಗೆ ಸಿಕ್ಕಿರಬಹುದಾದ ಟಾಲ್‌ಸ್ಟಾಯ್ ಕುರಿತ ಅಗಾಧ ಸಾಹಿತ್ಯದ ಓದಿನಿಂದ ಅವರು ಈ ಮಾಹಿತಿ ಹಂಚಿಕೊಂಡಿರಲಿಕ್ಕೆ ಸಾಕು. ರಷ್ಯನ್‌ನಿಂದ ನೇರವಾಗಿ ಬಂದಿದ್ದರೂ ಭಾಷೆಯ ಮಿತಿಗಳಾವುವೂ ಕಾಡದೆ ಸುಲಲಿತವಾಗಿ ಕನ್ನಡಕ್ಕೆ ದಾಟಿಕೊಂಡು ಬಂದಿದೆ.

ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ಕನ್ನಡದ ರಾಜಪುರೋಹಿತ' ಲೇಖನವನ್ನು ಬರೆದಿದ್ದು ಪ್ರೊ. ದುಷ್ಯಂತ ನಾಡಗೌಡ. ಕಣ್ತಪ್ಪಿನಿಂದ ಲೇಖಕರ ಹೆಸರು ಬಿಟ್ಟುಹೋಗಿತ್ತು. – ಸಂ.

ಪುನೀತ್ ಮಿಂಚಿ ಮಾಯವಾದ ಮಂದಹಾಸ

12ನೇ ಪುಟದಿಂದ...

'ವಸಂತಗೀತ'ದಲ್ಲಿ (1980) ಕುಣಿತ, ಹೊಡೆದಾಟಗಳಲ್ಲಿ ಮಿಂಚಿದ ನಾಲ್ಕು ವರ್ಷದ ಬಾಲಕನ ಆಯಸ್ಕಾಂತೀಯ ಕಣ್ಣುಗಳು ಮೋಡಿಹಾಕಿದ್ದವು. 'ಭೂಮಿಗೆ ಬಂದ ಭಗವಂತ' (1981) ಚಿತ್ರದಲ್ಲಿ ದರ್ಶನವೀಯುವ ಕೃಷ್ಣನಾಗಿ ಅವತರಿಸಿದಾಗ ಜನತೆ ತಮ್ಮ ಮನೆಯ ಬಾಲಕನೊಬ್ಬನಿಗೆ ಕೃಷ್ಣನ ವೇಷ ತೊಡಿಸಿ ಸಂತಸಪಟ್ಟಂತೆ ಸ್ವೀಕರಿಸಿದರು.

ಪುನೀತ್ ಅವರ ಗಂಭೀರ ಅಭಿನಯ ಆರಂಭವಾದದ್ದು ಭಾಗ್ಯವಂತ (1981) ಚಿತ್ರದಿಂದ. ಬಿ.ಎಸ್. ರಂಗಾ ಅವರು ಹಿಂದೆ ಇತರ ಭಾಷೆಗಳಲ್ಲಿ ತೆಗೆದಿದ್ದ ಕತೆಯನ್ನು ಪುನೀತ್‌ಗಾಗಿಯೇ ಮರುರೂಪಿಸಿದರು. ತಬ್ಬಲಿ ಬಾಲಕನ ಸಂಕಟ ಮತ್ತು ಸಾಹಸಗಳನ್ನು ಪುನೀತ್ ಸಹಜವೆಂಬಂತೆ ನಿರ್ವಹಿಸಿದರು. ಜೊತೆಗೆ ಹಾಡುವ ಸಾಮರ್ಥ್ಯವೂ ಹೊರಬಂತು. 'ಹೊಸಬೆಳಕು' (1982) ಚಿತ್ರದಲ್ಲಿ ಮಹತ್ವದ ಪಾತ್ರವಿರದಿದ್ದರೂ ಅದೇ ವರ್ಷ ಬಿಡುಗಡೆಯಾದ 'ಚಲಿಸುವ ಮೋಡಗಳು' ಚಿತ್ರದ ತುಂಟಹುಡುಗನಾಗಿ, 'ಕಾಣದಂತೆ ಮಾಯವಾದನು' ಎಂದು ಹಾಡುತ್ತಾ ಪ್ರೇಕ್ಷಕರ ಎದೆಗೆ ಲಗ್ಗೆ ಹಾಕಿದ್ದರು. 'ಭಕ್ತ ಪ್ರಹ್ಲಾದ' (1983) ತಂದೆ ಮಗನ ಜುಗಲ್‌ಬಂದಿಯಾದರೆ, 'ಎರಡು ನಕ್ಷತ್ರಗಳು' (1983), 'ಯಾರಿವನು' (1984) ಚಿತ್ರಗಳು ಅಪ್ಪುವಿನ ಬಿಂಬವನ್ನು ಮತ್ತಷ್ಟು ಗಟ್ಟಿಗೊಳಿಸಿದವು.

'ಬೆಟ್ಟದ ಹೂವು' (1985) ಪುನೀತ್ ಅಭಿನಯದ ಮೈಲುಗಲ್ಲು. ಆ ಚಿತ್ರದ 'ರಾಮು' ಪಾತ್ರದ ನಿರ್ವಹಣೆ ಪುನೀತ್‌ಗೆ ರಾಷ್ಟ್ರಪ್ರಶಸ್ತಿಯನ್ನು ತಂದುಕೊಟ್ಟಿತು. ಮಲೆನಾಡಿನ ಕೊಂಪೆಯಲ್ಲಿ ಕಲಿಯುವ ಹಸಿವಿನ ಹುಡುಗ ತನ್ನ ಕಲಿಕೆಯ ಹಂಬಲವನ್ನು ಸಂಸಾರದ ಒಳಿತಿಗಾಗಿ ತ್ಯಾಗ ಮಾಡುವ, ತನ್ನ ಸಂಕಟಗಳನ್ನು ನುಂಗಿ ಬದುಕಿಗೆ ಹೆಗಲು ಕೊಡುವ ಉದಾತ್ತ ಪಾತ್ರದಲ್ಲಿ ಪುನೀತ್ ತಮ್ಮೆಲ್ಲ ಪ್ರತಿಭೆಯನ್ನು ಬಸಿದು ಪಾತ್ರಪೋಷಣೆ ಮಾಡಿದ್ದರು. ಚಿತ್ರದ ಕೊನೆಯ ದೃಶ್ಯದಲ್ಲಿ ರಾಮುವಿನ ಕಣ್ಣಾಲಿಗಳಲ್ಲಿ ತುಳುಕುವ ಕಣ್ಣೀರಿನ ಜೊತೆಗೆ ಪ್ರೇಕ್ಷಕನ ಹೃದಯ ಭಾರವಾಗುವಂಥ ಭಾವೋತ್ಕರ್ಷವನ್ನು ಪುನೀತ್ ಅಭಿನಯ ಸೃಷ್ಟಿಸಿತ್ತು. ತಾನೊಬ್ಬ ಅಪ್ಪಟ ಕಲಾವಿದನೆಂಬುದನ್ನು ಈ ಚಿತ್ರದಲ್ಲಿ ರುಜುವಾತು ಮಾಡಿದ್ದರು.

ಅನಂತರ ಬಂದ 'ಶಿವಮೆಚ್ಚಿದ ಕಣ್ಣಪ್ಪ' ಮತ್ತು 'ಪರಶುರಾಮ್' (1989) ಚಿತ್ರಗಳಲ್ಲಿ ನಟಿಸುವ ವೇಳೆಗೆ ಪುನೀತ್‌ಗೆ ಹದಿಮೂರು ವರ್ಷ. ಈ ಅವಧಿಯಲ್ಲಿ ಪುನೀತ್ ನಟಿಸಿದ ಹದಿನಾಲ್ಕು ಚಿತ್ರಗಳಲ್ಲಿ ಆರು ತಿಂಗಳ ಕೈಗೂಸಿನಿಂದ ಹಿಡಿದು ಮೀಸೆ ಮೊಳೆವ ಹುಡುಗನವರೆಗೆ ಬಾಲ್ಯದ ವಿವಿಧ ಹಂತಗಳು ಮತ್ತು ಬೇರೆ ಬೇರೆ ಸ್ತರದ ಪಾತ್ರಗಳಲ್ಲಿ ಕಾಣಿಸಿಕೊಂಡು 'ನಮ್ಮ ಕಣ್ಣ ಮುಂದೆ ಬೆಳೆದ ಹುಡುಗ'ನ ಚಿತ್ರವನ್ನು ಪ್ರೇಕ್ಷಕರ ಭಾವಭಿತ್ತಿಯಲ್ಲಿ ಗಾಢವಾಗಿ ಮೂಡಿಸಿದ್ದರು. ಪುನೀತ್ ಅವರ ಜನಪ್ರಿಯತೆ ಇಲ್ಲಿಂದಲೇ ಆರಂಭವಾಯ್ತೆಂದು ಕಾಣುತ್ತದೆ.

ಹದಿಮೂರು ವರ್ಷಗಳ ಕಾಲ ನಿರಂತರವಾಗಿ ನಟಿಸಿದ ಪುನೀತ್ ಮತ್ತೆ ಹದಿಮೂರು ವರ್ಷಗಳ ಕಾಲ ತೆರೆಯಿಂದ ಮರೆಯಾದರು. ಇಪ್ಪತ್ತೊಂದನೇ ಶತಮಾನದ ವೇಳೆಗೆ ಕನ್ನಡ ಚಿತ್ರರಂಗದಲ್ಲಿ ಅಭೂತಪೂರ್ವ ಬದಲಾವಣೆಗಳಾಗಿದ್ದವು. ಆ ವೇಳೆಗೆ ಹಳೆ ತಲೆಮಾರಿನ ರಾಜ್, ವಿಷ್ಣು, ಅನಂತನಾಗ್, ಅಂಬರೀಶ್ ಅವರ ಜೊತೆಯಲ್ಲಿಯೇ ಹೊಸ ತಲೆಮಾರಿನ ರವಿಚಂದ್ರನ್, ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ರಮೇಶ್, ದೇವರಾಜ್, ಶ್ರೀಧರ್, ಉಪೇಂದ್ರ, ಜಗ್ಗೇಶ್... ಹೀಗೆ ಕಲಾವಿದರ ದಂಡು ಆವರಿಸಿಕೊಂಡಿದ್ದ ಕಾಲ. ಭೂಗತ ಜಗತ್ತಿನ ನಂಟಿನ ರಕ್ತದೋಕುಳಿಯ ಚಿತ್ರಗಳು, ಹಿಂಸೆ ಮತ್ತು ಪ್ರೀತಿಗೆ ವ್ಯತ್ಯಾಸವಿಲ್ಲದಂಥ ಸನ್ನಿವೇಶಗಳು, ವ್ಯವಸ್ಥೆಯನ್ನು ಸರಿಪಡಿಸಲು ನಿಂತ ಪೊಲೀಸರು, ಕುದಿವ ಯುವಕರು, ಸೇಡಿನ ರಾಣಿಯರು... ಹೀಗೆ ಹಲವು ಧಾರೆಗಳಲ್ಲಿ ಹರಿಯುತ್ತಿದ್ದ ಚಿತ್ರರಂಗ. ಇಂಥ ಸನ್ನಿವೇಶದಲ್ಲಿ ಪುನೀತ್ ಆಗಮಿಸಿ ಛಾಪು ಒತ್ತುವುದು ಕಠಿಣ ಸವಾಲಾಗಿತ್ತು. ಅಲ್ಲದೆ ಎಲ್ಲೋ ಕಮಲಹಾಸನ್, ನೀತೂ ಸಿಂಗ್, ಶ್ರೀದೇವಿ, ಶೋಭಾ ಇಂಥವರನ್ನು ಹೊರತುಪಡಿಸಿದರೆ, ಬಾಲಕಲಾವಿದರಾಗಿ ಪ್ರಸಿದ್ಧಿಯಾದವರು ನಾಯಕ ನಾಯಕಿಯರಾಗಿ ಯಶಸ್ಸು ಗಳಿಸದ ನಂಬಿಕೆಯೂ ಇತ್ತು.

ಜೆನ್ ತತ್ವದ ಪ್ರಕಾರ ಹೊಸದನ್ನು ಪಡೆಯಬೇಕೆಂದರೆ ಕಲಿತ ಹಳೆಯದನ್ನೆಲ್ಲ ಮರೆಯಬೇಕಂತೆ. ಪುನೀತ್ ತಮ್ಮ ಹಳೆಯ ಕಾಲವನ್ನು ಸಂಪೂರ್ಣ ಮರೆತು ಹೊಸ ತಯಾರಿಯೊಂದಿಗೆ ಮರಳಿಬಂದರು. ಸಮಕಾಲೀನ ಮಾದರಿ ಯುವಕನ ಪಾತ್ರದಲ್ಲಿ ಅವರು 'ಅಪ್ಪು' (2002) ಚಿತ್ರದಲ್ಲಿ ಅವತರಿಸಿದರು. ಸುಪುಷ್ಟವಾದ ಆರೋಗ್ಯವಂತ ಯುವಕನಾಗಿ ಪ್ರೀತಿ, ಸಾಹಸಕ್ಕೆ ಸಿದ್ಧನಾದ, ಕೌಟುಂಬಿಕ ಮೌಲ್ಯಗಳಿಗೂ ಬದ್ಧನಾದ ಪಾತ್ರದಲ್ಲಿ ಅವರು ಯುವಮನಸ್ಸುಗಳನ್ನು ಗೆದ್ದರು. ಆವರೆಗೂ ಕನ್ನಡದಲ್ಲಿ ಪ್ರಚಲಿತವಿದ್ದ ನೃತ್ಯ ಮತ್ತು ಹೊಡೆದಾಟದ ಸನ್ನಿವೇಶಗಳಿಗೆ ತಮ್ಮ ಪ್ರತಿಭೆಯಿಂದ ಬೇರೊಂದು ಆಯಾಮ ದೊರಕಿಸಿದರು. ಅವರ ಹೊಡೆದಾಟಗಳು ಹಿಂಸೆಯನ್ನು ವೈಭವೀಕರಿಸಿ ಪಾಶವೀ ಬಯಕೆಯನ್ನು ತಣಿಸುವ ದೃಶ್ಯಗಳಲ್ಲ. ಸ್ಟಂಟ್‌ಮ್ಯಾನ್ ಬದಲು ಕೋರಿಯೋಗ್ರಾಫರ್ ಒಬ್ಬ ಸಾಹಸ ದೃಶ್ಯಗಳನ್ನು ಸಂಯೋಜಿಸಿದಂತೆ ಹೊಡೆದಾಟಗಳಿಗೆ ನೃತ್ಯದ ಲಾಲಿತ್ಯವಿತ್ತು. ರಕ್ತದೋಕುಳಿಯ ನಡುವೆ ಪ್ರೀತಿಯು ಗೆಲ್ಲುವ, ಸೇಡು ಮತ್ಸರಗಳ ಲೋಕವನ್ನು ಬಿಟ್ಟು ಕೌಟುಂಬಿಕ ಜಗತ್ತನ್ನು ತೋರಿಸುವ ಚಿತ್ರಗಳಲ್ಲಿ ಅವರು ನಟಿಸುತ್ತಾ ಬಂದರು. ರಾಜ್ ಅವರ ಜೊತೆ ಹೊರಟು ಹೋದಂತಿದ್ದ ಫ್ಯಾಮಿಲಿ ಸಬ್ಜೆಕ್ಟ್ಸ್ ಮತ್ತೆ ಪುನೀತ್ ಚಿತ್ರಗಳಲ್ಲಿ ಮರುಹುಟ್ಟು ಪಡೆದವು. ರಾಜ್ ಚಿತ್ರಗಳ ಆದರ್ಶದ ಪಾತ್ರಗಳ ಛಾಯೆಯ ಹೊಸ ಯುವ ಮಾದರಿಯೊಂದನ್ನು ಪರಿಚಯಿಸಿ ರಾಜ್ ಆದರ್ಶ ಪರಂಪರೆಯ ಕೊಂಡಿಯಾದರು.

'ಅಪ್ಪು'ವಿನಿಂದ 'ಯುವರತ್ನ'ದವರೆಗೆ ನಟಿಸಿದ 29 ಚಿತ್ರಗಳಲ್ಲಿ ಪುನೀತ್ ಪಾತ್ರಗಳು ಈ ಆದರ್ಶವನ್ನು ಮತ್ತೆ ಮತ್ತೆ ಹೇಳುತ್ತಾ ಹೋಗುತ್ತವೆ. ತಮ್ಮ ಚಿತ್ರಗಳಲ್ಲಿ ಜನ್ಮದಾತರನ್ನು ಆರಾಧಿಸುವ ವಾತ್ಸಲ್ಯಮಯಿ ಮಗನಾಗಿ, ಅಕ್ಕರೆಯ ಸೋದರನಾಗಿ, ಯುವತಿಯರಿಗೆ ಇಷ್ಟವಾಗುವ ತುಂಟತನದ ಆದರೆ ಸಂಭಾವಿತ ಮತ್ತು ಘನತೆಯ ಯುವಕನಾಗಿ, ನೆರವಿಗೆ ಧಾವಿಸುವ ಗೆಳೆಯನಾಗಿ, ಜನಸಮುದಾಯ ಮೆಚ್ಚುವ ತ್ಯಾಗ, ಸಾಹಸ ನಿಷ್ಠೆಯ ಯುವಕನಾಗಿ... ಹೀಗೆ ಕಾಲ-ದೇಶ ಬದ್ಧವಲ್ಲದ ಸಾರ್ವತ್ರಿಕ ಮೌಲ್ಯಗಳ ಪ್ರತಿರೂಪದಲ್ಲಿ ಹಲವು ಚಿತ್ರಗಳಲ್ಲಿ ನಟಿಸಿ ಸಮೂಹವನ್ನು ಆಕರ್ಷಿಸಿದರು. ರಾಜ್ ಆಶಿಸುತ್ತಿದ್ದ 'ಕುಟುಂಬ ಕೂತು ನೋಡಬೇಕಾದ' ಸಿನಿಮಾಗಳು ಮತ್ತೆ ಮುನ್ನೆಲೆಗೆ ಬಂದದ್ದು ಪುನೀತ್ ಚಿತ್ರಗಳಿಂದಲೇ.

ಪುನೀತ್ ಯಶಸ್ಸಿಗೆ ಅವರ ಚಿತ್ರಗಳಲ್ಲಿ ಪರಂಪರೆಯ ಮೌಲ್ಯಗಳ ಜೊತೆಗೆ ಆಧುನಿಕ ಸೋಪಜ್ಞತೆ ಸಂಗಮಿಸಿದ್ದು ಸಹ ಒಂದು ಕಾರಣವಿರಬಹುದು. ಅದು ಅವರ ಉಡುಪು ಕೇಶಾಲಂಕಾರದಿಂದ ಹಿಡಿದು, ಸಭ್ಯ ಮಾತು, ಯುವಪ್ರಭೆಯ ಲವಲವಿಕೆಯ ನಿರೂಪಣೆಯಲ್ಲೂ ಕಾಣಿಸಿಕೊಂಡು ಯುವಜನತೆ ಪಾಲಿಗೆ ಅನುಕರಣೀಯರಾದರು. ಕಿರುತೆರೆಯಲ್ಲಿ ಅವರು ನಡೆಸಿಕೊಡುತ್ತಿದ್ದ ಕನ್ನಡದ ಕೋಟ್ಯಾಧಿಪತಿ ಮತ್ತು ಫ್ಯಾಮಿಲಿ ಪವರ್ ಸರಣಿಗಳು ಅವರ ಜನಪ್ರಿಯತೆಯ ವಿಸ್ತರಣೆಗೆ ನೆರವಾದವು. ಅದರಲ್ಲಿ ಭಾಗವಹಿಸಿದ ಕರ್ನಾಟಕದ ನಾನಾ ಮೂಲೆಯಿಂದ ಬಂದ ಯುವಜನತೆ ಮತ್ತು ಕುಟುಂಬದ ಸದಸ್ಯರೊಡನೆ ಅವರು ನಡೆದುಕೊಂಡದ್ದು, ನರ್ತಿಸಿದ್ದು, ತಮಾಷೆ ಮಾಡಿದ್ದು- ಎಲ್ಲವೂ ಅವರು ಕೈಗೆಟುಕುವ ತಾರೆ ಎನಿಸುವ ಸಂದೇಶ ರವಾನೆಯಾಯಿತು.

ಅವರ ಕ್ರಿಯಾಶೀಲತೆಯು ನಟನೆ, ಉದ್ಯಮ ಮತ್ತು ಸಮಾಜ ಸೇವೆಯಲ್ಲಿ ಹಂಚಿಹೋಗಿತ್ತು. ಪ್ರತಿಯೊಂದು ಕ್ಷೇತ್ರದಲ್ಲೂ ತನ್ಮಯತೆಯಿಂದ ತೊಡಗಿಸಿಕೊಂಡದ್ದು ಅವರ ವ್ಯಕ್ತಿತ್ವಕ್ಕೆ ಹೊಳಪು ನೀಡಿದ ಸಂಗತಿ. ತಮ್ಮ ತಂದೆಯ ಬಗ್ಗೆ ರೂಪಿಸಿದ ಅಪೂರ್ವ ಚಿತ್ರಕಥಾಕೋಶವು ಅವರ ಕ್ರಿಯಾಶೀಲತೆಗೆ ಹಿಡಿದ ಕನ್ನಡಿ. ಜಗತ್ತಿನ ಚಿತ್ರಗಳ ಪರಿಚಯವಿದ್ದ ಪುನೀತ್ ಕನ್ನಡದಲ್ಲಿ ಪ್ರಯೋಗಗಳಿಗೆ ಕನಸಿದ್ದರು. ತಮ್ಮ ಪಿ.ಆರ್.ಕೆ ಸಂಸ್ಥೆಯ ಮೂಲಕ ಹೊಸ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. 'ಬಲಗೈಯಲ್ಲಿ ಕೊಟ್ಟದ್ದು ಎಡಗೈಗೆ ತಿಳಿಯದಂತೆ' ನೂರಾರು ಜನರಿಗೆ ಶಿಕ್ಷಣ, ಹಲವಾರು ಸಮಾಜಸೇವಾ ಸಂಸ್ಥೆಗಳಿಗೆ ನೆರವು ಮುಂತಾದವುಗಳಿಂದ ಕೊಡುಗೈ ದಾನಿಯಾಗಿದ್ದರು. ಈ ಊರ ಮುಂದಿನ ಹಾಲುಹಳ್ಳದ ಇರವು ಜಗತ್ತಿಗೆ ತಿಳಿದದ್ದು ಅವರ ಸಾವಿನ ನಂತರವೇ!

ಅಪಾರ ಕನಸುಗಳನ್ನು ಹೊತ್ತು ಸಾಗುತ್ತಿದ್ದ ಪುನೀತ್ ಕಾರ್ಯಸಾಧ್ಯವಾದ ಯೋಜನೆಗಳಲ್ಲಿ ತೊಡಗಿಸಿಕೊಂಡಿದ್ದರು. ತಮ್ಮ ಮಾಸದ ನಗು, ಸರಳತೆ ಮತ್ತು ಎಲ್ಲ ಜನರೊಡನೆ ಬೆರೆಯುವ ಗುಣದಿಂದಾಗಿ ಜನಮಾನಸಕ್ಕೆ ಹತ್ತಿರವಾಗಿದ್ದರು. ಜಾತಿ, ಧರ್ಮ, ನಾಡುಗಳ ಗಡಿಯ ಬೇಲಿಯನ್ನು ದಾಟಿದ ವಿಸ್ತಾರವಾದ ಸ್ನೇಹವಲಯವಿದ್ದ ಇಂಥ ಸಜ್ಜನ ಮಿಂಚಿ ಮಾಯವಾಗುವ ಮಂದಹಾಸವೆಂದು ಯಾರೂ ಊಹಿಸಿರಲಿಲ್ಲ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ತಾರ್ಕಿಕ ಗಣಿತ

ಯಾರು, ಎಲ್ಲಿ, ಯಾವ ಸಿನಿಮಾ ನೋಡಿದರು ಪತ್ತೆ ಹಚ್ಚಿ...

ವಿನೋದ, ಪ್ರಸಾದ, ಉಲ್ಲಾಸ, ಭಾಗ್ಯಶ್ರೀ ನಾಲ್ವರೂ ಗದಗ ನಗರಕ್ಕೆ ಸಿನಿಮಾ ನೋಡಲು ಹೋದರು.

ನೋಡಿದ ಸಿನಿಮಾಗಳು- ಪರಮಾತ್ಮ, ಡ್ರಾಮಾ, ಜಾಕಿ, ಅಣ್ಣಾಬಾಂಡ್. ಇವುಗಳನ್ನು ಕರ್ನಾಟಕ ಟಾಕೀಸ್, ಮಹಾಲಕ್ಷ್ಮಿ ಟಾಕೀಸ್, ಕೃಷ್ಣ ಟಾಕೀಸ್‌ನಲ್ಲಿ ನೋಡಿದ್ದಾರೆ. ಆದರೆ ಕೊಟ್ಟ ಕ್ರಮದಲ್ಲಿ ಮಾತ್ರ ನೋಡಿಲ್ಲ. ಈಗ ಮೇಲೆ ಹೇಳಿರುವ ಸಿನಿಮಾಗಳನ್ನು ಯಾರು, ಎಲ್ಲಿ, ಯಾವುದನ್ನು ನೋಡಿದ್ದಾರೆ ಎಂದು ಪತ್ತೆ ಹಚ್ಚಲು ಕೆಲವು ಸುಳಿವುಗಳನ್ನು ಕೊಡಲಾಗಿದೆ. ನಿಮ್ಮ ತಾರ್ಕಿಕ ಬುದ್ಧಿವಂತಿಕೆಯಿಂದ ವಿಚಾರಮಾಡಿ ಪತ್ತೆ ಹಚ್ಚಬಲ್ಲಿರಾ?

1. ವಿನೋದ, ಕರ್ನಾಟಕ ಟಾಕೀಸ್‌ನಲ್ಲಿ ನೋಡಿದ್ದಾನೆ
2. ಡ್ರಾಮಾ, ವೆಂಕಟೇಶ ಟಾಕೀಸ್‌ನಲ್ಲಿ ಪ್ರದರ್ಶನಗೊಂಡಿದೆ
3. ಉಲ್ಲಾಸ ಸಿನಿಮಾ ನೋಡಿದ್ದು ಕೃಷ್ಣ ಟಾಕೀಸ್‌ನಲ್ಲಿ
4. ಭಾಗ್ಯಶ್ರೀ ನೋಡಿದ ಸಿನಿಮಾದ ಹೆಸರು ಡ್ರಾಮಾ
5. ವಿನೋದ ಅಣ್ಣಾಬಾಂಡ್ ಸಿನಿಮಾ ನೋಡಿಲ್ಲ
6. ಮಹಾಲಕ್ಷ್ಮಿ ಟಾಕೀಜಿನಲ್ಲಿ ಜಾಕಿ ಸಿನಿಮಾ ಇಲ್ಲ

ಹೆಸರು	ಸಿನಿಮಾ ಹೆಸರು	ಟಾಕೀಸ್ ಹೆಸರು

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ಮರಿಕೇಡಿ = ______
2. ಮಡಿಜಖಂ = ______
3. ರವಿಪುಜಾ = ______
4. ಮೂಲಗಿಡ = ______

ಶಬ್ದಗಳೊಡನೆ ಸರಸ

ಕಪ್ಪು ಹಾಲು ಹಿಂಡುವ ಆಕಳು

ಒಮ್ಮೆ ಶಾಲೆಯಲ್ಲಿ ಗುರುಗಳು 'ಯಾರ ಯಾರ ಮನೆಯಲ್ಲಿ ಆಕಳುಗಳಿವೆ?' ಕೈ ಎತ್ತಿ ಎಂದರು. ಅನೇಕ ವಿದ್ಯಾರ್ಥಿಗಳು ಕೈ ಎತ್ತಿದರು. ಮತ್ತೊಮ್ಮೆ ತಮಾಷೆಗಾಗಿ ಗುರುಗಳು,'ಕಪ್ಪು ಹಾಲು ಹಿಂಡುವ ಆಕಳುಗಳು ಯಾರ ಮನೆಯಲ್ಲಿವೆ? ಕೈ ಎತ್ತಿ' ಎಂದರು. ಆಗ ಯಾರೂ ಕೈ ಎತ್ತಲಿಲ್ಲ. ಛೆ! ಎಲ್ಲಾದರೂ ಆಕಳು ಕಪ್ಪು ಹಾಲು ಹಿಂಡಲು ಸಾಧ್ಯವೇ? ಅವು ಹಿಂಡುವುದು ಯಾವಾಗಲೂ ಬಿಳಿ ಹಾಲು ಮಾತ್ರ. ಆಕಳು ಕಪ್ಪಾದರೆ ಹಾಲು ಕಪ್ಪೆ ಎಂಬ ಗಾದೆ ಮಾತು ಕೇಳಿಲ್ಲವೇ ಎಂದು ವಿದ್ಯಾರ್ಥಿಗಳು ತಮ್ಮ ತಮ್ಮಲ್ಲೇ ಮಾತಾಡುತ್ತಿದ್ದಾಗಲೇ ತಿಮ್ಮ ಕೈಯನ್ನು ಮೇಲಕ್ಕೆ ಎತ್ತಿದ. ಎಲ್ಲರಿಗೂ ಆಶ್ಚರ್ಯ. ತಿಮ್ಮನಿಗೆ ತಲೆ ಕೆಟ್ಟಿರಬೇಕು. ವಿದ್ಯಾರ್ಥಿಗಳೆಲ್ಲ ನಗತೊಡಗಿದರು. ಗುರುಗಳು ಆಶ್ಚರ್ಯದಿಂದ 'ತಿಮ್ಮ ಆಕಳು ಕಪ್ಪು ಹಾಲು ಕೊಡುತ್ತದೆಯೇ' ಎಂದು ಕೇಳಿದರು.

'ಹೌದು ಗುರುಗಳೇ, ನಮ್ಮ ಹಸು ದಿನಾಲು ಕೊಡುವುದು ಒಂದು ಕಪ್ಪು ಹಾಲನ್ನು ಮಾತ್ರ. ಹೆಚ್ಚು ಕೊಡುವುದೇ ಇಲ್ಲ' ಎಂದ. ತಿಮ್ಮನ ಮಾತು ಕೇಳಿ ಎಲ್ಲ ಬಿದ್ದು ಬಿದ್ದು ನಕ್ಕರು.

ಒಳ್ಳೆಯ ಕೆಲಸಕ್ಕೆ ತಕ್ಕ ಫಲ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಒಂದು ರಾಜ್ಯದ ರಾಜನಿಗೆ ಮೂವರು ಮಂತ್ರಿಗಳಿದ್ದರು. ಅವರಲ್ಲಿ ಒಳ್ಳೆಯವರೂ, ಕುತಂತ್ರಿಗಳು ಇದ್ದರು. ರಾಜ ಅವರನ್ನು ಪರೀಕ್ಷಿಸಲು ನಿರ್ಧರಿಸಿದ

ರಾಜನು ಈ ಮಂತ್ರಿಗಳಿಗೆ ಒಂದು ಚೀಲ ಕೊಟ್ಟು ಕಾಡಿಗೆ ಹೋಗಿ ಹಣ್ಣುಗಳನ್ನು ತುಂಬಿಕೊಂಡು ಬರಲು ಹೇಳಿದ. ಒಬ್ಬ ಮಂತ್ರಿಯು ಚೀಲದ ತುಂಬಾ ಒಳ್ಳೆಯ ಹಣ್ಣುಗಳನ್ನೇ ತುಂಬಿದ

ಇನ್ನೊಬ್ಬ ಮಂತ್ರಿಯು ಚೀಲದ ತಳಭಾಗದಲ್ಲಿ ಕೊಳೆದ ಹಣ್ಣುಗಳನ್ನೂ, ಮೇಲ್ಭಾಗದಲ್ಲಿ ಮಾತ್ರ ಒಳ್ಳೆಯ ಹಣ್ಣುಗಳನ್ನು ಕಾಣುವಂತೆ ತುಂಬಿದ

ಮೂರನೇ ಮಂತ್ರಿಯು ರಾಜ ಚೀಲದೊಳಗೆ ನೋಡಲಾರ ಅಂದುಕೊಂಡು ಹಣ್ಣಿನ ಬದಲಾಗಿ ತರಗೆಲೆ, ಕಸ ಕಡ್ಡಿಗಳನ್ನು ತುಂಬಿ ಅರಮನೆಗೆ ತಂದ

ಕಾಡಿನಿಂದ ವಾಪಸಾದ ಮಂತ್ರಿಗಳನ್ನು ರಾಜ ನೇರವಾಗಿ ಕಾರಾಗೃಹಕ್ಕೆ ಕಳುಹಿಸಿದ. ಅನ್ನ, ಆಹಾರ ನೀಡದೇ ಅವರು ಕಾಡಿನಿಂದ ತಂದ ಹಣ್ಣುಗಳನ್ನೇ ತಿನ್ನುವಂತೆ ಆದೇಶಿಸಿದ



ಒಳ್ಳೆಯ ಹಣ್ಣು ತಂದ ಮಂತ್ರಿ ಅವುಗಳನ್ನು ತಿಂದು ಬದುಕಿದ. ಕೆಟ್ಟ ಹಣ್ಣು, ತರಗೆಲೆ ತುಂಬಿದ ಮಂತ್ರಿಗಳು ಕಾಯಿಲೆ ಬಿದ್ದರು. ಒಳ್ಳೆಯ ಕೆಲಸಕ್ಕೆ ಒಳ್ಳೆಯ ಪ್ರತಿಫಲ ಈ ಕಥೆಯ ನೀತಿ

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಏಕಾಕ್ಷರ ಒಂದೇ ಬಳ್ಳಿಯ ದ್ವಂದ್ವಾಕ್ಷರ ಹೊಂದಿಸಿ.

1.	__ ರಿ __	A.	ಕು __ ಕು
2.	__ ಣಿ __	B.	ಕ __ ಕೆ
3.	__ ನ __	C.	ಕೋ __ ಕೆ
4.	__ ಲಿ __	D.	ಕೆ __ ಕು
5.	__ ಲು __	E.	ಕಿ __ ಕೆ
6.	__ ಲ __	F.	ಕಾ __ ಕಾ
7.	__ ಳಿ __	G.	ಕಾ __ ಕೆ
8.	__ ಳಂ __	H.	ಕೊ __ ಕು
9.	__ ಣ __	I.	ಕ __ ಕ
10.	__ ಡ __	J.	ಕ __ ಕು

ಇಲ್ಲಿ ಕೊಟ್ಟಿರುವ ಅಪೂರ್ಣ ಪದವನ್ನು ಬಲಗಡೆಯ ದ್ವಂದ್ವಾಕ್ಷರಗಳಿಂದ ಹೊಂದಿಸಿ.

1.	LO __ __ Y	A.	NN
2.	VA __ __ INE	B.	EE
3.	A __ __ ITION	C.	PP
4.	D __ __ P	D.	RR
5.	SME __ __	E.	LL
6.	CO __ __ AND	F.	BB
7.	CO __ __ ECT	G.	DD
8.	CO __ __ ON	H.	MM
9.	O __ __ SITE	I.	CC
10.	CU __ __ ENT	J.	TT

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ತಲೆ 2.ಕಾಕ 3. ಇರು 4. ಮಾಡು
5. ಸಲ 6. ಗಾಡಿ 7 ಕೂಸು 8. ಬಲು

1.		ತಿ	
2.		ವ	
3.		ತಾ	
4.		ರು	
5.		ರ	
6.		ಕ	
7.		ಡಿ	
8.		ಯ	

ಕಳೆದ ಸಂಚಿಕೆಯ ಸರಿ ಉತ್ತರಗಳು

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪದ-ಹಿಗ್ಗು
1. ಕನ್ನಡ 2. ಕಳಸ 3. ಕಟ್ಟಡ 4. ಕರಡು 5. ಕಣ್ಮಣಿ 6. ಕರಾರು 7. ಕಸ್ತೂರಿ 8. ಕಣ್ಣಾರೆ

ಅದಲು ಬದಲು ಕಂಚಿ ಕದಲು
1. ಮದಕರಿ 2. ಮರಿಕಣ್ಣು 3. ನಾಗರಿಕ 4. ಕಟ್ಟುಕತೆ

ಶಬ್ದಗಳೊಡನೆ ಸರಸ
1. ಕರ್ನಾಟಕ 2. ಕನ್ನಡಕ 3. ಕಥಾನಕ 4. ಕಲಾತ್ಮಕ 5. ಕರದರ 6. ಕರ್ಕಾಟಕ 7. ಕರಂಡಕ 8. ಕರ್ಕೋಟಕ

ಟ್ವೆಂಟಿ-20 ಮ್ಯಾಚ್

1- K	2- Q	3- E	4- O	5- H
6- N	7- S	8- M	9- F	10- J
11- O	12- B	13- A	14- R	15- P
16- T	17- L	18- G	19- C	20- I

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಪಂಕಜ್ ಕುಮಾರ್
ಲಿಂಗಸುಗೂರು

ಸಹಜ ಕೆ.ಕೆ. ಮಳವಳ್ಳಿ
ಮಂಡ್ಯ



ಶ್ರೇಷ್ಠ, ಕೆ.ಆರ್. ಪುರಂ,
ಬೆಂಗಳೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:
majakoora@prajavani.co.in

ಮದ್ದಳೆ-ಭಾಗವತಿಕೆಯ ದಾಂಪತ್ಯ

ಯಕ್ಷಗಾನ

ಹರೀಶ ಬಳಂತಿಮೊಗರು

> ಯಕ್ಷಗಾನದಲ್ಲಿ ಹರಿನಾರಾಯಣ ಮತ್ತು ಲೀಲಾವತಿ ಬೈಪಡಿತ್ತಾಯ ಅವರದ್ದು ಬಲುದೊಡ್ಡ ಹೆಸರು. ಬಾಳಿನ ಅಮೃತ ಮಹೋತ್ಸವದ ಸಂಭ್ರಮದಲ್ಲಿರುವ ಈ ಜೋಡಿಯ ಕಲಾಯಾತ್ರೆ ಅನನ್ಯವಾದುದು

ಭಿತ್ತಿಯೊಂದಿಲ್ಲದಿರೆ ಚಿತ್ರವೆಂತಿರಲಹುದು?
ಚಿತ್ರವಿಲ್ಲದ ಭಿತ್ತಿ ಸೊಗಸಹುದದೆಂತು?

ಇದು ಪೂಜ್ಯ ಡಿವಿಜಿಯವರ 'ಮಂಕುತಿಮ್ಮನ ಕಗ್ಗ'ದ ಸಾಲುಗಳು.

ಅವರು ಇದನ್ನು ಬರೆದದ್ದು ಬೇರೆ ಕಲ್ಪನೆಯಿಂದಾದರೂ ಇದು ದಾಂಪತ್ಯ ಜೀವನಕ್ಕೆ ಸರಿಯಾಗಿ ಅನ್ವಯಿಸುತ್ತದೆ. ಪರಸ್ಪರ ಭಿತ್ತಿಯೂ ಚಿತ್ರವೂ ಆಗುತ್ತಾ ಒಬ್ಬರನ್ನು ಇನ್ನೊಬ್ಬರು ಆಧರಿಸುತ್ತಾ ಆದರಿಸುತ್ತಾ ಬದುಕು ಸಾರ್ಥಕಗೊಳಿಸುವುದೇ ನಿಜವಾದ ದಾಂಪತ್ಯ.

ಜೀವನವೇ ಒಂದು ಕಲೆ. ಅಲ್ಲೂ ಪರಿಪೂರ್ಣರಾಗಿ, ಜೊತೆಗೆ ಶ್ರೇಷ್ಠ ಕಲೆಯಾದ ಯಕ್ಷಗಾನದಲ್ಲೂ ಪ್ರಸಿದ್ಧಿ ಪಡೆದು ಕಲಾಯಾನದಲ್ಲಿ ಸಾರ್ಥಕ್ಯವನ್ನು ಪಡೆದವರೇ ಹರಿನಾರಾಯಣ ಬೈಪಾಡಿತ್ತಾಯ ಹಾಗೂ ಲೀಲಾವತಿ ಬೈಪಾಡಿತ್ತಾಯ ದಂಪತಿ. ಯಕ್ಷಗಾನ ಲೋಕ ಕಂಡ ಹಿಮ್ಮೇಳದ ಈ ಎರಡು ಮೇರು ಶಿಖರಗಳು ಒಂದಾಗಿ ಈಗ ಐದು ದಶಕಗಳೇ ಸಂದಿವೆ. ಈ ಸುದೀರ್ಘ ಒಡನಾಟದ ಫಲವಾಗಿ ಲೀಲಾ ಅವರ ಹಾಡುಗಳಿಗೆ ಹರಿನಾರಾಯಣರ ಮದ್ದಳೆಯಂತೂ ಅನ್ಯೋನ್ಯವಾಗಿ ಅನನ್ಯ ಶ್ರವಣ ಸೌಖ್ಯವನ್ನು ನೀಡುತ್ತದೆ.

ಇಬ್ಬರೂ ಬಡತನದ ಬವಣೆಯನ್ನೇ ಕಂಡವರು ಉಂಡವರು. ಯಕ್ಷಗಾನ ಕಲಾಯಾನದಲ್ಲಿ ಜೊತೆಯಾದವರು. ಬಡತನದಿಂದಾಗಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪೂರೈಸದಿದ್ದರೂ, ಕಲಾಮಾತೆ ಇಬ್ಬರನ್ನೂ ಕೈಹಿಡಿದು ಮುನ್ನಡೆಸಿದ್ದೇ ಒಂದು ವಿಶಿಷ್ಟ ಕಥೆ. ವಿದ್ಯಾಭ್ಯಾಸ ಮಾಡುವ ಹೊತ್ತಿಗೆ ತಮ್ಮ ಬಂಧು, ಅರ್ಥಧಾರಿ ಎನ್.ಆರ್.ಚಂದ್ರರ ಮನೆಯಲ್ಲಿದ್ದ ಹರಿನಾರಾಯಣರು, ತಮಗರಿವಿಲ್ಲದಂತೆಯೇ ಯಕ್ಷಗಾನ ಲೋಕದತ್ತ ಸೆಳೆಯಲ್ಪಟ್ಟವರು. ಆ ಕಾಲದ ಯಕ್ಷಗಾನ ನಾಟಕ ಸಂಘಗಳ ತಾಳಮದ್ದಳೆಗಳಲ್ಲಿ ಬೆಳಗಿನ ತನಕ ಹಾರ್ಮೋನಿಯಂ ಬಾರಿಸುತ್ತಾ, ಭಾಗವತಿಕೆ ಕೇಳುತ್ತಾ, ಚೆಂಡೆ ಮದ್ದಳೆ ವಾದನವನ್ನು ಗಮನಿಸುತ್ತಿದ್ದ ಅವರು, ಆರನೇ ತರಗತಿಯಲ್ಲೇ ಶಾಲಾ ವಿದ್ಯಾಭ್ಯಾಸಕ್ಕೆ ಮುಕ್ತಾಯ ಹಾಡುವ ಅನಿವಾರ್ಯತೆಗೆ ಸಿಲುಕಿದರು.

ಮುಂದೆ ಸುಬ್ರಹ್ಮಣ್ಯ ಸಂಪುಟ ನರಸಿಂಹಸ್ವಾಮಿ ಮಠದಲ್ಲಿದ್ದು, ನಾಲ್ಕು ವರ್ಷ ಮಂತ್ರವನ್ನೂ ಕಲಿತರು. ಆದರೆ ಮನಸ್ಸು ಯಕ್ಷಗಾನದ ಕಡೆ ಸೆಳೆಯುತ್ತಿತ್ತು. ಕಲ್ಲುಗುಡ್ಡೆ ಪುರುಷಯ್ಯ ಆಚಾರ್ಯರಲ್ಲಿ ಮದ್ದಳೆ ವಾದನ ಕಲಿತು ಪರಿಸರದಲ್ಲಿ ನಡೆಯುವ ಕೂಟಗಳಲ್ಲಿ ಭಾಗವಹಿಸುತ್ತಾ ಇದ್ದಾಗ ಶೀನಪ್ಪ ಭಂಡಾರಿಗಳ ಆದಿಸುಬ್ರಹ್ಮಣ್ಯ ಮೇಳದಲ್ಲಿ ಅವಕಾಶ ದೊರೆಯಿತು. ಆ ಬಳಿಕ ಕುಂಡಾವು, ಧರ್ಮಸ್ಥಳ ಮೇಳಗಳಲ್ಲಿ ತಿರುಗಾಟ ಮಾಡಿ ಮುಂದೆ ಕೂಡ್ಲು ಮೇಳದಲ್ಲಿದ್ದರು.

ಇತ್ತಲಿಂತಿರುವಾಗ...

ಕಾಸರಗೋಡು ತಾಲ್ಲೂಕಿನ ಆದೂರು ಕಡುಮನೆಯಲ್ಲಿ ಜನಿಸಿ ಬಾಲ್ಯದಲ್ಲೇ ತಂದೆಯನ್ನು ಕಳಕೊಂಡ ನತದೃಷ್ಟೆಯಾಗಿ ಸೋದರಮಾವನ ಮನೆಯಾದ ಮಧೂರು ಪಡುಕಕ್ಕೆಪ್ಪಾಡಿಯಲ್ಲಿ ಬೆಳೆಯುತ್ತಿದ್ದ ಶ್ರೀಗಂಗಾ ಎಂಬ ಹುಡುಗಿಯೂ ಬಡತನದಿಂದಾಗಿ ಶಾಲೆಗೆ ಹೋಗಲಾಗದೆ ಪರಿತಪಿಸುತ್ತಿದ್ದರು. ಕಲಿಯಲೇಬೇಕೆಂಬ ತುಡಿತ ಹೆಚ್ಚಾಗಿದ್ದೇ, ಮನೆಯಲ್ಲಿ ಬಂಧುಗಳ ನೆರವಿನಿಂದ ಹಿಂದಿ ಕಲಿತು ಹಿಂದಿ ವಿಶಾರದ ಪರೀಕ್ಷೆಯಲ್ಲೂ ಉತ್ತೀರ್ಣರಾಗಿದ್ದರು. ನೆರೆಮನೆಯ ಮಧೂರು ಪದ್ಮನಾಭ ಸರಳಾಯರಲ್ಲಿ ಸಂಗೀತಾಭ್ಯಾಸ ಮಾಡಿ ಕಾರ್ಯಕ್ರಮಗಳನ್ನು ನೀಡುವ ಹೊತ್ತಿಗೇ, ಮೇಳ ತಿರುಗಾಟದಲ್ಲಿ ಮಧೂರಿಗೆ ಬರುತ್ತಿದ್ದ ಹರಿನಾರಾಯಣರ ಮನ ಮನೆ ಬೆಳಗುವ ಯೋಗ ಕೂಡಿಬಂತು.

ಕಡಬದ ಬೈಪಾಡಿ ಬೀಡುಮನೆಗೆ ಸೊಸೆಯಾಗಿ ಬಂದ ಶ್ರೀಗಂಗಾ, ಈಗ ಲೀಲಾ ಬೈಪಾಡಿತ್ತಾಯರಾಗಿ ಬದಲಾದರು. ಇವರಿಗೆ ಆ ಪರಿಸರದಲ್ಲಿ ಸಂಗೀತ ಕ್ಷೇತ್ರದಲ್ಲಿ ಬೆಳೆಯುವ ಅವಕಾಶವಿರಲಿಲ್ಲ. ಗೃಹಿಣಿಯಾಗಿ ಮನೆಕೆಲಸವನ್ನು ಮಾಡುತ್ತಾ ಪತಿಯ ಜೊತೆಗಿದ್ದರು. ಆದರೆ ಹರಿನಾರಾಯಣ ಬೈಪಾಡಿತ್ತಾಯರಿಗೇ ಅತೃಪ್ತಿ! ಮಡದಿಗೆ ಕಲಿತ ವಿದ್ಯೆಯನ್ನು ಪ್ರದರ್ಶಿಸುವ ಅವಕಾಶ ಇಲ್ಲದೇ ಹೋಯಿತಲ್ಲ? ಅದೇ ಸಂದರ್ಭದಲ್ಲಿ, ಪರಿಸರದಲ್ಲಿ ನಡೆಯುತ್ತಿರುವ ಯಕ್ಷಗಾನ ತಾಳಮದ್ದಳೆಗಳಿಗೆ ಭಾಗವತರ ಕೊರತೆ ಇತ್ತು. ಇದನ್ನು ಗಮನಿಸಿದ ಪತಿ ಪತ್ನಿಗೇ ಭಾಗವತಿಕೆಯ ಪಾಠವನ್ನು ಆರಂಭಿಸಿದರು. ಸಂಗೀತ ಕಲಿತ ಪತ್ನಿ ಶ್ರದ್ಧೆಯಿಂದ ಭಾಗವತಿಕೆಯನ್ನೂ ಅಭ್ಯಸಿಸಿ ಒಂದೇ ವರ್ಷದಲ್ಲಿ ಪ್ರದರ್ಶನಕ್ಕೆ ಭಾಗವತಿಕೆ ಮಾಡುವಷ್ಟು ಸಿದ್ಧರಾದರು.

ಗಂಡು ಕಲೆಯಲ್ಲಿ ಹೆಣ್ಣು ದನಿ

ಮುಂದೆ ನಡೆದದ್ದು ಇತಿಹಾಸ. ಯಕ್ಷಗಾನ ನೋಡುವುದೇ ಮಹಾಪಾಪ ಎಂಬ ನಂಬಿಕೆಯೂ ಇದ್ದ ಆ ಕಾಲದಲ್ಲಿ, ಗಂಡು ಕಲೆಯಲ್ಲಿ ಮಹಿಳೆಯೊಬ್ಬರು ಭಾಗವತಿಕೆ ಮಾಡುವುದಂತೂ ಅಚ್ಚರಿ ಮತ್ತು ವಿಶೇಷ, ಕೆಲವರಿಗೆ ಆಘಾತ. ಸುತ್ತಮುತ್ತಲಿನ ಪರಿಸರದಲ್ಲಿ ಗಂಡನ ಮದ್ದಳೆ ಜೊತೆಗೆ ಭಾಗವತಿಕೆ ಮಾಡುತ್ತಾ ಲೀಲಾ ಬೈಪಾಡಿತ್ತಾಯರು ಪ್ರಸಿದ್ಧಿಗೆ ಬರಲಾರಂಭಿಸಿದರು. ಇತ್ತ ಚಿತ್ರರಂಗದಲ್ಲಿ ನಟಿ ಲೀಲಾವತಿ ಕೂಡ ಹೆಸರು ಮಾಡುತ್ತಿದ್ದರು. ಅಭಿಮಾನಿಗಳು ಈ ಕ್ರಾಂತಿ ಮಾಡಿದ ಮಹಿಳೆಯ ಹೆಸರನ್ನು ಪರಸ್ಪರ ಬೆಸೆದರು, ತತ್ಪರಿಣಾಮವಾಗಿ ಲೀಲಾ ಆಗಿದ್ದವರು ಅಭಿಮಾನಿಗಳ ಬಾಯಲ್ಲಿ ಲೀಲಾವತಿ ಬೈಪಾಡಿತ್ತಾಯರೆನಿಸಿದರು. ಆ ಹೆಸರೇ ಸ್ಥಾಯಿಯಾಯಿತು.

ಮದುವೆಯಾಗಿ ಮಕ್ಕಳಾದ ಬಳಿಕ ಯಕ್ಷಗಾನ ರಂಗಕ್ಕೆ ಬಂದ ಲೀಲಾ, ಸಾಂಸಾರಿಕ ಜೀವನದ ಜೊತೆಗೇ ಆದಿಸುಬ್ರಹ್ಮಣ್ಯ, ಪುತ್ತೂರು ಮೇಳಗಳಲ್ಲಿ ವಿಶೇಷ ಆಕರ್ಷಣೆಯಾಗಿ, ಗಂಡುಮೆಟ್ಟಿನ ಕಲೆಯಾದ ಯಕ್ಷಗಾನ ರಂಗದಲ್ಲಿ ಆರಂಭಿಕ ಹೆಜ್ಜೆ ಇಟ್ಟು, ನಂತರ ಅಳದಂಗಡಿ (ಅರುವ), ಕುಂಬಳೆ, ಬಪ್ಪನಾಡು, ತಲಕಳ ಮೇಳಗಳಲ್ಲಿ ಪೂರ್ಣಕಾಲಿಕ ಭಾಗವತರಾಗಿ ಯಕ್ಷರಂಗದಲ್ಲಿ ಮಹಿಳಾ ಕ್ರಾಂತಿಗೆ ಕಾರಣರಾದರು.

ಯಕ್ಷಗಾನ ರಂಗದ ಪ್ರಾತಃಸ್ಮರಣೀಯರಾದ ನೆಡ್ಲೆ ನರಸಿಂಹ ಭಟ್, ದಿವಾಣ ಭೀಮ ಭಟ್, ಚಿಪ್ಪಾರು ಕೃಷ್ಣಯ್ಯ ಬಲ್ಲಾಳ್, ಕುದ್ರೆಕೂಡ್ಲು ರಾಮ ಭಟ್ ಮುಂತಾದ ಹಿಮ್ಮೇಳದ ಶ್ರೇಷ್ಠರ ಒಡನಾಟವು ಇಬ್ಬರ ಯಕ್ಷಗಾನೀಯ ಜೀವನವನ್ನು ತಿದ್ದುತ್ತಾ ಅರಳಿಸಿತು. ಶೇಣಿ ಗೋಪಾಲಕೃಷ್ಣ ಭಟ್, ತೆಕ್ಕಟ್ಟೆ ಆನಂದ ಮಾಸ್ತರ್, ಪೆರ್ಲ ಕೃಷ್ಣ ಭಟ್, ಪುತ್ತೂರು ನಾರಾಯಣ ಹೆಗ್ಡೆ ಮುಂತಾದ ಕೀರ್ತಿಶೇಷರೊಂದಿಗೂ, ಪಾತಾಳ ವೆಂಕಟ್ರಮಣ ಭಟ್, ಕೋಳ್ಯೂರು ರಾಮಚಂದ್ರ ರಾವ್, ಕೆ.ಗೋವಿಂದ ಭಟ್, ಕುಂಬ್ಳೆ ಸುಂದರ ರಾವ್ ಮುಂತಾದ ಕಲಾವಿದ ಶ್ರೇಷ್ಠರೊಂದಿಗೂ ರಂಗದಲ್ಲಿ ದುಡಿದರು. ಒಬ್ಬರನ್ನು ಬಿಟ್ಟು ಒಬ್ಬರಿಲ್ಲದಂತೆ ಯಕ್ಷಗಾನ ಕಾರ್ಯಕ್ರಮಗಳಲ್ಲೆಲ್ಲಾ ಪತಿ-ಪತ್ನಿ ಇಬ್ಬರೂ ಜೊತೆಯಾಗಿಯೇ ಭಾಗವಹಿಸಿದ ಪರಿಣಾಮವೇ, ಲೀಲಾವತಿ ಬೈಪಾಡಿತ್ತಾಯರ ಗಾಯನಕ್ಕೆ ಪತಿಯ ಮದ್ದಳೆ ವಾದನದ ಸಾಂಗತ್ಯ. ಗಾನವೈಭವಗಳಲ್ಲೇ ಆಗಲಿ, ಅವರೆಂದಿಗೂ ಚಪ್ಪಾಳೆಗಾಗಿ ಯಕ್ಷಗಾನೀಯತೆಯನ್ನು ಬಿಟ್ಟುಕೊಟ್ಟದ್ದಿಲ್ಲ ಎಂಬುದು ಸಾಧನೆಯೇ.

ಮಹಿಳೆಯಾಗಿ ರಾತ್ರಿಯಿಡೀ ಯಕ್ಷಗಾನ ಪ್ರಸಂಗವನ್ನು ದಿಗ್ದರ್ಶಿಸಿದ ಲೀಲಾ ಅವರ ಕಲಾಯಾನವೇನೂ ಸುಲಲಿತವಾಗಿರಲಿಲ್ಲ. ಮುಳ್ಳುಗಳೇ ಇದ್ದವು. ರಾತ್ರಿ ಯಕ್ಷಗಾನಕ್ಕೆ ಹೋಗುವ ಕಾರಣಕ್ಕೆ ಸಮಾಜ ಅವರ ಪ್ರವೇಶವನ್ನು ಆರಂಭದಲ್ಲಿ ಒಪ್ಪಿಕೊಳ್ಳಲಿಲ್ಲ. ಈ ವಿರೋಧವು ಕುತೂಹಲವಾಗಿ, ಕುತೂಹಲವು ನಿಧಾನಕ್ಕೆ ಮೆಚ್ಚುಗೆಯಾಗಿ ಪರಿವರ್ತಿತವಾಯಿತು. ಹೆಣ್ಣು ಧ್ವನಿಯನ್ನು ವೀರರಸ ಪ್ರಧಾನದ ಯಕ್ಷಗಾನದ ಅಭಿಮಾನಿಗಳೂ ಒಪ್ಪಿಕೊಳ್ಳಲಾರಂಭಿಸಿದರು. ರಂಗದಲ್ಲಿ 'ಮಹಿಳೆಯ ಹಾಡಿಗೆ ಕುಣಿಯಬೇಕೇ' ಎಂಬ ಕೆಲ ಕಲಾವಿದರ ತಾತ್ಸಾರ ಭಾವವೂ ಲೀಲಾವತಿಯವರ ಪ್ರತಿಭೆಯ ಪ್ರಖರತೆಗೆ ಕರಗಿಹೋದವು. ವ್ಯವಸಾಯಿ (ಡೇರೆ) ಮೇಳಗಳಲ್ಲಿ ಇವರ ಹಾಡುಗಾರಿಕೆಗಾಗಿ ಟೆಂಟ್ ಬಿಚ್ಚಿಸುವಷ್ಟು ಪ್ರೇಕ್ಷಕರು ಹರಿದುಬರಲಾರಂಭಿಸಿದರು. ಯಕ್ಷಗಾನವೂ ಇವರನ್ನು ಒಪ್ಪಿತು, ಯಕ್ಷಗಾನಾಭಿಮಾನಿಗಳಲ್ಲೂ ಸ್ವೀಕೃತರಾದರು.

ಒಂದೇ ಮನೆಯ ಇಬ್ಬರಿಗೂ ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ದೊರೆತಿರುವುದೊಂದು ಚರಿತ್ರೆಯೇ. ಐದು ದಶಕಕ್ಕೂ ಮಿಗಿಲಾಗಿ ಯಕ್ಷಗಾನ ಕ್ಷೇತ್ರದಲ್ಲಿರುವ ಈ ದಂಪತಿ, ಧರ್ಮಸ್ಥಳ ಲಲಿತಕಲಾ ಕೇಂದ್ರದಲ್ಲಿ ದಶಕದ ಕಾಲ ಯಕ್ಷಗಾನ ಹಿಮ್ಮೇಳ ಗುರುಗಳಾಗಿ ಅನೇಕ ಶಿಷ್ಯಂದಿರನ್ನು ಸಿದ್ಧಗೊಳಿಸಿದರು. ಪ್ರಸ್ತುತ ಕೊಳಂಬೆ ಗ್ರಾಮದ ತಲಕಳದಲ್ಲಿ ವಾಸವಾಗಿರುವ ಇವರು ಈಗಲೂ ತಮ್ಮ ಮನೆಯನ್ನೇ ಗುರುಕುಲವನ್ನಾಗಿಸಿ, ಬಂದ ಶಿಷ್ಯಂದಿರಿಗೆ ವಿದ್ಯಾದಾನ ಮಾಡುತ್ತಿದ್ದಾರೆ. ತಮ್ಮ ಕಲಾಪಯಣದಲ್ಲಿ ಸಾರ್ಥಕತೆಯನ್ನು ಪಡೆದಂತೆ ಇವರು ಸಂತೃಪ್ತ ಸಂಸಾರಿಗಳೂ ಹೌದು. ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳ ತುಂಬು ಕುಟುಂಬ ಇವರದ್ದು.

ಹರಿನಾರಾಯಣ ಹಾಗೂ ಲೀಲಾವತಿ ಬೈಪಾಡಿತ್ತಾಯ ದಂಪತಿ. ಚಿತ್ರ: ದೇವಾನಂದ ಭಟ್, ಬೆಳುವಾಯಿ

ಅಮೃತೋತ್ಸವ ಅಭಿನಂದನೆ

ಹರಿನಾರಾಯಣ ಬೈಪಾಡಿತ್ತಾಯರು 1946ರ ನವೆಂಬರ್ 13ರಂದು ಜನಿಸಿದರೆ, 1947ರ ಮೇ 23ರಂದು ಲೀಲಾ ಅವರ ಜನನ. ದೇಶದ ಸ್ವಾತಂತ್ರ್ಯದ ಅಮೃತ ಮಹೋತ್ಸವದೊಂದಿಗೇ, ಗಂಡುಮೆಟ್ಟಿನ ಕಲೆಯಲ್ಲಿ ಮಹಿಳಾ ಸ್ವಾತಂತ್ರ್ಯದ ಧ್ವಜಧಾರಣೆಗೆ ಕಾರಣರಾದ ಲೀಲಾವತಿ-ಹರಿನಾರಾಯಣ ಬೈಪಾಡಿತ್ತಾಯ ದಂಪತಿ ಈಗ ಜೀವನಯಾನದ ಅಮೃತ ಮಹೋತ್ಸವ ಆಚರಿಸುತ್ತಿದ್ದಾರೆ. ಸರಳ ಸಜ್ಜನ ನಿಗರ್ವಿ ದಂಪತಿಯನ್ನು ಗೌರವಿಸುವ ಸದುದ್ದೇಶದಿಂದ ಶಿಷ್ಯಂದಿರೆಲ್ಲ ಸೇರಿಕೊಂಡು ಭಾನುವಾರ (ನ.7) ಇಡೀ ದಿನದ ಕಾರ್ಯಕ್ರಮವನ್ನು ಮೂಡುಬಿದಿರೆಯ ಆಲಂಗಾರು ಶ್ರೀ ಮಹಾಗಣಪತಿ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಆಯೋಜಿಸಿದ್ದಾರೆ. ಗುರು ದಂಪತಿಗೆ 'ಶ್ರೀಹರಿಲೀಲಾ-75 ಯಕ್ಷಗಾನ ಕಲಾಯಾನ' ಗ್ರಂಥಗೌರವಾರ್ಪಣೆ ನಡೆಯಲಿದೆ. ಇದೇ ವೇಳೆ, ಗಂಡುಕಲೆಯಲ್ಲಿ ಮಹಿಳಾ ಧ್ವನಿ ಮೊಳಗಿಸಿದ ಲೀಲಾವತಿ ಬೈಪಾಡಿತ್ತಾಯರ ಆತ್ಮಕಥನ 'ಯಕ್ಷ ಗಾನ-ಲೀಲಾವಳಿ' ಕೂಡ ಬಿಡುಗಡೆಯಾಗಲಿದೆ.



ಶೂಟಿಂಗ್: ಮನು ಜೋಡಿಗೆ ಚಿನ್ನ

ವ್ರಾಕ್‌ಲಾ, ಪೋಲೆಂಡ್ (ಪಿಟಿಐ): ಭಾರತದ ಮನು ಭಾಕರ್ ಮತ್ತು ಇರಾನ್‌ನ ಜವಾದ್ ಫರೋಗಿ ಜೋಡಿ ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಪ್ರೆಸಿಡೆಂಟ್ಸ್ ಕಪ್ ಶೂಟಿಂಗ್‌ನ ಏರ್ ಪಿಸ್ತೂಲು ಮಿಶ್ರ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡರು.

ಒಲಿಂಪಿಕ್ ಚಾಂಪಿಯನ್ ಜವಾದ್ ಜೊತೆಗೂಡಿ ಅಮೋಘ ಸಾಮರ್ಥ್ಯ ತೋರಿದ ಮನು ಶುಕ್ರವಾರದ ಹಣಾಹಣಿಯಲ್ಲಿ ಫ್ರಾನ್ಸ್ ಮತ್ತು ರಷ್ಯಾದ ಜೋಡಿ ಮಥಿಲ್ಡೆ ರಮೊಲಿ ಮತ್ತು ಆರ್ಟೆಮ್ ಚೆರ್ನೊಸೊವ್ ಅವರನ್ನು 16-8ರಲ್ಲಿ ಮಣಿಸಿದರು.

ಮನು ಭಾಕರ್ –ಪಿಟಿಐ ಚಿತ್ರ

ಅಭಿಷೇಕ್ ವರ್ಮಾ ಮತ್ತು ಉಕ್ರೇನ್‌ನ ಒಲೆನಾ ಕೊಸ್ಟೆವಿಚ್ ಆರನೇ ಸ್ಥಾನ ಗಳಿಸಿದರು. ಸೌರಭ್ ಚೌಧರಿ ಮತ್ತು ಸ್ವಿಟ್ಜರ್ಲೆಂಡ್‌ನ ಹೇದಿ ಗರ್ಬರ್ ಏಳನೇ ಸ್ಥಾನ ಗಳಿಸಿದರು. ಯಶಸ್ವಿನಿ ದೇಸ್ವಾಲ್ ಮತ್ತು ಸ್ಲೊವಾಕಿಯಾದ ಜುರಾಜ್ ತುಜಿನ್‌ಸ್ಕಿ 12 ಜೋಡಿ ಒಳಗೊಂಡ ಸ್ಪರ್ಧೆಯಲ್ಲಿ 10ನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು.

ಶ್ರೀಕಾಂತ್, ಲಕ್ಷ್ಯ ಸೇನ್‌ಗೆ ನಿರಾಸೆ

ಸಾರ್‌ಬ್ರೂಕನ್, ಜರ್ಮನಿ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಮತ್ತು ಲಕ್ಷ್ಯ ಸೇನ್ ಅವರು ಹೈಲೊ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ನಿರಾಸೆ ಅನುಭವಿಸಿದ್ದಾರೆ.

ಶನಿವಾರ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಶ್ರೀಕಾಂತ್ 19-21, 20-22ರಲ್ಲಿ ಮಲೇಷ್ಯಾದ ಲೀ ಜಿ ಜಿಯಾನ್‌ಗೆ ಮಣಿದರು.

ಲಕ್ಷ್ಯ ಸೇನ್ 18-21, 12-21ರಲ್ಲಿ ಸಿಂಗಪುರದ ಲೋಹ್ ಕಿನ್ ಯೀ ಎದುರು ಸೋತರು.

ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಲಕ್ಷ್ಯ ಸೇನ್ 21-18, 12-21, 21-19ರಲ್ಲಿ ಥಾಯ್ಲೆಂಡ್‌ನ ಕುನ್ಲಾವತ್ ವಿತಿದ್‌ಸರ್ನ್ ಸವಾಲು ಮೀರಿದ್ದರು.

ಪಂದ್ಯವು ಒಂದು ತಾಸು 18 ನಿಮಿಷಗಳ ಕಾಲ ನಡೆಯಿತು.

ಕಿದಂಬಿ ಶ್ರೀಕಾಂತ್ ಎಂಟರಘಟ್ಟದ ಪಂದ್ಯದಲ್ಲಿ 21-11, 12-21, 21-19ರಲ್ಲಿ ಹಾಂಗ್‌ಕಾಂಗ್‌ನ ಎನ್‌ಜಿ ಕಾ ಲಾಂಗ್ ಎದುರು ಜಯ ಸಾಧಿಸಿದ್ದರು.

ಚೆಸ್: 2ನೇ ಸ್ಥಾನದಲ್ಲಿ ಹಾರಿಕಾ

ರಿಗಾ, ಲಾಟ್ವಿಯ (ಪಿಟಿಐ): ಭಾರತದ ಹಾರಿಕಾ ದ್ರೋಣವಲ್ಲಿ ಅವರು ಇಲ್ಲಿ ನಡೆಯುತ್ತಿರುವ ಮಹಿಳೆಯರ ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯಲ್ಲಿ ಎರಡನೇ ಸ್ಥಾನ ಹಂಚಿಕೊಂಡರು. ಒಂಬತ್ತನೇ ಸುತ್ತಿನಲ್ಲಿ ಅವರು ರಷ್ಯಾದ ಅಲಿನಾ ಕಶಿಲಿನ್‌ಸ್ಕಯ ವಿರುದ್ಧ ಜಯ ಗಳಿಸಿದರು. ಈ ಮೂಲಕ ನಾಲ್ವರ ಜೊತೆ ಸ್ಥಾನ ಹಂಚಿಕೊಂಡರು.

ಹಾರಿಕಾ

ಕಪ್ಪು ಕಾಯಿಗಳೊಂದಿಗೆ ಆಡಿದ ಹಾರಿಕಾ ರಕ್ಷಣೆಗೆ ಹೆಚ್ಚು ಒತ್ತು ನೀಡಿದ್ದು ಕೈ ಹಿಡಿಯಿತು. 83ನೇ ನಡೆಯಲ್ಲಿ ರಷ್ಯಾ ಆಟಗಾರ್ತಿ ಹಿಂದೆ ಸರಿದರು. ಹಾರಿಕಾ ಬಳಿ ಈಗ ಆರು ಪಾಯಿಂಟ್‌ಗಳಿವೆ. ಎಂಟು ಪಾಯಿಂಟ್‌ಗಳೊಂದಿಗೆ ಚೀನಾದ ಲೀ ಟಿಂಗ್ಜಿ ಮೊದಲ ಸ್ಥಾನದಲ್ಲಿದ್ದಾರೆ.

ಮುಕ್ತ ವಿಭಾಗದಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಕೆ.ಶಶಿಕಿರಣ್ 9ನೇ ಸುತ್ತಿನಲ್ಲಿ ಪವೆಲ್ ಎಲ್ಜನೊವ್ ವಿರುದ್ಧ ಜಯಿಸಿದರು. ಯುವ ಆಟಗಾರ ರೌನಕ್ ಸಾಧ್ವಾನಿ ಕೂಡ ಜಯ ಗಳಿಸಿದರು.

Honda Motorcycle & Scooter India Pvt. Ltd., Registered Office: Commercial Complex II, Sector - 49-50, Golf Course Extension Road, Gurugram - 122018 (Haryana), India; Website: www.honda2wheelersindia.com; Customer Care: customercare@honda2wheelersindia.com

Finance Scheme offers are available through select preferred finance partners on select models for select profile of customers at their sole discretion and is subject to Finance Company Policy. No two offers can be clubbed together. Cashback offer mentioned is 5% Cashback up to Rs.5000 per card on Minimum Transaction of Rs.50000, applicable only on EMI transaction via select SBI Credit Cards, once per month during the offer period. Scheme validity from 1st September to 30th November 2021. Schemes & offers available at select Dealerships only & can be withdrawn at any time without prior notice. ##Rs.5 Lakh Personal Accident Cover applicable on purchase of Honda Joy Club Loyalty membership. All Claims will settle as per policy & guidelines of insurance company. For more details, please call on HJC helpdesk 18005322555. *Terms & Conditions apply. Product shown in the picture may vary from the actual product available in the market. Accessories shown in the product are not part of the standard equipment.

Honda Exclusive Authorised Dealerships: Ananda Honda - BOMMANAHALLI: 9738074162; HEBBAGODI: 9738074162; SARJAPUR RD: 9738074162; JIGANI: 9738066600; HOSUR ROAD: 9738066600; Anekal Honda - ANEKAL: 080-27830234, 9880417779; City Honda - ST. JOHNS ROAD: 25320623, 9480812350; H.R.B.R: 41614777, 9845941305; FRAZER TOWN: 9480812353; LALBAGH: 9480812397; Haiku Honda - DOMLUR: 49656565, 9342432156; INDIRANAGAR: 9343796289, 080 - 41133737; Dhruvdesh Honda - MEKHRI CIRCLE: 40500700, 9972237311; THANISANDRA (NAGAWARA): 7353030333; YELAHANKA: 40551122, 9343968407; VIDYARANYAPURA: 8150866333, 8152866333; Planet Honda - RAJAJINAGAR: 08068898888, 9980927735; PEENYA: 08068898888, 9980927730; SUNKADAKATTE: 08068898888, 9980927728; BASAWESHWAR NAGAR: 08068898888, 9980927726; Raja Honda - KORAMANGALA: 08067329000,9035310055; Prime Honda - VIJAYNAGAR: : 080 - 23010300, 8050503111; NAGARBHAVI: 080-23010700, 8095778000; KAMAKSHIPALYA: 080-23019700, 7829900444; Silicon Honda - RV ROAD: 26574467/68, 9844502222; BANSHANKARI: 9844502444, 8722279009; R.R. NAGAR: 9964388333, 9071174800; MONOTYPE: 7353744400, JAYANAGAR: 8722801626; Saphire Honda - JP NAGAR: 7026000002; BANNERAGHATTA RD: 08068818881; KANAKAPURA RD: 08068818881; PUTTENAHALLI: 08068818881; GOTTIGERE: 08068818881; VFM Honda - KR PURAM: 49499299, 9071858885; HENNUR ROAD: 9108989817, 9108989818; Tansi Honda - HOODI: 080-45510000, 7259030091; MARTHAHALLI: 080-67166600, 7259030093; VARTHUR RD: 08042620600, 9686573013; GUNJUR: 9606450642, 9606450641; Turbo Honda - DODDABALLAPURA: 7022038682; NELAMANAGALA: 080-27722333, 7022008894; Wings Honda - HOSKOTE: 7676907272; MALUR: 7676155600; TC PALYA: 9590815959; Sri Kausthub Honda - KOLAR: 9900018515, 9900018516;; KGF: 08153-266606, 9900092115; MULBAGAL: 9008941044; SRINIVASAPUR: 8495956515; Namma Honda - CHIKKABALLAPUR: 9606060610, 9900071211; CHINTAMANI: 9606060620, 9606060690; BAGEPALLI: 9611596112, 9611596110; Shankar Honda - GOWRIBIDANUR: 9900007422/33; SLN Honda - SHIDLAGATTA: 9986160961; Century Honda - TUMKUR: 962026388, 0816-2261939; SIRA: 9620267057, 9538392767; GUBBI: 9620267051; Shantinath Honda - TUMKUR: 0816-2279979, 9449334359; KUNIGAL: 7022276603; KUNIGAL ROAD: 9844351599, 9844351399; Honey Honda - PAVAGADA: 9535941215; Annapoorna Honda - MADHUGIRI: 9886627429; Vignesh Honda - TIPTUR: 9886711161; TURUVEKERE: 9448214014; Sri Srinivasa Honda - CHIKKANAYAKANAHALLI: 8722522221; Prestige Honda - RAMNAGARA: 9606490030; KANAKAPURA: 9606036053; ART Honda - BIDADI: 9945966771, 9164871007; Springs Honda - KENGERI: 9513771114; Nideesh Honda - DEVANAHALLI: 9108871999, 9686608579.

For Bulk/Institutional enquiries, please write us at: institutionalsales@honda2wheelersindia.com